(Pursuant to first proviso to sub-section (3) of section 129 read with rule 5 of Companies

(Accounts) Rules, 2014)

Statement containing salient features of the financial statement of subsidiaries/associate companies/joint ventures

Part "A": Subsidiaries

(Information in respect of each subsidiary to be presented with amounts in Rs.)

Sl. No.	Particulars	Details
1.	Name of the subsidiary	The Tadadi Port Limited Yet to commence operations.
2.	Reporting period for the subsidiary concerned, if different from the holding company's reporting period	Not Applicable
3.	Reporting currency and Exchange rate as on the last date of the relevant Financial year in the case of foreign subsidiaries	(Rs.) Indian Rupee
4.	Share capital	Rs. 5,00,000
5.	Reserves & surplus	Rs. -2,60,244
6.	Total assets	Rs. 2,93,761
7.	Total Liabilities	Rs. 2,93,761
8.	Investments	NIL
9.	Turnover	NIL
10.	Profit before taxation	Rs. -1,598
11.	Provision for taxation	NA
12.	Profit after taxation	Rs. -1,598
13.	Proposed Dividend	NA
14.	% of shareholding	100

Notes: The following information shall be furnished at the end of the statement:

1. Names of subsidiaries which are yet to commence operations

2. Names of subsidiaries which have been liquidated or sold during the year.

Part "B": Associates and Joint Ventures Statement pursuant to Section 129 (3) of the Companies Act, 2013 related to Associate Companies and Joint Ventures		
	Name of associates/Joint Ventures	**Mysore Sales International Limited**
1.	Latest audited Balance Sheet Date	31.03.2020
2.	Shares of Associate/Joint Ventures held by the company on the year end	
a.	No. of Equity Shares of Rs. 10 Each	20,17,660
b.	Amount of Investment in Associates/Joint Venture	Rs. 19,93,66,000
c.	Extent of Holding%	46%
3.	Description of how there is significant influence	The Company holds 46% shares in Mysore Sales International Limited (Associate)
4.	Reason why the associate/joint venture is not consolidated	NA
5.	Net worth attributable to shareholding as per latest audited Balance Sheet	Rs. 54,487 lakhs
6.	Profit/Loss for the year	Rs. 6,647 lakhs
7.	Considered in Consolidation	Yes
8.	Not Considered in Consolidation	NA
	Name of associates/Joint Ventures	**Karnataka Antibiotics & Pharma Limited**
1.	Latest audited Balance Sheet Date	31.03.2020
2.	Shares of Associate/Joint Ventures held by the company on the year end	
a.	No. of Equity Shares of Rs. 10 Each	5,50,820
b.	Amount of Investment in Associates/Joint Venture	Rs. 5,51,81,750
c.	Extent of Holding%	40.83%
3.	Description of how there is significant influence	The Company holds 40.83% shares in Karnataka Antibiotics & Pharma Limited (Associate)
4.	Reason why the associate/joint venture is not consolidated	NA
5.	Net worth attributable to shareholding as per latest audited Balance Sheet	Rs. 19,887 lakhs
6.	Profit/Loss for the year	Rs. 3,151 lakhs
7.	Considered in Consolidation	Yes
8.	Not Considered in Consolidation	NA

	Name of associates/Joint Ventures	Karnataka Asset Management Company Private Limited
1.	Latest audited Balance Sheet Date	31.03.2020
2.	Shares of Associate/Joint Ventures held by the company on the year end	
a.	No. of Equity Shares of Rs. 10 Each	16,500
b.	Amount of Investment in Associates/Joint Venture	16,50,000
c.	Extent of Holding%	33.33%
3.	Description of how there is significant influence	The Company holds 33.33% shares in Karnataka Asset Management Company Private Limited (Associate)
4.	Reason why the associate/joint venture is not consolidated	NA
5.	Net worth attributable to shareholding as per latest audited Balance Sheet	Rs. 470 lakhs
6.	Profit/Loss for the year	Rs. 71 lakhs
7.	Considered in Consolidation	Yes
8.	Not Considered in Consolidation	NA
	Name of associates/Joint Ventures	**Karnataka Trustee Company Private Limited**
1.	Latest audited Balance Sheet Date	31.03.2020
2.	Shares of Associate/Joint Ventures held by the company on the year end	
a.	No. of Equity Shares held	500
b.	Amount of Investment in Associates/Joint Venture	50,000
c.	Extent of Holding%	50.00%
3.	Description of how there is significant influence	The Company holds 50.00% shares in Karnataka Trustee Company Private Limited (Associate)
4.	Reason why the associate/joint venture is not consolidated	NA
5.	Net worth attributable to shareholding as per latest audited Balance Sheet	Rs. 57 lakhs
6.	Profit/Loss for the year	Rs. 11 lakhs
7.	Considered in Consolidation	Yes
8.	Not Considered in Consolidation	NA
	Name of associates/Joint Ventures	**Bangalore International Airport Limited**
1.	Latest audited Balance Sheet Date	31.03.2020
2.	Shares of Associate/Joint Ventures held by the company on the year end	
a.	No. of Equity Shares of Rs. 10 Each	5,49,97,800
b.	Amount of Investment in Associates/Joint Venture	Rs. 49,99,80,000
c.	Extent of Holding%	13.00%
3.	Description of how there is significant influence	The Company holds 13.00% shares in Bangalore International Airport Limited (Associate)
4.	Reason why the associate/joint venture is not consolidated	NA
5.	Net worth attributable to shareholding as per latest audited Balance Sheet	Rs. 3,212.69 crores
6.	Profit/Loss for the year	Rs. 397.83 crores
7.	Considered in Consolidation	Yes
8.	Not Considered in Consolidation	NA

	Name of associates/Joint Ventures	Food Karnataka Limited
1.	Latest audited Balance Sheet Date	31.03.2020
2.	Shares of Associate/Joint Ventures held by the company on the year end	
a.	No. of Equity Shares of Rs. 10 Each	10,000
b.	Amount of Investment in Associates/Joint Venture	Rs. 1,00,000
c.	Extent of Holding%	33.00%
3.	Description of how there is significant influence	The Company holds 33.00% shares in Food Karnataka Limited (Associate)
4.	Reason why the associate/joint venture is not consolidated	NA
5.	Net worth attributable to shareholding as per latest audited Balance Sheet	Rs. 803 Lakhs
6.	Profit/Loss for the year	Rs. 2,15,490
7.	Considered in Consolidation	Yes
8.	Not Considered in Consolidation	NA
	Name of associates/Joint Ventures	**The Hutti Gold Mines Co Limited**
1.	Latest audited Balance Sheet Date	31.03.2020
2.	Shares of Associate/Joint Ventures held by the company on the year end	
a.	No. of Equity Shares of Rs. 10 Each	57,500
b.	Amount of Investment in Associates/Joint Venture	Rs. 1,15,00,000
c.	Extent of Holding%	19.41%
3.	Description of how there is significant influence	The Company holds 19.41% shares in The Hutti Gold Mines Co Ltd (Associate)
4.	Reason why the associate/joint venture is not consolidated	NA
5.	Net worth attributable to shareholding as per latest audited Balance Sheet	Rs. 2,03,560.64 Lakhs
6.	Profit/Loss for the year	Rs. 26,914.22 Lakhs
7.	Considered in Consolidation	Yes
8.	Not Considered in Consolidation	NA
	Name of associates/Joint Ventures	**KSIIDC-IL&FS Project Development Company Limited**
1.	Latest audited Balance Sheet Date	31.03.2020
2.	Shares of Associate/Joint Ventures held by the company on the year end	
a.	No. of Equity Shares of Rs. 10 Each	25,000
b.	Amount of Investment in Associates/Joint Venture	Rs. 2,50,000
c.	Extent of Holding%	50%
3.	Description of how there is significant influence	The Company holds 50.00% shares in KSIIDC-IL&FS Project Development Company Limited (Joint Venture)
4.	Reason why the associate/joint venture is not consolidated	NA
5.	Net worth attributable to shareholding as per latest audited Balance Sheet	Rs. 10.42 Lakhs
6.	Profit/Loss for the year	Rs. (13) Lakhs
7.	Considered in Consolidation	Yes
8.	Not Considered in Consolidation	NA

COMPARISON AND ANALYSIS OF OPERATIONAL STATEMENTS

Table
SANCTIONS AND DISBURSAL OF

TABLE
SANCTIONS AND DISBURSAL OF FINANCIAL ASSISTANCE

		Investments		Term Loans		Bridge Loan	
		No.	Amount	No.	Amount	No.	Amount
I. Rupee Loans:							
1.	Gross Sanction	394	3,50,66.84	1776	2,04,244.10	192	3,255.64
2.	Sanction subsequently						
	cancelled / reduced /						
	lapsed relating to						
	i) Current year sanction	0	0.00	0	0.00	0	0.00
	ii) Earlier year sanction	39	1,224.93	335	30,701.45	0	0.00
	iii) Total	39	1,224.93	335	30,701.45	0	0.00
3.	Effective Sanction						
	(1-2(i))	394	35,066.84	1776	2,04,244.10	192	3,255.64
	(1-2(ii))	355	33,841.91	1441	1,73,542.65	192	3,255.64
	(1-2(iii))	355	33,841.91	1441	1,73,542.65	192	3,255.64
4.	Disbursements	343	26,888.76	1863	1,45,534.58	196	3,188.24

FINANCIAL ASSISTANCE - FY 2019-2020 - NIL

SINCE INCEPTION & UP TO FY ENDING 31.03.2020

(₹ in lakhs)

Corporate Loan		Bill Discounting		Leasing		Guarantees		Underwriting		Total	
No.	Amount	No.	Amount	No.	Amount	No.	Amount	No.	Amount	No.	Amount
294	38,641.45	15	2,230.00	22	4,763.81	59	21,738.76	13	1,387.50	2765	3,11,328.10
0	0.00	0	0.00	0	0.00	0	0.00	0	0.00	0	0.00
1	50.00	0	0.00	0	78.56	45	11,190.20	0	0.00	420	43,245.14
1	50.00	0	0.00	0	78.56	45	11,190.20	0	0.00	420	43,245.14
294	38,641.45	15	2,230.00	22	4,763.81	59	21,738.76	13	1,387.50	2765	3,11,328.10
293	38,591.45	15	2,230.00	22	4,685.25	14	10,548.56	13	1,387.50	2345	2,68,082.96
293	38,591.45	15	2,230.00	22	4,685.25	14	10,548.56	13	1,387.50	2345	2,68,082.96
288	35,941.08	16	3,341.64	18	3,337.63	0	0.00	0	0.00	2724	2,18,231.93

	ಪುಟ ಸಂಖ್ಯೆ
ಸೂಚನೆ	1–2
ನಿರ್ದೇಶಕರುಗಳ ವರದಿ	3–11
ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ	26–43
ಸ್ಥಿತಿ ವಿವರಣಾ ಪಟ್ಟಿ	47–48
ಲಾಭ ಮತ್ತು ನಷ್ಟದ ಹೇಳಿಕೆ	49–50
ಹಣಕಾಸಿನ ಹೇಳಿಕೆಗಳಿಗೆ ಟಿಪ್ಪಣಿಗಳು	53–136
ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು	139–243

ಶ್ರೀ ಕಪಿಲ್ ಮೋಹನ್, ಐಎಎಸ್ (29.07.2019 ರಿಂದ ಇಂದಿನವರೆಗೆ)	**ಅಧ್ಯಕ್ಷರು**
ಶ್ರೀ ಗಂಗಾರಾಮ್ ಬಡೇರಿಯ, ಐಎಎಸ್ (25.04.2019 ರಿಂದ 16.09.2020ರವರೆಗೆ	**ವ್ಯವಸ್ಥಾಪಕ ನಿರ್ದೇಶಕರು**
ಶ್ರೀ ಗೌರವ್ ಗುಪ್ತಾ, ಐಎಎಸ್ (30.07.2018 ರಿಂದ ಇಂದಿನವರೆಗೆ)	**ನಿರ್ದೇಶಕರು**
ಡಾ. ಪಿ.ಸಿ. ಜಾಫರ್, ಐಎಎಸ್ (20.09.2019 ರಿಂದ ಇಂದಿನವರೆಗೆ)	**ನಿರ್ದೇಶಕರು**
ಶ್ರೀಮತಿ ಚೈತ್ರಾ ವಿ. ಐಎಎಸ್ (02.11.2019 ರಿಂದ ಇಂದಿನವರೆಗೆ)	**ನಿರ್ದೇಶಕರು**

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ

ನೋಂದಾಯಿತ ಕಛೇರಿ: 'ಖನಿಜ ಭವನ' 4ನೇ ಮಹಡಿ, ಪೂರ್ವ ವಿಂಗ್,
ನಂ. 49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು 560 001
ಇ–ಅಂಚೆ: info@ksiidc.com ವೆಬ್‌ಸೈಟ್: www.ksiidc.com
ಸಿಐಎನ್: U93000KA1964ULL001532

ಮುಂದೂಡಲ್ಪಟ್ಟ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ

ಕಂಪೆನಿಯ ಸದಸ್ಯರ ಮುಂದೂಡಲ್ಪಟ್ಟ 56ನೇ ವಾರ್ಷಿಕ ಸಾಮಾನ್ಯ ಸಭೆಯು ಶುಕ್ರವಾರ, 15ನೇ ಜನವರಿ 2021ರ ಸಂಜೆ 04.00ಕ್ಕೆ ಈ ಕೆಳಕಂಡ ವ್ಯವಹಾರಗಳನ್ನು ಚರ್ಚಿಸಲು ಖನಿಜ ಭವನ, 4ನೇ ಮಹಡಿ, ಪೂರ್ವ ವಿಂಗ್, ನಂ. 49, ರೇಸ್ ಕೋರ್ಸ್ ರಸ್ತೆ ಬೆಂಗಳೂರು 560 001 ಇಲ್ಲಿರುವ ಕಂಪೆನಿಯ ನೋಂದಾಯಿತ ಕಛೇರಿಯಲ್ಲಿ ನಡೆಯಲಿದೆಯೆಂದು ಈ ಮೂಲಕ ಸೂಚನಾ ಪತ್ರ ನೀಡಿದೆ:

ಸಾಮಾನ್ಯ ವ್ಯವಹಾರ:

1. **ಲೆಕ್ಕಪರಿಶೋಧಿತ ಹಣಕಾಸಿನ ಕೋಷ್ಟಕಗಳನ್ನು ಅಂಗೀಕರಿಸಲು:**

   31ನೇ ಮಾರ್ಚಿ 2020ರ ಹಣಕಾಸಿನ ವರ್ಷದ ಅಂತ್ಯಕ್ಕೆ ಇರುವಂತೆ ಕಂಪೆನಿಯ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳೊಂದಿಗೆ ಲೆಕ್ಕಪರಿಶೋಧಿತ ಹಣಕಾಸಿನ ಕೋಷ್ಟಕಗಳನ್ನು, ಮಂಡಳಿಯ ವರದಿ ಮತ್ತು ಅದರ ಮೇಲೆ ಲೆಕ್ಕಪರಿಶೋಧಕರ ವರದಿಗಳೊಂದಿಗೆ ಅಂಗೀಕರಿಸಲು.

2. ಹಣಕಾಸಿನ ವರ್ಷ 2020–21ಕ್ಕೆ ಶಾಸನಬದ್ದ ಲೆಕ್ಕಪರಿಶೋಧಕರ ಸಂಭಾವನೆಯನ್ನು ನಿಗಧಿಗೊಳಿಸುವ ಸಲುವಾಗಿ ಈ ಕೆಳಕಂಡ ಠರಾವನ್ನು ಪರಿಗಣಿಸಲು, ಮತ್ತು ಸೂಕ್ತವೆಂದು ಕಂಡಬಂದಲ್ಲಿ ಠರಾವನ್ನು ಅಂಗೀಕರಿಸಲು.

"ಠರಾವು ಅಂಗೀಕರಿಸಿದೆ:

a) ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 139ರ ಅಡಿಯಲ್ಲಿ ಮೆ. ಮೋದಿ ಧವಳಗಿ & ಕೋ., ಚಾರ್ಟರ್ಡ್ ಅಕೌಂಟೆಂಟ್ಸ್, ಹುಬ್ಬಳ್ಳಿ ಅವರನ್ನು ಕಂಪೆನಿಯ ಶಾಸನಬದ್ದ ಲೆಕ್ಕಪರಿಶೋಧಕರನ್ನಾಗಿ 2020–21ರ ಹಣಕಾಸಿನ ವರ್ಷದ ಶಾಸನಬದ್ದ ಲೆಕ್ಕಪರಿಶೋಧನೆಯನ್ನು ನಡೆಸುವ ಸಲುವಾಗಿ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಅವರು ನೇಮಕಾತಿ ಮಾಡಿರುವುದನ್ನು ಈ ಮೂಲಕ ಗಮನಿಸಿ, ದಾಖಲಿಸಿ ಠರಾವು ಅಂಗೀಕರಿಸಿದೆ.

ಛ) ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 142ರ ಉಪಬಂಧಗಳಂತೆ, ಶಾಸನಬದ್ದ ಲೆಕ್ಕಪರಿಶೋಧಕರ ಸಂಭಾವನೆಯನ್ನು ಮತ್ತು 2020–21ರ ಹಣಕಾಸಿನ ವರ್ಷಕ್ಕೆ ಅಂತಹ ಇತರ ಶರತ್ತು ಮತ್ತು ನಿಬಂಧನೆಗಳನ್ನು ನಿಗಧಿಪಡಿಸಲು ಕಂಪೆನಿಯ ನಿರ್ದೇಶಕರ ಮಂಡಳಿಗೆ ಈ ಮೂಲಕ ಅಧಿಕಾರ ನೀಡಿ ಠರಾವು ಅಂಗೀಕರಿಸಿದೆ.

ನಿರ್ದೇಶಕರ ಮಂಡಳಿಗೆ ಮತ್ತು ಅದರ ಪರವಾಗಿ,
(ಎಂ.ಎಸ್. ಶ್ರೀಕರ್)
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 07882939

ಟಿಪ್ಪಣಿಗಳು:

1. ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 143 (6)(ಛ)ಯ ಜೊತೆಗೆ ಕಂಡಿಕೆ 129(4)ರಂತೆ ಸಿಎಜಿಯವರ ಶೂನ್ಯ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ. ಬೇರೆ ಎಲ್ಲಾ ಕಾರ್ಯಸೂಚಿ ಕಾಗದಪತ್ರಗಳನ್ನು ದಿನಾಂಕ 29ನೇ ಡಿಸೆಂಬರ್ 2020ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಈಗಾಗಲೇ ಮಂಡಿಸಲಾಗಿರುತ್ತದೆ.
2. ಸಭೆಯಲ್ಲಿ ಹಾಜರಿರಲು ಮತ್ತು ಮತದಾನ ಮಾಡಲು ಅಧಿಕಾರ ಇರುವ ಸದಸ್ಯರು ತಮ್ಮ ಪರವಾಗಿ ಸಭೆಗೆ ಹಾಜರಾಗಲು ಮತ್ತು ಮತದಾನ ಮಾಡಲು ತಮ್ಮ ಪ್ರತಿನಿಧಿಯನ್ನು ನೇಮಿಸಲು ಹಕ್ಕುಳ್ಳವರಾಗಿರುತ್ತಾರೆ. ಪ್ರತಿನಿಧಿಯು ಕಂಪೆನಿಯ ಸದಸ್ಯರಾಗಿಬೇಕಾದ ಅವಶ್ಯಕತೆ ಇರುವುದಿಲ್ಲ.
3. ಪ್ರತಿನಿಧಿಯನ್ನು ನೇಮಕ ಮಾಡುವ ಪತ್ರದ ಮತ್ತು ಅಧಿಕಾರ ಪತ್ರ ಯಾವುದಾದರೂ ಇದ್ದಲ್ಲಿ, ಅದನ್ನು ಸಭೆಯ ಆರಂಭಕ್ಕೆ ನಲವತ್ತೆಂಟು ಗಂಟೆಗಳಿಗೆ ಕಡಿಮೆಯಿಲ್ಲದಂತೆ ಪೂರ್ವಭಾವಿಯಾಗಿ ಕಂಪೆನಿಯ ನೋಂದಾಯಿತ ಕಛೇರಿಗೆ ತಲುಪಿಸತಕ್ಕದ್ದು.
4. ಕೋವಿಡ್–19ರ ಪಿಡುಗಿನ ಕಾರಣಗಳಿಂದಾಗಿ ಕಂಪೆನಿ ವ್ಯವಹಾರಗಳ ಸಚಿವಾಲಯವು ದಿನಾಂಕ 5ನೇ ಮೇ, 2020ರ ಸುತ್ತೋಲೆಯೊಂದಿಗೆ ದಿನಾಂಕ 8ನೇ ಏಪ್ರಿಲ್, 2020 ಮತ್ತು 13ನೇ ಏಪ್ರಿಲ್ 2020ರ ಸುತ್ತೋಲೆಗಳನ್ನು ಓದಿಕೊಂಡಂತೆ (ಒಟ್ಟಾಗಿ 'ಸುತ್ತೋಲೆಗಳು' ಎಂದು ಉಲ್ಲೇಖಿಲ್ಪಡುತ್ತದೆ) ಕಂಪೆನಿಗಳು ವಾರ್ಷಿಕ ಸಾಮಾನ್ಯ ಸಭೆಗಳನ್ನು ವೀಡಿಯೋ ಸಂವಾದದ ಮೂಲಕ (ವಿಸಿ) ಅಥವಾ ಇತರೆ ಶ್ರವಣ ದೃಶ್ಯ ಮಾಧ್ಯಮದ ಮೂಲಕ ನಡೆಸಲು ಅನುವಾಗುವಂತೆ ಕೆಲವೊಂದು ಕ್ರಮಗಳನ್ನು ಜಾರಿಗೊಳಿಸಿರುತ್ತದೆ. ವೀಡಿಯೋ ಕೊಂಡಿಯನ್ನು ಸಿದ್ಧಪಡಿಸಿ ಕಳುಹಿಸಲಾಗುವುದು.

ವಾರ್ಷಿಕ ಸಾಮಾನ್ಯ ಸಭೆಯ ಸ್ಥಳದ ದಾರಿಯ ನಕ್ಷೆ
ದಿನಾಂಕ : ಶುಕ್ರವಾರ, 15ನೇ ಜನವರಿ, 2021.
ಸಮಯ: ಭಾರತೀಯ ಕಾಲಮಾನ ಪೂರ್ವಾಹ್ನ 11.00ಕ್ಕೆ
ಸ್ಥಳ: ಖನಿಜ ಭವನ, 4ನೇ ಮಹಡಿ, ಪೂರ್ವ ವಿಭಾಗ, ನಂ. 49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು 560 001.



ಇವರಿಗೆ
ಎಲ್ಲಾ ಸದಸ್ಯರುಗಳಿಗೆ,

ಕಂಪೆನಿಯ 56ನೇ ವಾರ್ಷಿಕ ವರದಿಯ ಜೊತೆಗೆ 31ನೇ ಮಾರ್ಚಿ 2020ಕ್ಕೆ ಅಂತ್ಯವಾಗಿರುವ ವರ್ಷದ ನಿಗಮದ ಐಎನ್‌ಡಿ ಎಎಸ್‌ನಂತೆ ಲೆಕ್ಕಪರಿಶೋಧಿತ ಸ್ಟಾಂಡ್‌ಅಲೋನ್ ಮತ್ತು ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳನ್ನು ನಿಮ್ಮ ಮುಂದಿಡಲು ನಿಮ್ಮ ನಿರ್ದೇಶಕರು ಹರ್ಷಿಸುತ್ತಾರೆ.

ಹಣಕಾಸು ವರ್ಷ 2019–20ರ ಅಂಕಿಅಂಶಗಳೊಂದಿಗೆ ಹಣಕಾಸು ವರ್ಷ 2018–19ರ ಅಂಕಿಅಂಶಗಳನ್ನು ಹೋಲಿಸಿಕೊಂಡು ನಿಗಮದ ಹಣಕಾಸಿನ ನಿರ್ವಹಣೆಯ ವಿವರಗಳನ್ನು ಈ ಕೆಳಗೆ ಕಂಡಂತೆ ಪ್ರಸ್ತುತಪಡಿಸಲಾಗುತ್ತಿದೆ:

1. ನಿರ್ವಹಣೆಯ ಪ್ರಮುಖ ಅಂಶಗಳು:

(ರೂ. ಕೋಟಿಗಳಲ್ಲಿ)

ವಿವರಗಳು	ಸ್ಟಾಂಡ್ ಅಲೋನ್ ಹಣಕಾಸು ವಿವರಗಳು		ಕ್ರೋಢೀಕೃತ ಹಣಕಾಸು ವಿವರಗಳು	
	ಹಣಕಾಸು ವರ್ಷ 2019–20	ಹಣಕಾಸು ವರ್ಷ 2018–19	ಹಣಕಾಸು ವರ್ಷ 2019–20	ಹಣಕಾಸು ವರ್ಷ 2018–19
ಒಟ್ಟು ಆದಾಯ	**85.91**	106.13	83.07	104.41
ಒಟ್ಟು ವೆಚ್ಚಗಳು	**21.05**	20.72	21.05	20.72
ಸವಕಳಿ ಮತ್ತು ಆದಾಯ ತೆರಿಗೆಗೆ ಮುಂಚಿನ ಲಾಭ/ (ನಷ್ಟ) (ಪಿಬಿಡಿಐಟಿ)	**64.86**	85.41	62.02	83.69
ಸವಕಳಿ	**3.96**	3.80	3.96	3.80
ತೆರಿಗೆಗೆ ಮುಂಚಿನ ಲಾಭ/(ನಷ್ಟ) (ಪಿಬಿಟಿ)	**60.89**	81.61	58.06	79.89
ಆದಾಯ ತೆರಿಗೆಗೆ ಉಪಬಂಧ :				
ಚಾಲ್ತಿ ತೆರಿಗೆ	8.12	12.43	8.12	12.43
ಮುಂಚಿನ ತೆರಿಗೆಗಳು	1.01	–	1.01	–
ಮುಂದೂಡಲ್ಪಟ್ಟ ತೆರಿಗೆ	(0.72)	8.42	(0.72)	8.42
ನಿವ್ವಳ ಲಾಭ (ಪಿಎಟಿ)/(ನಷ್ಟ)	**52.49**	**60.76**	**49.65**	**59.04**

ವಿಭಾಗವಾರು ನಿರ್ವಹಣೆಯ ವಿವರಗಳನ್ನು ಹಣಕಾಸಿನ ಕೋಷ್ಟಕಗಳ ಟಿಪ್ಪಣಿಗಳಲ್ಲಿ ನಮೂದಿಸಲಾಗಿದೆ.

31.03.2006ರಲ್ಲಿ ಇದ್ದಂತಹ ಕೂಡಿಬಂದ ನಷ್ಟ (ಸ್ಟಾಂಡ್‌ಅಲೋನ್) ರೂ. 574.64 ಕೋಟಿಗಳನ್ನು 31.03.2020ರಲ್ಲಿ ಇರುವಂತೆ ರೂ. 45.40 ಕೋಟಿಗಳಿಗೆ ಇಳಿಕೆ ಮಾಡಲಾಗಿದೆ. (ಸ್ಟಾಂಡ್‌ಅಲೋನ್) ಕಾಯಿದೆಯ ಕಂಡಿಕೆ 129ರ ಉಪ ಕಂಡಿಕೆ (3)ರಂತೆ ಒಂದು ಅಥವಾ ಅದಕ್ಕಿಂತ ಹೆಚ್ಚು ಅಂಗಸಂಸ್ಥೆಗಳು/ಸಹಸಂಸ್ಥೆಗಳು/ ಜಂಟೀ ವಲಯ ಉದ್ಯಮಗಳನ್ನು ಹೊಂದಿರುವ ಕಂಪೆನಿಯು ಸ್ಟಾಂಡ್‌ಅಲೋನ್ ಹಣಕಾಸಿನ ಕೋಷ್ಟಕಗಳ ಜೊತೆಗೆ ಕಂಪೆನಿಯು ತನ್ನ ಎಲ್ಲಾ ಅಂಗಸಂಸ್ಥೆಗಳು, ಸಹಸಂಸ್ಥೆಗಳು ಮತ್ತು ಜಂಟೀ ವಲಯದ ಉದ್ಯಮಗಳು ಅದರ ಸ್ವಂತದ್ದು ಎಂಬ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳನ್ನು ಸಿದ್ಧಪಡಿಸಬೇಕಾಗಿರುತ್ತದೆ ಹಾಗೂ ಅದನ್ನು ಸ್ಟಾಂಡ್‌ಅಲೋನ್ ಹಣಕಾಸಿನ ಕೋಷ್ಟಕದ ಜೊತೆಗೆ ಕಂಪೆನಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಬೇಕಾಗಿರುತ್ತದೆ. ಬ್ಯಾಂಕಿಂಗೇತರ ಹಣಕಾಸಿನ ಕಂಪೆನಿಗಳಿಗೆ ಸಂಬಂಧಿಸಿದಂತೆ ಕಂಪೆನಿಗಳ ಕಾಯಿದೆ, 2013ರಂತೆ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳನ್ನು ಸಿದ್ಧಪಡಿಸಲು ಸಾಮಾನ್ಯ ಸೂಚನೆಗಳ ಭಾಗ– III ರ (ವಿಭಾಗ–III), ಅನುಸೂಚಿ–IIIರಂತೆ ಹೆಚ್ಚುವರಿ ಘೋಷಣೆ ಗಳನ್ನು ಹಣಕಾಸಿನ ಕೋಷ್ಟಕಗಳ ಭಾಗವಾಗಿ ಲಗತ್ತಿಸಿದೆ.

2. ಮೀಸಲುಗಳ ವರ್ಗಾವಣೆ

2019–20ರ ಹಣಕಾಸಿನ ವರ್ಷಕ್ಕೆ ಕಂಪೆನಿಯು ರೂ. 52.49 ಕೋಟಿಗಳ ನಿವ್ವಳ ಲಾಭವನ್ನು ಗಳಿಸಿದ್ದರೂ ಕೂಡಾ, ಅದನ್ನು ಹಿಂದಿನ ವರ್ಷಗಳ ಕೂಡಿಬಂದಿರುವ ನಷ್ಟಕ್ಕೆ ಸರಿಹೊಂದಿಸಲಾಗಿದ್ದು, ಇದರಿಂದಾಗಿ 31.03.2006 ರಲ್ಲಿ (ಸ್ಟಾಂಡ್‌ಅಲೋನ್) ಕೂಡಿಬಂದ ನಷ್ಟವು ರೂ. 574.64 ಕೋಟಿಯಿಂದ 31.03.2020ರಲ್ಲಿ (ಸ್ಟಾಂಡ್‌ಅಲೋನ್) 45.40 ಕೋಟಿಗಳಾಗಿರುತ್ತದೆ. ಆದ್ದರಿಂದ ಮಂಡಳಿಯು ಮೀಸಲು ನಿಧಿಗೆ ಯಾವುದೇ ಮೊಬಲಗನ್ನು ಕೊಂಡೊಯ್ಯಲು ಅಥವಾ ವರ್ಗಾಯಿಸಲು ಉದ್ದೇಶಿಸಿರುವುದಿಲ್ಲ.

3. ಲಾಭಾಂಶ

ಕೂಡಿಬಂದಿರುವ ನಷ್ಟದ ಕಾರಣದಿಂದ, ನಿರ್ದೇಶಕರು 2019–20ರ ಹಣಕಾಸಿನ ವರ್ಷಕ್ಕೆ ಯಾವುದೇ ಲಾಭಾಂಶ ವಿತರಣೆಗೆ ಶಿಫಾರಸ್ಸು ಮಾಡಿರುವುದಿಲ್ಲ.

4. 31.03.2020ರಿಂದ ನಿರ್ದೇಶಕರ ವರದಿಯ ದಿನಾಂಕದವರೆಗಿನ ಭೌತಿಕ ಬದಲಾವಣೆಗಳು:

ನಿಗಮದ ಹಣಕಾಸಿನ ಕೋಷ್ಟಕಗಳಿಗೆ ಸಂಬಂಧಿಸಿದ ಹಣಕಾಸಿನ ವರ್ಷದ ಅಂತ್ಯಕ್ಕೆ ಮತ್ತು ಈ ವರದಿಯ ದಿನಾಂಕದ ನಡುವೆ ಕಂಪೆನಿಯ ಹಣಕಾಸಿನ ಸ್ಥಿತಿಯ ಮೇಲೆ ಪರಿಣಾಮ ಬೀರುವಂತಹ ಯಾವುದೇ ಭೌತಿಕ ಬದಲಾವಣೆಗಳು ಮತ್ತು ಭಾಧ್ಯತೆಗಳೂ ಆಗಿರುವುದಿಲ್ಲ.

5. ವ್ಯವಹಾರದ ಸ್ಥಿತಿ ಮತ್ತು ಭವಿಷ್ಯದ ಮುನ್ನೋಟ:

a. **ಕೋವಿಡ್–19ರ ಪರಿಣಾಮಗಳು:**

23ನೇ ಮಾರ್ಚಿ 2020ರಿಂದ ಕೋವಿಡ್–19ರ ಲಾಕ್‌ಡೌನ್ ಮತ್ತು ನಿರ್ಬಂಧಗಳು ಕಂಪನಿಯ ಮತ್ತು ಅದರ ಅಂಗಸಂಸ್ಥೆಗಳ/ಸಹಸಂಸ್ಥೆಗಳ/ಜಂಟಿ ಸಹಭಾಗಿತ್ವದ ಕಂಪೆನಿಗಳ 2019–20ರ ಹಣಕಾಸಿನ ವರ್ಷದ ನಿರ್ವಹಣೆಯ ಮೇಲೆ ಅಲ್ಪ ಪ್ರಮಾಣದ ಪರಿಣಾಮ ಬೀರಿರುತ್ತದೆ. ಆದಾಗ್ಯೂ, ಕೋವಿಡ್–19ರ ನಿರ್ಬಂಧಗಳು 31.03.2020ರ ನಂತರವೂ ಮುಂದುವರಿದಿರುವುದು ವ್ಯತಿರಿಕ್ತ ಪರಿಣಾಮ ಬೀರಬಹುದು ಅಥವಾ ವಿವಿಧ ಮೂಲ ಸೌಲಭ್ಯ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬಕ್ಕೆ ಕಾರಣವಾಗಬಹುದು.

b. **ಎನ್‌ಬಿಎಫ್‌ಸಿ ನೋಂದಣಿ**

ಕೆಎಸ್‌ಐಐಡಿಸಿಯ 2002ರಿಂದ ಸಾಲ ನೀಡುವಿಕೆಯ ಚಟುವಟಿಕೆಗಳನ್ನು ಸ್ಥಗಿತಗೊಳಿಸಿರುವುದರಿಂದ ಹಾಗೂ ಉಳಿದಿರುವ ಸಾಲಗಳ ಖಾತೆಯು ಈಗಾಗಲೇ ನಿರ್ವಹಣೆ ಇಲ್ಲದ ಆಸ್ತಿಗಳಾಗಿರುವುದರಿಂದ (ಎನ್‌ಪಿಎಗಳು), ಎನ್‌ಬಿಎಫ್‌ಸಿಯಾಗಿ ಮುಂದುವರಿಯುವುದರಿಂದ ಕೆಎಸ್‌ಐಐಡಿಸಿಗೆ ನಿಗಧಿಪಡಿಸಿರುವ ವ್ಯವಹಾರಿಕ ಮಾನದಂಡಗಳನ್ನು ಸಾಧಿಸುವುದಕ್ಕೆ ಅವಕಾಶಗಳು ತುಂಬಾ ಕಡಿಮೆಯಾಗಿರುತ್ತದೆ. ಕೆಎಸ್‌ಐಐಡಿಸಿಯು ಕೈಗಾರಿಕಾ ಸಾಲ ನೀಡುವಿಕೆ ಚಟುವಟಿಕೆಯಿಂದ ಮೂಲ ಸೌಲಭ್ಯ ಅಭಿವೃದ್ಧಿ ಚಟುವಟಿಕೆಗಳಿಗೆ ಬದಲಾಯಿಸಿರುವುದರಿಂದ ಕೆಎಸ್‌ಐಐಡಿಸಿಯು ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಎನ್‌ಬಿಎಫ್‌ಸಿಯಾಗಿ ಹೊಂದಿರುವ ನೋಂದಣಿ ಪ್ರಮಾಣಪತ್ರವನ್ನು (ಸಿಒಆರ್) ರದ್ದುಪಡಿಸಲು ಮನವಿ ಮಾಡಲು ದಿನಾಂಕ 27ನೇ ಸೆಪ್ಟೆಂಬರ್ 2019ರಂದು ಮತ್ತು 18ನೇ ಫೆಬ್ರುವರಿ 2020ರಂದು ನಡೆದ ಮಂಡಳಿಯ ಸಭೆಯಲ್ಲಿ ಅನುಮತಿ ನೀಡಲಾಯಿತು. ಅದರಂತೆ ನಿಗಮವು ಎನ್‌ಬಿಎಫ್‌ಸಿಯಾಗಿ ಆರ್‌ಬಿಐನಲ್ಲಿ ಹೊಂದಿರುವ ನೋಂದಣಿ ಪ್ರಮಾಣಪತ್ರವನ್ನು ರದ್ದು ಮಾಡಲು ಆರ್‌ಬಿಐಗೆ ಅರ್ಜಿ ಸಲ್ಲಿಸಿದೆ. ಈ ಬಗ್ಗೆ ಆರ್‌ಬಿಐನಿಂದ ಔಪಚಾರಿಕ ಮಾಹಿತಿಗಾಗಿ ಕಾಯಲಾಗುತ್ತಿದೆ.

c. **ಸುಧಾರಣೆಗೆ ಪ್ರಯತ್ನಗಳು:**

ಕೆಎಸ್‌ಐಐಡಿಸಿಯು ತನ್ನ ನಿರ್ವಹಣೆಯ ಸತತ ಪುನಶ್ಚೇತನ ಪ್ರಯತ್ನಗಳಿಂದಾಗಿ ಸಾಲ ಇಲ್ಲದ ನಿಗಮವಾಗಿದೆ ಮತ್ತು ಇದರ ಕೂಡಿಬಂದ ನಷ್ಟವು ರೂ. 574.64 ಕೋಟಿಗಳಿಂದ (ಹಣಕಾಸಿನ ವರ್ಷ 2005–06) ರೂ. 45.40 ಕೋಟಿಗಳಿಗೆ (ಸದ್ಯದಲ್ಲಿ) ಇಳಿಸುವ ಮೂಲಕ ಉತ್ತಮ ಫಲಿತಾಂಶವನ್ನು ಪಡೆದಿರುತ್ತದೆ. ಸಾಲದ ಖಾತೆಯಲ್ಲಿ ಬಾಕಿ ಇರುವ ಮೊಬಲಗನ್ನು ವಸೂಲಿ ಮಾಡುವ ತಂತ್ರವಾಗಿ ಒಂದು ಹೊಸ ಒಟಿಎಸ್ ನೀತಿಗೆ ಮಂಡಳಿಯು ಅನುಮೋದನೆ ನೀಡಿದ್ದು, ಸರ್ಕಾರದಿಂದ ಒಪ್ಪಿಗೆ ಪಡೆದು ಪ್ರಕಟಿಸಲಾಗಿರುತ್ತದೆ. ವರದಿಯ ವರ್ಷಾವಧಿಯಲ್ಲಿ ರೂ.14.45 ಕೋಟಿಯನ್ನು ವಸೂಲು ಮಾಡಲಾಗಿದೆ. ಉಳಿದಿರುವ ನಿರ್ವಹಣೆ ಇಲ್ಲದ ಆಸ್ತಿಗಳ ಸಾಲದ ಬಾಕಿ ವಸೂಲಿಗೆ ಸಂಬಂಧಿಸಿದಂತೆ ಕಂಪೆನಿಯು ಸತತ ಪ್ರಯತ್ನವನ್ನು ನಡೆಸುತ್ತಿದೆ. ಹಾಲಿ ಇರುವ ಮುಂಗಡಗಳ ವಸೂಲಿ ಮತ್ತು ಮೂಲ ಸೌಲಭ್ಯ ವಲಯದ ಅಭಿವೃದ್ಧಿಗಾಗಿ ಪ್ರಮುಖ ಯೋಜನೆಗಳ ಅಭಿವೃದ್ಧಿಗೆ ಕೆಎಸ್‌ಐಐಡಿಸಿಯು ಗಮನವನ್ನು ಕೇಂದ್ರೀಕರಿಸಿರುವುದನ್ನು ಮುಂದುವರಿಸಿದೆ.

d. **ಸಂಪನ್ಮೂಲಗಳು:**

i) **ಸಾಲಗಳ ವಸೂಲಾತಿ ಮತ್ತು ಇತರೆ ಆದಾಯಗಳು:**

ಹಿಂದಿನ ವರ್ಷದ ಅವಧಿಯಲ್ಲಿ ಗಳಿಸಿರುವ ರೂ. 106.13 ಕೋಟಿಗೆ ಎದುರಾಗಿ 31ನೇ ಮಾರ್ಚಿ 2020ರಂದು ಇರುವಂತೆ ಕಂಪೆನಿಯು ರೂ. 85.91 ಕೋಟಿ ಒಟ್ಟು ಆದಾಯ ಗಳಿಸಿದೆ. ಕಂಪೆನಿಯು ಬಾಡಿಗೆ ಸ್ವೀಕೃತಿಯಲ್ಲಿ ರೂ. 37.73 ಕೋಟಿ ಗಳಿಸಿದೆ ಮತ್ತು ರೂ. 7.19 ಕೋಟಿ ಲಾಭಾಂಶದ ಆದಾಯ ಗಳಿಸಿದೆ. ಇದರ ಜೊತೆಗೆ ರೂ. 21.37 ಕೋಟಿಗಳನ್ನು ನಿಶ್ಚಿತ ಠೇವಣಿಗಳ ಮೇಲೆ ಬಡ್ಡಿಯ ರೂಪದಲ್ಲಿ ಗಳಿಸಿದೆ. ವರ್ಷಾವಧಿಯಲ್ಲಿ ನಿಗಮವು ಸಾಲದ ಖಾತೆಯಲ್ಲಿ 14.45 ಕೋಟಿಯನ್ನು ವಸೂಲಿ ಮಾಡಿರುತ್ತದೆ.

ii) **ಹೂಡಿಕೆ ಹಿಂಪಡೆಯುವಿಕೆ:**

ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಲಿಸ್ಟ್ ಆಗಿರುವ ಕಂಪೆನಿಯು ಹೊಂದಿರುವ ಷೇರುಗಳಲ್ಲಿನ ಹೂಡಿಕೆ ಹಿಂತೆಗೆತವನ್ನು ವರ್ಷಾವಧಿಯಲ್ಲಿ ಮಾಡಿಲ್ಲ. 2019–20ರ ಹಣಕಾಸಿನ ವರ್ಷದಲ್ಲಿ ಕಂಪೆನಿಯು ರೂ. 7.19 ಕೋಟಿಯ ಲಾಭಾಂಶ ಗಳಿಸಿದೆ. (ಸ್ವೀಕರಿಸಲ್ಪಟ್ಟ ಇತರೆ ಲಾಭಾಂಶಗಳಲ್ಲಿ ಜೆಎಸ್‌ಡಬ್ಲ್ಯೂ ಸ್ಟೀಲ್ ಲಿಮಿಟೆಡ್ ರೂ. 3.72 ಕೋಟಿಗಳು, ಜೆ.ಕೆ. ಟೈರ್ ಮತ್ತು ಇಂಡಸ್ಟ್ರೀಸ್ ಲಿಮಿಟೆಡ್ ರೂ. 0.21 ಕೋಟಿಗಳು, ಕರ್ನಾಟಕ ಆಂಟಿಬಯೋಟಿಕ್ಸ್ ಮತ್ತು ಫಾರ್ಮಾಸ್ಯೂಟಿಕಲ್ಸ್ ಲಿಮಿಟೆಡ್ ರೂ. 1.21 ಕೋಟಿಗಳು, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ಸ್ ಲಿಮಿಟೆಡ್ ರೂ. 1.01 ಕೋಟಿಗಳು ಮತ್ತು ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್ ರೂ. 0.58 ಕೋಟಿಗಳು ಸೇರಿದೆ.) (ಹಿಂದಿನ ವರ್ಷ ರೂ. 4.39 ಕೋಟಿಗಳು).

e. **ಅಭಿವೃದ್ಧಿಪರ ಚಟುವಟಿಕೆಗಳು:**

ವರ್ಷಾವಧಿಯಲ್ಲಿ ಕಂಪೆನಿಯು ಕೈಗೊಂಡಿರುವ ಪ್ರಮುಖ ಅಭಿವೃದ್ಧಿ ಪರ ಚಟುವಟಿಕೆಗಳು ಈ ಕೆಳಗೆ ಕಂಡಂತಿರುತ್ತದೆ:

i. **ಕರ್ನಾಟಕ ಸರ್ಕಾರದ ನೋಡಲ್ ಏಜೆನ್ಸಿಯಾಗಿ ಪ್ರಮುಖ ಮೂಲ ಸೌಲಭ್ಯ ಯೋಜನೆಗಳ ಅಭಿವೃದ್ಧಿ:**

ಕರ್ನಾಟಕ ರಾಜ್ಯದಲ್ಲಿ ಸರ್ಕಾರವು ಕೈಗೊಳ್ಳುವ ವಿವಿಧ ಮೂಲ ಸೌಲಭ್ಯ ಯೋಜನೆಗಳಿಗೆ ಕರ್ನಾಟಕ ಸರ್ಕಾರವು

ಕೆಎಸ್ಐಐಡಿಸಿಯನ್ನು ನೋಡಲ್ ಏಜೆನ್ಸಿಯಾಗಿ ನೇಮಿಸಿರುತ್ತದೆ. ಸರ್ಕಾರದ ನೋಡಲ್ ಏಜೆನ್ಸಿಯಾಗಿ, ಕೆಎಸ್ಐಐಡಿಸಿಯು ಕರ್ನಾಟಕ ಸರ್ಕಾರದ ಪರವಾಗಿ ಈ ಕೆಳಕಂಡ ಯೋಜನೆಗಳನ್ನು ಪಿಪಿಪಿ ಮಾದರಿಯಲ್ಲಿ ಜಾರಿಗೊಳಿಸುತ್ತಿದೆ:

a) ಕೆಂಪೇಗೌಡ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎ);

b) ಬೆಂಗಳೂರು ಸಿಗ್ನೇಚರ್ ಬಿಸಿನೆಸ್ ಪಾರ್ಕ್ (ಬಿಎಸ್‌ಬಿಪಿ);

c) ವಿಮಾನ ನಿಲ್ದಾಣಗಳ ಮತ್ತು ಹೆಲಿಪ್ಯಾಡುಗಳ ಅಭಿವೃದ್ಧಿಯೂ ಸೇರಿದಂತೆ ವಿಮಾನಯಾನ ಅಭಿವೃದ್ಧಿ

ಜ) ಪಿಪಿಪಿ ಯೋಜನೆಗಳಿಗೆ ಸರ್ಕಾರಕ್ಕೆ ಸಹಾಯ ಮಾಡುವುದು;

ಜಿ) ತದಡಿ ಬಂದರು; ಮತ್ತು

ಜಿ) ನೈಸರ್ಗಿಕ ಅನಿಲ ಕೊಳವೆ ಮಾರ್ಗ ಸೇವೆಗಳು.

ಪ್ರತೀ ಯೋಜನೆಗಳ ಸ್ಥಿತಿಗತಿಯ ವಿವರಗಳು ಈ ಕೆಳಗೆ ಕಂಡಂತಿರುತ್ತದೆ:

a) ಕೆಂಪೇಗೌಡ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎ):

ಕೆಐಎಯು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಮುಂದುವರಿಸಿದ್ದು, ಪ್ರಯಾಣಿಕರ ಸಂಚಾರಕ್ಕೆ ಸಂಬಂಧಿಸಿದಂತೆ ದೇಶದಲ್ಲಿಯೇ 3ನೇ ಅತಿ ದೊಡ್ಡ ವಿಮಾನ ನಿಲ್ದಾಣವೆಂಬ ಸ್ಥಾನವನ್ನು ಉಳಿಸಿಕೊಂಡಿದೆ. 2019–20ನೇ ಸಾಲಿನಲ್ಲಿ 32.26 ಮಿಲಿಯನ್ ಪ್ರಯಾಣಿಕರನ್ನು ನಿರ್ವಹಿಸಿರುತ್ತದೆ. ಬಿಐಎಎಲ್‌ನವರು ಎರಡನೇ ರನ್‌ವೇ ಮತ್ತು ಟರ್ಮಿನಲ್‌ಗಳ ನಿರ್ಮಾಣದ ಯೋಜನೆಯನ್ನು ಪ್ರಾರಂಭಿಸಿದ್ದು, ಇವುಗಳು 2021ರಲ್ಲಿ ಮುಕ್ತಾಯವಾಗಬಹುದೆಂದು ನಿರೀಕ್ಷಿಸಲಾಗಿದೆ. ಈ ವಿಮಾನ ನಿಲ್ದಾಣಕ್ಕೆ ಸಂಬಂಧಿಸಿದಂತೆ, ಪ್ರಮುಖ ವಿಚಾರಗಳ ನಿರ್ವಹಣೆಯಲ್ಲಿ ಕೆಎಸ್ಐಐಡಿಸಿಯು ಕರ್ನಾಟಕ ಸರ್ಕಾರದ ನೋಡಲ್ ಏಜೆನ್ಸಿಯಾಗಿ ತನ್ನ ಪಾತ್ರವನ್ನು ಮುಂದುವರಿಸಿದೆ.

b) ಬೆಂಗಳೂರು ಸಿಗ್ನೇಚರ್ ಬಿಸಿನೆಸ್ ಪಾರ್ಕ್ (ಬಿಎಸ್‌ಬಿಪಿ):

ಈ ಯೋಜನೆಯನ್ನು ಕೆಐಎಗೆ ಪಕ್ಕದ/ತಾಗಿಕೊಂಡಿರುವ ಆಯಕಟ್ಟಿನ ಜಾಗದಲ್ಲಿ ಪ್ರಮುಖ ಜಮೀನಿನಲ್ಲಿ ಅಭಿವೃದ್ಧಿಪಡಿಸಿರುವುದನ್ನು ಪರಿಗಣಿಸಿ ಮಾರುಕಟ್ಟೆ ಸಮೀಕ್ಷೆಯ ಆಧಾರದ ಮೇಲೆ ಮಾಸ್ಟರ್ ಪ್ಲಾನ್ ಮತ್ತು ವ್ಯವಹಾರ ಯೋಜನೆಯನ್ನು ಸಿದ್ದಪಡಿಸಲಾಗಿದ್ದು, ಸರ್ಕಾರದಿಂದ ಅನುಮೋದನೆಯನ್ನೂ ಪಡೆಯಲಾಗಿರುತ್ತದೆ.

ವಿವರವಾದ ಯೋಜನಾ ವರದಿ ಮತ್ತು ಕೈಗೊಳ್ಳಲಾಗಿರುವ ಸ್ಪರ್ಧಾತ್ಮಕ ಹರಾಜು ಪ್ರಕ್ರಿಯೆಯ ಆಧಾರದ ಮೇಲೆ ಮೂಲಸೌಲಭ್ಯ ಯೋಜನೆಯ ಹಂತ–Iರ ಕಾಮಗಾರಿಯನ್ನು ಸರ್ಕಾರದಿಂದ ಸೂಕ್ತ ಒಪ್ಪಿಗೆಯನ್ನು ಪಡೆದು ಅತ್ಯಂತ ಕಡಿಮೆ ಬೆಲೆಗೆ ಬಿಡ್ ಮಾಡಿದವರಿಗೆ ಅಕ್ಟೋಬರ್ 2020ರಲ್ಲಿ ವಹಿಸಿಕೊಡಲಾಗಿದೆ. 15 ತಿಂಗಳುಗಳ ಅವಧಿಯ ನಿರ್ಮಾಣ ಕಾರ್ಯದ ಕಾಮಗಾರಿಯು ಆರಂಭವಾಗಿರುತ್ತದೆ. ಬಿಎಸ್‌ಬಿಪಿಗೆ (ಬಿಐಸಿಸಿಯನ್ನೂ ಸೇರಿ) ರಾಷ್ಟ್ರೀಯ ಹೆದ್ದಾರಿ–7ರಿಂದ (ಆರ್‌ಒಬಿ ಹತ್ತಿರ) ವಿಶೇಷವಾದ ಪ್ರವೇಶ ಸಂಪರ್ಕ ರಸ್ತೆಯ (ಮೇಲ್ಸೇತುವೆ) ಅಗತ್ಯತೆಯನ್ನು ಪರಿಗಣಿಸಿ, ಡೆಪಾಸಿಟ್ ಕಾಂಟ್ರಿಬ್ಯೂಷನ್ ಕಾಮಗಾರಿಯಾಗಿ ಎನ್‌ಹೆಚ್‌ಎಐಯವರ ಮೂಲಕ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ, ಸಂಪರ್ಕ ಮೇಲ್ಸೇತುವೆ ಯೋಜನೆಗಾಗಿ ಕಾರ್ಯಸಾಧ್ಯತಾ ವರದಿ ಹಾಗೂ ಸಮಗ್ರವಾದ ಯೋಜನಾ ವರದಿಯನ್ನು ಸಿದ್ಧಪಡಿಸುವ ಕೆಲಸವನ್ನು ಎನ್‌ಹೆಚ್‌ಎಐನವರು ಕೈಗೆತ್ತಿಕೊಂಡಿದ್ದು, ಸಂಪರ್ಕ ಮೆಲ್ಸೇತುವೆಯ ಯೋಜನೆಯನ್ನು ಅಂತಿಮಗೊಳಿಸಲಾಗುತ್ತಿದೆ.

c) ವಿಮಾನ ನಿಲ್ದಾಣಗಳ ಮತ್ತು ಹೆಲಿಪ್ಯಾಡುಗಳ ಅಭಿವೃದ್ಧಿಯೂ ಸೇರಿದಂತೆ ವಿಮಾನಯಾನ ಅಭಿವೃದ್ಧಿ

ಕರ್ನಾಟಕ ರಾಜ್ಯದಲ್ಲಿ ಏರ್‌ಸ್ಟ್ರಿಪ್‌ಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸರ್ಕಾರವು ಕೆಎಸ್ಐಐಡಿಸಿಯನ್ನು ನೋಡಲ್ ಏಜೆನ್ಸಿಯನ್ನಾಗಿ ನೇಮಿಸಿರುತ್ತದೆ.

ನೋಡಲ್ ಏಜೆನ್ಸಿಯಾಗಿ ಕೆಎಸ್ಐಐಡಿಸಿಯು ಈ ಕೆಳಕಂಡ ಸಾಧನೆಯನ್ನು ಮಾಡಿರುತ್ತದೆ:

- ಕಲಬುರ್ಗಿ ವಿಮಾನ ನಿಲ್ದಾಣ ಮತ್ತು ಬೀದರ್‌ನ ಸೇನಾ ವಿಮಾನ ನಿಲ್ದಾಣದಲ್ಲಿ ನಾಗರೀಕ ವಿಭಾಗದ ಕಾರ್ಯಾರಂಭ ಮಾಡಿಸಿ ಕಾಮಗಾರಿಯನ್ನು ಮುಕ್ತಾಯಗೊಳಿಸುವಲ್ಲಿ ಸಮನ್ವಯತೆಯನ್ನು ಸಾಧಿಸಿರುತ್ತದೆ. ಕಲಬುರ್ಗಿ ವಿಮಾನ ನಿಲ್ದಾಣವನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು (ಎಎಐ) ವಹಿಸಿಕೊಂಡಿದ್ದು, ಬೀದರ್‌ನ ಸೇನಾ ವಿಮಾನ ನಿಲ್ದಾಣದ ನಾಗರಿಕ ವಿಭಾಗದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಮೆ. ಜಿಎಂಆರ್–ಹೈದರಾಬಾದ್ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ (ಜಿಹೆಚ್‌ಐಎಎಲ್)ಇವರಿಗೆ ನೀಡಲಾಗಿದೆ.
- ಶಿವಮೊಗ್ಗದ ವಿಮಾನ ನಿಲ್ದಾಣವನ್ನು ಶಿವಮೊಗ್ಗದ ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಕರ್ನಾಟಕ ಸರ್ಕಾರದ ಕರ್ನಾಟಕ ಲೋಕೋಪಯೋಗಿ ಇಲಾಖೆ ಅವರಿಂದ ಕಾರ್ಯಗತಗೊಳಿಸಲಾಗುತ್ತಿದೆ. ಎಲ್ಲಾ ಅಗತ್ಯವಾದ ಸಮನ್ವಯತೆ ಮತ್ತು ಮಾರ್ಗದರ್ಶನವನ್ನು ಕೆಎಸ್ಐಐಡಿಸಿಯು ನೀಡುತ್ತಿದೆ.
- ವಿಜಯಪುರದಲ್ಲಿರುವ ವಿಮಾನ ನಿಲ್ದಾಣದ ಕಾರ್ಯಗತಗೊಳಿಸುವಿಕೆಯನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಲೋಕೋಪಯೋಗಿ ಇಲಾಖೆಯು ಕೈಗೆತ್ತಿಕೊಳ್ಳುತ್ತಿದೆ.

- ಸರ್ಕಾರವು ಈ ಹಿಂದೆ ಆಯ್ಕೆ ಮಾಡಿದ್ದ ಡೆವಲಪರ್ ಮೂಲಕ ಬಳ್ಳಾರಿ ವಿಮಾನ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಳ ಪ್ರಾರಂಭದ ಸೂಕ್ತ ಸಮನ್ವಯತೆ ಮತ್ತು ಅನುಸರಣಾ ಕಾರ್ಯವನ್ನು ಕೆಎಸ್ಐಐಡಿಸಿಯು ನಿರ್ವಹಿಸುತ್ತಿದೆ.

ಸರ್ಕಾರದ ಮಟ್ಟದಲ್ಲಿ ತೆಗೆದುಕೊಳ್ಳಬಹುದಾದ ತೀರ್ಮಾನಗಳ ಆಧಾರದ ಮೇಲೆ ಗುರುತಿಸಲಾಗಿರುವ ಬೇರೆ ಪ್ರದೇಶಗಳಲ್ಲಿ ವಿಮಾನ ನಿಲ್ದಾಣಗಳು ಮತ್ತು ಹೆಲಿಪ್ಯಾಡುಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಇದೂ ಅಲ್ಲದೇ, ಪ್ರಾದೇಶಿಕ ಸಂಪರ್ಕ ಯೋಜನೆಯಂತೆ (ಯುಡಿಎಎನ್) ವಿಜಿಎಫ್ ಇತ್ಯಾದಿಗಳ ಬಿಡುಗಡೆಗೆ ಸಂಬಂಧಿಸಿದಂತೆ ಕೆಎಸ್ಐಐಡಿಸಿಯು ಸಮನ್ವಯದ ಕೆಲಸವನ್ನು ನೋಡಿಕೊಳ್ಳುತ್ತಿದೆ.

d. ಪಿಪಿಪಿ ಯೋಜನೆಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ನೆರವು ನೀಡುವುದು

ಕಂಪೆನಿಯ ಆಡಳಿತಾತ್ಮಕ ಇಲಾಖೆಯು ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಾಗಿದ್ದು, ಸಾರ್ವಜನಿಕ ಖಾಸಗಿ ಪಾಲುದಾರಿಕೆಯಲ್ಲಿ (ಪಿಪಿಪಿ) ಮೂಲ ಸೌಲಭ್ಯ ಅಭಿವೃದ್ಧಿಗೆ ನೋಡಲ್ ಇಲಾಖೆಯಾಗಿರುತ್ತದೆ. ಮೂಲಸೌಲಭ್ಯ ಅಭಿವೃದ್ಧಿಗಾಗಿ 2018ರ ಪಿಪಿಪಿ ನೀತಿಯಂತೆ ನಮ್ಮ ಕಂಪೆನಿಯು ನೀತಿ ವಿಷಯಗಳು, ಮೌಲ್ಯಮಾಪನ, ಮತ್ತು ಅಭಿವೃದ್ಧಿ ಉಸ್ತುವಾರಿಯ ವಿಷಯಗಳಲ್ಲಿ ಕಂಪೆನಿಯು ಐಡಿಡಿಗೆ ನೆರವಾಗುತ್ತದೆ.

e. ತದಡಿ ಬಂದರು ಯೋಜನೆ:

ತದಡಿಯಲ್ಲಿ ಪಿಪಿಪಿ ಆಧಾರದ ಮೇಲೆ ಸಮುದ್ರ ಬಂದರಿನ ಅಭಿವೃದ್ಧಿಗೆ ಕೆಎಸ್ಐಐಡಿಸಿಯು ಗುರುತಿಸಲ್ಪಟ್ಟ ನೋಡಲ್ ಏಜೆನ್ಸಿಯಾಗಿರುತ್ತದೆ. ಪರಿಸರ ಸೂಕ್ಷ್ಮತೆಯನ್ನು ಪರಿಗಣಿಸಿ, ಸರ್ಕಾರವು ಆ ಪ್ರದೇಶದ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರದ ಪರಿಸರ ಪ್ರವಾಸೋದ್ಯಮದಂತಹ ಬದಲೀ ಯೋಜನೆಯ ಅಭಿವೃದ್ಧಿಯನ್ನು ಪರಿಶೀಲಿಸುತ್ತಿದೆ.

f. ನೈಸರ್ಗಿಕ ಅನಿಲ ಕೊಳವೆ ಮಾರ್ಗ ಯೋಜನೆಗಳು:

i. ಪ್ರಮುಖ ಕೊಳವೆ ಮಾರ್ಗ:

ದಾಭೋಲ್– ಬೆಂಗಳೂರು ಪ್ರಮುಖ ಕೊಳವೆ ಮಾರ್ಗವು ಜಿಎಐಎಲ್ ಅವರಿಂದ ಮುಗಿದಿದ್ದು ಕಾರ್ಯಾರಂಭ ಮಾಡಿರುತ್ತದೆ. ಕೋಚಿನ್–ಕೂಟನಾಡು–ಮಂಗಳೂರು/ ಬೆಂಗಳೂರು (ಜಿಎಐಎಲ್) ಮತ್ತು ಎನ್ನೋರ್ –ತಿರುವಳ್ಳೂರು–ಬೆಂಗಳೂರು–ನಾಗಪಟಿನಮ್ –ಟುಟಿಕೋರಿನ್ (ಇಂಡಿಯನ್ ಆಯಿಲ್ ಕಾರ್ಪೊರೇಶನ್) ಮಾರ್ಗಗಳು ಅನುಷ್ಠಾನದಲ್ಲಿ ಇರುತ್ತವೆ ಎಂದು ತಿಳಿದುಬಂದಿರುತ್ತದೆ.

ii. ನಗರ ಅನಿಲ ಸರಬರಾಜು ಯೋಜನೆ:

ಸಿಜಿಡಿ ಜಾಲವು ಕರ್ನಾಟಕದ ನಗರಗಳಲ್ಲಿರುವ ಮನೆಗಳಿಗೆ, ಸಿಎನ್‌ಜಿ ವಾಹನಗಳಿಗೆ ಮತ್ತು ವಾಣಿಜ್ಯ/ ಕೈಗಾರಿಕಾ ಬೇಡಿಕೆಗಳಿಗೆ ಕೊಳವೆ ಮಾರ್ಗದ ಮೂಲಕ ಅನಿಲ ಸರಬರಾಜು ಬೇಡಿಕೆಯನ್ನು ಪೂರೈಸಲಿದೆ. ಸಿಜಿಡಿ ಯೋಜನೆಯನ್ನು ಪೆಟ್ರೋಲಿಯಂ & ನ್ಯಾಚುರಲ್ ಗ್ಯಾಸ್ ರೆಗ್ಯುಲೇಟರಿ ಬೋರ್ಡ್‌ನವರು (ಪಿಎನ್‌ಜಿಆರ್‌ಬಿ) ಚಿಕ್ಕಬಳ್ಳಾಪುರ ಮತ್ತು ಯಾದಗಿರಿ ಜಿಲ್ಲೆಗಳನ್ನು ಹೊರತುಪಡಿಸಿ ಎಲ್ಲಾ ಜಿಲ್ಲೆಗಳಲ್ಲೂ ಕೈಗೆತ್ತಿಕೊಂಡಿರುತ್ತಾರೆ. ಕಾಮಗಾರಿಗಳು ಅಭಿವೃದ್ಧಿಯ/ಜಾರಿಯ ವಿವಿಧ ಹಂತದಲ್ಲಿರುತ್ತದೆ.

6. ವೆಂಚರ್ ಕ್ಯಾಪಿಟಲ್ ಫಂಡ್ಸ್:

a. ಕರ್ನಾಟಕ ಮಾಹಿತಿ ತಂತ್ರಜ್ಞಾನ ವೆಂಚರ್ ಕ್ಯಾಪಿಟಲ್ ಫಂಡ್–2 (ಕೆಐಟಿವಿಇಎನ್ ಫಂಡ್–2):

ಕೆಐಟಿವಿಇಎನ್ ಫಂಡ್–2 2007ರಲ್ಲಿ ಸ್ಥಾಪಿಸಲ್ಪಟ್ಟಿದ್ದು, ರೂ. 26.25 ಕೋಟಿ ಪ್ರಮಾಣದ ನಿಧಿಯಾಗಿರುತ್ತದೆ. ಕೆಎಸ್ಐಐಡಿಸಿಯು ಈ ನಿಧಿಗೆ ರೂ. 6.25 ಕೋಟಿಗಳ ದೇಣಿಗೆ ನೀಡಿರುತ್ತದೆ. 11 ಹೊಸ ಕಂಪೆನಿಗಳಲ್ಲಿ ಈ ನಿಧಿಗಳು ಸಂಪೂರ್ಣವಾಗಿ ಹೂಡಲ್ಪಟ್ಟಿರುತ್ತದೆ. ಈ ನಿಧಿಯು ಕೆಎಸ್ಐಐಡಿಸಿ ಮತ್ತು ಕೆಎಸ್ಎಫ್‌ಸಿಯ ಪ್ರಾಯೋಜಕತ್ವದ ಕರ್ನಾಟಕ ಅಸೆಟ್ ಮ್ಯಾನೇಜ್‌ಮೆಂಟ್ ಕಂಪೆನಿ ಪ್ರೈವೇಟ್ ಲಿಮಿಟೆಡ್‌ನಿಂದ (ಕೆಎಎಂಸಿಒ) ನಿರ್ವಹಿಸಲ್ಪಡುತ್ತಿದೆ.

ಇಲ್ಲಿಯವರೆಗೆ ನಿಧಿಯು ಭಾಗಶಃ ಹೂಡಿಕೆಯನ್ನು ಹಿಂತಿರುಗಿಸಿರುತ್ತದೆ ಮತ್ತು ಅದರಂತೆ, ಕೆಎಸ್ಐಐಡಿಸಿಯು ದಿನಾಂಕ 31–03–2020ರವರೆಗೆ ರೂ. 523.81 ಲಕ್ಷವನ್ನು ಅಂದರೆ 83.81%ನ್ನು ಹಿಂದೆ ಪಡೆದಿರುತ್ತದೆ. 31.03.2019ರಲ್ಲಿ ಇರುವಂತೆ ಆ ಸಂಸ್ಥೆಯ ಬಂಡವಾಳದಲ್ಲಿ ಇರುವ ಬಾಕಿ ರೂ. 101.19 ಲಕ್ಷಗಳಾಗಿದ್ದು, 2021–22ರ ಹಣಕಾಸಿನ ವರ್ಷದಲ್ಲಿ ಬಿಡುಗಡೆಯಾಗುವ ನಿರೀಕ್ಷೆ ಇದೆ.

b. ಕೆಎಆರ್‌ಎಸಿಎಂವಿಇಎನ್ ಫಂಡ್

ಕರ್ನಾಟಕ ಸೆಮಿ ಕಂಡಕ್ಟರ್ ವೆಂಚರ್ ಕ್ಯಾಪಿಟಲ್ ಫಂಡನ್ನು–"ಕೆಎಆರ್‌ಎಸಿಎಂವಿಇಎನ್ ಫಂಡ್" ಈ ನಿಧಿಯು ಎಐಆರ್–ವಿಭಾಗ–1 ವೆಂಚರ್ ಕ್ಯಾಪಿಟಲ್ ಫಂಡ್ ಅಡಿಯಲ್ಲಿ ಎಸ್ಇಬಿಐಯಲ್ಲಿ ನೋಂದಣಿಯಾಗಿದ್ದು, ಇದರ ಬಂಡವಾಳವು ರೂ. 92.95 ಕೋಟಿ.

ಕೆಎಸ್ಐಐಡಿಸಿಯು ಈ ನಿಧಿಗೆ ರೂ. 5 ಕೋಟಿಯ ಚಂದಾ ನೀಡಿದ್ದು, ಎಸ್ಐಡಿಬಿಐ (ರೂ. 13.95 ಕೋಟಿ) ಎಲ್ಐಸಿ (ರೂ. 5 ಕೋಟಿ), ಕೆನರಾ ಬ್ಯಾಂಕ್ (ರೂ. 5 ಕೋಟಿ), ಯೂನಿಯನ್ ಬ್ಯಾಂಕ್ ಆಫ್ ಇಂಡಿಯ (ರೂ. 5 ಕೋಟಿ), ಪಂಜಾಬ್ ನ್ಯಾಷನಲ್ ಬ್ಯಾಂಕ್ (ರೂ. 5 ಕೋಟಿ), ಆಂಧ್ರ ಬ್ಯಾಂಕ್ (ರೂ. 5 ಕೋಟಿ) ಮತ್ತು ಕ್ಯಾನ್‌ಬ್ಯಾಂಕ್ ವೆಂಚರ್

ಫಂಡ್ (ಇಡಿಎಫ್) (ರೂ. 24 ಕೋಟಿಗಳು) ಈ ನಿಧಿಯ ಇತರ ಚಂದಾದಾರರಾಗಿರುತ್ತಾರೆ.

ಸದ್ಯಕ್ಕೆ ಈ ನಿಧಿಯು ಹೂಡಿಕೆ ಹಂತದಲ್ಲಿದ್ದು, ಇಲ್ಲಿಯವರೆಗೆ ಕೆಎಸ್ಐಐಡಿಸಿಗೆ ರೂ. 36.63 ಲಕ್ಷಗಳನ್ನು 31.3.2020ರವರೆಗೆ ಹಿಂತಿರುಗಿಸಿರುತ್ತಾರೆ. 31.3.2020ರಲ್ಲಿ ಇರುವಂತೆ ಈ ನಿಧಿಯಲ್ಲಿರುವ ಕೆಎಸ್ಐಐಡಿಸಿಯ ಬಾಕಿಯು ರೂ. 463.37 ಲಕ್ಷಗಳು ಮತ್ತು 2021–22ರ ಹಣಕಾಸಿನ ವರ್ಷದಲ್ಲಿ ಮತ್ತು ನಂತರದಲ್ಲಿ ಬಿಡುಗಡೆಯಾಗುವ ನಿರೀಕ್ಷೆ ಇದೆ.

c. ಕೆಐಟಿವಿಇಎನ್ ಫಂಡ್–3 (ಜೈವಿಕ ತಂತ್ರಜ್ಞಾನ)

ಕೆಐಟಿವಿಇಎನ್ ಫಂಡ್–3 (ಜೈವಿಕ ತಂತ್ರಜ್ಞಾನ) ನಿಧಿಯು ಎಐಎಫ್–ಪ್ರವರ್ಗ–I ರ ವೆಂಚರ್ ಕ್ಯಾಪಿಟಲ್ ಫಂಡ್‌ನ ಅಡಿಯಲ್ಲಿ ಎಸ್ಇಬಿಐಯಲ್ಲಿ ನೋಂದಾಯಿಸಲ್ಪಟ್ ನಿಧಿಯಾಗಿದ್ದು ಇದರ ಬಂಡವಾಳವು ರೂ. 35.55 ಕೋಟಿಗಳು.

ಕೆಎಸ್ಐಐಡಿಸಿಯು ಈ ನಿಧಿಗೆ ರೂ. 5 ಕೋಟಿಯ ವಂತಿಗೆ ನೀಡಿದ್ದು, ಕೆಐಟಿಎಸ್ ಮೂಲಕ (ರೂ. 18 ಕೋಟಿಗಳು), ಕೆಎಸ್ಎಫ್‌ಸಿ (ರೂ. 5 ಕೋಟಿ) ಎಸ್ಐಡಿಬಿಐನಿಂದ (ರೂ. 3.55 ಕೋಟಿಗಳು) ಮತ್ತು ಬಿಐಆರ್ಎಸಿ (ರೂ. 4 ಕೋಟಿಗಳು) ಇತರೆ ಚಂದಾದಾರರಾಗಿರುತ್ತಾರೆ. ಈ ನಿಧಿಯು 2017–18ರ ಹಣಕಾಸಿನ ವರ್ಷದಿಂದ ಕಾರ್ಯಾರಂಭ ಮಾಡಿರುತ್ತದೆ ಮತ್ತು ಹೂಡಿಕೆಯ ಹಂತದಲ್ಲಿರುತ್ತದೆ.

e. ಕೆಐಟಿವಿಇಎನ್ ಫಂಡ್–4 (ಎವಿಜಿಸಿ):

ಕೆಐಟಿವಿಇಎನ್ ಫಂಡ್–4 (ಎವಿಜಿಸಿ)ಯ ಮೂಲಧನವು ರೂ. 20 ಕೋಟಿಗಳಾಗಿದ್ದು, ಎಐಎಫ್–ಪ್ರವರ್ಗ–I ರ ವೆಂಚರ್ ಕ್ಯಾಪಿಟಲ್ ಫಂಡ್‌ನ ಅಡಿಯಲ್ಲಿ ಎಸ್ಇಬಿಐಯಲ್ಲಿ ನೋಂದಾಯಿಸಲ್ಪಟ್ಟಿರುತ್ತದೆ.

ಈ ನಿಧಿಗೆ ಕೆಎಸ್ಐಐಡಿಸಿಯು ರೂ. 5 ಕೋಟಿಯ ವಂತಿಗೆ ನೀಡಿದ್ದು, ಕೆಐಟಿಎಸ್ (ರೂ. 10 ಕೋಟಿ), ಕಿಯೋನಿಕ್ಸ್ (ರೂ. 5 ಕೋಟಿ) ಇತರ ಚಂದಾದಾರರಾಗಿರುತ್ತಾರೆ. ಈ ನಿಧಿಯು 2019–20ರ ಹಣಕಾಸಿನ ವರ್ಷದಿಂದ ಕಾರ್ಯಾರಂಭ ಮಾಡಿದ್ದು, ಹೂಡಿಕೆಯ ಹಂತದಲ್ಲಿದೆ.

ಮೇಲ್ಕಂಡ ಎಲ್ಲಾ ನಿಧಿಗಳನ್ನೂ ಕೆಎಸ್ಐಐಡಿಸಿ ಮತ್ತು ಕೆಎಸ್ಎಫ್‌ಸಿಯಿಂದ ಪ್ರಾಯೋಜಿಸಲ್ಪಟ್ಟ ಕರ್ನಾಟಕ ಅಸೆಟ್ ಮ್ಯಾನೇಜ್‌ಮೆಂಟ್ ಕಂಪೆನಿಯು (ಕೆಎಎಂಸಿಒ) ನಿರ್ವಹಿಸುತ್ತಿದೆ.

7. ಆಂತರಿಕ ನಿಯಂತ್ರಣ ವ್ಯವಸ್ಥೆಗಳು ಮತ್ತು ಲೆಕ್ಕಪರಿಶೋಧನೆ:

ನಿಗಮವು ನಿರ್ವಹಣೆಯ ಅಪಾಯಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ವ್ಯಾಪಕವಾದ ಆಂತರಿಕ ನಿಯಂತ್ರಣ ಮತ್ತು ವ್ಯವಸ್ಥೆಯನ್ನು ಹೊಂದಿರುತ್ತದೆ. ಕಂಪೆನಿಯು ವೃತ್ತಿನಿರತ ಆಂತರಿಕ ಲೆಕ್ಕ ಪರಿಶೋಧಕರನ್ನು (ಪರಿಣಿತಿ ಹೊಂದಿರುವ ವೃತ್ತಿನಿರತರು) ನೇಮಿಸಿದ್ದು, ಅವರು ಆಂತರಿಕ ನಿಯಂತ್ರಣ ವ್ಯವಸ್ಥೆ, ಅಪಾಯ ನಿರ್ವಹಣೆ, ಆಡಳಿತ ವ್ಯವಸ್ಥೆ ಮತ್ತು ನಿಯಂತ್ರಣಗಳ ಸಮರ್ಪಕತೆ ಮತ್ತು ಸಮಷ್ಟಿಯನ್ನು ಸ್ವತಂತ್ರವಾಗಿ ಮೌಲ್ಯಮಾಪನ ಮಾಡುವರು. ಆಂತರಿಕ ಲೆಕ್ಕಪರಿಶೋಧನಾ ವರದಿಯನ್ನು ಮಂಡಳಿಯ ಲೆಕ್ಕಪರಿಶೋಧನಾ ಸಮಿತಿಯ ಮುಂದೆ ಮಂಡಿಸಲಾಗುತ್ತಿದೆ.

8. ಸಾಲ ರಹಿತ ಸಂಸ್ಥೆ:

ನಿಮ್ಮ ನಿಗಮವು ತನ್ನ ಚಟುವಟಿಕೆಗಳಿಗೆ ಯಾವುದೇ ರೀತಿಯ ಸಾಲವನ್ನು ಅವಲಂಭಿಸಿರುವುದಿಲ್ಲ ಮತ್ತು ಇದು ಸಾಲ ರಹಿತ ಸಂಸ್ಥೆಯಾಗಿರುತ್ತದೆ.

9. ನಿರ್ದೇಶಕರ ಮಂಡಳಿ ಮತ್ತು ಪ್ರಮುಖ ಆಡಳಿತ ಸಿಬ್ಬಂದಿ:

ಕಂಪೆನಿಯು ನಿರ್ದೇಶಕರ ಮಂಡಳಿಯಿಂದ ಆಡಳಿತ ನಡೆಸಲ್ಪಡುತ್ತಿದ್ದು, ಇವರಲ್ಲಿ ಎಲ್ಲಾ ನಿರ್ದೇಶಕರುಗಳು ಕರ್ನಾಟಕ ಸರ್ಕಾರದಿಂದ ನೇಮಿಸಲ್ಪಟ್ಟಿರುತ್ತಾರೆ.

2019–20ರ ಅವಧಿಯಲ್ಲಿ ನಿರ್ದೇಶಕರ ನೇಮಕಾತಿ ಮತ್ತು ವರದಿಯ ದಿನಾಂಕದಲ್ಲಿ ಇರುವಂತೆ ಅವರ ಅವಧಿ ಮುಗಿದ ವಿವರಗಳು ಈ ಕೆಳಕಂಡಂತಿದೆ:

ಕ್ರಮ ಸಂಖ್ಯೆ	ಹೆಸರು		ಇಂದ	ವರೆಗೆ
1.	ಶ್ರೀ ಐ.ಎಸ್.ಎನ್ ಪ್ರಸಾದ್, ಭಾಆಸೇ	ನಿರ್ದೇಶಕರು	21–06–2018	20–09–2019
2.	ಡಾ. ಸಂದೀಪ್ ದವೆ, ಭಾಆಸೇ	ನಿರ್ದೇಶಕರು	21–06–2018	29–07–2019
3.	ಶ್ರೀ ದರ್ಪಣ್ ಜೈನ್, ಭಾಆಸೇ	ನಿರ್ದೇಶಕರು	21–06–2018	23–04–2019
4.	ಶ್ರೀ ಗೌರವ್ ಗುಪ್ತ, ಭಾಆಸೇ	ನಿರ್ದೇಶಕರು	30–07–2018	ಈ ದಿನಾಂಕದ ವರೆಗೆ
5.	ಶ್ರೀಮತಿ ಗುಂಜನ್ ಕೃಷ್ಣ, ಭಾಆಸೇ	ವ್ಯವಸ್ಥಾಪಕ ನಿರ್ದೇಶಕರು	13–07–2018	25–04–2019
6.	ಶ್ರೀ ಕೆ. ಮಹದೇವ	ಅಧ್ಯಕ್ಷರು	27–02–2019	29–07–2019
7.	ಶ್ರೀ ಗಂಗಾರಾಮ್ ಬಡೇರಿಯ, ಭಾಆಸೇ	ವ್ಯವಸ್ಥಾಪಕ ನಿರ್ದೇಶಕರು	25–04–2019	16–09–2020
8.	ಶ್ರೀ ಕಪಿಲ್ ಮೋಹನ್, ಭಾಆಸೇ	ಅಧ್ಯಕ್ಷರು	29–07–2019	ಈ ದಿನಾಂಕದ ವರೆಗೆ
9.	ಡಾ. ಪಿ.ಸಿ. ಜಾಫರ್, ಭಾಆಸೇ	ನಿರ್ದೇಶಕರು	20–09–2019	ಈ ದಿನಾಂಕದ ವರೆಗೆ
10.	ಶ್ರೀಮತಿ ಚೈತ್ರ ವಿ. ಭಾಆಸೇ	ನಿರ್ದೇಶಕರು	21.06.2018	20.09.2019

	ನಿರ್ದೇಶಕರು	02–11–2019	ಈ ದಿನಾಂಕದ ವರೆಗೆ	29.07.2019
11.	ಶ್ರೀ ಎಸ್. ಮಹದೇವಸ್ವಾಮಿ	ನಿರ್ದೇಶಕರು	18.05.2020	ಈ ದಿನಾಂಕದ ವರೆಗೆ
12.	ಶ್ರೀ ಎಂ.ಎಸ್. ಶ್ರೀಕರ್, ಭಾಆಸೇ	ವ್ಯವಸ್ಥಾಪಕ ನಿರ್ದೇಶಕರು	16.09.2020	ಈ ದಿನಾಂಕದ ವರೆಗೆ
13.	ಶ್ರೀಮತಿ ಗಾಯಿತ್ರಿದೇವಿ ಸಿ.ಎನ್.	ನಿರ್ದೇಶಕರು	22.10.2020	ಈ ದಿನಾಂಕದ ವರೆಗೆ
14	ಶ್ರೀಮತಿ ಭಾರತಿ ಮಲ್ಲಿಕಾರ್ಜುನಪ್ಪ ಅಳವಂಡಿ	ನಿರ್ದೇಶಕರು	22.10.2020*	ಈ ದಿನಾಂಕದ ವರೆಗೆ
15	ಡಾ. ಶೈಲೇಂದ್ರ ಕಾಶಿನಾಥ್ ಬೆಲ್ದಾಳೆ	ಅಧ್ಯಕ್ಷರು	25.11.2020*	ಈ ದಿನಾಂಕದ ವರೆಗೆ

* ಇವರು ಡಿಐಎನ್ (ನಿರ್ದೇಶಕರ ಗುರುತಿನ ಸಂಖ್ಯೆ) ಪಡೆಯುವಿಕೆಗೆ ಒಳಪಟ್ಟು. ನೇಮಕಾತಿಯ ಜಾರಿ ದಿನಾಂಕವು ಅವರು ಡಿಐಎನ್‌ನ್ನು ಹೊಂದಿದ ದಿನಾಂಕದಿಂದ ಪ್ರಾರಂಭವಾಗುತ್ತದೆ.

ವ್ಯವಸ್ಥಾಪಕ ನಿರ್ದೇಶಕರನ್ನು ಹೊರತುಪಡಿಸಿ ಈ ಕೆಳಕಂಡ ಅಧಿಕಾರಿಗಳು ಪ್ರಮುಖ ಆಡಳಿತ ಸಿಬ್ಬಂದಿಯಾಗಿರುತ್ತಾರೆ:

ಶ್ರೀ ಎನ್.ಆರ್.ಎನ್. ಸಿಂಹ ಇವರನ್ನು ದಿನಾಂಕ 30.12.2015 ರಿಂದ ಜಾರಿಗೆ ಬರುವಂತೆ ಮುಖ್ಯ ಹಣಕಾಸು ಅಧಿಕಾರಿಯನ್ನಾಗಿ ನೇಮಕಾತಿ ಮಾಡಲಾಗಿದ್ದು, ಅವರು ಈ ದಿನಾಂಕದವರೆಗೂ ಮುಖ್ಯ ಹಣಕಾಸು ಅಧಿಕಾರಿಯಾಗಿ ಮುಂದುವರಿದಿರುತ್ತಾರೆ.

ಶ್ರೀ ಶ್ರೀಧರ ಆರ್. ಇವರನ್ನು ಕಂಪೆನಿ ಕಾರ್ಯದರ್ಶಿ & ಕಾನೂನು ಸಲಹೆಗಾರರನ್ನಾಗಿ ದಿನಾಂಕ 22.10.2018 ರಿಂದ ಜಾರಿಗೆ ಬರುವಂತೆ ನೇಮಕಾತಿ ಮಾಡಲಾಗಿದ್ದು, 21.10.2020ರವರೆಗೆ ಮುಂದುವರಿದಿರುತ್ತಾರೆ. ಶ್ರೀ ಶ್ರೀಧರ ಆರ್. ಅವರ ಅವಧಿ ಮುಗಿದಿರುವ ಬಗ್ಗೆ ಅಗತ್ಯವಾದ ಇ–ನಮೂನೆ ಮತ್ತು ಡಿಐಆರ್–12 ನಮೂನೆಯನ್ನು ಭರ್ತಿಮಾಡಿ ಕಂಪೆನಿಗಳ ನೋಂದಣಾಧಿಕಾರಿಯವರಲ್ಲಿ ನೋಂದಾಯಿಸಲಾಗಿರುತ್ತದೆ.

10. ಸಮಿತಿಗಳು ಮತ್ತು ಸಭೆಗಳು

ನಿರ್ದೇಶಕರ ಮಂಡಳಿಯ ಮತ್ತು ಮಂಡಳಿಯ ಸಮಿತಿಗಳ ಸಭೆಗಳು:

ವರ್ಷಾವಧಿಯಲ್ಲಿ ಜೂನ್ 28, 2019, ಸೆಪ್ಟೆಂಬರ 27, 2019, ನವೆಂಬರ್ 21, 2019 ಮತ್ತು ಫೆಬ್ರುವರಿ 18, 2020ರಲ್ಲಿ ನಿರ್ದೇಶಕರ ಮಂಡಳಿಯ ನಾಲ್ಕು (4) ಸಭೆಗಳು ನಡೆದಿರುತ್ತವೆ.

ವರ್ಷಾವಧಿಯಲ್ಲಿ ಲೆಕ್ಕಪರಿಶೋಧನಾ ಸಮಿತಿಯ ಎಲ್ಲಾ ಶಿಫಾರಸ್ಸುಗಳನ್ನೂ ಮಂಡಳಿಯು ಒಪ್ಪಿಕೊಂಡಿರುತ್ತದೆ. ಲೆಕ್ಕ ಪರಿಶೋಧನಾ ಸಮಿತಿಯ ಸಭೆಯು ನವೆಂಬರ್ 21, 2019ರಲ್ಲಿ ನಡೆದಿರುತ್ತದೆ.

ಸಿಎಸ್ಆರ್ ಸಮಿತಿಯ ಒಂದು ಸಭೆಯು ದಿನಾಂಕ 21ನೇ ನವೆಂಬರ್ 2019ರಲ್ಲಿ ನಡೆದಿರುತ್ತದೆ.

11. ಅಂಗಸಂಸ್ಥೆಗಳು/ಜಂಟೀ ಸಹಭಾಗಿತ್ವದ/ಸಹವರ್ತಿ ಕಂಪೆನಿಗಳ ವಿವರಗಳು:

ಕಾಯಿದೆಯ ಕಂಡಿಕೆ 129ರ ಉಪಕಂಡಿಕೆ (3)ರ ಜೊತೆಗೆ ಕಂಪೆನಿಗಳ (ಅಕೌಂಟ್ಸ್) ನಿಯಮಗಳು 2014ರ ನಿಯಮ 5 ಮತ್ತು ನಿಯಮ 8(1)ನ್ನೂ ಸೇರಿಸಿ ಓದಿಕೊಂಡಂತೆ ಪ್ರತೀ ಅಂಗಸಂಸ್ಥೆ/ಸಹವರ್ತಿ ಕಂಪೆನಿ/ಜಂಟೀ ಸಹಭಾಗಿತ್ವದ ಸಂಸ್ಥೆಯ ಪ್ರಮುಖ ಗುಣಲಕ್ಷಣಗಳು, ನಿರ್ವಹಣೆ ಮತ್ತು ಹಣಕಾಸಿನ ಸ್ಥಿತಿಯ ಬಗ್ಗೆ ವರದಿಯ ವರ್ಷಾವಧಿಯಲ್ಲಿ ನಮೂನೆ ಎಒಸಿ–1ರಂತೆ (ಅನುಬಂಧ–V) ವರದಿಯನ್ನು ಸಲ್ಲಿಸಲಾಗಿದೆ.

12. ಸಂಬಂದಪಟ್ಟ ಪಕ್ಷಗಳೊಂದಿಗೆ ಒಪ್ಪಂದಗಳು/ವ್ಯವಸ್ಥೆಗಳ ವಿವರಗಳು:

ಕೆಎಸ್ಐಐಡಿಸಿಯು ಸರ್ಕಾರೀ ಕಂಪೆನಿಯಾಗಿದ್ದು, ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುವುದರಿಂದ ಅನ್ವಯಿಸಲ್ಪಡುವುದಿಲ್ಲ. ಕಂಡಿಕೆ 2 (76) ಮತ್ತು 188ರಂತೆ ಎರಡು ಸರ್ಕಾರೀ ಕಂಪೆನಿಗಳ ಅಥವಾ ಸರ್ಕಾರೀ ಏಜೆನ್ಸಿಗಳ ನಡುವಿನ ವ್ಯವಹಾರಗಳನ್ನು ಸಂಬಂಧಿತ ಪಕ್ಷದ ವ್ಯವಹಾರವೆಂದು ಪರಿಗಣಿಸಲ್ಪಡುವುದಿಲ್ಲ.

13. ಲೆಕ್ಕಪರಿಶೋಧಕರು

(a) ಶಾಸನಬದ್ದ ಲೆಕ್ಕಪರಿಶೋಧಕರು

30ನೇ ಡಿಸೆಂಬರ್ 2019ರಲ್ಲಿ ನಡೆದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಿ&ಎಜಿಯವರು ತಿಳಿಸಿರುವಂತೆ ಹಣಕಾಸಿನ ವರ್ಷ 2019–20ಕ್ಕೆ ಲೆಕ್ಕಪರಿಶೋಧನೆಯನ್ನು ನಡೆಸುವ ಸಲುವಾಗಿ ಮೆ. ಎನ್ಎಸ್ವಿಎಂ & ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು (ಸಂಸ್ಥೇಯ ನೋಂದಣಿ ಸಂಖ್ಯೆ 010072S) ಅವರನ್ನು ಕಂಪೆನಿಯ ಶಾಸನಬದ್ದ ಲೆಕ್ಕಪರಿಶೋಧಕರನ್ನಾಗಿ ನೇಮಿಸಲಾಗಿದ್ದು ಅವರು ಮುಂದೆ ಬರಲಿರುವ ವಾರ್ಷಿಕ ಸಾಮಾನ್ಯ ಸಭೆಯ ಅಂತ್ಯದವರೆಗೆ ಈ ಹುದ್ದೆಯಲ್ಲಿ ಮುಂದುವರಿಯುವರು.

ಲೆಕ್ಕಪರಿಶೋಧಕರು ತಮ್ಮ ಲೆಕ್ಕಪರಿಶೋಧನೆಯನ್ನು ಮುಗಿಸಿದ್ದು, ತಮ್ಮ ಲೆಕ್ಕಪರಿಶೋಧನಾ ವರದಿಯನ್ನು ಒಪ್ಪಿಸಿದ್ದು, ಅದನ್ನು (ಅನುಬಂಧ–IV) ರಲ್ಲಿ ಲಗತ್ತಿಸಲಾಗಿದೆ.

31ನೇ ಮಾರ್ಚಿ, 2020ರ ವರ್ಷಾಂತ್ಯಕ್ಕೆ ಕಂಪೆನಿಯ ಹಣಕಾಸಿನ ಕೋಷ್ಟಕಗಳ ಮೇಲೆ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ ಆಫ್ ಇಂಡಿಯಾ ಅವರು ತಮ್ಮ ಹೇಳಿಕೆಗಳನ್ನು ನೀಡಿದ್ದು, ಅದನ್ನು ಈ ವರದಿಗೆ ಲಗತ್ತಿಸಲಾಗಿದೆ.

ಶಾಸನಬದ್ಧ ಲೆಕ್ಕಪರಿಶೋಧಕರು ಎತ್ತಿರುವ ಪರಿಮಿತಿ ಹೇಳಿಕೆಗಳು/ಗಮನಿಸಿರುವ ಅಂಶಗಳು/ಪ್ರತಿಕೂಲ ಹೇಳಿಕೆಗಳ ಬಗ್ಗೆ ಆಡಳಿತ ಮಂಡಳಿಯ ಉತ್ತರಗಳನ್ನು ಲಗತ್ತಿಸಲಾಗಿದೆ.

(b) ಸೆಕ್ರಟೇರಿಯಲ್ ಲೆಕ್ಕಪರಿಶೋಧಕರು

ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 204ರ ಜೊತೆಗೆ ಕಂಪೆನಿಗಳ (ಆಡಳಿತಾತ್ಮಕ ಸಿಬ್ಬಂದಿಗಳ ನೇಮಕಾತಿ & ಸಂಭಾವನೆ) ನಿಯಮಗಳು 2014ರಂತೆ ಕಂಪೆನಿಯು ಶ್ರೀ ಎಸ್.ವಿಶ್ವನಾಥನ್, ವೃತ್ತಿನಿರತ ಕಂಪೆನಿ ಕಾರ್ಯದರ್ಶಿ, ಇವರನ್ನು ಕಂಪೆನಿಯ ಸೆಕ್ರಟೇರಿಯಲ್ ಲೆಕ್ಕಪರಿಶೋಧನೆ ನಡೆಸುವ ಸಲುವಾಗಿ ಸೆಕ್ರಟೇರಿಯಲ್ ಲೆಕ್ಕಪರಿಶೋಧಕರನ್ನಾಗಿ ನೇಮಿಸಿರುತ್ತದೆ ಹಾಗೂ ಸೆಕ್ರಟೇರಿಯಲ್ ಲೆಕ್ಕಪರಿಶೋಧಕರ ವರದಿಯನ್ನು (ಅನುಬಂಧ–I) ರಲ್ಲಿ ಈ ವರದಿಗೆ ಲಗತ್ತಿಸಿದೆ.

ನಿರ್ದೇಶಕರ ಮಂಡಳಿಯಿಂದ ವಿವರಣೆಗಳನ್ನು ಕೇಳುವಂತಹ ಯಾವುದೇ ಪರಿಮಿತಿ ಹೇಳಿಕೆಗಳು, ಮೀಸಲುಗಳು ಅಥವಾ ಪ್ರತಿಕೂಲ ವರದಿಗಳು ಸೆಕ್ರಟೇರಿಯಲ್ ಲೆಕ್ಕಪರಿಶೋಧನಾ ವರದಿಯಲ್ಲಿ ಇರುವುದಿಲ್ಲ.

14. ವಾರ್ಷಿಕ ರಿಟರ್ನ್‌ನ ಆಯ್ದ ಭಾಗ:

ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 134ರಂತೆ ಹಾಗೂ ಕಂಪೆನಿಗಳ (ನಿರ್ವಹಣೆ ಮತ್ತು ಆಡಳಿತ), ನಿಯಮ 2014ರ ನಿಯಮ 12(1)ರಂತೆ, 2019–20ರ ಹಣಕಾಸಿನ ವರ್ಷದ ಕಂಪೆನಿಯ ವಾರ್ಷಿಕ ಸಲ್ಲಿಕೆಗಳ ಸಾರಾಂಶವನ್ನು ಈ ವರದಿಯ ಭಾಗವಾಗಿ ಅನುಬಂಧ–II ರಲ್ಲಿರಿಸಲಾಗಿದೆ.

15. ನಿಯಂತ್ರಕರು ಹೊರಡಿಸಿರುವ ಪ್ರಮುಖ ಮತ್ತು ಭೌತಿಕ ಆದೇಶಗಳು ಇತ್ಯಾದಿ:

ಕಂಪೆನಿಯ ಗೋಯಿಂಗ್ ಕನ್‌ಸರ್ನ್ ಸ್ಥಿತಿಯ ಮೇಲೆ ಅಥವಾ ಭವಿಷ್ಯದ ನಿರ್ವಹಣೆಗಳ ಮೇಲೆ ಪರಿಣಾಮ ಬೀರುವಂತಹ ಯಾವುದೇ ಪ್ರಮುಖ ಮತ್ತು ಭೌತಿಕ ಆದೇಶಗಳು ಇತ್ಯಾದಿಗಳನ್ನು ನಿಯಂತ್ರಕರು ಅಥವಾ ನ್ಯಾಯಾಲಯಗಳು ಅಥವಾ ನ್ಯಾಯಮಂಡಳಿಗಳು ಹೊರಡಿಸಿರುವುದಿಲ್ಲ.

16. ಠೇವಣಿಗಳು

ಪರಿಶೀಲನೆಯ ವರ್ಷಾವಧಿಯಲ್ಲಿ ಕಂಪೆನಿಯು ಸಾರ್ವಜನಿಕರಿಂದ ಯಾವುದೇ ರೀತಿಯ ಠೇವಣಿಯನ್ನೂ ಸ್ವೀಕರಿಸಿಲ್ಲ.

17. ಕಂಡಿಕೆ 186ರ ಅಡಿಯಲ್ಲಿ ಸಾಲಗಳು, ಖಾತರಿಗಳು ಅಥವಾ ಹೂಡಿಕೆಗಳು

ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 186ರ ಉಪಬಂಧಗಳನ್ನು ಆಕರ್ಷಿಸುವಂತಹ ಯಾವುದೇ ರೀತಿಯ ಸಾಲಗಳು, ಖಾತರಿಗಳು ಅಥವಾ ಹೂಡಿಕೆಗಳು ಇರುವುದಿಲ್ಲ.

18. ಆಡಳಿತ ವರ್ಗದ ಚರ್ಚೆಗಳು ಮತ್ತು ವಿಶ್ಲೇಷಣೆಗಳು

ಮೂಲಸೌಲಭ್ಯ ಅಭಿವೃದ್ಧಿ ಯೋಜನೆಗಳಲ್ಲಿ ಸಾಧಿಸ ಲಾಗುತ್ತಿರುವ ಪ್ರಗತಿಯ ಬಗ್ಗೆ ನಿಮ್ಮ ನಿರ್ದೇಶಕರು ಸತತವಾಗಿ ಮೇಲುಸ್ತುವಾರಿ ನಿರ್ವಹಿಸುತ್ತಿದ್ದಾರೆ. ವರದಿಯ ವರ್ಷಾವಧಿಯಲ್ಲಿ ಕಲ್ಬುರ್ಗಿಯಲ್ಲಿನ ವಿಮಾನ ನಿಲ್ದಾಣ ಮತ್ತು ಬೀದರಿನ ಸೇನಾ ವಿಮಾನ ನಿಲ್ದಾಣದ ನಾಗರಿಕ ವಿಭಾಗದ ಅಭಿವೃದ್ಧಿ ಮಾಡಲಾಗಿದ್ದು, ವಿಮಾನಯಾನ ಕಾರ್ಯಾಚರಣೆಗಳು ಪ್ರಾರಂಭವಾಗಿರುತ್ತವೆ.

ಸಾಲದ ಖಾತೆಗಳಲ್ಲಿ ರೂ. 170.98 ಕೋಟಿಗಳು ವಸೂಲಿಯಾಗದೇ ಇರುವುದು ಮತ್ತು ಇವುಗಳು ನಿರ್ವಹಣೆ ಇಲ್ಲದೇ ಇರುವ ಆಸ್ತಿಗಳಾಗಿ (ಎನ್‌ಪಿಎಗಳು) ಮುಂದುವರಿದಿರುವುದು ನಿಮ್ಮ ನಿರ್ದೇಶಕರ ಕಳವಳಕ್ಕೆ ಕಾರಣವಾಗಿರುವ ವಿಷಯವಾಗಿರುತ್ತದೆ. ಒಟ್ಟು ಸುಮಾರು 140 ಪ್ರಕರಣಗಳು ಎನ್‌ಪಿಎಯನ್ನು ಪ್ರತಿನಿಧಿಸುತ್ತಿವೆ.

ಆಸ್ತಿಗಳು ಲಭ್ಯವಿರುವಲ್ಲಿ ನ್ಯಾಯಾಲಯದಲ್ಲಿ ದಾವೆಗಳನ್ನು ಹೂಡಲಾಗಿದ್ದು, ಬಹುತೇಕ ಪ್ರಕರಣಗಳಲ್ಲಿ ನ್ಯಾಯಾಲಯದ ಆದೇಶಗಳನ್ನು ಪಡೆಯಲಾಗಿದ್ದು ಇವುಗಳು ಜಾರಿಯ ವಿವಿಧ ಹಂತದಲ್ಲಿವೆ. ಯಾವುದೇ ಆಸ್ತಿಗಳೂ ಇಲ್ಲದ ಪ್ರಕರಣಗಳಲ್ಲಿ, ಆಸ್ತಿಗಳನ್ನು ಮಾರಾಟ ಮಾಡಿ ನಗದೀಕರಿಸಿರುವ ಪ್ರಕರಣಗಳಲ್ಲಿ, ಅಂತಹ ಸಾಲದ ಖಾತೆಗಳನ್ನು ಸರಿದೂಗಿಸುವಂತಹ ಭದ್ರತೆಯ ಆಧಾರವನ್ನು ನಿಮ್ಮ ನಿರ್ದೇಶಕರು ಪರಿಶೀಲಿಸಿ, ಮೃದುವಾದ ನಿರ್ಗಮನ ನೀತಿಯಾದ ಒಂದೇ ಬಾರಿ ಇತ್ಯರ್ಥ ಯೋಜನೆಯನ್ನು (ಒಟಿಎಸ್) ಜಾರಿಗೆ ತಂದಿರುತ್ತಾರೆ. ಸಾಮಾನ್ಯ ಮಾರ್ಗದಲ್ಲಿ ಮತ್ತು ಹೊಸ ಒಟಿಎಸ್ ಯೋಜನೆಯ ಅಡಿಯಲ್ಲಿ ವಸೂಲಿ ಪ್ರಕರಣಗಳನ್ನು ನಿಮ್ಮ ನಿರ್ದೇಶಕರು ಗಂಭೀರವಾಗಿ ಪರಿಗಣಿಸಿರುತ್ತಾರೆ.

ನಿಗಮದಲ್ಲಿ ದೀರ್ಘಾವಧಿಯಿಂದ ಬಾಕಿ ಇರುವ ಮತ್ತು ತಕರಾರಿನಲ್ಲಿರುವ ಸಾಲದ ಖಾತೆಗಳನ್ನು ಮುಕ್ತಾಯಗೊಳಿಸುವ ಸಲುವಾಗಿ ಧಾರಾಳವಾದ ಒಂದೇ ಬಾರಿ ಇತ್ಯರ್ಥ ಯೋಜನೆಗೆ ನಿಮ್ಮ ನಿರ್ದೇಶಕರು ಕರ್ನಾಟಕ ಸರ್ಕಾರದಿಂದ ಅನುಮೋದನೆಯನ್ನು ಪಡೆದು ಕೊಂಡಿರುತ್ತಾರೆ. ಧಾರಾಳವಾದ ಒಂದೇ ಬಾರಿ ಇತ್ಯರ್ಥ ಯೋಜನೆಯ ಜಾರಿಯೊಂದಿಗೆ ಸಾಲದ ಎಲ್ಲಾ ಖಾತೆಗಳನ್ನು ಮುಂದಿನ ಎರಡು ಅಥವಾ ಮೂರು ವರ್ಷಗಳಲ್ಲಿ ಮುಕ್ತಾಯಗೊಳಿಸುವ ಆಶಯವನ್ನು ಕೆಎಸ್‌ಐಐಡಿಸಿಯು ಹೊಂದಿರುತ್ತದೆ.

ಸದ್ಯದ ಹಾಗೂ ಭವಿಷ್ಯದ ಅಗತ್ಯತೆಗಳನ್ನು ಪರಿಗಣಿಸಿ ಹಾಗೂ ವ್ಯವಹಾರದ ಯೋಜನೆಗಳು/ನಿಗಮದ ಪುನರ್ ರಚನೆಯ ಅಗತ್ಯತೆಗಳನ್ನು ಮತ್ತು ಮುಂದಿನ 10 ವರ್ಷಗಳ ದೃಷ್ಟಿಕೋನವನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು ನಿಗಮದ ಹುದ್ದೆ ಮತ್ತು ನೇಮಕಾತಿ ವಿಧೇಯಕಗಳು/ನಿಯಮಗಳ (ಸಿ & ಆರ್ ನಿಯಮಗಳು) ತಿದ್ದುಪಡಿಗೆ ಅನುಮೋದನೆಯನ್ನು ನೀಡಿರುತ್ತದೆ. ಸಿ&ಆರ್ ನಿಯಮಗಳು ಸರ್ಕಾರದಿಂದ ಅನುಮೋದಿಸಲ್ಪಟ್ಟಿದೆ.

ಕಲ್ಯಾಣ ಕರ್ನಾಟಕ (ಕೆಕೆ) ವಲಯಕ್ಕಾಗಿ ನಾಲ್ಕು ಹುದ್ದೆಗಳಿಗೆ ನೇಮಕಾತಿ ಮಾಡಲು ಸರ್ಕಾರದಿಂದ ಅನುಮತಿಯನ್ನು ಪಡೆಯಲಾಗಿದೆ. ಅದರಂತೆ, ಕಲ್ಯಾಣ ಕರ್ನಾಟಕ (ಕೆಕೆ) ವಲಯಕ್ಕಾಗಿ ನಾಲ್ಕು ಹುದ್ದೆಗಳಿಗೆ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗಿದ್ದು, ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಜಾಹೀರಾತಿಗೆ ಪ್ರತಿಕ್ರಿಯೆಯಾಗಿ ಕೆಲವೊಂದು ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಇವುಗಳ ಪರಿಶೀಲನೆಯ ನಂತರ ಇಬ್ಬರು ಅರ್ಜಿದಾರರ ಸಣ್ಣ ಪಟ್ಟಿಯನ್ನು ಸಿದ್ದಪಡಿಸಿ ಅವರಿಗೆ ನೇಮಕಾತಿ ಆದೇಶವನ್ನು ಬಿಡುಗಡೆ ಮಾಡಲಾಗಿದೆ. ಈ ಇಬ್ಬರಲ್ಲಿ ಒಬ್ಬರು ಅರ್ಜಿದಾರರು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

19. ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿರ್ಭಂಧ ಮತ್ತು ಪರಿಹಾರ) ಕಾಯಿದೆ, 2013ರ ಅಡಿಯಲ್ಲಿ ಕಂಪೆನಿಯ ಜವಾಬ್ದಾರಿಗಳು

ಕೆಲಸದ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ ತಡೆಗಟ್ಟುವ ನಿಟ್ಟಿನಲ್ಲಿ ನಿಮ್ಮ ಕಂಪೆನಿಯು ಒಂದು ನೀತಿಯನ್ನು ಅಳವಡಿಸಿಕೊಂಡಿದ್ದು, ಈ ನೀತಿಯನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಒಂದು ಸಮಿತಿಯನ್ನು ರಚಿಸಿದೆ. ಮಹಿಳಾ ಉದ್ಯೋಗಿಗಳೂ ಸೇರಿದಂತೆ ಸಿಬ್ಬಂದಿಗಳ ನಡುವಿನ ಪರಸ್ಪರ ಸಂಬಂಧವು ಸೌಹಾರ್ದಯುತವಾಗಿರುತ್ತದೆ. ಎಲ್ಲ ಸಿಬ್ಬಂದಿಗಳೂ (ಖಾಯಂ, ಒಪ್ಪಂದದ, ತಾತ್ಕಾಲಿಕ, ತರಬೇತಿ ಪಡೆಯುವವರು) ಈ ನೀತಿಯ ಅಡಿಯಲ್ಲಿ ಇರುತ್ತಾರೆ. ಆದಾಗ್ಯೂ ವರ್ಷಾವಧಿಯಲ್ಲಿ ಒಂದು ದೂರನ್ನು ಸ್ವೀಕರಿಸಲಾಗಿದ್ದು, ಇದನ್ನು ಸೂಕ್ತವಾಗಿ ನಿರ್ವಹಿಸಲಾಗಿದೆ. ಕಾಯಿದೆಯಂತೆ ಇದನ್ನು ಆಂತರಿಕ ದೂರು ಸಮಿತಿಗೆ (ಐಸಿಸಿ) ವಹಿಸಲಾಗಿದೆ. ಸಮಿತಿಯು ವಿವರವಾದ ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿರುತ್ತದೆ ಹಾಗೂ ಸಮಿತಿಯ ಶಿಫಾರಸಿನ ಆಧಾರದ ಮೇಲೆ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

20. ಗಂಡಾಂತರ ನಿರ್ವಹಣೆ

ವ್ಯವಹಾರದಲ್ಲಿನ ಅಪಾಯದ ಸನ್ನಿವೇಶಗಳನ್ನು ಗುರುತಿಸಿ ಮೌಲ್ಯಮಾಪನ ಮಾಡುವ ಸಲುವಾಗಿ ಕಂಪೆನಿಯಲ್ಲಿ ಸದೃಢವಾದ ಎಂಟರ್‌ಪ್ರೈಸ್ ರಿಸ್ಕ್ ಮ್ಯಾನೇಜ್‌ಮೆಂಟ್ (ಇಆರ್‌ಎಂ) ಚೌಕಟ್ಟು ಇರುತ್ತದೆ. ಈ ನಿಯಮಗಳು ಕಂಪೆನಿಯಲ್ಲಿ ಪಾರದರ್ಶಕತೆ, ವ್ಯವಹಾರದ ಉದ್ದೇಶದಲ್ಲಿ ನಕಾರಾತ್ಮಕ ಅಂಶಗಳನ್ನು ಕಡಿಮೆ ಮಾಡುವುದು ಹಾಗೂ ಕಂಪೆನಿಯ ಸ್ಪರ್ಧಾತ್ಮಕ ಲಾಭಗಳನ್ನು ಹೆಚ್ಚಿಸಲು ಸಹಾಯ ಮಾಡುವುದು. ವ್ಯವಹಾರದಲ್ಲಿನ ಗಂಡಾಂತರ ನೀತಿಯು, ದಾಖಲೆ ಪತ್ರಗಳು ಮತ್ತು ವರದಿ ಮಾಡುವಿಕೆಯನ್ನೂ ಒಳಗೊಂಡಂತೆ ವಿವಿಧ ಹಂತಗಳಲ್ಲಿ ಅಡಳಿತದಲ್ಲಿ ಗಂಡಾಂತರಗಳನ್ನು ನಿರ್ವಹಿಸುವುದನ್ನು ವಿವರಿಸುತ್ತದೆ. ಈ ಮಾದರಿಯಲ್ಲಿ ವಿವಿಧ ರೀತಿಗಳಿದ್ದು, ಇವು ಅಪಾಯದ ಸೂಚನೆಗಳನ್ನು ಗುರುತಿಸಲು, ಕಂಪೆನಿಯ ಮಟ್ಟದಲ್ಲಿ ಸಂಭಾವ್ಯ ಪರಿಣಾಮಗಳ ಮೌಲ್ಯಮಾಪನ ಮತ್ತು ವಿವಿಧ ವ್ಯವಹಾರದ ಗುಂಪುಗಳಿಗೆ ಪ್ರತ್ಯೇಕವಾಗಿ ನಿರ್ವಹಿಸಲು ನೆರವಾಗುತ್ತದ. ಕಂಪೆನಿಯು ಹಲವಾರು ಅಪಾಯಗಳನ್ನು ಗುರುತಿಸಿರುತ್ತದೆ ಮತ್ತು ಪ್ರತೀ ಅಪಾಯವನ್ನೂ ತಗ್ಗಿಸುವ ಯೋಜನೆಗಳನ್ನು ಗುರುತಿಸಲಾಗಿರುತ್ತದೆ.

21. ವಿದ್ಯುತ್ ಉಳಿತಾಯ ಮತ್ತು ತಂತ್ರಜ್ಞಾನ ಅಳವಡಿಸಿಕೊಳ್ಳುವ ಬಗ್ಗೆ ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ನಿರ್ಗಮನ:

(A) **ವಿದ್ಯುತ್ ಉಳಿತಾಯ**– ಕಂಪೆನಿಯು ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದಿಲ್ಲ. ಅದು ಕಛೇರಿ ಉದ್ದೇಶಕ್ಕಾಗಿ ಮಾತ್ರ ವಿದ್ಯುತ್ತನ್ನು ಉಪಯೋಗಿಸುತ್ತಿದೆ. ವಿದ್ಯುತ್ ಉಪಯೋಗವು ದೀಪ ಮುಂತಾದ ಅತೀ ಕನಿಷ್ಟ ಪ್ರಮಾಣದ್ದಾಗಿರುತ್ತದೆ.

(B) ತಂತ್ರಜ್ಞಾನ ಅಳವಡಿಸಿಕೊಳ್ಳುವಿಕೆ–ಇಲ್ಲ

(c) ವಿದೇಶಿ ವಿನಿಮಯ ಗಳಿಕೆ ಮತ್ತು ವೆಚ್ಚ

ವಿದೇಶೀ ವಿನಿಮಯ ಹೊರಹೋಗುವಿಕೆ–ರೂ.ಇಲ್ಲ (ಹಿಂದಿನ ವರ್ಷ –ಇಲ್ಲ)

ವಿದೇಶೀ ವಿನಿಮಯ ಗಳಿಕೆಯ ಮೊತ್ತ ರೂ.ಇಲ್ಲ (ಹಿಂದಿನ ವರ್ಷ –ಇಲ್ಲ)

22. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (CSR)

ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ ಅಡಿಯಲ್ಲಿ ಘೋಷಣೆಯನ್ನು (ಅನುಬಂಧ–III) ರಲ್ಲಿ ಲಗತ್ತಿಸಿದೆ.

23. ನಿರ್ದೇಶಕರುಗಳ ಜವಾಬ್ದಾರಿ ಬಗ್ಗೆ ಹೇಳಿಕೆ

ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 134(3)(c)ಯ ಉಪಬಂಧಗಳಂತೆ ನಿಮ್ಮ ನಿರ್ದೇಶಕರುಗಳು ಈ ಮೂಲಕ ದೃಢೀಕರಿಸುವುದೇನೆಂದರೆ:

(i) 31ನೇ ಮಾರ್ಚಿ 2020ರ ಹಣಕಾಸಿನ ವರ್ಷಾಂತ್ಯಕ್ಕೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸುವಾಗ, ಸಾಮಗ್ರಿಗಳ ನಿರ್ಗಮನಕ್ಕೆ ಸಂಬಂಧಿಸಿದಂತೆ ಸಮಂಜಸವಾದ ವಿವರಣೆಗಳನ್ನೂ ಒಳಗೊಂಡಂತೆ ಅನ್ವಯಿಸಲ್ಪಡಬೇಕಾದ ಲೆಕ್ಕಪತ್ರ ಮಾನಕಗಳನ್ನು (ಐಎನ್‌ಡಿ ಎಎಸ್) ಅನುಸರಿಸಲಾಗಿರುತ್ತದೆ;

(ii) 31ನೇ ಮಾರ್ಚಿ 2020ರಲ್ಲಿ ಇರುವಂತೆ ಕಂಪೆನಿಯ ವ್ಯವಹಾರದ ಪರಿಸ್ಥಿತಿಯ ಬಗ್ಗೆ ಹಾಗೂ ಮೇಲ್ಕಂಡ ಅವಧಿಯಲ್ಲಿ ಕಂಪೆನಿಯ ಲಾಭವನ್ನು ತೋರಿಸುವಂತಹ ನೈಜ ಮತ್ತು ಸಮಂಜಸವಾದ ಚಿತ್ರಣವನ್ನು ನೀಡಬಲ್ಲಂತಹ ಲೆಕ್ಕಪತ್ರ ನೀತಿಗಳನ್ನು ನಿಮ್ಮ ನಿರ್ದೇಶಕರು ಆಯ್ಕೆ ಮಾಡಿಕೊಂಡು ಅವುಗಳನ್ನು ಸತತವಾಗಿ ಅನ್ವಯಿಸಿಕೊಂಡು ಮತ್ತು ಸಮಂಜಸವಾದ ಹಾಗೂ ವಿವೇಕಯುತವಾದ ತೀರ್ಮಾನಗಳು ಮತ್ತು ಅಂದಾಜುಗಳನ್ನು ಕೈಗೊಂಡಿರುತ್ತಾರೆ;

(iii) ಕಂಪೆನಿಗಳ ಕಾಯಿದೆ, 2013ರ ಉಪಬಂಧಗಳಿಗೆ ಅನುಸಾರವಾಗಿ ಕಂಪೆನಿಯ ಆಸ್ತಿಗಳ ಸಂರಕ್ಷಣೆಗಾಗಿ ಹಾಗೂ ವಂಚನೆ ಮತ್ತು ಇತರ ಅಕ್ರಮಗಳನ್ನು

ಕಂಡುಹಿಡಿಯಲು ಮತ್ತು ತಡೆಗಟ್ಟಲು ಅನುವಾಗುವಂತೆ ಲೆಕ್ಕಪತ್ರ ದಾಖಲಾತಿಗಳನ್ನು ಸಮರ್ಪಕವಾಗಿ ಕಾಪಾಡಲು ನಿಮ್ಮ ನಿರ್ದೇಶಕರು ಸಮರ್ಪಕವಾದ ಮತ್ತು ಸಾಕಷ್ಟು ಎಚ್ಚರಿಕೆಯನ್ನು ವಹಿಸಿರುತ್ತಾರೆ;

(iv) ನಿಮ್ಮ ನಿರ್ದೇಶಕರು 31ನೇ ಮಾರ್ಚಿ 2020ಕ್ಕೆ ಅಂತ್ಯವಾಗುವ ಹಣಕಾಸಿನ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು 'ಗೋಯಿಂಗ್ ಕನ್‌ಸರ್ನ್' ಆಧಾರದ ಮೇಲೆ ಸಿದ್ದಪಡಿಸಿರುತ್ತಾರೆ.

(v) ಅನ್ವಯಿಸಬಹುದಾದಂತಹ ಎಲ್ಲಾ ಕಾನೂನುಗಳ ಉಪಬಂಧಗಳಿಗೆ ಅನುಸರಣೆಯನ್ನು ಖಚಿತಪಡಿಸುವಂತಹ ಸೂಕ್ತ ವ್ಯವಸ್ಥೆಯನ್ನು ನಿಮ್ಮ ನಿರ್ದೇಶಕರು ರೂಪಿಸಿರುತ್ತಾರೆ ಮತ್ತು ಅಂತಹ ವ್ಯವಸ್ಥೆಗಳು ಸಮರ್ಪಕವಾಗಿ ಮತ್ತು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿವೆ.

24. ಧನ್ಯವಾದ ಸಮರ್ಪಣೆ

ಕರ್ನಾಟಕ ಸರ್ಕಾರವು ನೀಡುತ್ತಿರುವ ಸತತ ಬೆಂಬಲ ಮತ್ತು ಅಮೂಲ್ಯವಾದ ನೆರವಿಗಾಗಿ ನಿಮ್ಮ ನಿರ್ದೇಶಕರು ಕರ್ನಾಟಕ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಾರೆ. ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ಹಣಕಾಸು ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ, ಕರ್ನಾಟಕ ರಾಜ್ಯ ಹಣಕಾಸು ನಿಗಮ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಇವರಿಂದ ಬಂದಿರುವ ನೆರವು ಮತ್ತು ಸಹಕಾರಕ್ಕೆ ಕೂಡಾ ನಿರ್ದೇಶಕರ ಮಂಡಳಿಯು ಧನ್ಯವಾದಗಳನ್ನು ಸಮರ್ಪಿಸುತ್ತದೆ.

ಸಮರ್ಪಣಾ ಭಾವದ ಸತತ ಸೇವೆಯನ್ನು ಮುಂದುವರಿಸಿಕೊಂಡು ಬಂದಿರುವ ನಿಗಮದ ಎಲ್ಲಾ ನೌಕರರು ಮತ್ತು ಅಧಿಕಾರಿಗಳಿಗೆ ನಿರ್ದೇಶಕರ ಮಂಡಳಿಯು ಮೆಚ್ಚುಗೆಯನ್ನು ದಾಖಲಿಸಿರುತ್ತದೆ.

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ
ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ನಿಗಮ ನಿಯಮಿತ

ಸಹಿ/–	**ಸಹಿ/–**
(ಎಂ.ಎಸ್. ಶ್ರೀಕರ್)	**(ಡಾ. ಪಿ.ಸಿ. ಜಾಫರ್)**
ವ್ಯವಸ್ಥಾಪಕ ನಿರ್ದೇಶಕರು	**ನಿರ್ದೇಶಕರು**
ಡಿಐಎನ್ : 07882939	**ಡಿಐಎನ್ : 08574909**

ಸ್ಥಳ: ಬೆಂಗಳೂರು
ದಿನಾಂಕ: 09.12.2020

ಅನುಬಂಧ-I
ನಮೂನೆ ನಂ. MR–3
ಸೆಕ್ರೆಟೇರಿಯಲ್ ಆಡಿಟ್ ವರದಿ

31ನೇ ಮಾರ್ಚಿ 2020ರ ಹಣಕಾಸಿನ ವರ್ಷಾಂತ್ಯಕ್ಕೆ

[ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 204(1) ಮತ್ತು ಕಂಪೆನಿಗಳ (ಅಪಾಯಿಂಟ್‌ಮೆಂಟ್ ಮತ್ತು ರೆಮ್ಯುನರೇಶನ್ ಆಫ್ ಮ್ಯಾನೇಜೀರಿಯಲ್ ಪರ್ಸೊನೆಲ್) ನಿಯಮಗಳು, 2014ರ ನಿಯಮ ನಂ. 9ಕ್ಕೆ ಅನುಸಾರವಾಗಿ]

ಇವರಿಗೆ,
ಸದಸ್ಯರುಗಳು,
ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ

ನಾನು/ನಾವು ಅನ್ವಯಿಸಲ್ಪಡಬಹುದಾದ ಶಾಸನಬದ್ಧ ಉಪಬಂಧಗಳಿಗೆ ಅನುಸಾರವಾಗಿ ಮತ್ತು ಉತ್ತಮ ಕಾರ್ಪೊರೇಟ್ ಪ್ರಾಕ್ಟೀಸ್‌ಗಳಿಗೆ ಒಳಪಟ್ಟು ಖನಿಜ ಭವನ 49, 4ನೇ ಮಹಡಿ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು –560 001 ಇಲ್ಲಿ ನೋದಾಯಿತ ಕಛೇರಿ ಹೊಂದಿರುವ ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ (ಯು93000ಕೆಎ1964ಯುಎಲ್‌ಎಲ್001532) (ಇನ್ನು ಮುಂದೆ ಕಂಪೆನಿ ಎಂದು ಕರೆಯಲ್ಪಡುತ್ತದೆ) ಸೆಕ್ರೆಟೇರಿಯಲ್ ಆಡಿಟ್‌ನ್ನು ನಡೆಸಿರುತ್ತೇನೆ.

ಕಂಪೆನಿಯು "ಸರ್ಕಾರದ ಕಂಪೆನಿ"ಯಾಗಿದೆ ಮತ್ತು ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ. ಕಂಪನಿಯು ಲಿಸ್ಟ್ ಆಗದೇ ಇರುವ ಸಾರ್ವಜನಿಕ ಕಂಪೆನಿಯಾಗಿರುತ್ತದೆ. ಕಂಪೆನಿಯು, ಸದ್ಯಕ್ಕೆ ಕೈಗಾರಿಕಾ ಮೂಲಸೌಲಭ್ಯ ಯೋಜನೆಗಳ ಅಭಿವೃದ್ಧಿ ಮತ್ತು ಜಾರಿಗೊಳಿಸುವಿಕೆಯಲ್ಲಿ ತೊಡಗಿಸಿಕೊಂಡಿರುತ್ತದೆ. ಮೂಲದಲ್ಲಿ ಕಂಪೆನಿಯು ಸಾಲ ನೀಡುವಿಕೆ ಮತ್ತು ಹೂಡಿಕೆಯಂತಹ ಹಣಕಾಸಿನ ಸೇವೆಗಳಲ್ಲಿ ತೊಡಗಿಸಿಕೊಂಡಿತ್ತು. ಹಣಕಾಸಿನ ಸಾಲನೀಡುವಿಕೆಯ ಚಟುವಟಿಕೆಗಳನ್ನು ಕೆಲವು ವರ್ಷಗಳ ಹಿಂದೆ ನಿಲ್ಲಿಸಲಾಗಿದ್ದು, ಈಗ ಕಂಪೆನಿಯು ಈಗಾಗಲೇ ಮಂಜೂರಾಗಿದ್ದ ಸಾಲಗಳ ವಸೂಲಾತಿಯಲ್ಲಿ ಮಾತ್ರ ತೊಡಗಿಸಿಕೊಂಡಿರುತ್ತದೆ. ಕಂಪೆನಿಯು ತನ್ನನ್ನು ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಬ್ಯಾಂಕಿಂಗೇತರ ಹಣಕಾಸು ಕಂಪೆನಿಯಾಗಿ (ಎನ್‌ಬಿಎಫ್‌ಸಿ) ನೋಂದಾಯಿಸಿಕೊಂಡಿರುತ್ತದೆ. ಸಾಲಗಳ ಮೇಲಿನ ಬಡ್ಡಿಯ ಆದಾಯವು ಕಂಪೆನಿಯ ಒಟ್ಟು ವರಮಾನಕ್ಕಿಂತ 50%ಗಿಂತ ಕಡಿಮೆಯಾಗಿದ್ದರಿಂದ, ಎನ್‌ಬಿಎಫ್‌ಸಿಯಾಗಿ ಆಗಿರುವ ನೋಂದಣಿಯನ್ನು ರದ್ದು ಮಾಡಲು ಭಾರತೀಯ ರಿಸರ್ವ್ ಬ್ಯಾಂಕಿಗೆ ಅರ್ಜಿಯನ್ನು ಸಲ್ಲಿಸಿರುತ್ತದೆ.

ಕಂಪೆನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನಂತೆ, ಕಾಲಕಾಲಕ್ಕೆ ಕರ್ನಾಟಕ ಸರ್ಕಾರವು ಹೊರಡಿಸುವ ನಿರ್ದೇಶನಗಳು ಮತ್ತು ಮಾರ್ಗದರ್ಶನಗಳನ್ನು ಕಂಪೆನಿಯು ಅನುಸರಣೆ ಮಾಡಬೇಕಾಗಿರುತ್ತದೆ. ಕಂಪೆನಿಗಳ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ ಅವರು ಹೊರಡಿಸಿರುವ ದಿನಾಂಕ 5ನೇ ಜೂನ್ 2015 ಮತ್ತು 13ನೇ ಜೂನ್ 2017ರ ಅಧಿಸೂಚನೆ ನಂ. ಜಿ.ಎಸ್.ಆರ್. 463 (ಇ) ಯಂತೆ ಸರ್ಕಾರೀ ಕಂಪೆನಿಗಳು ಕಂಪೆನಿಗಳ ಕಾಯಿದೆ, 2013ರ ಕೆಲವೊಂದು ಉಪಬಂಧಗಳ ಅನುಸರಣೆಯಿಂದ ವಿನಾಯಿತಿಯನ್ನು ಪಡೆದಿರುತ್ತವೆ.

ಕಾರ್ಪೊರೇಟ್ ಗುಣನಡತೆಗಳು/ಶಾಸನಬದ್ಧ ಅನುಸರಣೆಗಳನ್ನು ಸಮಂಜಸವಾದ ರೀತಿಯಲ್ಲಿ ಮೌಲ್ಯಮಾಪನ ಮಾಡುವಂತಹ ಮತ್ತು ನನ್ನ/ನಮ್ಮ ಅಭಿಪ್ರಾಯಗಳನ್ನು ಆ ಮೂಲಕ ಸ್ಪಷ್ಟಪಡಿಸುವಂತಹ ರೀತಿಯಲ್ಲಿ ಈ ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆಯನ್ನು ನಿರ್ವಹಿಸಲಾಗಿರುತ್ತದೆ.

ಕಂಪೆನಿಯ ಪುಸ್ತಕಗಳು, ದಾಖಲೆ ಪತ್ರಗಳು, ನಡೆವಳಿ ಪುಸ್ತಕಗಳು, ಸೂಕ್ತ ಪ್ರಾಧಿಕಾರಗಳಲ್ಲಿ ದಾಖಲಿಸಲ್ಪಟ್ಟ ನಮೂನೆಗಳು ಮತ್ತು ರಿಟರ್ನ್‌ಗಳು ಹಾಗೂ ಕಂಪೆನಿಯು ಕಾಪಾಡಿಕೊಂಡು ಬಂದಿರುವ ಇತರೆ ದಾಖಲೆಪತ್ರಗಳ ಪರಿಶೀಲನೆಯ ಆಧಾರದ ಮೇಲೆ ಹಾಗೂ ಕಂಪೆನಿ, ಅದರ ಅಧಿಕಾರಿಗಳು, ಏಜೆಂಟ್‌ಗಳು ಮತ್ತು ಅದರ ಅಧಿಕೃತ ಪ್ರತಿನಿಧಿಗಳು ಸೆಕ್ರೆಟೇರಿಯಲ್ ಆಡಿಟ್‌ನ ಸಮಯದಲ್ಲಿ ನೀಡಿರುವ ಮಾಹಿತಿಗಳ ಆಧಾರದ ಮೇಲೆ ನಾನು ಈ ಮೂಲಕ ವರದಿ ಮಾಡುವುದೇನೆಂದರೆ, ನನ್ನ ಅಭಿಪ್ರಾಯದಲ್ಲಿ 31ನೇ ಮಾರ್ಚಿ, 2020ಕ್ಕೆ ಅಂತ್ಯವಾದ ಹಣಕಾಸಿನ ವರ್ಷದ ಲೆಕ್ಕಪರಿಶೋಧನಾ ಅವಧಿಯಲ್ಲಿ ಈ ಕೆಳಗೆ ಪಟ್ಟಿ ಮಾಡಿರುವಂತಹ ಶಾಸನಬದ್ಧ ಉಪಬಂಧಗಳನ್ನು ಕಂಪೆನಿಯು ಅನುಸರಿಣೆಮಾಡಿರುವುದೂ ಅಲ್ಲದೇ, ನಾವು ಈ ಮುಂದೆ ನೀಡಿರುವ ವರದಿಗೆ ಒಳಪಟ್ಟು ವಿಧಿವತ್ತಾದ ಮಂಡಳಿಯ ಕಾರ್ಯವಿಧಾನ ಮತ್ತು ಅನುಸರಣಾ ಕಾರ್ಯವ್ಯವಸ್ಥೆ ಕಂಪೆನಿಯಲ್ಲಿ ಇರುತ್ತದೆ.

31ನೇ ಮಾರ್ಚಿ 2020ಕ್ಕೆ ಅಂತ್ಯವಾದ ಹಣಕಾಸಿನ ವರ್ಷದಲ್ಲಿ ಕಂಪೆನಿಯು ನಿರ್ವಹಿಸಿರುವ ಪುಸ್ತಕಗಳು, ದಾಖಲೆ ಪತ್ರಗಳು, ನಡೆವಳಿ ಪುಸ್ತಕಗಳು ವಿವಿಧ ಪ್ರಾಧಿಕಾರಗಳಲ್ಲಿ ದಾಖಲಿಸಿರುವ ನಮೂನೆಗಳು ಮತ್ತು ರಿಟರ್ನ್‌ಗಳು ಮತ್ತಿತರ ದಾಖಲೆ ಪತ್ರಗಳನ್ನು ಈ ಕೆಳಗೆ ತಿಳಿಸಿರುವಂತಹ ಕಾಯಿದೆಗಳ ಉಪಬಂಧಗಳಿಗೆ ಅನುಸಾರವಾಗಿ ಪರಿಶೀಲಿಸಿರುತ್ತೇನೆ:

a) ಕಂಪೆನಿಗಳ ಕಾಯಿದೆ, 2013 (ದಿ ಆಕ್ಟ್) ಮತ್ತು ಅದರನ್ವಯ ಮಾಡಿರುವ ನಿಯಮಗಳು;

b) ದಿ ಸೆಕ್ಯುರಿಟೀಸ್ ಕಾಂಟ್ರಾಕ್ಟ್ಸ್ (ರೆಗ್ಯುಲೇಶನ್) ಕಾಯಿದೆ, 1956 ('ಎಸ್‌ಸಿಆರ್‌ಎ') ಮತ್ತು ಅದರ ಅಡಿಯಲ್ಲಿ ಮಾಡಲಾಗಿರುವ ನಿಯಮಗಳು;

c) ದಿ ಡೆಪೋಸಿಟರೀಸ್ ಕಾಯಿದೆ, 1996 ಮತ್ತು ಅದರ ಅಡಿಯಲ್ಲಿ ಮಾಡಲಾಗಿರುವ ನಿಯಂತ್ರಣಗಳು ಮತ್ತು ಉಪ ಕಾನೂನುಗಳು ನಿಯಮಗಳು– ಅನ್ವಯಿಸುವುದಿಲ್ಲ.

d) ಫಾರಿನ್ ಎಕ್ಸ್‌ಚೇಂಜ್ ಮ್ಯಾನೇಜ್‌ಮೆಂಟ್ ಕಾಯಿದೆ, 1999 ಮತ್ತು ವಿದೇಶೀ ನೇರ ಹೂಡಿಕೆ, ಸಾಗರೋತ್ತರ ನೇರ ಹೂಡಿಕೆ ಮತ್ತು ವಿದೇಶೀ ವಾಣಿಜ್ಯ ಸಾಲಗಳ ಮಟ್ಟಿಗೆ ಅದರ ಅಡಿಯಲ್ಲಿ ಮಾಡಲಾಗಿರುವ ನಿಯಂತ್ರಣಗಳು ಮತ್ತು ಉಪ ಕಾನೂನುಗಳು – ಇಲ್ಲ

e) ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕಾಯಿದೆ 1934 –ಕಂಪೆನಿಯು ಆರ್‌ಬಿಐನಲ್ಲಿ ಠೇವಣಿ ಪಡೆಯದೇ ಇರುವ ಬ್ಯಾಂಕಿಂಗೇತರ ಹಣಕಾಸು ಕಂಪೆನಿಯಾಗಿ (ಎನ್‌ಬಿಎಫ್‌ಸಿ–ಪ್ರವರ್ಗ II) ನೋಂದಾಯಿಸಲ್ಪಟ್ಟಿದ್ದು, ಸಾಲಗಳು, ಹೂಡಿಕೆ, ಕಂತು ಖರೀದಿ ಹಣಕಾಸು ನೆರವು ಮತ್ತು ಸಾಮಗ್ರಿಗಳನ್ನು ಗುತ್ತಿಗೆ ನೀಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆಯಾದರೂ ಸಾರ್ವಜನಿಕರಿಂದ ಯಾವುದೇ ಠೇವಣಿಯನ್ನೂ ಸ್ವೀಕರಿಸುತ್ತಿಲ್ಲ.

ಕಂಪೆನಿಯು, ಬ್ಯಾಂಕಿಂಗೇತರ ಹಣಕಾಸು ಕಂಪೆನಿಯಾಗಿ (ಎನ್‌ಬಿಎಫ್‌ಸಿ) ನೋಂದಾಯಿಸಲ್ಪಟ್ಟಿದ್ದು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಅವರು ಎನ್‌ಬಿಎಫ್‌ಸಿಗಳಿಗೆ ನಿಗಧಿಪಡಿಸಿರುವ ಶಾಸನಾತ್ಮಕ ಮಾರ್ಗದರ್ಶಿಸೂತ್ರಗಳನ್ನು ಅನುಸರಣೆ ಮಾಡುತ್ತಿದೆ. ಕಂಪೆನಿಯು ಬ್ಯಾಂಕಿಂಗೇತರ ಹಣಕಾಸು ಕಂಪೆನಿಯಾಗಿ ತನ್ನ ನೊಂದಣಿಯನ್ನು ರದ್ದು ಮಾಡಲು ಭಾರತೀಯ ರಿಸರ್ವ್ ಬ್ಯಾಂಕಿಗೆ ಅರ್ಜಿಯನ್ನು ಸಲ್ಲಿಸಿರುತ್ತದೆ.

f) ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಕಾಯಿದೆ, 1992ರ ('ಸೆಬಿ ಕಾಯಿದೆ') ಅಡಿಯಲ್ಲಿ ನಿಗಧಿಪಡಿಸಲಾಗಿರುವ ಶಾಸನಗಳು ಮತ್ತು ಮಾರ್ಗದರ್ಶನಗಳು –ಅನ್ವಯಿಸುವುದಿಲ್ಲ.

g) ಕಂಪೆನಿಗೆ ನಿರ್ದಿಷ್ಟವಾಗಿ ಅನ್ವಯಿಸಲ್ಪಡುವ ಕೆಳಕಂಡ ಇತರ ಕಾನೂನುಗಳು:–

i. ದಿ ಕರ್ನಾಟಕ ಟ್ರಾನ್ಸ್‌ಪರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ಸ್ ಕಾಯಿದೆ, 1999 ಮತ್ತು ಅದರ ಅಡಿಯಲ್ಲಿ ಮಾಡಲಾಗಿರುವ ನಿಯಮಗಳು.

ii. ಕರ್ನಾಟಕ ಶಾಪ್ಸ್ ಮತ್ತು ಎಸ್ಟಾಬ್ಲಿಶ್‌ಮೆಂಟ್ ಕಾಯಿದೆ, 1961

iii. ಕರ್ನಾಟಕ ಟ್ಯಾಕ್ಸ್ ಆನ್ ಪ್ರೊಫೆಷನ್ಸ್, ಟ್ರೇಡ್ಸ್, ಕಾಲ್ಲಿಂಗ್ಸ್, ಮತ್ತು ಎಂಪ್ಲಾಯ್‌ಮೆಂಟ್ ಕಾಯಿದೆ, 1976

iv. ಸೆಕ್ಶುವಲ್ ಹೆರಾಸ್‌ಮೆಂಟ್ ಆಫ್ ವೂಮನ್ ಅಟ್ ವರ್ಕ್ ಪ್ಲೇಸ್ (ಪ್ರಿವೆನ್ಶನ್, ಪ್ರೊಹಿಬಿಷನ್ ಮತ್ತು ರೆಡ್ರೆಸ್ಸಲ್) ಕಾಯಿದೆ, 2013

v. ಎಂಪ್ಲಾಯೀಸ್ ಪ್ರೊವಿಡೆಂಟ್ ಮತ್ತು ಮಿಸಲೇನಿಯಸ್ ಪ್ರಾವಿಶನ್ಸ್ ಕಾಯಿದೆ, 1952 (ವಿನಾಯಿತಿ ಪಡೆದಿದೆ)

vi. ಮೆಟರ್ನಿಟಿ ಬೆನೆಫಿಟ್ ಕಾಯಿದೆ, 1961

vii. ಮಿನಿಮಮ್ ವೇಜಸ್ ಕಾಯಿದೆ, 1948

viii. ಪೇಯ್‌ಮೆಂಟ್ ಆಫ್ ಬೋನಸ್ ಕಾಯಿದೆ, 1965

ix. ಪೇಯ್‌ಮೆಂಟ್ ಆಫ್ ಗ್ರಾಚ್ಯುಯಿಟಿ ಕಾಯಿದೆ, 1972

x. ಪೇಯ್‌ಮೆಂಟ್ ಆಫ್ ವೇಜಸ್ ಕಾಯಿದೆ, 1936

xi. ಕರ್ನಾಟಕ ಸರ್ಕಾರದ ಅನುಮೋದನೆಯ ಮೇರೆಗೆ ಕಂಪೆನಿಯು ರಚಿಸಿರುವ ನಿಯಮಗಳು ಮತ್ತು ಶಾಸನಗಳು.

ದಿ ಇನ್‌ಸ್ಟಿಟ್ಯೂಟ್ ಆಫ್ ಕಂಪೆನಿ ಸೆಕ್ರೆಟರೀಸ್ ಆಫ್ ಇಂಡಿಯ ಅವರು ಹೊರಡಿಸಿರುವ ಸೆಕ್ರೆಟೇರಿಯಲ್ ಸ್ಟಾಂಡರ್ಡ್ಸ್‌ನ ಅನ್ವಯಿಸಬಹುದಾದ ಕಂಡಿಕೆಗಳ ಅನುಸರಣೆಯನ್ನು ನಾನು ಪರಿಶೀಲಿಸಿರುತ್ತೇನೆ.

ಕಂಡಿಕೆ 149 (1)ರ ಉಪಬಂಧಗಳ ಅಡಿಯಲ್ಲಿ ಅಗತ್ಯವಾಗಿರುವಂತೆ ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ ಅವರು ಹೊರಡಿಸಿರುವ ದಿನಾಂಕ 5ನೇ ಜೂನ್ 2015ರ ಅಧಿಸೂಚನೆ ನಂ. ಜಿ.ಎಸ್.ಆರ್. 463 (ಇ)ಯ ಅಡಿಯಲ್ಲಿ ಸರ್ಕಾರೀ ಕಂಪೆನಿಗಳಿಗೆ ಮಂಜೂರಾಗಿರುವ ವಿನಾಯಿತಿಯಂತೆ ಕಂಪೆನಿಯ ನಿರ್ದೇಶಕರ ಮಂಡಳಿಯನ್ನು ನಿಯಮಾನುಸಾರ ಸಂಘಟಿಸಲಾಗಿದ್ದು, ಕಾರ್ಯನಿರ್ವಾಹಕ ನಿರ್ದೇಶಕರು, ಕಾರ್ಯನಿರ್ವಾಹಕರಲ್ಲದ ನಿರ್ದೇಶಕರು, ಸ್ವತಂತ್ರ ನಿರ್ದೇಶಕರು ಮತ್ತು ಒಬ್ಬರು ಮಹಿಳಾ ನಿರ್ದೇಶಕರುಗಳನ್ನೊಳಗೊಂಡಂತೆ ಸೂಕ್ತ ಸಮತೋಲನವನ್ನು ಹೊಂದಿರುತ್ತದೆ ಎಂದು ನಾನು ಮತ್ತೆ ವರದಿ ಮಾಡುತ್ತೇನೆ.

a. ವರ್ಷಾವಧಿಯಲ್ಲಿ ನಿರ್ದೇಶಕರ ಮಂಡಳಿಯ ಸಂಘಟನೆಯಲ್ಲಿ ಬದಲಾವಣೆಗಳನ್ನು ಕಾಯಿದೆಯ ಉಪಬಂಧಗಳ ಅನುಸರಣೆಯೊಂದಿಗೆ ಮಾಡಲಾಗಿರುತ್ತದೆ.

b. ಮಂಡಳಿಯ ಸಭೆಗಳನ್ನು ನಿಗಧಿಮಾಡಿ, ಎಲ್ಲಾ ನಿರ್ದೇಶಕರುಗಳಿಗೆ ಸೂಕ್ತ ನೋಟೀಸುಗಳನ್ನು ನೀಡಲಾಗಿದ್ದು, ಕಾರ್ಯಸೂಚಿಗಳು, ಕಾರ್ಯಸೂಚಿಗಳ ಮೇಲೆ ವಿವರವಾದ ಟಿಪ್ಪಣಿಗಳನ್ನು ಕನಿಷ್ಠ ಏಳು ದಿನಗಳ ಮುಂಚಿತವಾಗಿ ಕಳಿಸಲಾಗುತ್ತಿದ್ದು, ಸಭೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸುವ ಸಲುವಾಗಿ, ಸಭೆಗೆ ಮುಂಚಿತವಾಗಿಯೇ ಕಾರ್ಯಸೂಚಿಯ ವಿಷಯದ ಮೇಲೆ ಹೆಚ್ಚುವರಿ ಮಾಹಿತಿಗಳನ್ನು ಮತ್ತು ಸ್ಪಷ್ಟೀಕರಣವನ್ನು ಕೇಳುವ ವ್ಯವಸ್ಥೆ ಜಾರಿಯಲ್ಲಿರುತ್ತದೆ.

c. ಮಂಡಳಿಯ ತೀರ್ಮಾನಗಳನ್ನು ಸರ್ವಸಮ್ಮತವಾಗಿ ಅಥವಾ ಅಗತ್ಯ ಬಹುಮತದೊಂದಿಗೆ ಕೈಗೊಳ್ಳಲಾಗುತ್ತಿದೆ. ಸದಸ್ಯರ ಅಭಿಪ್ರಾಯಗಳಿಗೆ ಪ್ರತಿರೋಧ ವ್ಯಕ್ತಪಡಿಸಿರುವ ನಿದರ್ಶನಗಳು ಇರುವುದಿಲ್ಲ.

ಕಂಪೆನಿಯ ಗಾತ್ರ ಮತ್ತು ಅದರ ಕಾರ್ಯಾಚರಣೆಗೆ ಅನುಸಾರವಾಗಿ ಇತರ ಕಾನೂನುಗಳು, ನಿಯಮಗಳು ನಿಬಂಧನೆಗಳು ಮತ್ತು ಮಾರ್ಗದರ್ಶನಗಳ ಮೇಲೆ ನಿಗಾವಹಿಸಲು ಬೇಕಾದಂತಹ ಅಗತ್ಯವಾದ ವ್ಯವಸ್ಥೆಗಳು ಮತ್ತು ಕಾರ್ಯವ್ಯವಸ್ಥೆಗಳು ಕಂಪೆನಿಯಲ್ಲಿರುತ್ತದೆ ಎಂದು ನಾನು ಮತ್ತೆ ವರದಿ ಮಾಡುತ್ತೇನೆ.

ಲೆಕ್ಕಪರಿಶೋಧನೆಯ ಅವಧಿಯಲ್ಲಿ ನಾನು ಮತ್ತೆ ವರದಿ ಮಾಡುವುದೇನೆಂದರೆ, ಕಂಪೆನಿಯು:

(i) ಸಾರ್ವಜನಿಕ/ಹಕ್ಕಿನ/ಆದ್ಯತೆಯ ಶೇರುಗಳ ಬಿಡುಗಡೆ/ಡಿಬೆಂಚರುಗಳ/ಸ್ವೆಟ್ ಈಕ್ವಿಟಿ ಇತ್ಯಾದಿ ಯಾವುದೇ ಬಿಡುಗಡೆಯನ್ನೂ ಮಾಡಿರುವುದಿಲ್ಲ.

(ii) ಬಿಡುಗಡೆಯಾಗದ/ಮರು ಖರೀದಿ ಮಾಡಿದ ಅಥವಾ ಹಿಂದಕ್ಕೆ ಖರೀದಿಸಲಾಗಿರುವ/ಬಿಡುಗಡೆಯಾಗಿರುವ ಭದ್ರತೆಗಳು ಇರುವುದಿಲ್ಲ.

(iii) ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 180ಕ್ಕೆ ಅನುಸಾರವಾಗಿ ಸದಸ್ಯರು ಯಾವುದೇ ಪ್ರಮುಖ ತೀರ್ಮಾನಗಳನ್ನೂ ತೆಗೆದುಕೊಂಡಿರುವುದಿಲ್ಲ.

(iv) ವಿಲೀನ/ಸಂಯೋಜನೆ/ಪುನರ್‌ನಿರ್ಮಾಣ ನಡೆದಿರುವುದಿಲ್ಲ.

(v) ಯಾವುದೇ ವಿದೇಶೀ ತಾಂತ್ರಿಕ ಸಹಯೋಗವನ್ನು ಮಾಡಿಕೊಂಡಿರುವುದಿಲ್ಲ.

ಲೆಕ್ಕಪರಿಶೋಧಕರು ಪರಿಶೀಲನೆ ನಡೆಸಬೇಕಾಗಿರುವಂತಹ ಅನ್ವಯಿಸಬಹುದಾದ ತೆರಿಗೆ ಕಾನೂನುಗಳನ್ನು ನಾವು ಪರಿಶೋಧಿಸಿರುವುದಿಲ್ಲ. ಅನುಬಂಧ–Aಯನ್ನು ಈ ವರದಿಯೊಂದಿಗೆ ಓದಿಕೊಳ್ಳುವುದು.

ಒಟ್ಟಿನಲ್ಲಿ, ನಿಗಮವು ಸರ್ಕಾರೀ ಕಂಪೆನಿಯಾಗಿ ಸಿಎಜಿಯ ಲೆಕ್ಕಪರಿಶೋಧನೆಗೆ ಒಳಪಟ್ಟಿದ್ದು, ಅಗತ್ಯವಾದ ಎಲ್ಲಾ ದಾಖಲೆಪತ್ರಗಳನ್ನು ನಿರ್ವಹಿಸುತ್ತಿದೆ ಮತ್ತು ಅನ್ವಯಿಸಬಹುದಾದ ಹಲವಾರು ಕಾನೂನುಗಳ ಉಪಬಂಧಗಳ ಅನುಸರಣೆಗೆ ಅಗತ್ಯವಾದ ವ್ಯವಸ್ಥೆ ಮತ್ತು ಪದ್ಧತಿಗಳನ್ನು ಸ್ಥಾಪಿಸಿರುತ್ತದೆ ಎಂದು ನಾವು ಗಮನಿಸಿರುತ್ತೇವೆ.

ಸಹಿ/–
ಎಸ್. ವಿಶ್ವನಾಥನ್
ಪ್ರಾಕ್ಟಿಸಿಂಗ್ ಕಂಪೆನಿ ಸೆಕ್ರಟರಿ,
ಎಸಿಎಸ್ ನಂ: 5284 ಸಿಪಿ: 5284
ಯುಡಿಐಎನ್ ಎ005284ಬಿ001387137

ಸ್ಥಳ : ಬೆಂಗಳೂರು
ದಿನಾಂಕ :03.12.2020

ಅನುಬಂಧ-II

ನಮೂನೆ ನಂ. ಎಂಜಿಟಿ 9

ವಾರ್ಷಿಕ ಸಲ್ಲಿಕೆಗಳ ಸಾರಾಂಶ

31ನೇ ಮಾರ್ಚ್ 2020ರ ವರ್ಷದ ಅಂತ್ಯದಲ್ಲಿರುವಂತೆ

ಕಂಪೆನಿಗಳ ಕಾಯಿದೆ 2013ರ ಕಂಡಿಕೆ 92(3) ಮತ್ತು ಕಂಪೆನಿ(ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014ರ ನಿಯಮ 12(1)ರಂತೆ

I ನೋಂದಣಿ ಮತ್ತಿತರ ವಿವರಗಳು		.
1	ಸಿಐಎನ್	ಯು93000ಕೆಎ1964ಯುಎಲ್ಎಲ್001532
2	ನೋಂದಣಿ ದಿನಾಂಕ	15–06–1964
3	ಕಂಪೆನಿಯ ಹೆಸರು	ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
4	ಕಂಪೆನಿಯ ವರ್ಗ/ಪ್ರವರ್ಗ	ಷೇರುಗಳಿಗೆ ಮಿತಿಗೊಳಿಸಲ್ಪಟ್ಟ ಕಂಪೆನಿ/ಸರ್ಕಾರಿ ಸಂಸ್ಥೆ
5	ನೋಂದಣಿ ಕಛೇರಿಯ ವಿಳಾಸ ಮತ್ತು ಸಂಪರ್ಕ ವಿವರಗಳು	ಖನಿಜ ಭವನ, 4ನೇ ಮಹಡಿ, ಪೂರ್ವ ಪಾರ್ಶ್ವ, 49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001.
6	ಪಟ್ಟಿಯಲ್ಲಿ ಸೇರಿದ ಕಂಪೆನಿಯೇ	ಲಿಸ್ಟ್ ಆಗಿರುವುದಿಲ್ಲ
7	ನೋಂದಣಾಧಿಕಾರಿ ಮತ್ತು ವರ್ಗಾವಣೆ ಕಾರ್ಯಕರ್ತ ಇದ್ದರೆ, ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳು	ಅನ್ವಯಿಸುವುದಿಲ್ಲ.

II ಕಂಪೆನಿಯ ಪ್ರಮುಖ ವ್ಯವಹಾರದ ಚಟುವಟಿಕೆಗಳು

(ಕಂಪೆನಿಯ ಒಟ್ಟು ವಹಿವಾಟಿನ 10%ಗಿಂತ ಜಾಸ್ತಿ ಕೊಡುಗೆ ನೀಡುವ ಎಲ್ಲಾ ವ್ಯವಹಾರ ಚಟುವಟಿಕೆಯನ್ನು ದಾಖಲಿಸುವುದು)

ಕ್ರಮ ಸಂಖ್ಯೆ	ಪ್ರಮುಖ ಉತ್ಪನ್ನಗಳು/ಸೇವೆಗಳ ಹೆಸರು ಮತ್ತು ವಿವರಗಳು	ಉತ್ಪನ್ನ/ಸೇವೆಗಳ ಎನ್ಐಸಿ ಸಂಕೇತ	ಕಂಪೆನಿಯ ಒಟ್ಟು ವಹಿವಾಟಿನಲ್ಲಿ %
1	ಹಣಕಾಸಿನ ಮತ್ತು ಸಂಬಂಧಿತ ಸೇವೆಗಳು	6492	100

III. ಹಿಡುವಳಿ ಸಂಸ್ಥೆ, ಅಂಗ ಸಂಸ್ಥೆ ಮತ್ತು ಸಹವರ್ತಿ ಸಂಸ್ಥೆಗಳ ವಿವರಗಳು

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು, ಮತ್ತು ವಿಳಾಸ	ಸಿಐಎನ್/ಜಿಎಲ್ಎನ್	ಹಿಡುವಳಿ/ ಅಂಗ ಸಂಸ್ಥೆ/ ಸಹವರ್ತಿ	ಹೊಂದಿರುವ ಷೇರುಗಳ %	ಅನ್ವಯಿಸುವ ಕಂಡಿಕೆ
1	ದಿ ತದಡಿ ಬಂದರು ನಿಯಮಿತ	ಯು74900ಕೆಎ2012ಎಸ್ಜಿಸಿ063386	ಅಂಗ ಸಂಸ್ಥೆ	100	ಕಂಡಿಕೆ 2(87)
2	ಮೈಸೂರು ಸೇಲ್ಸ್ ಇಂಟರ್ನ್ಯಾಷನಲ್ ಲಿಮಿಟೆಡ್	ಯು85110ಕೆಎ1966ಎಸ್ಜಿಸಿ001612	ಸಹಸಂಸ್ಥೆ	46	ಕಂಡಿಕೆ 2(6)
3	ಕರ್ನಾಟಕ ಅಸ್ಸೆಟ್ ಮ್ಯಾನೇಜ್ಮೆಂಟ್ ಕಂಪೆನಿ ಪ್ರೈವೇಟ್ ಲಿಮಿಟೆಡ್	ಯು75112ಕೆಎ1998ಪಿಟಿಸಿ023646	ಸಹಸಂಸ್ಥೆ	33.33	ಕಂಡಿಕೆ 2(6)
4	ಕರ್ನಾಟಕ ಟ್ರಸ್ಟೀ ಕಂಪೆನಿ ಪ್ರೈವೇಟ್ ಲಿಮಿಟೆಡ್	ಯು75112ಕೆಎ1998ಪಿಟಿಸಿ023647	ಸಹಸಂಸ್ಥೆ	50	ಕಂಡಿಕೆ 2(6)
5	ಕರ್ನಾಟಕ ಆಂಟಿ ಬಯೋಟಿಕ್ಸ್ ಮತ್ತು ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್	ಯು24231ಕೆಎ1981ಜಿಒ1004145	ಸಹಾಯಕ ಕಂಪೆನಿ	40.83	ಕಂಡಿಕೆ 2(6)
6	ಭದ್ರಾವತಿ ಬಾಲಾಜಿ ಆಯಿಲ್ ಪಾಮ್ಸ್ ಲಿಮಿಟೆಡ್	ಯು85110ಕೆಎ1991ಪಿಎಲ್ಸಿ012655	ಸಹಾಯಕ ಕಂಪೆನಿ	49	ಕಂಡಿಕೆ 2(6)

7	ಸಿದ್ಧಾರ್ಥ ಮೆಟಲ್ ಕೋಟಿಂಗ್ ಲಿಮಿಟೆಡ್	ಯು27109ಕೆಎ1989ಪಿಎಲ್‌ಸಿ010431	ಸಹಾಯಕ ಕಂಪೆನಿ	21.78	ಕಂಡಿಕೆ 2(6)
8	ಕೆಎಸ್‌ಐಐಡಿಸಿ–ಐಎಲ್&ಎಫ್‌ಎಸ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಕಂಪೆನಿ ಲಿಮಿಟೆಡ್	ಯು74999ಕೆಎ2007ಪಿಎಲ್‌ಸಿ042018	ಜಂಟೀ ಸಹಭಾಗಿತ್ವ ಕಂಪೆನಿ	50	ಕಂಡಿಕೆ 2(6)

IV. ಹೊಂದಿರುವ ಷೇರಿನ ಮಾದರಿ (ಒಟ್ಟು ಬಂಡವಾಳದ ಮೇಲೆ ಈಕ್ವಿಟಿ ಷೇರು ಬಂಡವಾಳದ ಶೇಕಡಾವಾರು ವಿಂಗಡಣೆ)

(i) ಹೊಂದಿರುವ ಷೇರುಗಳ ವರ್ಗ

ಷೇರುದಾರರ ವರ್ಗೀಕರಣ	ವರ್ಷದ ಆರಂಭದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ (31ನೇ ಮಾರ್ಚಿ 2019ರಲ್ಲಿ ಇರುವಂತೆ)				ವರ್ಷದ ಅಂತ್ಯದಲ್ಲಿ ಹೊಂದಿರುವ ಷೇರುಗಳ ಸಂಖ್ಯೆ (31ನೇ ಮಾರ್ಚಿ 2020ರಲ್ಲಿ ಇರುವಂತೆ)				ವರ್ಷದಲ್ಲಿ ಬದಲಾವಣೆ %
	ಡಿ ಮ್ಯಾಟ್	ಭೌತಿಕ	ಮೊತ್ತ	ಒಟ್ಟು ಷೇರುಗಳ %	ಡಿ ಮ್ಯಾಟ್	ಭೌತಿಕ	ಮೊತ್ತ	ಒಟ್ಟು ಷೇರುಗಳ %	
ಎ. ಪ್ರವರ್ತಕರು									
(1) ಭಾರತೀಯ									
a)ವ್ಯಕ್ತಿ/ಹಿಂಉಕು	ಇಲ್ಲ	160	160	–	ಇಲ್ಲ	160	160	–	00
b)ಕೇಂದ್ರ ಸರ್ಕಾರ	ಇಲ್ಲ	ಇಲ್ಲ	ಇಲ್ಲ	ಇಲ್ಲ	ಇಲ್ಲ	ಇಲ್ಲ	ಇಲ್ಲ	ಇಲ್ಲ	ಇಲ್ಲ
c) ರಾಜ್ಯ ಸರ್ಕಾರ(ಗಳು)		69,47,05,864	69,47,05,864	100	69,47,05,864	69,47,05,864	100	00	
d) ಸಂಘ, ಸಂಸ್ಥೆ									
				ಇಲ್ಲ					
e) ಬ್ಯಾಂಕು/ ಹಣಕಾಸು ಸಂಸ್ಥೆ									
f) ಬೇರೆ ಇತರೆ									
ಉಪ ಮೊತ್ತ (A) (1)	ಇಲ್ಲ	69,49,06,024	69,49,06,024	100	ಇಲ್ಲ	69,49,06,024	69,49,06,024	100	00
2. ವಿದೇಶಿ									
a) ಎನ್‌ಆರ್‌ಐ ವ್ಯಕ್ತಿಗಳು									
b)ಇತರೆ ವ್ಯಕ್ತಿಗಳು									
				ಇಲ್ಲ					
c) ಸಂಘ, ಸಂಸ್ಥೆ									
d) ಬೇರೆ ಇತರೆ									
ಉಪ ಮೊತ್ತ (A) (2)									
ಮೊತ್ತ (A)	ಇಲ್ಲ	**69,49,06,024**	**69,49,06,024**	**100**	ಇಲ್ಲ	**69,49,06,024**	**69,49,06,024**	**100**	**00**

B. ಸಾರ್ವಜನಿಕ									
1. ಸಂಸ್ಥೆಗಳು									
a) ಮ್ಯುಚುವಲ್ ಫಂಡ್ಸ್									
b) ಬ್ಯಾಂಕುಗಳು/ ಹಣ.ಸಂಸ್ಥೆಗಳು									
c)ಕೇಂದ್ರ ಸರ್ಕಾರ					ಇಲ್ಲ				
d) ರಾಜ್ಯ ಸರ್ಕಾರ(ಗಳು)									
e)ವೆಂಚರ್ ಕ್ಯಾಪಿಟಲ್ ಫಂಡ್									
f)ವಿಮಾ ಕಂಪೆನಿಗಳು									
g) ಎಫ್ಐಐಗಳು									
h) ವಿದೇಶೀ ವೆಂಚರ್ ಕ್ಯಾಪಿಟಲ್ ಫಂಡ್									
i) ಇತರೆ									
(ಸ್ಪಷ್ಟಪಡಿಸಿ)									
ಉಪ ಮೊತ್ತ (B) (1)									
2.ಸಂಸ್ಥೆಗಳಲ್ಲದವು									
a)ಸಂಸ್ಥೆ ನಿಗಮ									
i) ಭಾರತೀಯ									
ii) ವಿದೇಶೀ									
b) ವ್ಯಕ್ತಿಗಳು									
i)ರೂ. 1ಲಕ್ಷದ ವರೆಗೆ ಷೇರು ಬಂಡವಾಳ ಹೊಂದಿರುವ ಎಲ್ಲಾ ಷೇರುದಾರರು									
					ಇಲ್ಲ				

ii) ರೂ. 1 ಲಕ್ಷ ಕ್ಕಿಂತ ಹೆಚ್ಚು ಷೇರು ಬಂಡವಾಳ ಹೊಂದಿರುವ ಎಲ್ಲಾ ಷೇರುದಾರರು									
iii) ಇತರೆ									
(ಸ್ಪಷ್ಟಪಡಿಸಿ)									
ಅನಿವಾಸಿ ಭಾರತೀಯರು									
ವಿದೇಶಿ ನಿಗಮ ಸಂಸ್ಥೆಗಳು									
ವಿದೇಶಿ ನಾಗರಿಕರು					ಇಲ್ಲ				
ಕ್ಲಿಯರಿಂಗ್ ಸದಸ್ಯರು									
ಟ್ರಸ್ಟ್‌ಗಳು									
ವಿದೇಶಿ ಸಂಸ್ಥೆಗಳು – ಡಿಆರ್									
ಉಪ ಮೊತ್ತ (B) (2)									
ಮೊತ್ತ ಸಾರ್ವಜನಿಕ(B)									
ಅ. ಜಿಡಿಆರ್‌ಗಳು ಮತ್ತು ಎಡಿಆರ್‌ಗಳ ಪಾಲಕರು ಹೊಂದಿರುವ ಷೇರುಗಳು									
ಮೊತ್ತ(A+B+C)	ಇಲ್ಲ	**69,47,05,864**	**69,47,05,864**	**100**	ಇಲ್ಲ	**69,47,05,864**	**69,47,05,864**	**100**	**00**

(ii). ಪ್ರವರ್ತಕರ ಷೇರು ಹೊಂದಿರುವಿಕೆ ಬಗ್ಗೆ

ಕ್ರಮ ಸಂಖ್ಯೆ	ಷೇರುದಾರರ ಹೆಸರು	ವರ್ಷದ ಆರಂಭದಲ್ಲಿ ಷೇರುಗಳ ಹೊಂದಿರುವಿಕೆ			ವರ್ಷದ ಅಂತ್ಯದಲ್ಲಿ ಷೇರುಗಳ ಹೊಂದಿರುವಿಕೆ			ವರ್ಷದಲ್ಲಿ ಗಣನೀಯ ಬದಲಾವಣೆ %
		ಷೇರುಗಳ ಸಂಖ್ಯೆ	ಕಂಪೆನಿಯ ಒಟ್ಟು ಷೇರುಗಳ %	ಒಟ್ಟು ಷೇರುಗಳಿಗೆ ಅಡಮಾನ/ ಋಣಭಾರದ ಷೇರುಗಳ %	ಷೇರುಗಳ ಸಂಖ್ಯೆ	ಕಂಪೆನಿಯ ಷೇರುಗಳ ಮೊತ್ತದ %	ಒಟ್ಟು ಷೇರುಗಳಿಗೆ ಅಡಮಾನ/ ಋಣಭಾರ ಷೇರುಗಳ %	
1	ಕರ್ನಾಟಕದ ಘನತೆವೆತ್ತ ರಾಜ್ಯಪಾಲರು	69,47,05,864	100.00	ಇಲ್ಲ	69,47,05,864	100.00	ಇಲ್ಲ	0
2	ಕರ್ನಾಟಕ ಸರ್ಕಾರದ ನಾಮ ನಿರ್ದೇಶಿತರು	160	0.00	ಇಲ್ಲ	160	0.00		
	ಮೊತ್ತ	69,47,06,024	100.00	ಇಲ್ಲ	69,47,06,024	100.00	ಇಲ್ಲ	0

ಟಿಪ್ಪಣಿ: ಕರ್ನಾಟಕ ಸರ್ಕಾರದಿಂದ ಸರ್ಕಾರಿ ಆದೇಶದಂತೆ ನೇಮಕಾತಿ ಹೊಂದಿರುವ ನಾಮನಿರ್ದೇಶಿತರು 160 ಶೇರುಗಳನ್ನು ಹೊಂದಿರುತ್ತಾರೆ.

iii) ಪ್ರವರ್ತಕರ ಷೇರು ಹೊಂದುವಿಕೆಯಲ್ಲಿ ಬದಲಾವಣೆ ಹೊಂದಿರುವಿಕೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ

ಕ್ರಮ ಸಂಖ್ಯೆ	ವಿವರಗಳು	ವರ್ಷದ ಆರಂಭದಲ್ಲಿ ಷೇರುಗಳ ಹೊಂದಿರುವಿಕೆ		ವರ್ಷದ ಅಂತ್ಯದಲ್ಲಿ ಷೇರುಗಳ ಹೊಂದಿರುವಿಕೆ	
		ಷೇರುಗಳ ಸಂಖ್ಯೆ	ಒಟ್ಟು ಷೇರುಗಳಿಗೆ %	ಷೇರುಗಳ ಸಂಖ್ಯೆ	ಒಟ್ಟು ಷೇರುಗಳಿಗೆ %
	ವರ್ಷದ ಆರಂಭದಲ್ಲಿ	69,47,06,024	100	69,47,06,024	100
	ಹೆಚ್ಚಳ/ಕಡಿತಕ್ಕೆ ಕಾರಣಗಳನ್ನು ಸ್ಪಷ್ಟಪಡಿಸಿ ವರ್ಷಾವಧಿಯಲ್ಲಿ ಪ್ರವರ್ತಕರ ಷೇರುಧಾರಣೆಯಲ್ಲಿ ದಿನಾಂಕವಾರು ಹೆಚ್ಚಳ/ಕಡಿತ (ಉದಾ: ಹಂಚಿಕೆ/ ವರ್ಗಾವಣೆ/ ಬೋನಸ್/ ಪರಿಶ್ರಮ ಬಂಡವಾಳ ಇತ್ಯಾದಿ)	ಇಲ್ಲ	ಇಲ್ಲ	ಇಲ್ಲ	ಇಲ್ಲ
	ವರ್ಷದ ಅಂತ್ಯದಲ್ಲಿ	69,47,06,024	100	69,47,06,024	100

iV) ಪ್ರಮುಖ ಹತ್ತು ಷೇರುದಾರರ ಷೇರು ಧಾರಣೆ ಮಾದರಿ:

(ನಿರ್ದೇಶಕರು, ಪ್ರವರ್ತಕರು ಮತ್ತು ಜಿಡಿಆರ್ ಮತ್ತು ಎಡಿಆರ್ ಧಾರಣೆದಾರರನ್ನು ಹೊರತುಪಡಿಸಿ)

ಕ್ರಮ ಸಂಖ್ಯೆ	ಪ್ರಮುಖ 10 ಷೇರುದಾರರಲ್ಲಿ ಪ್ರತಿಯೊಬ್ಬರೂ	ವರ್ಷದ ಆರಂಭದಲ್ಲಿ ಷೇರುಗಳ ಹೊಂದಿರುವಿಕೆ		ವರ್ಷದ ಅಂತ್ಯದಲ್ಲಿ ಷೇರುಗಳ ಒಟ್ಟು ಹೊಂದಿರುವಿಕೆ	
		ಷೇರುಗಳ ಸಂಖ್ಯೆ	ಒಟ್ಟು ಷೇರುಗಳಿಗೆ %	ಷೇರುಗಳ ಸಂಖ್ಯೆ	ಒಟ್ಟು ಷೇರುಗಳಿಗೆ %
	ವರ್ಷದ ಆರಂಭದಲ್ಲಿ	ಇಲ್ಲ	ಇಲ್ಲ	ಇಲ್ಲ	ಇಲ್ಲ
	ಹೆಚ್ಚಳ/ಕಡಿತಕ್ಕೆ ಕಾರಣಗಳನ್ನು ಸ್ಪಷ್ಟಪಡಿಸಿ ವರ್ಷಾವಧಿಯಲ್ಲಿ ಪ್ರವರ್ತಕರ ಷೇರುಧಾರಣೆಯಲ್ಲಿ ದಿನಾಂಕವಾರು ಹೆಚ್ಚಳ/ಕಡಿತ (ಉದಾ: ಹಂಚಿಕೆ/ ವರ್ಗಾವಣೆ/ ಬೋನಸ್/ ಪರಿಶ್ರಮ ಬಂಡವಾಳ ಇತ್ಯಾದಿ) ವರ್ಷಾವಧಿಯಲ್ಲಿ ಬದಲಾವಣೆ	ಇಲ್ಲ	ಇಲ್ಲ	ಇಲ್ಲ	ಇಲ್ಲ
	ವರ್ಷದ ಅಂತ್ಯದಲ್ಲಿ	ಇಲ್ಲ	ಇಲ್ಲ	ಇಲ್ಲ	ಇಲ್ಲ

V) ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿಯ ಶೇರು ಧಾರಣೆ

ಕ್ರಮ ಸಂಖ್ಯೆ	ಪ್ರತೀ ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿಯ ಶೇರು ಹೊಂದಿರುವಿಕೆ	ವರ್ಷದ ಆರಂಭದಲ್ಲಿ ಷೇರುಗಳ ಹೊಂದಿರುವಿಕೆ		ವರ್ಷದ ಅಂತ್ಯದಲ್ಲಿ ಒಟ್ಟು ಷೇರುಗಳ ಹೊಂದಿರುವಿಕೆ	
1	ಶ್ರೀಮತಿ ಗುಂಜನ್ ಕೃಷ್ಣ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸರ್ಕಾರದ ನಾಮನಿರ್ದೇಶಿತರು ಶ್ರೀ ಗಂಗಾರಾಮ್ ಬಡೇರಿಯ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸರ್ಕಾರದ ನಾಮನಿರ್ದೇಶಿತರು	ಷೇರುಗಳ ಸಂಖ್ಯೆ	ಒಟ್ಟು ಷೇರುಗಳಿಗೆ %	ಷೇರುಗಳ ಸಂಖ್ಯೆ	ಒಟ್ಟು ಷೇರುಗಳಿಗೆ %
	ವರ್ಷದ ಆರಂಭದಲ್ಲಿ	40	–	40	–
	ವರ್ಷಾವಧಿಯಲ್ಲಿ ದಿನಾಂಕವಾರು ಪ್ರವರ್ತಕರ ಶೇರು ಹೊಂದಿರುವಿಕೆಯಲ್ಲಿ ಹೆಚ್ಚಳ/ಕಡಿತ, ಹೆಚ್ಚಳ/ಕಡಿತಕ್ಕೆ ಕಾರಣಗಳನ್ನು ನಿರ್ದಿಷ್ಟಪಡಿಸಿ (ಉದಾ: ಹಂಚಿಕೆ/ವರ್ಗಾವಣೆ/ಬೋನಸ್/ಸ್ವಟ್ ಈಕ್ವಿಟಿ ಇತ್ಯಾದಿ):				
	ವರ್ಷದ ಅಂತ್ಯದಲ್ಲಿ	40	–	40	–
2	ಶ್ರೀ ಎನ್.ಆರ್.ಎನ್. ಸಿಂಹ, ಮುಖ್ಯ ಹಣಕಾಸು ಅಧಿಕಾರಿ	ಷೇರುಗಳ ಸಂಖ್ಯೆ	ಕಂಪೆನಿಯ ಒಟ್ಟು ಷೇರುಗಳಿಗೆ %	ಷೇರುಗಳ ಸಂಖ್ಯೆ	ಕಂಪೆನಿಯ ಒಟ್ಟು ಷೇರುಗಳಿಗೆ %
	ವರ್ಷದ ಆರಂಭದಲ್ಲಿ	10	–	10	–
	ವರ್ಷಾವಧಿಯಲ್ಲಿ ದಿನಾಂಕವಾರು ಪ್ರವರ್ತಕರ ಶೇರು ಹೊಂದಿರುವಿಕೆಯಲ್ಲಿ ಹೆಚ್ಚಳ/ಕಡಿತ, ಹೆಚ್ಚಳ/ಕಡಿತಕ್ಕೆ ಕಾರಣಗಳನ್ನು ನಿರ್ದಿಷ್ಟಪಡಿಸಿ (ಉದಾ: ಹಂಚಿಕೆ/ವರ್ಗಾವಣೆ/ಬೋನಸ್/ಸ್ವಟ್ ಈಕ್ವಿಟಿ ಇತ್ಯಾದಿ):				
	ವರ್ಷದ ಅಂತ್ಯದಲ್ಲಿ	10	–	10	–
3	ಶ್ರೀ ಆರ್.ಶ್ರೀಧರ ಕಂಪೆನಿ ಕಾರ್ಯದರ್ಶಿ & ಕಾನೂನು ಸಲಹೆಗಾರರು	ಇಲ್ಲ	ಇಲ್ಲ	ಇಲ್ಲ	ಇಲ್ಲ

V. ಋಣಭಾರ

ಬಾಕಿ ಇರುವ/ಕೂಡಿಬಂದು ಪಾವತಿಗೆ ಬಾಕಿ ಇಲ್ಲದ ಬಡ್ಡಿಯನ್ನೂ ಸೇರಿದಂತೆ ಕಂಪೆನಿಯ ಋಣಭಾರ ಸ್ಥಿತಿ

ವಿವರಗಳು	ಠೇವಣಿಯನ್ನು ಹೊರತುಪಡಿಸಿ ಭದ್ರತೆಯುಳ್ಳ ಸಾಲಗಳು	ಭದ್ರತೆಯಿಲ್ಲದ ಸಾಲಗಳು	ಠೇವಣಿಗಳು	ಒಟ್ಟು ಋಣಭಾರ ಸ್ಥಿತಿ
ಹಣಕಾಸಿನ ವರ್ಷದ ಆರಂಭದಲ್ಲಿ ಋಣಭಾರ				
i) ಅಸಲು ಮೊಬಲಗು				
ii) ಬಾಕಿ ಇರುವ ಆದರೆ ಪಾವತಿಸದೇ ಇರುವ ಬಡ್ಡಿ				
iii) ಕೂಡಿಬಂದಿರುವ ಆದರೆ ಬಾಕಿ ಇಲ್ಲದ ಬಡ್ಡಿ				
ಮೊತ್ತ (i+ii+iii)		ಇಲ್ಲ		
ಹಣಕಾಸಿನ ವರ್ಷದ ಅವಧಿಯಲ್ಲಿ ಸಾಲಹೊಂದಿರುವಿಕೆಯಲ್ಲಿ ಬದಲಾವಣೆಗಳು				
* ಸೇರಿಕೆಗಳು				
* ಕಡಿತ				
ನಿವ್ವಳ ಬದಲಾವಣೆಗಳು				
ಹಣಕಾಸಿನ ವರ್ಷದ ಅಂತ್ಯದಲ್ಲಿ ಋಣಭಾರ				
i) ಅಸಲು ಮೊಬಲಗು				
ii) ಬಾಕಿ ಇರುವ ಆದರೆ ಪಾವತಿಸದೇ ಇರುವ ಬಡ್ಡಿ		ಇಲ್ಲ		
iii) ಕೂಡಿಬಂದಿರುವ ಆದರೆ ಬಾಕಿ ಇಲ್ಲದ ಬಡ್ಡಿ				
ಮೊತ್ತ (i+ii+iii)				

VI ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿಯ ಸಂಭಾವನೆಗಳು

A. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು ಮತ್ತು/ಅಥವಾ ವ್ಯವಸ್ಥಾಪಕರ ಸಂಭಾವನೆಗಳು:

ಕ್ರಮ ಸಂಖ್ಯೆ	ಸಂಭಾವನೆಗಳ ವಿವರ	ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು ಮತ್ತು/ಅಥವಾ ವ್ಯವಸ್ಥಾಪಕರ ಹೆಸರು			ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ)
		ವ್ಯವಸ್ಥಾಪಕ ನಿರ್ದೇಶಕರು ಇಲ್ಲಿಯ ವರೆಗೆ ದಿ/ತಿಂ/ವರ್ಷ	ವ್ಯವಸ್ಥಾಪಕ ನಿರ್ದೇಶಕರು ಇಲ್ಲಿಯ ವರೆಗೆ ದಿ/ತಿಂ/ವರ್ಷ	–	–
1	ಒಟ್ಟು ವೇತನ				–
	(a) ವರಮಾನ ತೆರಿಗೆ ಕಾಯಿದೆ 1961ರ ಕಂಡಿಕೆ 17(1)ರಲ್ಲಿರುವ ಉಪಬಂಧಗಳಂತೆ ವೇತನ	1,59,970	35,82,199–	–	37,42,169
	(b)ವರಮಾನ ತೆರಿಗೆ ಕಾಯಿದೆ 1961ರ ಕಂಡಿಕೆ 17(2)ರಲ್ಲಿರುವ ಉಪಬಂಧ ಗಳಂತೆ ಸೌಲಭ್ಯಗಳು	–	–	–	–
	(c) ವರಮಾನ ತೆರಿಗೆ ಕಾಯಿದೆ 1961ರ ಕಂಡಿಕೆ 17(3)ರಲ್ಲಿರುವ ಉಪಬಂಧಗಳಂತೆ ವೇತನಗಳ ಬದಲಿಗೆ ಲಾಭಗಳು	–	–	–	–
2	ಷೇರು ಆಯ್ಕೆ	–	–	–	–
3	ಪರಿಶ್ರಮ ಮೊಬಲಗು	–	–	–	–
4	ಕಮಿಷನ್ – ಲಾಭದ ಮೇಲೆ % ನಂತೆ –ಇತರೆ, ಸ್ಪಷ್ಟಪಡಿಸಿ	–	–	–	–
5	ಇತರೆಗಳು–ದಯವಿಟ್ಟು ಸ್ಪಷ್ಟಪಡಿಸಿ	–	–	–	–
	ಮೊತ್ತ (A)	**1,59,970**	**35,82,199**		**37,42,169**
	ಕಾಯಿದೆಯಂತೆ ಮಿತಿ	1,59,970	35,82,199		37,42,169

B. ಇತರ ನಿರ್ದೇಶಕರ ಸಂಭಾವನೆ (ರೂಪಾಯಿಗಳಲ್ಲಿ)

ಕ್ರಮ ಸಂಖ್ಯೆ	ಸಂಭಾವನೆಗಳ ವಿವರ	ನಿರ್ದೇಶಕರ ಹೆಸರು					ಒಟ್ಟು ಮೊತ್ತ
		ಶ್ರೀ ಗೌರವ್ ಗುಪ್ತ	ಶ್ರೀ ಕಪಿಲ್ ಮೋಹನ್	ಡಾ. ಪಿ.ಸಿ. ಜಾಫರ್	ಕೆ. ಮಹದೇವ	ಶ್ರೀಮತಿ ಚೈತ್ರ ವಿ.	
1	**ಸ್ವತಂತ್ರ ನಿರ್ದೇಶಕರು**						
	ಮಂಡಳಿಯ ಸಮಿತಿಗೆ ಹಾಜರಾಗಲು ಶುಲ್ಕ:	1,500	–	–		–	**1,500**
	ಕಮಿಷನ್	–	–	–		–	–
	ಇತರೆ, ಸ್ಪಷ್ಟಪಡಿಸಿ	–	–	–		––	–
	ಮೊತ್ತ (1)	**1,500**	–	–		–	**1,500**
2	**ಇತರ ಕಾರ್ಯನಿರ್ವಾಹಕರಲ್ಲದ ನಿರ್ದೇಶಕರು**						
	ಮಂಡಳಿಯ ಸಮಿತಿಗೆ ಹಾಜರಾಗಲು ಶುಲ್ಕ:	–	2,000	1,500	500	1,000	5,000

	ಕಮಿಷನ್	–	–	–		–	–
	ಇತರೆ, ಸ್ಪಷ್ಟಪಡಿಸಿ	–	–	–		–	–
	ಮೊತ್ತ (2)	–	2,000	1,500	500	1,000	5,000
	ಮೊತ್ತ (B)=(1+2)	**1,500**	**2,000**	**1,500**	**500**	**1,000**	**6,500**
	ಒಟ್ಟು ಆಡಳಿತಾತ್ಮಕ ಸಂಭಾವನೆ	NA	NA	NA	NA	NA	NA
	ಕಾಯಿದೆಯಂತೆ ಒಟ್ಟಾರೆ ಮಿತಿ	NA	NA	NA	NA	NA	NA

C. ವ್ಯವಸ್ಥಾಪಕ ನಿರ್ದೇಶಕರು, ವ್ಯವಸ್ಥಾಪಕರು ಮತ್ತು ಪೂರ್ಣಾವಧಿ ನಿರ್ದೇಶಕರನ್ನು ಹೊರತುಪಡಿಸಿ ಪ್ರಮುಖ ಆಡಳಿತ ಸಿಬ್ಬಂದಿಯ ಸಂಭಾವನೆಗಳು

ಕ್ರಮ ಸಂಖ್ಯೆ	ಸಂಭಾವನೆಗಳ ವಿವರ	ಪ್ರಮುಖ ಆಡಳಿತ ಸಿಬ್ಬಂದಿಯ ಹೆಸರು		
		ಸಿಎಸ್	ಸಿಎಫ್ಒ	ಮೊತ್ತ
1	ಒಟ್ಟು ವೇತನ	ಆರ್. ಶ್ರೀಧರ	ಎನ್.ಆರ್.ಎನ್. ಸಿಂಹ	
	(a) ವರಮಾನ ತೆರಿಗೆ ಕಾಯಿದೆ 1961ರ ಕಂಡಿಕೆ 17(1)ರಲ್ಲಿರುವ ಉಪಬಂಧಗಳಂತೆ ವೇತನ	12,00,000	18,94,803	25,21,878
	(b)ವರಮಾನ ತೆರಿಗೆ ಕಾಯಿದೆ 1961ರ ಕಂಡಿಕೆ 17(2)ರಲ್ಲಿರುವ ಉಪಬಂಧಗಳಂತೆ ಸೌಲಭ್ಯಗಳು	–	–	–
	(c) ವರಮಾನ ತೆರಿಗೆ ಕಾಯಿದೆ 1961ರ ಕಂಡಿಕೆ 17(3)ರಲ್ಲಿರುವ ಉಪಬಂಧಗಳಂತೆ ವೇತನಗಳ ಬದಲಿಗೆ ಲಾಭಗಳು	–	–	–
2	ಷೇರು ಆಯ್ಕೆ	–	–	–
3	ಪರಿಶ್ರಮ ಮೊಬಲಗು	–	–	–
4	ಕಮಿಷನ್	–	–	–
–	– ಲಾಭದ ಮೇಲೆ % ನಂತೆ	–	–	–
	– ಇತರೆ, ಸ್ಪಷ್ಟಪಡಿಸಿ	–	–	–
	ಇತರೆ, ಸ್ಪಷ್ಟಪಡಿಸಿ	–	–	–
	ಮೊತ್ತ	–	–	–
5	ಒಟ್ಟು ವೇತನ	–	–	–
	(a) ವರಮಾನ ತೆರಿಗೆ ಕಾಯಿದೆ 1961ರ ಕಂಡಿಕೆ 17(1)ರಲ್ಲಿರುವ ಉಪಬಂಧಗಳಂತೆ ವೇತನ	**12,00,000**	**18,94,803**	**30,94,803**

VII. ದಂಡಗಳು/ಶಿಕ್ಷೆಗಳು/ಅಪರಾಧಗಳ ಸೇರುವಿಕೆ:

ವರ್ಗ	ಕಂಪೆನಿಗಳ ಕಾಯಿದೆಯ ಕಂಡಿಕೆಗಳು	ಸಂಕ್ಷಿಪ್ತ ವಿವರ	ದಂಡಗಳು/ಶಿಕ್ಷೆಗಳು/ ದಂಡ ಶುಲ್ಕ ವಿಧಿಸಲಾಗಿರುವ ಬಗ್ಗೆ ವಿವರಗಳು	ಪ್ರಾಧಿಕಾರ (ಆರ್‌ಡಿ/ ಎನ್‌ಸಿಎಲ್‌ಟಿ/ ನ್ಯಾಯಾಲಯ	ಮೇಲ್ಮನವಿ ಮಾಡಿದ್ದಲ್ಲಿ (ವಿವರ ಕೊಡಿ)
A. ಕಂಪೆನಿ					
ದಂಡಗಳು					
ಶಿಕ್ಷೆಗಳು			ಇಲ್ಲ		
ಅಪರಾಧ ಸೇರಿಕೆ					
B. ನಿರ್ದೇಶಕರು					
ದಂಡಗಳು					
ಶಿಕ್ಷೆಗಳು			ಇಲ್ಲ		
ಅಪರಾಧ ಸೇರಿಕೆ					
C. ತಪ್ಪಿತಸ್ಥ ಇತರೆ ಅಧಿಕಾರಿಗಳು					
ದಂಡಗಳು			ಇಲ್ಲ		
ಶಿಕ್ಷೆಗಳು					
ಅಪರಾಧ ಸೇರಿಕೆ					

ಮಂಡಳಿಗಾಗಿ ಮತ್ತು ಮಂಡಳಿಯ ಪರವಾಗಿ
ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ನಿಗಮ ನಿಯಮಿತ

ಸಹಿ/–	**ಸಹಿ/–**
(ಎಂ.ಎಸ್. ಶ್ರೀಕರ್)	**(ಡಾ. ಪಿ.ಸಿ. ಜಾಫರ್)**
ವ್ಯವಸ್ಥಾಪಕ ನಿರ್ದೇಶಕರು	**ನಿರ್ದೇಶಕರು**
ಡಿಐಎನ್ : 07882939	**ಡಿಐಎನ್ : 08574909**

ಸ್ಥಳ: ಬೆಂಗಳೂರು
ದಿನಾಂಕ: 03.12.2020

ಅನುಬಂಧ – III

ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಚಟುವಟಿಕೆಗಳ ಬಗ್ಗೆ ವರದಿ

{ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 135 ಮತ್ತು ಕಂಪೆನಿಗಳ (ಕಾರ್ಪೊರೇಟ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ ಪಾಲಿಸಿ)ಯ ನಿಯಮ,2014ರಂತೆ}

I. ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳ ಅಥವಾ ಕಾರ್ಯಕ್ರಮಗಳ ಪಕ್ಷಿನೋಟವನ್ನೂ ಸೇರಿದಂತೆ ಕಂಪೆನಿಯ ಸಿಎಸ್‌ಆರ್ ನೀತಿಯ ಸಂಕ್ಷಿಪ್ತ ಮಾಹಿತಿ ಮತ್ತು ಸಿಎಸ್‌ಆರ್ ನೀತಿ ಮತ್ತು ಯೋಜನೆಗಳು ಮತ್ತು ಕಾರ್ಯಕ್ರಮಗಳ ವೆಬ್ ಕೊಂಡಿಗೆ ಸಂಪರ್ಕ ಸೇರಿದಂತೆ.

ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 135 ಮತ್ತು ಕಂಪೆನಿಗಳ (ಕಾರ್ಪೊರೇಟ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ ಪಾಲಿಸಿ) ನಿಯಮ, 2014ರಂತೆ ಕಂಪೆನಿಯು ಸಿಎಸ್‌ಆರ್ ನೀತಿಯನ್ನು ರೂಪಿಸಿರುತ್ತದೆ. ಉದ್ದೇಶಿಸಲಾಗಿರುವ ಕಾರ್ಯಕ್ರಮಗಳನ್ನು ಕಂಪೆನಿಗಳ ಕಾಯಿದೆ, 2013ರ ಅನುಸೂಚಿ– VIIರಂತೆ ನಮ್ಮ ಸಿಎಸ್‌ಆರ್ ನೀತಿಯಲ್ಲಿ ಕ್ರಮಪ್ರಕಾರವಾಗಿ ಅಳವಡಿಸಿರುವಂತೆ ಹಾಗೂ ಇವುಗಳು ನಮ್ಮ ಎಲ್ಲಾ ಕಾರ್ಯಕ್ರಮಗಳಲ್ಲೂ ಮಾರ್ಗದರ್ಶಿ ಸೂತ್ರವಾಗಿರುತ್ತವೆ. ಕಂಪೆನಿಯ ಕಾರ್ಪೊರೇಟ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ ನೀತಿಯನ್ನು ಕಂಪೆನಿಯ ವೆಬ್‌ಸೈಟ್ www.ksiidc.com ನಲ್ಲಿ ಪೋಸ್ಟ್ ಮಾಡಲಾಗಿದೆ.

II. ಕೆಎಸ್‌ಐಐಡಿಸಿಯ ನಿರ್ದೇಶಕರ ಮಂಡಳಿಯ 3 (ಮೂವರು) ನಿರ್ದೇಶಕರುಗಳನ್ನು ಒಳಗೊಂಡ ಸಿಎಸ್‌ಆರ್ ಸಮಿತಿಯನ್ನು ರಚಿಸಲಾಗಿದೆ.

III. ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 198ರಂತೆ ಕಂಪೆನಿಯ ಹಿಂದಿನ ಮೂರು ಹಣಕಾಸಿನ ವರ್ಷದ ಸರಾಸರಿ ನಿವ್ವಳ ಲಾಭವು ರೂ. 4917.14 ಲಕ್ಷಗಳು

IV. ನಿಗದಿತ ಸಿಎಸ್‌ಆರ್ ವೆಚ್ಚಗಳು (ಮೇಲ್ಕಂಡ ನಿವ್ವಳ ಲಾಭದ ಮೇಲೆ ಪ್ರತಿಶತ ಎರಡರಷ್ಟು) ರೂ. 98.34 ಲಕ್ಷಗಳು.

V. ಮುಂದೂಡಲ್ಪಟ್ಟ ಸಿಎಸ್‌ಆರ್ ವೆಚ್ಚಗಳು ರೂ. 134.53 ಲಕ್ಷಗಳು.

VI. 2019–20ರ ಹಣಕಾಸಿನ ವರ್ಷದಲ್ಲಿ ಸಿಎಸ್‌ಆರ್‌ಗೆ ವೆಚ್ಚಮಾಡಲಾದ ಮೊಬಲಗುಗಳ ವಿವರ:

(a) ಹಣಕಾಸಿನ ವರ್ಷದಲ್ಲಿ ಮಾಡಲಾದ ಒಟ್ಟು ವೆಚ್ಚಗಳು ರೂ. 134.53 ಲಕ್ಷಗಳು.

(b) ವೆಚ್ಚ ಮಾಡದೇ ಇರುವ ಮೊಬಲಗು, ಇದ್ದಲ್ಲಿ : ರೂ. 98.34 ಲಕ್ಷಗಳು

ವೆಚ್ಚಮಾಡದೇ ಇರುವುದಕ್ಕೆ ಕಾರಣಗಳು:

ನಾವು ಸಿಎಸ್‌ಆರ್ ಯೋಜನೆಗಳನ್ನು ಮತ್ತು ಚಟುವಟಿಕೆಗಳನ್ನು ಗುರುತಿಸುವ ಪ್ರಕ್ರಿಯೆಯಲ್ಲಿದ್ದು, ವೆಚ್ಚ ಮಾಡದೇ ಇರುವ ಮೊಗಲಗನ್ನು ಚಾಲ್ತಿ ವರ್ಷದಲ್ಲಿ ವೆಚ್ಚ ಮಾಡಲಾಗುವುದು.

(c) ಹಣಕಾಸಿನ ವರ್ಷದ ಅವಧಿಯಲ್ಲಿ ಮಾಡಲಾದ ವೆಚ್ಚಗಳ ರೀತಿಯನ್ನು ಕೆಳಗೆ ವಿವರಿಸಿದೆ:

1	2	3	4	5	6	7	8
ಕ್ರಮ ಸಂಖ್ಯೆ	ಗುರುತಿಸಲಾಗಿರುವ ಸಿಎಸ್‌ಆರ್ ಯೋಜನೆ ಅಥವಾ ಚಟುವಟಿಕೆ	ಯೋಜನೆ ನಿರ್ವಹಿಸಿದ ಯೋಜನೆ	ಯೋಜನೆಗಳು ಅಥವಾ ಕಾರ್ಯಕ್ರಮ (1) ಸ್ಥಳೀಯ ಪ್ರದೇಶ ಅಥವಾ (2) ಬೇರೆ– ಯೋಜನೆಯನ್ನು ಕೈಗೊಂಡ ರಾಜ್ಯ, ಜಿಲ್ಲೆಯನ್ನು ಸ್ಪಷ್ಟಪಡಿಸಿ	ಮೀಸಲಿಟ್ಟ ಮೊಬಲಗು (ಬಜೆಟ್) ಯೋಜನೆ ಅಥವಾ ಕಾರ್ಯಕ್ರಮ ವಿವರ	ಯೋಜನೆಗೆ ಅಥವಾ ಕಾರ್ಯಕ್ರಮಕ್ಕೆ ವೆಚ್ಚ ಮಾಡಿರುವ ಮೊಬಲಗು (1) ಯೋಜನೆಗಳು ಅಥವಾ ಕಾರ್ಯಕ್ರಮದ ಮೇಲೆ ನೇರ ವೆಚ್ಚಗಳು (2) ವೆಚ್ಚಗಳು	ವರದಿ ಮಾಡುವ ಅವಧಿಯವರೆಗೆ ಒಟ್ಟು ವೆಚ್ಚಗಳು	ವೆಚ್ಚ ಮಾಡಿರುವ ಮೊಬಲಗು: ನೇರವಾಗಿ ಅಥವಾ ಜಾರಿಯ ಏಜೆನ್ಸಿಯ ಮೂಲಕ
1	ಪ್ರವಾಹ ಪೀಡಿತರ ಪುನರ್ವಸತಿ ಮತ್ತು ಪ್ರವಾಹ ಪೀಡಿತ ಪ್ರದೇಶಗಳ ಪುನರ್ ನಿರ್ಮಾಣ	ಸಾಮಾಜಿಕ ವಲಯ	ಕರ್ನಾಟಕ	ರೂ, 134.53 ಲಕ್ಷಗಳು	ರೂ. 134.53 ಲಕ್ಷಗಳು – ನೇರ	–––	ಜಾರಿಯ ಏಜೆನ್ಸಿ ಮೂಲಕ : ಕರ್ನಾಟಕ ರಾಜ್ಯ ಪೃಕೃತಿ ವಿಕೋಪ ನಿರ್ವಹಣಾ ಪ್ರಾಧಿಕಾರ (ಕೆಎಸ್‌ಡಿಎಂಎ):

ಸಹಿ/–
(ಡಾ. ಪಿ.ಸಿ.ಜಾಫರ್)
ನಿರ್ದೇಶಕರು
ಡಿಐಎನ್: 08574909

ಸಹಿ/–
(ಎಂ.ಎಸ್. ಶ್ರೀಕರ, ಭಾಆಸೇ)
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 07882939

ಸ್ಥಳ: ಬೆಂಗಳೂರು
ದಿನಾಂಕ: 03.12.2020

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಇದರ ಸದಸ್ಯರುಗಳಿಗೆ

ಸ್ಟಾಂಡ್‌ಅಲೋನ್ ಹಣಕಾಸಿನ ಕೋಷ್ಟಕಗಳ ಮೇಲಿನ ಲೆಕ್ಕಪರಿಶೋಧನೆಯ ಮೇಲೆ ಪರಿಷ್ಕೃತ ವರದಿ.

ಪರಿಣಿತ ಅಭಿಪ್ರಾಯ

ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ (“ದಿ ಕಂಪೆನಿ”) 31ನೇ ಮಾರ್ಚಿ 2020ರಲ್ಲಿ ಇರುವಂತೆ ಆಸ್ತಿ ಹೊಣೆ ತಃಖ್ತೆ ಹಾಗೂ ಆ ದಿನಾಂಕಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ಕೋಷ್ಟಕ, ಈಕ್ವಿಟಿಯಲ್ಲಿ ಬದಲಾವಣೆಯ ಕೋಷ್ಟಕ ಹಾಗೂ ನಗದು ಹರಿವು ಪಟ್ಟಿ ಮತ್ತು ಹಣಕಾಸಿನ ಕೋಷ್ಟಕಗಳಿಗೆ ಟಿಪ್ಪಣಿಗಳು, ಪ್ರಮುಖ ಲೆಕ್ಕಪತ್ರ ನೀತಿಗಳ ಸಾರಾಂಶ ಮತ್ತು ಇತರ ವಿವರಣಾತ್ಮಕ ಮಾಹಿತಿಗಳನ್ನು ಒಳಗೊಂಡ ಸ್ಟ್ಯಾಂಡ್‌ಅಲೋನ್ ಹಣಕಾಸಿನ ಕೋಷ್ಟಕಗಳ ಲೆಕ್ಕಪರಿಶೋಧನೆಯನ್ನು ನಾವು ನಡೆಸಿರುತ್ತೇವೆ.

ನಮ್ಮ ಸಂಪೂರ್ಣ ತಿಳುವಳಿಕೆಯಂತೆ ಹಾಗೂ ನಮಗೆ ನೀಡಲ್ಪಟ್ಟ ವಿವರಣೆಗಳಂತೆ, ಕ್ವಾಲಿಫೈಡ್ ಅಭಿಪ್ರಾಯದ ಕಂಡಿಕೆಗಳಲ್ಲಿ ವಿವರಿಸಿರುವ ಅಂಶಗಳ ಪರಿಣಾಮವನ್ನು ಹೊರತುಪಡಿಸಿ, ಮೇಲೆ ತಿಳಿಸಿರುವ ಸ್ಟಾಂಡ್‌ಅಲೋನ್ ಹಣಕಾಸಿನ ಕೋಷ್ಟಕಗಳು ಕಾಯಿದೆಗಳಲ್ಲಿ ಕೇಳಿರುವಂತಹ ಮಾಹಿತಿಗಳನ್ನು ನೀಡುತ್ತಿದ್ದು, ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಲ್ಪಟ್ಟ ಲೆಕ್ಕಪತ್ರ ನೀತಿಗೆ ಅನುಗುಣವಾಗಿ ಹಣಕಾಸಿನ ತಃಖ್ತೆಗಳು ನೈಜ ಮತ್ತು ಸಮರ್ಪಕ ಚಿತ್ರಣವನ್ನು ನೀಡುತ್ತಿದ್ದು, 31ನೇ ಮಾರ್ಚಿ, 2020ರಲ್ಲಿ ಇರುವಂತೆ ಕಂಪೆನಿಯ ಲಾಭವನ್ನು ಮತ್ತು ಆ ದಿನಾಂಕಕ್ಕೆ ಅಂತ್ಯವಾಗುವ ವರ್ಷದ ನಗದು ಹರಿವಿನ ಚಿತ್ರಣವನ್ನು ನೀಡುತ್ತದೆ.

ಪರಿಣಿತ ವರದಿಗೆ ಆಧಾರ

1) ಎನ್‌ಬಿಎಫ್‌ಸಿಯಾಗಿ ನೋಂದಾಯಿಸಲ್ಪಟ್ಟಿರುವ ಕಂಪೆನಿಯಾಗಿರುವ ಕಾರಣದಿಂದಾಗಿ ವರ್ಷದಿಂದ ವರ್ಷಕ್ಕೆ ಈ ಕೆಳಕಂಡ ಪ್ರಮುಖ ವ್ಯಾವಹಾರಿಕ ಚಟುವಟಿಕೆಗಳ ಮಾನದಂಡವನ್ನು ಅನುಸರಣೆ ಮಾಡಬೇಕಾಗಿರುತ್ತದೆ:

ಕಂಪೆನಿಯು ಎರಡೂ ಮಾನದಂಡಗಳನ್ನು ತೃಪ್ತಿಪಡಿಸಿದಲ್ಲಿ ಪ್ರಮುಖ ವ್ಯಾವಹಾರಿಕ ಚಟುವಟಿಕೆಯು ಹಣಕಾಸಿನ ಚಟುವಟಿಕೆಯೆಂದು ತಿಳಿಯಲ್ಪಡುತ್ತದೆ.:

a) ಅದರ ಹಣಕಾಸಿನ ಆಸ್ತಿಗಳು ಅದರ ಒಟ್ಟು ಆಸ್ತಿಗಳಿಗಿಂತ 50%ಷ್ಟು ಜಾಸ್ತಿಯಾಗಿರತಕ್ಕದ್ದು; ಮತ್ತು

b) ಹಣಕಾಸಿನ ಆಸ್ತಿಗಳಿಂದ ಬರುವ ಆದಾಯವು ಒಟ್ಟು ಆದಾಯದ 50%ಗಿಂತಲೂ ಹೆಚ್ಚಾಗಿರತಕ್ಕದ್ದು.

31ನೇ ಮಾರ್ಚಿ, 2020ರಲ್ಲಿ ಇರುವಂತೆ ಪ್ರಮುಖ ವ್ಯಾವಹಾರಿಕ ಮಾನದಂಡಕ್ಕೆ ಸಂಬಂಧಿಸಿದಂತೆ ಕಂಪೆನಿಯು ಎರಡೂ ಶರತ್ತುಗಳನ್ನು ತೃಪ್ತಿಪಡಿಸುವುದಿಲ್ಲವಾದರೂ ಕೂಡಾ, ಆ ದಿನಾಂಕದಂದು ಕಂಪೆನಿಯು ಎನ್‌ಬಿಎಫ್‌ಸಿಯಾಗಿ ಅಧಿಕೃತ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರುವುದು ಮುಂದುವರಿದಿರುತ್ತದೆ. ಮುಂದುವರಿದಂತೆ, ವರ್ಷಾವಧಿಯಲ್ಲಿ ನೋಂದಣಿ ಪ್ರಮಾಣ ಪತ್ರದ ರದ್ದತಿಗಾಗಿ ಆರ್‌ಬಿಐಗೆ ಕಂಪೆನಿಯು ಅರ್ಜಿಯನ್ನು ಸಲ್ಲಿಸಿದ್ದು, ಅದಕ್ಕೆ ಇನ್ನೂ ಅನುಮೋದನೆ ದೊರೆತಿರುವುದಿಲ್ಲ.

2) ಆರ್‌ಬಿಐ ಕಾಯಿದೆ, 1934ರಂತೆ ಮತ್ತು ನಂತರದಲ್ಲಿನ ತಿದ್ದುಪಡಿಗಳಂತೆ ಹಾಗೂ ಆರ್‌ಬಿಐ ಕಾಯಿದೆ, 1934ರ ಕಂಡಿಕೆ 45 ಐಸಿ(1)ರ ಅಡಿಯಲ್ಲಿ ಹೊರಡಿಸಿರುವ ಸೂಚನೆಗಳಂತೆ ಪ್ರತೀ ಎನ್‌ಬಿಎಫ್‌ಸಿಗಳು ತಮ್ಮ ನಿವ್ವಳ ಲಾಭದ 20%ನ್ನು ಪ್ರತ್ಯೇಕ ಮೀಸಲಿಗೆ ವರ್ಗಾಯಿಸಲು ಬಾದ್ಯರಾಗಿರುತ್ತಾರೆ. ವರ್ಷಾವಧಿಯಲ್ಲಿ ಎನ್‌ಬಿಎಫ್‌ಸಿ ನೋಂದಣಿ ಪ್ರಮಾಣಪತ್ರವನ್ನು ಹೊಂದಿರುವುದನ್ನು ಮುಂದುವರಿಸಿರುವುದರಿಂದ ಹಾಗೂ 31ನೇ ಮಾರ್ಚಿ, 2020ರಲ್ಲಿ ಇರುವಂತೆ 20%ರಷ್ಟು ಲಾಭವನ್ನು ಮೀಸಲಿಗೆ ವರ್ಗಾಯಿಸದೇ ಇರುವುದು ಕಂಡಿಕೆ 45(1)(c)ಯ ಅನುಸರಣೆ ಮಾಡದೇ ಇರುವುದಕ್ಕೆ ಕಾರಣವಾಗುತ್ತದೆ.

3) ಕಂಪೆನಿಯು ಈಕ್ವಿಟಿ ಪತ್ರಗಳಲ್ಲಿ ಹೂಡಿಕೆಯನ್ನು ಹೊಂದಿದ್ದು, ಇದರಲ್ಲಿ ಲಿಸ್ಟ್ ಆಗಿರುವ ಮತ್ತು ಲಿಸ್ಟ್ ಆಗದೇ ಇರುವ ಪತ್ರಗಳೂ ಸೇರಿರುತ್ತವೆ. ಐಎನ್‌ಡಿ ಎಎಸ್ 109ರಂತೆ, ಹೊಂದಿರುವ ಹೂಡಿಕೆಗಳನ್ನು ಐಎನ್‌ಡಿ ಎಎಸ್ 113ಕ್ಕೆ ಅನುಸಾರವಾಗಿ ನ್ಯಾಯಯುತ ದರದಲ್ಲಿ ಮೌಲ್ಯೀಕರಿಸಿ ಪ್ರಸ್ತುತಪಡಿಸಬೇಕಾಗಿರುತ್ತದೆ. ಕೆಲವೊಂದು ಹೂಡಿಕೆಗಳನ್ನು ಅವುಗಳನ್ನು ಲಿಸ್ಟ್‌ನಿಂದ ತೆಗೆದು ಹಾಕಿರುವುದರಿಂದ ಅವುಗಳನ್ನು ನಾಮಕಾವಸ್ಥೆ ದರಕ್ಕೆ ಅಂದರೆ ರೂ. 1/–ಕ್ಕೆ ಮೌಲ್ಯಮಾಪನ ಮಾಡಲಾಗಿರುತ್ತದೆ. ಕಂಪೆನಿಯು 31ನೇ ಮಾರ್ಚಿ 2020ರಲ್ಲಿ ಇರುವಂತೆ ಇದನ್ನು ನಾಮಕಾವಸ್ಥೆ ಮೌಲ್ಯದಲ್ಲಿ ಮತ್ತು ಮಾಹಿತಿಗಳ ಕೊರತೆಯಿಂದಾಗಿ ಅದರ ತುಲನಾತ್ಮಕ ಅವಧಿಯನ್ನು (ಗಳನ್ನು) ತೋರಿಸಿರುವುದನ್ನು ಮುಂದುವರಿಸಿದೆ. ಈ ಬಗ್ಗೆ ಹಣಕಾಸಿನ ಕೋಷ್ಟಕಗಳ ಮೇಲೆ ಅವುಗಳ ಪರಿಣಾಮವನ್ನು ಮೌಲ್ಯೀಕರಿಸಲು ನಾವು ಅಸಮರ್ಥರಾಗಿದ್ದೇವೆ.

4) 31ನೇ ಮಾರ್ಚಿ 2020ರ ವರ್ಷದ ಅಂತ್ಯದಲ್ಲಿ ಲಿಸ್ಟ್ ಆಗದೇ ಇರುವ ಮೂರು ಕಂಪೆನಿಗಳಲ್ಲಿರುವ ಹೂಡಿಕೆಗಳನ್ನು 31ನೇ ಮಾರ್ಚಿ 2020ರ ಮಾಹಿತಿಗಳು ಲಭ್ಯವಿಲ್ಲವಾದ್ದರಿಂದ 31ನೇ ಮಾರ್ಚಿ 2019ರಲ್ಲಿ ಲಭ್ಯವಿರುವ ಮಾಹಿತಿಗಳ ಆಧಾರದ ಮೇಲೆ ಸಮರ್ಪಕ ಬೆಲೆಯಲ್ಲಿ ಮೌಲ್ಯೀಕರಿಸಲಾಗಿರುತ್ತದೆ. ಹಣಕಾಸಿನ ಕೋಷ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ನಾವು ಪ್ರಮಾಣೀಕರಿಸಲು ಸಾಧ್ಯವಾಗಿರುವುದಿಲ್ಲ.

5) 31ನೇ ಮಾರ್ಚಿ, 2020ರಲ್ಲಿ ಇರುವಂತೆ ಕಂಪೆನಿಯು ರೂ. 45,70,00,000ವನ್ನು ಸ್ವೀಪ್ ಠೇವಣಿಯಲ್ಲಿ ಹೂಡಿರುತ್ತದೆ. ಐಎನ್‌ಡಿ ಎಎಸ್‌ನಂತೆ ಠೇವಣಿಗಳ ಮೇಲೆ ಗಳಿಸಲಾಗಿರುವ ಬಡ್ಡಿಯನ್ನು ಸೇರಿಕೆಯ ಆಧಾರದ ಮೇಲೆ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಾಗಿದೆ. ಆದಾಗ್ಯೂ ಕಂಪೆನಿಯು ಬಡ್ಡಿಯನ್ನು ಸ್ವೀಕೃತಿ ಆಧಾರದ ಮೇಲೆ ಲೆಕ್ಕಕ್ಕೆ ತೆಗೆದುಕೊಂಡಿರುತ್ತದೆ ಹಾಗೂ 31ನೇ ಮಾರ್ಚಿ, 2020ರಲ್ಲಿ ಇರುವಂತೆ ಬಡ್ಡಿಯನ್ನು ಸೇರಿಕೆ ಮಾಡಿರುವುದಿಲ್ಲ. ಹಣಕಾಸಿನ ಕೋಷ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ನಾವು ಪ್ರಮಾಣೀಕರಿಸಲು ಸಾಧ್ಯವಾಗಿರುವುದಿಲ್ಲ.

6) ಕಂಪೆನಿಯು ತನ್ನ ಸಹಸಂಸ್ಥೆಯಾಗಿರುವ ಆದ ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತಕ್ಕೆ (ಬಿಐಎಎಲ್) ಸಾಲ ಸೌಲಭ್ಯದ ವಿಸ್ತರಣೆಗಾಗಿ ಈ ಹಿಂದೆ ಒಪ್ಪಿರುವ ಶರತ್ತನ್ನು ನೆರವೇರಿಸುವ ಸಲುವಾಗಿ ಬಿಐಎಎಲ್‌ನಲ್ಲಿ ಹೊಂದಿರುವ 2,80,48,878 ಶೇರುಗಳನ್ನು ಎಸ್‌ಬಿಐ ಕ್ಯಾಪ್ಸ್ ಟ್ರಸ್ಟೀ ಕಂಪೆನಿ ಇವರಿಗೆ ಅಡಮಾನ ಮಾಡಿರುತ್ತದೆ. ಐಎನ್‌ಡಿ ಎಎಸ್–109ರಂತೆ ಶೇರುಗಳ ಅಡಮಾನವು ಹಣಕಾಸಿನ ಖಾತರಿ ಒಪ್ಪಂದವನ್ನು ಉಂಟುಮಾಡುತ್ತಿದ್ದು, ನೀಡಲಾಗಿರುವ ಅಡಮಾನಕ್ಕೆ ಕಂಪೆನಿಯು ಹಣಕಾಸಿನ ಹೊಣೆಗಾರಿಕೆಯನ್ನು ಗುರುತಿಸತಕ್ಕದ್ದು ಹಾಗೂ ನಂತರದಲ್ಲಿ ಐಎನ್‌ಡಿ ಎಎಸ್–115ರಂತೆ ಆದಾಯವನ್ನು ಗುರುತಿಸಬೇಕಾಗಿರುತ್ತದೆ. ಆದಾಗ್ಯೂ, ಕಂಪೆನಿಯು ಅಡಮಾನಕ್ಕಾಗಿ ಹಣಕಾಸಿನ ಹೊಣೆಗಾರಿಕೆಯನ್ನು ಗುರುತಿಸದೇ ಇರುವುದನ್ನು ಹಾಗೂ ಐಎನ್‌ಡಿ ಎಎಸ್–115 ರಂತೆ 31ನೇ ಮಾರ್ಚಿ, 2020ರಲ್ಲಿ ಇರುವಂತೆ ಅದಾಯವನ್ನು ದಾಖಲಿಸದೇ ಇರುವುದನ್ನು ನಾವು ಗಮನಿಸಿರುತ್ತೇವೆ. ಕಂಪೆನಿಯು ಈ ವ್ಯವಹಾರಕ್ಕೆ ನಿಗಧಿತ ಲೆಕ್ಕಪತ್ರ ಮಾನದಂಡವನ್ನು ಅನುಸರಿಸಿರುವುದಿಲ್ಲವಾದ್ದರಿಂದ ಹಣಕಾಸಿನ ಕೋಷ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ಪ್ರಮಾಣೀಕರಿಸಲು ನಮಗೆ ಅಸಾಧ್ಯವಾಗಿರುತ್ತದೆ.

7) ಕಂಪೆನಿಯು ವಿವಿಧ ಮೇಲ್ಮನವಿ ಪ್ರಾಧಿಕಾರಗಳ ಮುಂದೆ ಇರುವ ದಾವೆಗಳಲ್ಲಿ ಪ್ರತಿಭಟನೆಯ ಮೂಲಕ ಪಾವತಿಸಿರುವ ತೆರಿಗೆಗೆ ಸಂಬಂಧಿಸಿದಂತೆ ತಾನು ಯಶಸ್ವಿಯಾಗಲಿಕ್ಕಿಲ್ಲವೆಂದು ಒಪ್ಪದೇ ಇದ್ದರೂ ಕೂಡಾ ಊಹಾತ್ಮಕವಾಗಿ ಆದಾಯ–ತೆರಿಗೆ ಕಾಯಿದೆ, 1961ರ (“ಎಂಎಟಿ ಕ್ರೆಡಿಟ್”) ಕಂಡಿಕೆ 115 JBಯಂತೆ ವರ್ಷಾವಧಿಯಲ್ಲಿ ಜಮಾ ಮಾಡುವುದಕ್ಕೆ ಹಕ್ಕು ಸಾಧಿಸಿರುತ್ತಾರೆ. ನಮ್ಮ ಅಭಿಪ್ರಾಯದಂತೆ ಕಂಪೆನಿಯು ಗುರುತಿಸಿರುವ ಭಾರತೀಯ ರೂಪಾಯಿ 7,00,26,599ರ ಎಂಎಟಿ ಜಮಾಕ್ಕೆ ಕಂಪೆನಿಯು ಇದೇ ಮೊಬಲಗಿಗೆ ಆದಾಯ ತೆರಿಗೆಯ ಉಪಬಂಧವನ್ನು ಕಲ್ಪಿಸಬೇಕಾಗಿರುತ್ತದೆ. ಆದಾಗ್ಯೂ, ಕಂಪೆನಿಯು ರೂ. 7,00,26,599ಕ್ಕೆ ಆದಾಯ ತೆರಿಗೆಗೆ ಉಪಬಂಧವನ್ನು ಸೃಷ್ಟಿಸದೇ ಇರುವುದನ್ನು ನಾವು ಗಮನಿಸಿದ್ದು, ಇದರಿಂದಾಗಿ ಲಾಭ ಮತ್ತು ನಷ್ಟ ಖಾತೆಯಲ್ಲಿ ಭಾರತೀಯ ರೂಪಾಯಿ 7,00,26,599ರಿಂದ ಹೆಚ್ಚು ದಾಖಲಿಸಲ್ಪಟ್ಟಿರುತ್ತದೆ.

ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 143(10)ರಲ್ಲಿ ನಿಗಧಿಪಡಿಸಿರುವ ಲೆಕ್ಕಪರಿಶೋಧನಾ ಮಾನಕ ಗಳಿಗೆ (ಎಸ್‌ಎಗಳು) ಅನುಸಾರವಾಗಿ ನಾವು ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತೇವೆ. ಅಂತಹ ಮಾನಕಗಳ ಅಡಿಯಲ್ಲಿ ನಮ್ಮ ಜವಾಬ್ದಾರಿಗಳನ್ನು ವರದಿಯ ಆಡಿಟರ್ಸ್ ರೆಸ್ಪಾನ್ಸಿಬಿಲಿಟೀಸ್ ಫಾರ್ ದಿ ಆಡಿಟ್ ಆಫ್ ದಿ ಸ್ಟಾಂಡ್ ಅಲೋನ್ ಫೈನಾನ್ಶಿಯಲ್ ಸ್ಟೇಟ್‌ಮೆಂಟ್ಸ್ ವಿಭಾಗದಲ್ಲಿ ಮತ್ತಷ್ಟು ವಿವರಿಸಿದೆ. ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಅಸೋಸಿಯೇಶನ್ ಆಫ್ ಇಂಡಿಯಾ ಅವರು ಹೊರಡಿಸಿರುವ ನೀತಿಶಾಸ್ತ್ರದ ಸಂಹಿತೆಗಳ ಜೊತೆಗೆ ಕಂಪೆನಿಗಳ ಕಾಯಿದೆ, 2013ರ ಉಪಬಂಧಗಳಂತೆ ಮತ್ತು ಅದರ ಅಡಿಯಲ್ಲಿರುವ ನಿಯಮಗಳಂತೆ ಹಣಕಾಸಿನ ಕೋಷ್ಟಕಗಳ ಲೆಕ್ಕಪರಿಶೋಧನೆಗೆ ಬೇಕಾಗಿರುವ ನೀತಿಶಾಸ್ತ್ರದ ಅಗತ್ಯತೆಗಳಂತೆ ಮತ್ತು ಈ ಅಗತ್ಯತೆಗಳು ಮತ್ತು ನೀತಿಶಾಸ್ತ್ರದ ಸಂಹಿತೆಗಳೊಂದಿಗೆ ಇತರೆ ನೀತಿಶಾಸ್ತ್ರದ ಜವಾಬ್ದಾರಿಗಳನ್ನು ನಾವು ಪೂರೈಸಿದ್ದು, ನಾವು ಕಂಪೆನಿಯಿಂದ ಸ್ವತಂತ್ರರಾಗಿರುತ್ತೇವೆ. ನಾವು ಪಡೆದಿರುವ ಲೆಕ್ಕಪರಿಶೋಧನಾ ಸಾಕ್ಷ್ಯಗಳು ನಮ್ಮ ಲೆಕ್ಕ ಪರಿಶೋಧನಾ ಅಭಿಪ್ರಾಯ ನೀಡಲು ಸೂಕ್ತ ಹಾಗೂ ಸಮರ್ಪಕ ಆಧಾರವೆಂದು ನಾವು ಭಾವಿಸುತ್ತೇವೆ.

ವಿಷಯಕ್ಕೆ ಪ್ರಾಮುಖ್ಯತೆ ಕೊಡುವಿಕೆ:

ಹಣಕಾಸಿನ ಕೋಷ್ಟಕಗಳ ಮೇಲೆ ನಮ್ಮ ಈ ಕೆಳಕಂಡ ಟಿಪ್ಪಣಿಗಳ ಕಡೆಗೆ ನಾವು ಗಮನ ಸೆಳೆದಿದ್ದು, ಈ ಕೆಳಗೆ ವಿವರಿಸಿರುವ ಹಣಕಾಸಿನ ವಿವರಗಳ ಮೇಲೆ ಪರಿಣಾಮ ಬೀರಿರುತ್ತದೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯಗಳು ಬದಲಾಯಿಸಲ್ಪಟ್ಟಿಲ್ಲ.

1) ಹಣಕಾಸಿನ ಕೋಷ್ಟಕಗಳ ಮೇಲಿನ ಟಿಪ್ಪಣಿ 2.18ಕ್ಕೆ ತಮ್ಮ ಗಮನ ಸೆಳೆದಿದ್ದು, 31ನೇ ಮಾರ್ಚಿ, 2020ರ ವರ್ಷಾಂತ್ಯಕ್ಕೆ ವಿಭಾಗ IIIರ ಅನುಸೂಚಿ IIIರ ಅಡಿಯಲ್ಲಿ ಹಣಕಾಸಿನ ಕೋಷ್ಟಕಗಳನ್ನು ಸಿದ್ದಪಡಿಸಿರುವುದಕ್ಕೆ ಹಾಗೂ ಹೋಲಿಕೆಯ ಅವಧಿಯನ್ನು (ಗಳನ್ನು) ನಿರೂಪಿಸಿರುವುದಕ್ಕೆ ಕಾರಣಗಳನ್ನು ವಿವರಿಸಲಾಗಿರುತ್ತದೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯಗಳು ಬದಲಾಯಿಸಲ್ಪಟ್ಟಿಲ್ಲ.

2) ಆದಾಯ ತೆರಿಗೆ ಇಲಾಖೆಯು ಕಂಪೆನಿಯ ಮೇಲೆ ಹೊರಡಿಸಿರುವ ಹಿಂದಿನ ವರ್ಷಗಳಿಗೆ ಸಂಬಂಧಿಸಿದ ಡಿಮಾಂಡ್ ಮೊಬಲಗು ರೂ. 14,08,94,458ಕ್ಕೆ ಸಂಬಂಧಿಸಿದಂತೆ ಟಿಪ್ಪಣಿ ಸಂಖ್ಯೆ 29ನ್ನು ಗಮನಿಸಿ ಮತ್ತು ಕಂಪೆನಿಯು ಈ ಡಿಮಾಂಡನ್ನು ಸ್ವೀಕರಿಸಿದ್ದು, ವಿವಿಧ ಅಪೀಲುಗಳ ಮೂಲಕ ವ್ಯಾಜ್ಯ ಹೂಡಿರುತ್ತದೆ.

ಆದ್ದರಿಂದ ಅನಿಶ್ಚಿತ ಹೊಣೆಗಾರಿಕೆಯ ಅಡಿಯಲ್ಲಿ ದಾಖಲಿಸಲಾಗಿದೆ.

3) ಎಂಎಸ್ಎಂಇ ಕಾಯಿದೆ, 2006ರಂತೆ ಪಾವತಿಸ ಬೇಕಾಗಿರುವ ಬಡ್ಡಿ ಇದ್ದಲ್ಲಿ, ಉಪಬಂಧ ಕಲ್ಪಿಸದೇ ಇರುವ ಬಗ್ಗೆ ಟಿಪ್ಪಣಿ ಸಂಖ್ಯೆ 12ನ್ನು ಗಮನಿಸಿ. ಈ ವಿಚಾರದಲ್ಲಿ ಬಡ್ಡಿ ಹೊಣೆಗಾರಿಕೆಯ ಮೌಲ್ಯಮಾಪನ ಮಾಡಲು ಸಾಧ್ಯವಾಗಿರುವುದಿಲ್ಲ.

4) 31ನೇ ಮಾರ್ಚಿ, 2020ರಲ್ಲಿ ಇರುವಂತೆ ಕಂಪೆನಿಯು ಹೊಂದಿರುವ ಹೂಡಿಕೆಗಳ ಮೌಲ್ಯವು ಪತನವಾಗಿದ್ದರ ಪರಿಣಾಮಕ್ಕೆ ಸಂಬಂಧಿಸಿದಂತ ಟಿಪ್ಪಣಿ ನಂ.6(ii) ಗಮನಿಸಿ.

ಹಣಕಾಸಿನ ಕೋಷ್ಟಕಗಳು ಅಲ್ಲದ ಮಾಹಿತಿ ಮತ್ತು ಅದರ ಮೇಲೆ ಲೆಕ್ಕಪರಿಶೋಧಕರ' ವರದಿ

ಇತರೆ ಮಾಹಿತಿಗಳಿಗೆ ಕಂಪೆನಿಯ ನಿರ್ದೇಶಕರ ಮಂಡಳಿಯು ಜವಾಬ್ದಾರನಾಗಿರುತ್ತದೆ. ಲೆಕ್ಕಪರಿಶೋಧಕರ ವರದಿಯ ದಿನಾಂಕದಂದು ಪಡೆಯಲಾಗಿರುವ ಇತರೆ ಮಾಹಿತಿಗಳು ನಿರ್ದೇಶಕರ ವರದಿಯಲ್ಲಿ ಸೇರಿಸಲಾಗಿರುವ ಮಾಹಿತಿಗಳಾಗಿದ್ದರೂ, ಹಣಕಾಸಿನ ಕೋಷ್ಟಕಗಳಲ್ಲಿ ಒಳಗೊಳ್ಳದೇ ಇರುವುದನ್ನು ಮತ್ತು ಅದರ ಮೇಲಿನ ಲೆಕ್ಕಪರಿಶೋಧಕರ' ವರದಿಯು ಲೆಕ್ಕ ಪರಿಶೋಧನಾ ವರದಿಯ ದಿನಾಂಕದ ನಂತರ ಸ್ವೀಕರಿಸಲ್ಪಡುವ ನಿರೀಕ್ಷೆ ಇದೆ.

ಹಣಕಾಸಿನ ಕೋಷ್ಟಕಗಳ ಮೇಲೆ ನಮ್ಮ ಅಭಿಪ್ರಾಯವು ಇತರೆ ಮಾಹಿತಿಗಳನ್ನು ಒಳಗೊಂಡಿರುವುದಿಲ್ಲ ಮತ್ತು ಇದನ್ನು ಮುಕ್ತಾಯಗೊಳಿಸಿರುವ ಬಗ್ಗೆ ಹಾಗೂ ಮುಂದೆಯೂ ಇದರ ಪರಿಸಮಾಪ್ತಿಯ ಯಾವುದೇ ರೀತಿಯ ಭರವಸೆಯನ್ನೂ ನೀಡುವುದಿಲ್ಲ.

ಹಣಕಾಸಿನ ಕೋಷ್ಟಕಗಳ ಮೇಲೆ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಮೇಲೆ ಗುರುತಿಸಲಾಗಿರುವ ಇತರೆ ಮಾಹತಿಗಳು ನಮ್ಮ ಜವಾಬ್ದಾರಿಯಾಗಿದ್ದು, ಹಾಗೆ ಮಾಡುವುದರಿಂದ, ಇತರೆ ಮಾಹಿತಿಗಳು ಹಣಕಾಸಿನ ಕೋಷ್ಟಕಗಳೊಂದಿಗೆ ಭೌತಿಕವಾಗಿ ಅಸ್ಥಿರವಾಗಿದ್ದು, ಅಥವಾ ಲೆಕ್ಕಪರಿಶೋಧನೆಯಲ್ಲಿ ನಾವು ಪಡೆದಿರುವ ಜ್ಞಾನವು ಅಥವಾ ಇಲ್ಲದಿರುವಿಕೆಯು ಭೌತಿಕವಾಗಿ ತಪ್ಪು ಹೇಳಿಕೆಯಾಗಿರುತ್ತದೆ.

ಒಂದು ವೇಳೆ, ನಾವು ನಿರ್ವಹಿಸಿರುವ ಕೆಲಸದ ಆಧಾರದ ಮೇಲೆ ಈ ಇತರೆ ಮಾಹಿತಿಗಳು ತಪ್ಪಾಗಿ ದಾಖಲಿಸಲ್ಪಟ್ಟಿದ್ದಲ್ಲಿ, ಆ ಅಂಶವನ್ನು ನಾವು ವರದಿ ಮಾಡುವ ಅಗತ್ಯ ಇರುತ್ತದೆ.

ನಾವು ಇತರೆ ಮಾಹಿತಿಗಳನ್ನು ಓದುವಾಗ, ಅದರಲ್ಲಿ ಒಂದು ಭೌತಿಕ ತಪ್ಪು ಹೇಳಿಕೆ ಇದೆಯೆಂದು ನಾವು ತೀರ್ಮಾನಕ್ಕೆ ಬಂದರೆ, ಆಡಳಿತದೊಂದಿಗೆ ಗುರುತಿಸಿಕೊಂಡಿರುವವರಿಗೆ ನಾವು ವಿಷಯವನ್ನು ತಿಳಿಸಬೇಕಾಗಿರುತ್ತದೆ. ಈ ವಿಚಾರದ ಮೇಲೆ ನಾವು ವರದಿ ಮಾಡುವುದು ಏನೂ ಇರುವುದಿಲ್ಲ.

ಸ್ಟ್ಯಾಂಡ್ಅಲೋನ್ ಹಣಕಾಸಿನ ಕೋಷ್ಟಕಕ್ಕೆ ಆಡಳಿತ ವರ್ಗದ ಮತ್ತು ಅಧಿಕಾರದ ಸಂಬಂಧ ಹೊಂದಿರುವವರ ಜವಾಬ್ದಾರಿಗಳು

ಕಂಪೆನಿಗಳ ಕಾಯಿದೆ 2013ರ ("ದಿ ಆಕ್ಟ್") ಕಂಡಿಕೆ 134(5)ರಲ್ಲಿ ಉಲ್ಲೇಖಿಸಿರುವಂತೆ ಕಂಪೆನಿಯ ಹಣಕಾಸಿನ ಸ್ಥಿತಿಯ, ಹಣಕಾಸಿನ ಕಾರ್ಯಕ್ಷಮತೆ, ಈಕ್ವಿಟಿಯಲ್ಲಿ ಬದಲಾವಣೆ ಹಾಗೂ ನಗದು ಹರಿವಿನ ನೈಜ ಮತ್ತು ಸಮರ್ಪಕ ಚಿತ್ರಣವನ್ನು ನೀಡುವ ಕಂಪೆನಿಯ ಸ್ಟಾಂಡ್ಅಲೋನ್ ಹಣಕಾಸಿನ ಕೋಷ್ಟಕಗಳಿಗೆ, ಕಾಯಿದೆಯ ಕಂಡಿಕೆ 133ರೊಂದಿಗೆ ಕಂಪೆನಿಗಳ (ಲೆಕ್ಕಪತ್ರಗಳು) ನಿಯಮ, 2014ರಲ್ಲಿ ಉಲ್ಲೇಖಿಸಿರುವ ಲೆಕ್ಕಪತ್ರ ಮಾನಕವನ್ನೊಳಗೊಂಡಂತೆ ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿರತಕ್ಕ ಲೆಕ್ಕಪತ್ರ ನೀತಿಗಳಿಗೆ ಅನುಗುಣವಾಗಿ ಕಂಪೆನಿಯ ಹಣಕಾಸಿನ ನಿರ್ವಹಣೆಯು ಕಂಪೆನಿಯ ನಿರ್ದೇಶಕರ ಮಂಡಳಿಯವರ ಜವಾಬ್ದಾರಿಯಾಗಿರುತ್ತದೆ. ಕಾಯಿದೆಯ ಉಪಬಂಧಗಳಂತೆ ಕಂಪೆನಿಯ ಆಸ್ತಿಗಳ ರಕ್ಷಣೆಗಾಗಿ ಸೂಕ್ತವಾದ ಲೆಕ್ಕಪತ್ರ ದಾಖಲೆಗಳನ್ನು ನಿರ್ವಹಿಸುವುದು, ಹಾಗೂ ವಂಚನೆ ಮತ್ತು ಇತರ ಅಕ್ರಮಗಳನ್ನು ಕಂಡುಹಿಡಿಯಲು ಮತ್ತು ತಡೆಗಟ್ಟಲು ಅನುವಾಗುಂತೆ ಲೆಕ್ಕಪತ್ರ ದಾಖಲಾತಿಗಳನ್ನು ಸಮರ್ಪಕವಾಗಿ ಕಾಪಾಡುವುದು; ಸೂಕ್ತವಾದ ಲೆಕ್ಕಪತ್ರ ನೀತಿಗಳನ್ನು ಆಯ್ಕೆ ಮಾಡಿಕೊಂಡು ಅನ್ವಯಿಸುವುದು; ಜವಾಬ್ದಾರಿಯುತ ಮತ್ತು ವಿವೇಕಯುತ ತೀರ್ಮಾನ ಮತ್ತು ಅಂದಾಜನ್ನು ಮಾಡುವುದು; ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯನ್ನು ವಿನ್ಯಾಸಗೊಳಿಸಿ, ಕಾರ್ಯರೂಪಕ್ಕೆ ತಂದು, ನಿರ್ವಹಸಿಕೊಂಡು ಹೋಗುವ ಮೂಲಕ ಲೆಕ್ಕಪತ್ರಗಳ ದಾಖಲಾತಿಗಳು ನಿಖರವಾಗಿ ಹಾಗೂ ಪರಿಪೂರ್ಣವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು; ಹಣಕಾಸಿನ ಕೋಷ್ಟಕಗಳನ್ನು ಸಿದ್ದಪಡಿಸುವಿಕೆ ಮತ್ತು ಪ್ರಸ್ತುತ ಪಡಿಸುವಿಕೆಗೆ ಸಂಬಂಧಿಸಿದಂತೆ ವಂಚನೆ ಅಥವಾ ತಪ್ಪಿನ ಕಾರಣದಿಂದ ಭೌತಿಕ ತಪ್ಪು ಹೇಳಿಕೆಗಳಿಂದ ಮುಕ್ತವಾದ ನೈಜ ಮತ್ತು ಸಮರ್ಪಕ ಚಿತ್ರಣವನ್ನು ನೀಡಿರುವುದನ್ನು ಉಪಯೋಗಿಸಿಕೊಂಡು ಮೇಲೆ ಹೇಳಿರುವಂತೆ ಸ್ಟಾಂಡ್ಅಲೋನ್ ಹಣಕಾಸಿನ ಕೋಷ್ಟಕಗಳನ್ನು ಸಿದ್ದಪಡಿಸಿರುವುದೂ ಕೂಡಾ ಜವಾಬ್ದಾರಿಯಲ್ಲಿ ಸೇರಿರುತ್ತದೆ.

ಹಣಕಾಸಿನ ಕೋಷ್ಟಕಗಳನ್ನು ಸಿದ್ದಪಡಿಸುವಲ್ಲಿ, ಕಂಪೆನಿಯು ಗೋಯಿಂಗ್ ಕನ್ಸರ್ನ್ ಆಗಿ ಮುಂದುವರಿಯಲು, ಕಂಪೆನಿಯ ಸಾಮರ್ಥ್ಯದ ಮೌಲ್ಯಮಾಪನ ಮಾಡಲು, ಆಡಳಿತ ವರ್ಗವು ಕಂಪೆನಿಯನ್ನು ಸಮಾಪನಗೊಳಿಸಲು ಅಥವಾ ತನ್ನ ಚಟುವಟಿಕೆಗಳನ್ನು ಸ್ಥಗಿತಗೊಳಿಸಲು ತೀರ್ಮಾನಿಸದೇ ಇದ್ದಲ್ಲಿ, ಅಥವಾ ನೈಜ ಬದಲೀ ವ್ಯವಸ್ಥೆ ಇಲ್ಲದಿದ್ದಲ್ಲಿ ಹಾಗೆ ಮಾಡಬೇಕಾಗಿದ್ದಲ್ಲಿ ಲೆಕ್ಕಪತ್ರಗಳನ್ನು ಗೋಯಿಂಗ್ ಕನ್ಸರ್ನ್ ಆಗಿ ಅನ್ವಯಿಸಲು, ಘೋಶಿಸಲು ಆಡಳಿತ ವರ್ಗವು ಜವಾಬ್ದಾರ ನಾಗಿರುತ್ತದೆ.

ಕಂಪೆನಿಯ ಹಣಕಾಸಿನ ವರದಿ ಮಾಡುವಿಕೆಯ ಪ್ರಕ್ರಿಯೆಯ ಮೇಲುಸ್ತುವಾರಿಯನ್ನು ನೋಡಿಕೊಳ್ಳುವುದೂ ಕೂಡಾ ನಿರ್ದೇಶಕರ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

ಸ್ಟಾಂಡ್‌ಅಲೋನ್ ಹಣಕಾಸಿನ ಕೋಷ್ಟಕಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ' ಜವಾಬ್ದಾರಿಗಳು

ಹಣಕಾಸಿನ ಕೋಷ್ಟಕಗಳು ಒಟ್ಟಾರೆಯಾಗಿ ಮೋಸದ ಅಥವಾ ತಪ್ಪಿನ ಕಾರಣಗಳಿಂದ ಭೌತಿಕ ತಪ್ಪು ಹೇಳಿಕೆಗಳಿಂದ ಹೊರತಾಗಿದೆಯೆಂಬ ಬಗ್ಗೆ ಸಮರ್ಪಕವಾದ ಭರವಸೆಯನ್ನು ನೀಡುವುದು ಮತ್ತು ನಮ್ಮ ಅಭಿಪ್ರಾಯವು ಸೇರಿರುವ ಲೆಕ್ಕಪರಿಶೋಧಕರ ವರದಿಯನ್ನು ಹೊರಡಿಸುವುದು ನಮ್ಮ ಧ್ಯೇಯವಾಗಿರುತ್ತದೆ. ಸಮರ್ಪಕವಾದ ಭರವಸೆಯು ಉನ್ನತ ಮಟ್ಟದ ಭರವಸೆಯಾಗಿದ್ದರೂ ಕೂಡಾ, ಎಸ್‌ಎಗಳಿಗೆ ಅನುಸಾರವಾಗಿ ನಿರ್ವಹಿಸಲಾಗಿರುವ ಲೆಕ್ಕಪರಿಶೋಧನೆಯು ಭೌತಿಕ ತಪ್ಪು ಹೇಳಿಕೆಗಳು ಇದ್ದಲ್ಲಿ ಯಾವಾಗಲೂ ಅದನ್ನು ಕಂಡುಹಿಡಿಯುತ್ತದೆ. ತಪ್ಪು ಹೇಳಿಕೆಗಳು ಮೋಸದ ಅಥವಾ ತಪ್ಪಿನಿಂದ ಬರಬಹುದಾಗಿದ್ದು, ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ ಅವುಗಳು ಸಮಂಜಸವಾಗಿ ಉಪಯೋಗಿಸುವವರ ಆರ್ಥಿಕ ತೀರ್ಮಾನಗಳ ಮೇಲೆ ಪ್ರಭಾವ ಬೀರುವ ನಿರೀಕ್ಷೆ ಇದ್ದರೆ, ಅವುಗಳನ್ನು ಭೌತಿಕವೆಂದು ಪರಿಗಣಿಸಿ ಈ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲಿ ಪರಿಗಣಿಸಲಾಗಿರುತ್ತದೆ.

ಲೆಕ್ಕಪರಿಶೋಧನೆಯ ಭಾಗವಾಗಿ ಎಸ್‌ಎಗಳಿಗೆ ಅನುಸಾರವಾಗಿ ನಾವು ಲೆಕ್ಕಪರಿಶೋಧನೆಯ ಉದ್ದಕ್ಕೂ ವೃತ್ತಿಪರ ತೀರ್ಮಾನವನ್ನು ಚಲಾಯಿಸಿರುತ್ತೇವೆ ಮತ್ತು ವೃತ್ತಿಪರ ಸಂದೇಹವನ್ನು ಕಾಪಾಡಿಕೊಂಡು ಬಂದಿರುತ್ತೇವೆ. ಅಲ್ಲದೇ ನಾವುಗಳು:

- ಮೋಸದ ಅಥವಾ ತಪ್ಪಿನ ಕಾರಣಗಳಿಂದಾಗಿ ಭೌತಿಕ ತಪ್ಪು ಹೇಳಿಕೆಗಳನ್ನು ಗುರುತಿಸಿ ಮೌಲ್ಯಮಾಪನ ಮಾಡುವುದು ಮತ್ತು ಅಂತಹ ಅಪಾಯಗಳಿಗೆ ಪ್ರತಿಕ್ರಿಯಿಸುವಂತಹ ಲೆಕ್ಕಪರಿಶೋಧನಾ ಪದ್ದತಿಗಳನ್ನು ವಿನ್ಯಾಸಗೊಳಿಸಿ ನಿರ್ವಹಿಸುವುದು, ಮತ್ತು ನಮ್ಮ ಅಭಿಪ್ರಾಯಕ್ಕೆ ಆದಾರವಾಗಿ ಸಾಕಷ್ಟು ಮತ್ತು ಸಮರ್ಪಕವಾದ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರವನ್ನು ಪಡೆದುಕೊಳ್ಳುವುದು. ಮೋಸದ ಕಾರಣದ ಫಲಿತಾಂಶವಾಗಿ ಬರಬಹುದಾದ ಭೌತಿಕ ತಪ್ಪು ಹೇಳಿಕೆಗಳು ತಪ್ಪುಗಳ ಕಾರಣದ ಫಲಿತಾಂಶವಾಗಿ ಉಂಟಾಗಬಹುದಾದ ತಪ್ಪು ಹೇಳಿಕೆಗಳಿಗಿಂತ ದೊಡ್ಡದಾಗಿದ್ದು, ಮೋಸಗಳು ಒಳಸಂಚು, ಸುಳ್ಳು ಸ್ಪಷ್ಟನೆ, ಉದ್ದೇಶಪೂರ್ವಕ ಕಡೆಗಣಿಸುವುದು ತಪ್ಪು ನಿರೂಪಣೆಗಳು ಆಂತರಿಕ ನಿಯಂತ್ರಣಗಳನ್ನು ತುಳಿದು ಹಾಕುವುದು ಒಳಗೊಂಡಿರುತ್ತದೆ.
- ಲೆಕ್ಕಪರಿಶೋಧನೆಗೆ ಸಂಗತವಾದ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ಅರ್ಥಮಾಡಿಕೊಂಡು ಸನ್ನಿವೇಶಗಳಲ್ಲಿ ಸೂಕ್ತವಾದ ಲೆಕ್ಕಪರಿಶೋಧನಾ ಪದ್ಧತಿಯನ್ನು ವಿನ್ಯಾಸಮಾಡುವುದು. ಕಾಯಿದೆಯ ಕಂಡಿಕೆ 143(3)(i)ಯಂತೆ ಕಂಪೆನಿಯು ಮತ್ತು ಅದರ ಅಂಗಸಂಸ್ಥೆಯ ಕಂಪೆನಿಗಳು ಭಾರತದಲ್ಲಿ ಸಂಘಟಿಸಲ್ಪಟ್ಟಿವೆಯೋ ಎಂಬ ಬಗ್ಗೆ ಹಾಗೂ ಅಂತಹ ಕಂಪೆನಿಗಳಲ್ಲಿ ಸಾಕಷ್ಟು ಹಣಕಾಸಿನ ಆಂತರಿಕ ನಿಯಂತ್ರಣ ವ್ಯವಸ್ಥೆಯು ಜಾರಿಯಲ್ಲಿರುತ್ತದೆ ಮತ್ತು ಅಂತಹ ನಿಯಂತ್ರಣಗಳ ನಿರ್ವಹಣಾ ಪರಿಣಾಮಕಾರಿತ್ವದ ಮೇಲೆ ನಮ್ಮ ಅಭಿಪ್ರಾಯವನ್ನು ಒತ್ತಿಹೇಳಲು ಕೂಡಾ ನಾವು ಜವಾಬ್ದಾರರಾಗಿರುತ್ತೇವೆ.
- ಉಪಯೋಗಿಸಲ್ಪಟ್ಟಿರುವ ಲೆಕಪತ್ರಗಳ ನೀತಿಯ ಸಮಂಜಸತೆಯ ಬಗ್ಗೆ ಮತ್ತು ಲೆಕ್ಕಹಾಕುವಿಕೆಯ ಅಂದಾಜುಗಳ ಸಮರ್ಪಕತೆಯ ಬಗ್ಗೆ ಮತ್ತು ಆಡಳಿತ ಮಂಡಳಿಯು ಮಾಡಿರುವ ಸಂಬಂದಪಟ್ಟ ಘೋಷಣೆಗಳ ಮೌಲ್ಯಮಾಪನ ಮಾಡುವುದು.
- ಲೆಕ್ಕಹಾಕುವಿಕೆಯ ಬಗ್ಗೆ ಆಡಳಿತ ವರ್ಗವು ಉಪಯೋಗಿಸುತ್ತಿರುವ ಗೋಯಿಂಗ್ ಕನ್‌ಸರ್ನ್ ವಿಧಾನದ ಸಮರ್ಪಕತೆಯ ಬಗ್ಗೆ ಮತ್ತು ಪಡೆಯಲಾಗಿರುವ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳ ಆಧಾರದ ಮೇಲೆ, ಯಾವುದೇ ಘಟನೆಗೆ ಸಂಬಂಧಿಸಿದಂತೆ ಭೌತಿಕ ಅನಿಶ್ಚಿತತೆ ಅಸ್ತಿತ್ವದಲ್ಲಿದೆಯೇ ಅಥವಾ ಗೋಯಿಂಗ್ ಕನ್‌ಸರ್ನ್ ವಿಧಾನದಲ್ಲಿ ಮುಂದುವರಿಯಲು ಕಂಪೆನಿಯ ಸಾಮರ್ಥ್ಯದ ಬಗ್ಗೆ ಸಾಕಷ್ಟು ಸಂದೇಹಕ್ಕೆ ಅವಕಾಶ ಮಾಡಿಕೊಡುವ ಪರಿಸ್ಥಿತಿ ಇದೆಯೇ ಎಂಬ ಬಗ್ಗೆ ತೀರ್ಮಾನ ಕೈಗೊಳ್ಳುವುದು. ಅಂತಹ ಭೌತಿಕ ಅನಿಶ್ಚಿತತೆ ಅಸ್ತಿತ್ವದಲ್ಲಿರುವ ಬಗ್ಗೆ ನಾವು ತೀರ್ಮಾನ ಕೈಗೊಂಡಲ್ಲಿ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಸಂಬಂದಪಟ್ಟ ಭಾಗದ ಘೋಷಣೆಯ ಬಗ್ಗೆ ನಾವು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ಗಮನ ಸೆಳೆಯುವ ಅಗತ್ಯತೆ ಇರುತ್ತದೆ ಅಥವಾ ಅಂತಹ ಘೋಷಣೆಗಳು ಸಾಕಾಗದಿದ್ದರೆ, ನಮ್ಮ ಅಭಿಪ್ರಾಯವನ್ನು ಬದಲಿಸಬೇಕಾಗಿರುತ್ತದೆ. ನಮ್ಮ ತೀರ್ಮಾನಗಳು ಲೆಕ್ಕಪರಿಶೋಧನೆಯ ವರದಿಯ ದಿನಾಂಕದವರೆಗೆ ನಾವು ಪಡೆದಿರುವ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಇರುತ್ತವೆ. ಆದಾಗ್ಯೂ, ಭವಿಷ್ಯದ ಘಟನೆಗಳು ಮತ್ತು ಸ್ಥಿತಿಗಳು ಕಂಪೆನಿಯ ಗೋಯಿಂಗ್ ಕನ್‌ಸರ್ನ್‌ನ್ನು ಮುಂದುವರಿಯುವಿಕೆಯನ್ನು ಸ್ಥಗಿತಗೊಳಿಸುವ ಸಾಧ್ಯತೆಗಳು ಇರಬಹುದು.
- ಹಣಕಾಸಿನ ಕೋಷ್ಟಕಗಳು, ಅದರಲ್ಲಿರುವ ವ್ಯವಹಾರಗಳು ಮತ್ತು ಘಟನೆಗಳನ್ನು ಸಮರ್ಪಕವಾಗಿ ಪ್ರಸ್ತುತಪಡಿಸುವಿಕೆಯ ಉದ್ದೇಶವನ್ನು ಸಾಧಿಸಿದೆಯೇ ಎಂಬುದನ್ನೂ ಒಳಗೊಂಡಂತೆ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಒಟ್ಟಾರೆ ಪ್ರಸ್ತುತಪಡಿಸುವಿಕೆ, ಚೌಕಟ್ಟು ಮತ್ತು ಅದರಲ್ಲಿ ಒಳಗೊಂಡಿರುವ ಅಂಶಗಳ ಮೌಲ್ಯಮಾಪನ ಮಾಡುವುದು.

ಬೇರೆ ವಿಚಾರಗಳ ಜೊತೆಗೆ, ಲೆಕ್ಕಪರಿಶೋಧನೆಯ ಯೋಜಿತ ಸಮಯ ಮತ್ತು ಸಾದ್ಯತೆ ಮತ್ತು ಲೆಕ್ಕಪರಿಶೋಧನೆಯ ಸಮಯದಲ್ಲಿ ನಾವು ಕಂಡುಹಿಡಿದಿರುವ ಆಂತರಿಕ ನಿಯಂತ್ರಣ ವ್ಯವಸ್ಥೆಯಲ್ಲಿರುವ ಕೊರತೆಗಳೂ ಸೇರಿದಂತೆ ಕಂಪೆನಿಯ ಆಡಳಿತಕ್ಕೆ ಸಂಬಂಧಿಸಿದಂತೆ ನಾವು ತಿಳಿಸಿಹೇಳುತ್ತೇವೆ.

ಆಡಳಿತಕ್ಕೆ ಸಂಬಂಧಿಸಿದಂತೆ ಹೇಳಿಕೆಗಳನ್ನು ನೀಡುವ ಸಲುವಾಗಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ನಾವು ಅನುಸರಣೆ ಮಾಡಿರುವ ನೈತಿಕ ಅಗತ್ಯತೆಗಳು, ಮತ್ತು ನಮ್ಮ ಸ್ವಾತಂತ್ರ್ಯದ ಮೇಲೆ

ಸಮರ್ಪಕವಾಗಿ ಪರಿಣಾಮ ಬೀರಬಲ್ಲಂತಹ ಎಲ್ಲಾ ಸಂಬಂಧಗಳ ಹಾಗೂ ವಿಷಯಗಳ ಬಗ್ಗೆ ಮಾಹಿತಿ ನೀಡಲು ಮತ್ತು ಅನ್ವಯಿಸಬಹುದಾದಲ್ಲಿ ಸಂಬಂದಪಟ್ಟ ಸಂರಕ್ಷಣೆಯನ್ನು ನೀಡಲು ನಾವು ಅವಕಾಶ ಮಾಡಿಕೊಟ್ಟಿರುತ್ತೇವೆ.

ಕಾನೂನು ಮತ್ತು ಶಾಸನಬದ್ದ ಅಗತ್ಯಗಳ ಬಗ್ಗೆ ವರದಿ

1. ಕಾಯಿದೆಯ ಕಂಡಿಕೆ 143ರ ಉಪಕಂಡಿಕೆ (11)ರಂತೆ ಭಾರತದ ಕೇಂದ್ರ ಸರ್ಕಾರವು ಹೊರಡಿಸಿರುವ ಕಂಪೆನೀಸ್ (ಆಡಿಟರ್ಸ್ ರಿಪೋರ್ಟ್) ಆರ್ಡರ್, 2016ರಂತೆ ("ದಿ ಆರ್ಡರ್") ಆದೇಶದ ಕಂಡಿಕೆ 3 ಮತ್ತು 4ರಲ್ಲಿ ನಿರ್ದಿಷ್ಟಪಡಿಸಿರುವಂತೆ ಅನ್ವಯಿಸಬಹುದಾದ ಮಟ್ಟಿಗೆ ಕೋಷ್ಟಕವನ್ನು ನಾವು "ಅನುಬಂಧ–A"ಯಲ್ಲಿ ನೀಡಿರುತ್ತೇವೆ.
2. ಆಡಿಟರ್ ಜನರಲ್ ಆಫ್ ಇಂಡಿಯಾ ಅವರು ಹೊರಡಿಸಿರುವ ನಿರ್ದೇಶನದಂತೆ ("ದಿ ಡೈರೆಕ್ಷನ್ಸ್") ಈ ಕಾಯಿದೆಯ ಕಂಡಿಕೆ 143 (5)ರಂತೆ ನಿರ್ದಿಷ್ಟಪಡಿಸಿರುವ ವಿಷಯಗಳಿಗೆ ಸಂಬಂಧಿಸಿದಂತೆ ನಾವು "ಅನುಬಂಧ–B" ನೀಡಿರುತ್ತೇವೆ.
3. ಕಾಯಿದೆಯ ಕಂಡಿಕೆ 143(3)ರ ಅಗತ್ಯತೆಯಂತೆ, ನಾವು ವರದಿ ಮಾಡುವುದೇನೆಂದರೆ:

a. ನಮ್ಮ ಸಂಪೂರ್ಣ ತಿಳುವಳಿಕೆ ಹಾಗೂ ನಂಬಿಕೆಯಂತೆ ಲೆಕ್ಕ ಪರಿಶೋಧನಾ ಪ್ರಕ್ರಿಯೆಗೆ ಅವಶ್ಯಕವಾದ ಎಲ್ಲಾ ಮಾಹಿತಿಗಳನ್ನು ಹಾಗೂ ವಿವರಣೆಗಳನ್ನು ಪಡೆದಿರುತ್ತೇವೆ.

b. ನಮ್ಮ ಅಭಿಪ್ರಾಯದಂತೆ, ಲೆಕ್ಕಪತ್ರ ಪುಸ್ತಕಗಳಲ್ಲಿ ಗಮನಿಸಿರುವಂತೆ ಕಂಪೆನಿಯು ನಿಯಮಾನುಸಾರ ಅಗತ್ಯವಿರುವ ಸಮರ್ಪಕ ಲೆಕ್ಕಪತ್ರ ದಾಖಲೆಗಳನ್ನು ಇಟ್ಟಿರುತ್ತದೆ.

c. ಆಸ್ತಿ ಹೊಣೆ ತಃಖ್ತೆಗಳು, ಲಾಭ ಮತ್ತು ನಷ್ಟದ ತಃಖ್ತೆಗಳು ಮತ್ತು ಈ ವರದಿಯಲ್ಲಿ ನಾವು ನಿರ್ವಹಿಸಿರುವ ನಗದು ಹರಿವು ಪಟ್ಟಿಗಳು ಲೆಕ್ಕಪತ್ರ ಪುಸ್ತಕಗಳೊಂದಿಗೆ ಹೊಂದಾಣಿಕೆಯಾಗುತ್ತದೆ.

d. ನಮ್ಮ ಅಭಿಪ್ರಾಯದಲ್ಲಿ, ಮೇಲೆ ಹೇಳಿದ ಹಣಕಾಸಿನ ಕೋಷ್ಟಕಗಳು ಕಾಯಿದೆಯ ಕಂಡಿಕೆ 133 ಹಾಗೂ ಕಂಪೆನಿಗಳ (ಲೆಕ್ಕಪತ್ರಗಳು) ನಿಯಮ, 2014ರ ನಿಯಮ 7ನ್ನೂ ಓದಿಕೊಂಡಂತೆ ಅದರಲ್ಲಿ ಉಲ್ಲೇಖಿಸಿರುವ ಲೆಕ್ಕಪತ್ರ ಮಾನಕಗಳ ಅನುಸರಣೆ ಮಾಡುತ್ತದೆ.

e. ನಿರ್ದೇಶಕರಿಂದ ಬಂದಿರುವ ಲಿಖಿತ ನಿರೂಪಣೆಯ ಆಧಾರದ ಮೇಲೆ ನಿರ್ದೇಶಕರ ಮಂಡಳಿಯು 31ನೇ ಮಾರ್ಚಿ 2020ರಲ್ಲಿ ದಾಖಲಿಸಿರುವಂತೆ, ಕಾಯಿದೆಯ ಕಂಡಿಕೆ 164(2)ರಂತೆ ದಿನಾಂಕ 31ನೇ ಮಾರ್ಚಿ 2020ರಲ್ಲಿ ಇರುವಂತೆ ನಿರ್ದೇಶಕರಾಗಿ ನೇಮಕಗೊಳ್ಳಲು ಯಾವುದೇ ನಿರ್ದೇಶಕರು ಅನರ್ಹರಾಗಿರುವುದಿಲ್ಲ.

f. ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯ ಸಮರ್ಪಕತೆಗೆ ಸಂಬಂದಿಸಿದಂತೆ ಮತ್ತು ಅಂತಹ ನಿಯಂತ್ರಣಗಳ ಕಾರ್ಯನಿರ್ವಹಣಾ ಪರಿಣಾಮದ ವಿವರಗಳನ್ನೊಳಗೊಂಡಂತೆ ಕಂಪೆನಿಯ ಹಣಕಾಸಿನ ಬಗ್ಗೆ "ಅನುಬಂಧ–ಅ"ಯಲ್ಲಿ ನಮ್ಮ ಪತ್ಯೇಕ ವರದಿಯನ್ನು ಗಮನಿಸಿ.

g. ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿರುವ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಕಂಪೆನೀಸ್ (ಆಡಿಟ್ ಮತ್ತು ಆಡಿಟರ್ಸ್') ನಿಯಮ, 2014ರ ನಿಯಮ 11ರಂತೆ, ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಗರಿಷ್ಠ ಮಾಹಿತಿಯಂತೆ ಮತ್ತು ನಮಗೆ ನೀಡಲಾಗಿರುವ ವಿವರಣೆಗಳಂತೆ ವರದಿ ಮಾಡುವುದೇನೆಂದರೆ:

i. ಕಂಪೆನಿಯ ಹಣಕಾಸಿನ ಕೋಷ್ಟಕಗಳಲ್ಲಿರುವ ಹಣಕಾಸಿನ ಸ್ಥಿತಿಯ ಮೇಲೆ ಪರಿಣಾಮ ಬೀರುವ ಬಾಕಿ ನಿಂತಿರುವ ವ್ಯಾಜ್ಯಗಳ ವಿವರಗಳನ್ನು ಹಣಕಾಸಿನ ಕೋಷ್ಟಕದ ಟಿಪ್ಪಣಿ 31ರಲ್ಲಿ ಘೋಷಿಸಲ್ಪಟ್ಟಿರುತ್ತದೆ.

ii. ಡಿರೈವೇಟಿವ್ ಒಪ್ಪಂದಗಳೂ ಸೇರಿದಂತೆ ನೈಜ ಮನ್ನೋಟದ ನಷ್ಟಗಳಿಗೆ ಕಾರಣವಾಗುವಂತಹ ಯಾವುದೇ ರೀತಿಯ ದೀರ್ಘಾವಧಿ ಒಪ್ಪಂದಗಳನ್ನೂ ಕಂಪೆನಿಯು ಮಾಡಿಕೊಂಡಿರುವುದಿಲ್ಲ.

iii. ವರದಿಯ ವರ್ಷಾವಧಿಯಲ್ಲಿ ಕಂಪೆನಿಯು ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣಾ ನಿಧಿಗೆ ಯಾವುದೇ ಮೊಬಲಗನ್ನು ವರ್ಗಾವಣೆ ಮಾಡಿರುವ ಸಂದರ್ಭ ಕಂಡುಬಂದಿಲ್ಲ.

4. ತಿದ್ದುಪಡಿ ಮಾಡಲ್ಪಟ್ಟ ಕಾಯಿದೆಯ ಕಂಡಿಕೆ 197(16) ರಂತೆ ಅಗತ್ಯವಿರುವಂತೆ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾಗಿರುವ ಇತರ ವಿಚಾರಗಳಿಗೆ ಸಂಬಂಧಿಸಿದಂತೆ:

ಕಾಯಿದೆಯ ಕಂಡಿಕೆ 2(45)ರ ಅಡಿಯಲ್ಲಿ ಸ್ಪಷ್ಟಪಡಿಸಿರುವಂತೆ ಕಂಪೆನಿಯು ಸರ್ಕಾರೀ ಕಂಪೆನಿಯಾಗಿರುವುದರಿಂದ ಕೇಂದ್ರ ಸರ್ಕಾರವು ಹೊರಡಿಸಿರುವ ದಿನಾಂಕ 5ನೇ ಜೂನ್, 2016ರ ಅಧಿಸೂಚನೆ ಸಂಖ್ಯೆ ಜಿಎಸ್ಆರ್ 463(ಇ) ಯಂತೆ ಸರ್ಕಾರೀ ಕಂಪೆನಿಗಳನ್ನು ಕಾಯಿದೆಯ ಕಂಡಿಕೆಯ ಉಪಬಂಧ 197ರ ಅನ್ವಯಿಸುವಿಕೆಯಿಂದ ವಿನಾಯತಿ ನೀಡಿದ್ದು, ಈ ಕಾರಣದಿಂದ ಆದೇಶದ ನಿಯಮಗಳಂತೆ ವರದಿ ಮಾಡುವಿಕೆಯು ಅನ್ವಯಿಸಲ್ಪಡುವುದಿಲ್ಲ.

ಎನ್ಎಸ್ವಿಎಂ & ಅಸೋಸಿಯೇಟ್ಸ್
ಚಾರ್ಟರ್ಡ್ ಎಕೌಂಟೆಂಟ್ಸ್ ಪರವಾಗಿ,
ಸಂಸ್ಥೆ ನೋಂದಣಿ ಸಂಖ್ಯೆ: 010072S
ಸಹಿ/–
(ಸಿಎ. ವಿ.ಎಸ್. ರಂಗನಾಥನ್)
ಪಾಲುದಾರ
ಸದಸ್ಯತ್ವ ನಂ. 0201872
ಯುಡಿಐಎನ್: 20201872AAAEK**6126**

ಸ್ಥಳ : ಬೆಂಗಳೂರು
ದಿನಾಂಕ: 09.12.2020

ಸ್ವತಂತ್ರ ಲೆಕ್ಕಪರಿಶೋಧಕರ ವರದಿಯಲ್ಲಿ ಉಲ್ಲೇಖಿಸಿರುವಂತೆ ದಿನಾಂಕ 31ನೇ ಮಾರ್ಚ್ 2020ರ ವರ್ಷಾಂತ್ಯಕ್ಕೆ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ (ದಿ ಕಂಪೆನಿ) ಸದಸ್ಯರಿಗೆ ನೀಡಲಾಗಿರುವ ಅನುಬಂಧ– A. ನಾವು ವರದಿ ಮಾಡುವುದೇನೆಂದರೆ:

I

a) ಕಂಪೆನಿಯು ತನ್ನ ಸ್ಥಿರ ಆಸ್ತಿಗಳ ಪರಿಮಾಣಾತ್ಮಕ ಮಾಹಿತಿಗಳು ಮತ್ತು ಅವುಗಳ ಸ್ಥಾನಗಳ ಬಗ್ಗೆಯೂ ಸೇರಿದಂತೆ ಕೆಲವೊಂದು ದಾಖಲೆಗಳನ್ನು ಇಟ್ಟುಕೊಂಡಿರುತ್ತದೆ. ಆಸ್ತಿಗಳಿಗೆ ಕೆಲವು ಪ್ರಕರಣಗಳಲ್ಲಿ ಮಾತ್ರ ಸಂಖ್ಯೆಯನ್ನು ನೀಡಲಾಗಿದ್ದು, ರಿಜಿಸ್ಟರಿನೊಂದಿಗೆ ಇನ್ನೂ ತಾಳೆ ನೋಡಬೇಕಾಗಿರುತ್ತದೆ. ಮುಂದುವರಿದಂತೆ, ಬಹುತೇಕ ಪ್ರಕರಣಗಳಲ್ಲಿ ಸ್ಥಿರ ಆಸ್ತಿಯು ಇರುವ ಸ್ಥಳವನ್ನು ತಿಳಿಸಿರುವುದಿಲ್ಲ.

b) ನಮಗೆ ನೀಡಲಾಗಿರುವ ಮಾಹಿತಿಗಳು ಮತ್ತು ವಿವರಣೆಗಳಂತೆ, ಆಸ್ತಿಗಳ ಭೌತಿಕ ತಪಾಸಣೆಯನ್ನು ತಾಳೆ ನೋಡುವ ಕೆಲಸವನ್ನು ಆಡಳಿತ ಮಂಡಳಿಯು ಇನ್ನೂ ಮಾಡಬೇಕಾಗಿರುತ್ತದೆ. ಆದಾಗ್ಯೂ, ಈ ಬಗ್ಗೆ ಸಮರ್ಪಕವಾದ ದಾಖಲೆ ಪತ್ರಗಳ ಒಪ್ಪಿಸುವಿಕೆಯ ಕೊರತೆಯಿಂದಾಗಿ ಇದರ ಬಗ್ಗೆ ಹೇಳಿಕೆ ನೀಡಲು ನಾವು ಅಸಮರ್ಥರಾಗಿದ್ದೇವೆ.

c) ಕಂಪೆನಿಯು ಕರ್ನಾಟಕ ಸರ್ಕಾರದಿಂದ ಹಾಗೂ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದಿಂದ (“ಕೆಎಸ್ಎಸ್ಐಡಿಸಿ”) ಜಮೀನನ್ನು ಗುತ್ತಿಗೆಯಾಗಿ ಪಡೆದಿರುತ್ತದೆ ಹಾಗೂ ಈ ಗುತ್ತಿಗೆಯ ಜಮೀನಿನ ಮೇಲೆ ಕಟ್ಟಡಗಳನ್ನು ಕಟ್ಟಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕಂಪೆನಿಯಲ್ಲಿ ಸೂಕ್ತವಾದ ಹಕ್ಕು ಪತ್ರಗಳು ಇವೆಯೋ ಎಂಬ ಬಗ್ಗೆ ನಿರ್ಣಯಿಸುವ ಸಲುವಾಗಿ ನಾವು ಗುತ್ತಿಗೆ ಪತ್ರ ಹಾಗೂ ಆಸ್ತಿ ತೆರಿಗೆ ಚಲನ್ಗಳನ್ನು ಪರಿಶೀಲಿಸಿರುತ್ತೇವೆ. ಉಳಿದ ಆಸ್ತಿಗಳ ಹಕ್ಕು ಪತ್ರಗಳು ಕಂಪೆನಿಯ ಹೆಸರಿನಲ್ಲಿಯೇ ಇರುತ್ತವೆ.

II. ಕಂಪೆನಿಯ ವ್ಯವಹಾರದ ರೀತಿಯು ಸೇವೆಗೆ ಒತ್ತು ನೀಡುವುದಾಗಿದ್ದು, ಅದು ಯಾವುದೇ ಸಾಮಗ್ರಿಗಳ ದಾಸ್ತಾನನ್ನೂ ಇಟ್ಟಿರುವುದಿಲ್ಲ. ಅದ್ದರಿಂದ ಕಂಡಿಕೆ 3 (2) ಕಂಪೆನಿಗೆ ಅನ್ವಯಿಸಲ್ಪಡುವುದಿಲ್ಲ.

III. ಕಂಪೆನಿಗಳ ಕಾಯಿದೆಯ ಕಂಡಿಕೆ 189ರಂತೆ ನಿರ್ವಹಿಸಲಾಗುವ ರಿಜಿಸ್ಟರಿನಲ್ಲಿ ದಾಖಲಿಸಬೇಕಾದಂತಹ ಕಂಪೆನಿಗಳು, ಸಂಸ್ಥೆಗಳು ಮತ್ತು ಇತರ ಪಾರ್ಟಿಗಳಿಗೆ ಭದ್ರತೆಯುಳ್ಳ ಅಥವಾ ಭದ್ರತೆ ಇಲ್ಲದ ಸಾಲಗಳನ್ನು ಕಂಪೆನಿಯು ಮಂಜೂರು ಮಾಡಿರುವುದಿಲ್ಲ.

IV. ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 185 ಮತ್ತು 186 ಉಪಬಂಧಗಳಂತೆ, ಕಂಪೆನಿಗಳ ಕಾಯಿದೆ, 2013ರ ಅಡಿಯ ಉಪಬಂಧಗಳಲ್ಲಿ ಕಾನೂನು ಜಾರಿಯಾಗಿರುವಂತೆ, ಕಂಪೆನಿಯು ಕಂಪೆನಿಗಳು/ಸಂಸ್ಥೆಗಳು ಮತ್ತು ಅಸೊಸಿಯೇಟ್ಸ್ಗಳಿಗೆ ಸಾಲಗಳ ರೀತಿಯಲ್ಲಿ ಸಾಲಗಳು ಮತ್ತು ಮುಂಗಡಗಳನ್ನು ಮಂಜೂರು ಮಾಡಿಲ್ಲವಾದ್ದರಿಂದ ಈ ನಿಯಮವು ಅನ್ವಯವಾಗುವುದಿಲ್ಲ. ಕಾಯಿದೆ ಕಂಡಿಕೆ 2(45)ರಂತೆ ಕಂಪೆನಿಯು ಸರ್ಕಾರೀ ಕಂಪೆನಿಯಾಗಿರುವುದರಿಂದ ಕೇಂದ್ರ ಸರ್ಕಾರವು ದಿನಾಂಕ 13ನೇ ಜೂನ್ 2017ರ ಅಧಿಸೂಚನೆ ನಂ. ಜಿಎಸ್ಆರ್ 463(ಇ)ಯಂತೆ ಸರ್ಕಾರೀ ಕಂಪೆನಿಗಳಿಗೆ, ಅವುಗಳ ಆಡಳಿತಾತ್ಮಕ ಉಸ್ತುವಾರಿ ನೋಡಿಕೊಳ್ಳುವ ಸಚಿವಾಲಯ/ಸರ್ಕಾರೀ ಇಲಾಖೆಗಳಿಂದ ಅನುಮೋದನೆ ಪಡೆಯುವುದಕ್ಕೆ ಒಳಪಟ್ಟು, ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 185ರ ಉಪಬಂಧಗಳಿಂದ ವಿನಾಯತಿಯನ್ನು ನೀಡಿದ್ದು ನಂತರದಲ್ಲಿ ಆದೇಶದ ಈ ನಿಯಮದಂತೆ ವರದಿ ಮಾಡುವುದನ್ನು ಅನ್ವಯಿಸಲ್ಪಡುವುದಿಲ್ಲ.

V. ಕಂಡಿಕೆ 73ರಿಂದ 76ರ ವರೆಗೆ ಅಥವಾ ಕಂಪೆನಿಗಳ ಕಾಯಿದೆಯ ಯಾವುದೇ ಇತರ ಸಂಬಂಧಿತ ಉಪಬಂಧಗಳಂತೆ ಮತ್ತು ಅವುಗಳ ಅನ್ವಯ ರಚಿಸಲಾಗಿರುವ ಯಾವುದೇ ನಿಯಮಗಳನ್ವಯ ಮತ್ತು ಆರ್ಬಿಐ ಹೊರಡಿಸಿರುವ ನಿರ್ದೇಶನದಂತೆ ಕಂಪೆನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನೂ ಸ್ವೀಕರಿಸಿರುವುದಿಲ್ಲ. ಆದ್ದರಿಂದ CAROದ ಪ್ಯಾರಾಗ್ರಾಫ್ 3 (5) ಕಂಪೆನಿಗೆ ಅನ್ವಯವಾಗುವುದಿಲ್ಲ.

VI. ಕಾಯಿದೆಯ ಕಂಡಿಕೆ 148(1)ರಂತೆ ಕೇಂದ್ರ ಸರ್ಕಾರವು ಕಂಪೆನಿಯ ಯಾವುದೇ ಉತ್ಪನ್ನಗಳು/ಸೇವೆಗಳಿಗೆ ವೆಚ್ಚದ ದಾಖಲೆ ಪತ್ರಗಳ ನಿರ್ವಹಣೆಯನ್ನು ಸೂಚಿಸಿಲ್ಲ. ಆದ್ದರಿಂದ CAROದ ಪ್ಯಾರಾಗ್ರಾಫ್ 3 (6) ಕಂಪೆನಿಗೆ ಅನ್ವಯವಾಗುವುದಿಲ್ಲ.

VII.

(a) ಪ್ರಾವಿಡೆಂಟ್ ಫಂಡ್, ಎಂಪ್ಲಾಯೀಸ್ ಸ್ಟೇಟ್ ಇನ್ಶೂರೆನ್ಸ್, ಆದಾಯ ತೆರಿಗೆ, ಮಾರಾಟ ತೆರಿಗೆ, ಅಬಕಾರೀ ಶುಲ್ಕ, ವ್ಯಾಟ್, ಸೆಸ್ ಇವುಗಳನ್ನು ಒಳಗೊಂಡಂತೆ ಶಾಸನಬದ್ಧ ಬಾಕಿಗಳನ್ನು ಕಂಪೆನಿಯು ವರ್ಷಾವಧಿಯಲ್ಲಿ ಎಲ್ಲಾ ಪ್ರಕರಣಗಳಲ್ಲಿಯೂ ಸಂಬಂಧಪಟ್ಟ ಪ್ರಾಧಿಕಾರಗಳಲ್ಲಿ ನಿಯತವಾಗಿ ಪಾವತಿಸಿರುತ್ತಿದೆ.

(b) ಕಂಪೆನಿಯು ಆದಾಯ ತೆರಿಗೆಯ ಬಾಕಿಯ ಬಗ್ಗೆ ತಗಾದೆ ತೆಗೆದಿದ್ದು, ಇದರ ವಿವರಗಳನ್ನು ಸ್ಟಾಂಡ್ಅಲೋನ್ ಹಣಕಾಸಿನ ಕೋಷ್ಟಕಗಳ ಸ್ಟೇಟ್ಮೆಂಟಿನ ಟಿಪ್ಪಣಿ 29ರಲ್ಲಿ ಘೋಷಿಸಲಾಗಿರುತ್ತದೆ. ಟಿಪ್ಪಣಿ 29ರಲ್ಲಿ ತಿಳಿಸಲಾಗಿರುವ ತಕರಾರಿನ ಬಾಕಿಗಳನ್ನು, ಕಂಪೆನಿಯು ಈ ಕೆಳಕಂಡ ವರ್ಷಗಳಲ್ಲಿ ತಕರಾರಿನ ಕಾರಣಗಳಿಂದ ಆದಾಯ ತೆರಿಗೆ ಹೊಣೆಗಾರಿಕೆಯನ್ನು ನಿರ್ವಹಿಸಿರುವುದಿಲ್ಲ;

ಶಾಸನದ ಹೆಸರು	ಬಾಕಿಯ ರೀತಿ	ಮೊಬಲಗು (ರೂಪಾಯಿಗಳು)	ಯಾವ ಅವಧಿಗೆ ಮೊಬಲಗು ಸಂಬಂಧಿಸಿದ್ದು	ತಕರಾರು ಬಾಕಿ ಇರುವ ವೇದಿಕೆ	ಷರಾ, ಇದ್ದಲ್ಲಿ
ಆದಾಯ–ತೆರಿಗೆ	ಪಾವತಿಸಬೇಕಾದ ತೆರಿಗೆಗಳು	78,32,690	ಹಣಕಾಸಿನ ವರ್ಷ 1994–95	ಸಿಐಟಿ(ಎ)	
ಆದಾಯ–ತೆರಿಗೆ	ಪಾವತಿಸಬೇಕಾದ ತೆರಿಗೆಗಳು	1,76,33,893	ಹಣಕಾಸಿನ ವರ್ಷ 1995–96	ಸಿಐಟಿ(ಎ)	
ಆದಾಯ–ತೆರಿಗೆ	ಪಾವತಿಸಬೇಕಾದ ತೆರಿಗೆಗಳು	3,49,30,453	ಹಣಕಾಸಿನ ವರ್ಷ 1996–97	ಸಿಐಟಿ(ಎ)	
ಆದಾಯ–ತೆರಿಗೆ	ಪಾವತಿಸಬೇಕಾದ ತೆರಿಗೆಗಳು	1,87,92,688	ಹಣಕಾಸಿನ ವರ್ಷ 2007–08	ಕರ್ನಾಟಕ ಉಚ್ಚ ನ್ಯಾಯಾಲಯ	
ಆದಾಯ–ತೆರಿಗೆ	ಪಾವತಿಸಬೇಕಾದ ತೆರಿಗೆಗಳು	1,74,77,726	ಹಣಕಾಸಿನ ವರ್ಷ 2008–09	ಕರ್ನಾಟಕ ಉಚ್ಚ ನ್ಯಾಯಾಲಯ	
ಆದಾಯ ಆದಾಯ–ತೆರಿಗೆ	ಪಾವತಿಸಬೇಕಾದ ತೆರಿಗೆಗಳು	1,28,11,415	ಹಣಕಾಸಿನ ವರ್ಷ 2009–10	ಕರ್ನಾಟಕ ಉಚ್ಚ ನ್ಯಾಯಾಲಯ/ ಸಿಐಟಿ(ಎ)	
ಆದಾಯ–ತೆರಿಗೆ	ಪಾವತಿಸಬೇಕಾದ ತೆರಿಗೆಗಳು	2,20,68,232	ಹಣಕಾಸಿನ ವರ್ಷ 2010–11	ಕರ್ನಾಟಕ ಉಚ್ಚ ನ್ಯಾಯಾಲಯ	
ಆದಾಯ–ತೆರಿಗೆ	ಪಾವತಿಸಬೇಕಾದ ತೆರಿಗೆಗಳು	10,12,082	ಹಣಕಾಸಿನ ವರ್ಷ 2011–12	ಆದಾಯ ತೆರಿಗೆ/ ಸಿಐಟಿ(ಎ)	
ಆದಾಯ–ತೆರಿಗೆ	ಪಾವತಿಸಬೇಕಾದ ತೆರಿಗೆಗಳು	3,66,52,914	ಹಣಕಾಸಿನ ವರ್ಷ 2013–14	ಸಿಐಟಿ(ಎ)	
ಆದಾಯ–ತೆರಿಗೆ	ಪಾವತಿಸಬೇಕಾದ ತೆರಿಗೆಗಳು	3,65,68,120	ಹಣಕಾಸಿನ ವರ್ಷ 2016–17	ಸಿಐಟಿ(ಎ)	

VIII. ನಮ್ಮ ಲೆಕ್ಕ ಪರಿಶೋಧನಾ ಪದ್ಧತಿಯಂತೆ, ನಮ್ಮ ಅಭಿಪ್ರಾಯದಲ್ಲಿ ಕಂಪೆನಿಯು ಸರ್ಕಾರದ ಬಾಕಿಗಳ ಮರುಪಾವತಿಯಲ್ಲಿ ಯಾವುದೇ ತಪ್ಪು ಮಾಡಿರುವುದಿಲ್ಲ.

IX. ವರ್ಷಾವಧಿಯಲ್ಲಿ ಕಂಪೆನಿಯು ಪ್ರಾರಂಭಿಕ ಸಾರ್ವಜನಿಕ ವಾಗ್ದಾನ ಪತ್ರ/ನಂತರದ ಸಾರ್ವಜನಿಕ ವಾಗ್ದಾನ ಪತ್ರ ಮತ್ತು ಅವಧಿ ಸಾಲಗಳ ಮೂಲಕ ಹಣವನ್ನು ಎತ್ತುವಳಿ ಮಾಡಿಲ್ಲ. ಆದ್ದರಿಂದ ಆದೇಶದ ಕಂಡಿಕೆ 3(9) ಅನ್ವಯವಾಗುವುದಿಲ್ಲ.

X. ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಂತೆ, ಕಂಪೆನಿಯಿಂದ ಅಥವಾ ಕಂಪೆನಿಯ ಮೇಲೆ ಅದರ ಅಧಿಕಾರಿಗಳು/ಸಿಬ್ಬಂದಿಗಳಿಂದ ಯಾವುದೇ ಭೌತಿಕ ವಂಚನೆಯ ಪ್ರಕರಣಗಳನ್ನು ಲೆಕ್ಕ ಪರಿಶೋಧನಾ ಪ್ರಕ್ರಿಯೆಯ ಅವಧಿಯಲ್ಲಿ ಗಮನಿಸಿಲ್ಲ ಅಥವಾ ವರದಿಯಾಗಿಲ್ಲ.

XI. ಕಾಯಿದೆ ಕಂಡಿಕೆ 2(45)ರಂತೆ ಕಂಪೆನಿಯು ಸರ್ಕಾರೀ ಕಂಪೆನಿಯಾಗಿರುವುದರಿಂದ ಕೇಂದ್ರ ಸರ್ಕಾರವು ದಿನಾಂಕ 5ನೇ ಜೂನ್ 2016ರ ಅಧಿಸೂಚನೆ ನಂ. ಜಿಎಸ್ಆರ್ 463(ಇ)ಯಂತೆ ಸರ್ಕಾರೀ ಕಂಪೆನಿಗಳಿಗೆ ಕಾಯಿದೆಯ ಕಂಡಿಕೆ 197ರ ಉಪಬಂಧಗಳಿಂದ ವಿನಾಯತಿಯನ್ನು ನೀಡಿದ್ದು ನಂತರದಲ್ಲಿ ಆದೇಶದ ಈ ನಿಯಮದಂತೆ ವರದಿ ಮಾಡುವುದನ್ನು ಅನ್ವಯಿಸಲ್ಪಡುವುದಿಲ್ಲ.

XII. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಂತೆ ಕಂಪೆನಿಯು ನಿಧಿ ಕಂಪೆನಿ ಆಗಿರುವುದಿಲ್ಲ. ಆದ್ದರಿಂದ ಆದೇಶದ ಕಂಡಿಕೆ 3(12) ಅನ್ವಯವಾಗುವುದಿಲ್ಲ.

XIII. ಕಂಪೆನಿಯು ಸರ್ಕಾರೀ ಕಂಪೆನಿಯಾಗಿರುವುದರಿಂದ ಕಾಯಿದೆಯ ಕಂಡಿಕೆ 2(45)ರಲ್ಲಿ ಸ್ಪಷ್ಟಪಡಿಸಿರುವಂತೆ ಹಾಗೂ ಕೇಂದ್ರ ಸರ್ಕಾರವು ಸರ್ಕಾರೀ ಕಂಪೆನಿಗಳನ್ನು ದಿನಾಂಕ 2ನೇ ಮಾರ್ಚಿ, 2020ರ ಅಧಿಸೂಚನೆ ಸಂಖ್ಯೆ ಜಿಎಸ್ಆರ್ 151(ಇ) ಯಂತೆ ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 188ರ ಉಪಬಂಧಗಳ ಅನ್ವಯಿಸುವಿಕೆಯಿಂದ ವಿನಾಯಿತಿಯನ್ನು ನೀಡಿರುವ ಕಾರಣದಿಂದ ಈ ನಿಯಮದ ಅಡಿಯಲ್ಲಿ ವರದಿ ಮಾಡುವಿಕೆಯು ಅನ್ವಯಿಸಲ್ಪಡುವುದಿಲ್ಲ.

XIV. ಕಂಪೆನಿಯು ವರ್ಷಾವಧಿಯಲ್ಲಿ ಷೇರುಗಳನ್ನು ಆದ್ಯತೆಯ ಮೇಲೆ ಹಂಚಿಕೆ, ಅಥವಾ ಷೇರುಗಳ ಖಾಸಗೀ ನಿಯೋಜನೆ ಅಥವಾ ಸಂಪೂರ್ಣವಾಗಿ ಅಥವಾ ಭಾಗಶಃ

ಪರಿವರ್ತಿಸಬಹುದಾದ ಸಾಲಪತ್ರಗಳನ್ನು ಬಿಡುಗಡೆ ಮಾಡಿಲ್ಲವಾದ್ದರಿಂದ ಆದೇಶದ ನಿಯಮ 3(14) ಕಂಪೆನಿಗೆ ಅನ್ವಯವಾಗುವುದಿಲ್ಲ.

XV. ಕಂಪೆನಿಯು ನಿರ್ದೇಶಕರೊಂದಿಗೆ/ಅವರಿಗೆ ಸಂಬಂಧಿಸಿದ ವ್ಯಕ್ತಿಗಳೊಂದಿಗೆ ನಗದು ರಹಿತ ವ್ಯವಹಾರ ನಡೆಸಿಲ್ಲ. ಆದ್ದರಿಂದ ಆದೇಶದ ಕಂಡಿಕೆ 3(15) ಅನ್ವಯವಾಗುವುದಿಲ್ಲ.

XVI. ನಮ್ಮ ಅಭಿಪ್ರಾಯದಂತೆ, ಕಂಪೆನಿಯು ಬ್ಯಾಂಕಿಂಗೇತರ ಹಣಕಾಸು ಕಂಪೆನಿಯಾಗಿ ನೋಂದಾಯಿಸಲ್ಪಟ್ಟಿರುವುದರಿಂದ ಈ ಕೆಳಕಂಡ ಪ್ರಮುಖ ವ್ಯವಹಾರ ಚಟುವಟಿಕೆಗಳಲ್ಲಿ ವರ್ಷದಿಂದ ವರ್ಷಕ್ಕೆ ಆಧಾರದ ಮಾನದಂಡವನ್ನು ಅನುಸರಣೆ ಮಾಡುವುದು ಅಗತ್ಯವಾಗಿರುತ್ತದೆ:

ಪ್ರಮುಖ ವ್ಯವಹಾರದ ಚಟುವಟಿಕೆಯು ಎರಡೂ ಮಾನದಂಡಗಳನ್ನು ತೃಪ್ತಿಪಡಿಸಿದಲ್ಲಿ ಅದನ್ನು ಹಣಕಾಸಿನ ಚಟುವಟಿಕೆಯೆಂದು ಹೇಳಲ್ಪಡುತ್ತದೆ:

1. ಕಂಪೆನಿಯು ಹೊಂದಿರುವ ಹಣಕಾಸಿನ ಆಸ್ತಿಯು ಅದರ ಒಟ್ಟು ಆಸ್ತಿಯ 50%ಗಿಂತ ಹೆಚ್ಚಿನ ಭಾಗವಾಗಿದ್ದರೆ ಮತ್ತು
2. ಹಣಕಾಸಿನ ಆಸ್ತಿಗಳಿಂದ ಆದಾಯವು ಅದರ ಒಟ್ಟು ಆದಾಯದ 50% ಗಿಂತ ಜಾಸ್ತಿಯಾಗಿದ್ದರೆ.

31ನೇ ಮಾರ್ಚಿ 2020ರಲ್ಲಿರುವಂತೆ ಪ್ರಮುಖ ವ್ಯವಹಾರ ಮಾನದಂಡಕ್ಕೆ ಸಂಬಂಧಿಸಿದಂತೆ ಕಂಪೆನಿಯು ಮೇಲ್ಕಂಡ ಎರಡೂ ಶರತ್ತುಗಳನ್ನು ತೃಪ್ತಿಪಡಿಸುವುದಿಲ್ಲವಾದ್ದರಿಂದ ಮತ್ತು ವರ್ಷಾವಧಿಯಲ್ಲಿ ಕಂಪೆನಿಯು ನೋಂದಣಿಯ ರದ್ದತಿಗಾಗಿ ಆರ್‌ಬಿಐಗೆ ಅರ್ಜಿ ಹಾಕಿಕೊಂಡಿರುತ್ತದೆ. ಆದಾಗ್ಯೂ, ಆಸ್ತಿಹೊಣೆ ತಃಖ್ತೆಯ ದಿನಾಂಕದಂದು ಕಂಪೆನಿಯು ಆ ದಿನಾಂಕದಂದು ಎನ್‌ಬಿಎಫ್‌ಸಿಯಾಗಿ ಅಧಿಕೃತ ನೋಂದಣಿ ಪತ್ರವನ್ನು ಹೊಂದಿರುವುದು ಮುಂದುವರಿದಿದೆ.

ಎನ್‌ಎಸ್‌ವಿಎಂ & ಅಸೋಸಿಯೇಟ್ಸ್
ಚಾರ್ಟರ್ಡ್ ಎಕೌಂಟೆಂಟ್ಸ್ ಪರವಾಗಿ,
ಸಂಸ್ಥೆ ನೋಂದಣಿ ಸಂಖ್ಯೆ: 010072S
ಸಹಿ/–
(ಸಿಎ. ವಿ.ಎಸ್. ರಂಗನಾಥನ್)
ಪಾಲುದಾರ
ಸದಸ್ಯತ್ವ ನಂ. 0201872
ಯುಡಿಐಎನ್: 20201872AAAEK**6126**

ಸ್ಥಳ : ಬೆಂಗಳೂರು
ದಿನಾಂಕ: 09.12.2020

ಅನುಬಂಧ –**B**

ಕ್ರಮ ಸಂಖ್ಯೆ	ಉತ್ತರಗಳು	
1	ಕಂಪೆನಿಯು ತನ್ನ ಬಹುತೇಕ ವ್ಯವಹಾರಗಳನ್ನು, ಈ ಕೆಳಗೆ ತಿಳಿಸಲಾಗಿರುವ ಕೆಲವನ್ನು ಹೊರತುಪಡಿಸಿ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಮೂಲಕ ನಿರ್ವಹಿಸುತ್ತಿದೆ. ಆದಾಗ್ಯೂ ಎಲ್ಲಾ ವ್ಯವಹಾರಗಳೂ ಅಂತಿಮವಾಗಿ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯಲ್ಲಿ ಸೇರಿಕೊಳ್ಳುವುದರಿಂದ ಅದು ಲೆಕ್ಕಪತ್ರಗಳ ಸಮಗ್ರತೆಯ ಮೇಲೆ ಪರಿಣಾಮ ಬೀರುವುದಿಲ್ಲ.	
	ವ್ಯವಹಾರದ ರೀತಿ	**ಅನುಮೋದನೆ ವಿಧಾನಗಳು**
	a) ಮೂಲಸೌಲಭ್ಯ ಅಭಿವೃದ್ಧಿ ಯೋಜನೆಗಳು	"– ಮೂಲಸೌಲಭ್ಯ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ನಿಧಿಗಳನ್ನು ಬಿಡುಗಡೆ ಮಾಡಲು ಕೋರಿಕೆಯ ಪ್ರಕ್ರಿಯೆಯು ವ್ಯವಸ್ಥಾಪಕ ನಿರ್ದೇಶಕರ ಒಪ್ಪಿಗೆಯು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಹೊರಗೆ ನಡೆಯುತ್ತದೆ. – ವರ್ಷಾವಧಿಯಲ್ಲಿ ಕರ್ನಾಟಕ ಸರ್ಕಾರಕ್ಕೆ ಪಾವತಿ ಮಾಡಬೇಕಾಗಿರುವ ಬಡ್ಡಿ ಆದಾಯದ ಲೆಕ್ಕಾಚಾರವನ್ನು ವೈಟೆಡ್ ಎವರೇಜ್ ರೇಟ್ ಆಫ್ ಇಂಟರೆಸ್ಟ್ ಪದ್ಧತಿಯನ್ನು ಅಳವಡಿಸಿಕೊಂಡು ಹಸ್ತಚಾಲಿತವಾಗಿ ಮಾಡಲಾಗುತ್ತಿದೆ."**
	b) ವೇತನ ಪಡೆಯುವವರ ಪಟ್ಟಿ	– ಹಾಜರಿ ರಿಜಿಸ್ಟರಿನ ನಿರ್ವಹಣೆ, ಶಾಸನಬದ್ಧ ಕಳೆಯುವಿಕೆಯ ಲೆಕ್ಕಾಚಾರ ಮತ್ತು ನೌಕರರಿಂದ ತೆರಿಗೆ ಘೋಷಣಾಪತ್ರಗಳನ್ನು ಸಂಗ್ರಹಿಸುವಿಕೆ ಮುಂತಾದ ವೇತನ ಪಟ್ಟಿಗೆ ಸಂಬಂಧಿಸಿದಂತೆ ಎಲ್ಲಾ ಪ್ರಕ್ರಿಯೆಗಳನ್ನೂ ಕಂಪೆನಿಯು ಶಾರೀರಿಕವಾಗಿಯೇ ನಿರ್ವಹಿಸಲಾಗಿದೆ.
	c) ಸಾಲಗಳು ಮತ್ತು ಮುಂಗಡಗಳು	**" – ಸಾಲಗಳ ಒಂದೇ ಬಾರಿ ಇತ್ಯರ್ಥ ಯೋಜನೆಗೆ ಸಂಬಂಧಿಸಿದಂತೆ ಇತ್ಯರ್ಥ ಮೊಬಲಗಿನ ಲೆಕ್ಕಾಚಾರ, ಪಾವತಿಸಬೇಕಾಗಿರುವ ಬಡ್ಡಿ, ಯೋಜನೆಗೆ ಒಪ್ಪಿಗೆಯನ್ನು ಪಡೆಯುವಿಕೆ ಮತ್ತು ಒಟಿಎಸ್ ಮೊಬಲಗನ್ನು ಬಡ್ಡಿ ಆದಾಯದ ಕಡೆಗೆ ಸ್ವಾಧೀನಪಡಿಸಿಕೊಳ್ಳುವಿಕೆ ಮುಂತಾದ ಎಲ್ಲಾ ಚಟುವಟಿಕೆಗಳನ್ನೂ ಕಂಪೆನಿಯು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಹೊರಗೆ ನಿರ್ವಹಿಸುತ್ತಿದೆ. ಆದಾಗ್ಯೂ, ಒಟಿಎಸ್ ಮೊಬಲಗಿನ ಸ್ವೀಕೃತಿ, ಬಡ್ಡಿ ಆದಾಯವನ್ನು ಗುರುತಿಸುವಿಕೆಗಾಗಿ ಕಂಪೆನಿಯು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಉಪಯೋಗಿಸುತ್ತಿದೆ.** – ನೌಕರರ ಸಾಲಗಳು/ಮುಂಗಡಗಳಿಗೆ ಸಂಬಂಧಿಸಿದ ಸಾಲಗಳು/ಮುಂಗಡಗಳಿಗೆ ಅನುಮೋದನೆ, ಕಂತಿನ ಮೊಬಲಗಿನ ಲೆಕ್ಕಾಚಾರ, ನೌಕರರಿಂದ ವಸೂಲಿ ಮಾಡಬೇಕಾಗಿರುವ ಬಡ್ಡಿ ಮುಂತಾದ ಎಲ್ಲಾ ಚಟುವಟಿಕೆಗಳನ್ನೂ ಕಂಪೆನಿಯು ಮಾಹಿತಿ ತಂತ್ರಜ್ಞಾನದ ಹೊರಗೆ ನಿರ್ವಹಿಸುತ್ತದೆ. ಆದಾಗ್ಯೂ, ನೌಕರರ ಸಾಲಗಳು/ಮುಂಗಡಗಳಿಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನೂ ಕೊನೆಯಲ್ಲಿ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯಲ್ಲಿ ದಾಖಲಿಸಲಾಗುವುದು.
	d) ವರಮಾನ ವೆಚ್ಚಗಳು	– ರೆವೆನ್ಯೂ ವೆಚ್ಚಗಳಿಗೆ ಸಂಬಂಧಿಸಿದಂತೆ ಅನುಮೋದನೆ ಪಡೆಯುವ ಎಲ್ಲಾ ಪ್ರಕ್ರಿಯೆಗಳನ್ನೂ ಕಂಪೆನಿಯು ಮಾಹಿತಿ ತಂತ್ರಜ್ಞಾನದ ಹೊರಗೇ ನಿರ್ವಹಿಸುತ್ತಿದೆ.

2	"ಕಂಪೆನಿಯು ತನ್ನ ಸ್ವಂತ ಉದ್ದೇಶಕ್ಕಾಗಿ ಯಾವುದೇ ಸಾಲವನ್ನೂ ಪಡೆದಿರುವುದಿಲ್ಲ. A. ಕಂಪೆನಿಯ ಹಣಕಾಸಿನ ಕೋಷ್ಟಕಗಳಲ್ಲಿ ನಮೂದಿಸಲಾಗಿರುವ ಸಾಲಗಳು ಕರ್ನಾಟಕ ಸರ್ಕಾರದಿಂದ ಈ ಕೆಳಕಂಡ ಉದ್ದೇಶಗಳಿಗಾಗಿ ಬಿಡುಗಡೆ ಮಾಡಿರುವ ಮೊಬಲಗು ಆಗಿರುತ್ತದೆ. 1. ಮೆ. ಪಾರ್ಟಿಕಲ್ ಬೋರ್ಡ್ ಮ್ಯಾನ್ಯುಫ್ಯಾಕ್ಚರಿಂಗ್ ಕೋಆಪರೇಟಿವ್ ಸೊಸೈಟಿ ಲಿಮಿಟೆಡ್ ಇವರ ಪುನರ್ವಸತಿ ಮತ್ತು ದುಡಿಮೆಯ ಬಂಡವಾಳದ ಅಗತ್ಯತೆಯನ್ನು ಪೂರೈಸಲು ವಿತರಿಸುವ ಸಲುವಾಗಿ ರೂ.15,00,000/–, 2. ಕೆಎಸ್ಐಐಡಿಸಿಯು ಅಫೀಶಿಯಲ್ ಲಿಕ್ವಿಡೇಟರ್ ಅವರಿಗೆ ಬೇಡಿಕೆ ಸಲ್ಲಿಸಿ ವಸೂಲಿ ಮಾಡಿ ಕರ್ನಾಟಕ ಸರ್ಕಾರಕ್ಕೆ ಮರುಪಾವತಿ ಮಾಡಬೇಕೆನ್ನುವ ಶರತ್ತಿನೊಂದಿಗೆ ಮೆ. ಗಂಗಾವತಿ ಶುಗರ್ಸ್ ಲಿಮಿಟೆಡ್ ಇದರ ನೌಕರರ ಬಾಕಿಗಳನ್ನು ಉಪ ಆಯುಕ್ತರು, ಕೊಪ್ಪಳ ಅವರ ಮೂಲಕ ಪಾವತಿಮಾಡಲು ರೂ.3,49,67,555/–. ಮೆ. ಪಾರ್ಟಿಕಲ್ ಬೋರ್ಡ್ ಮ್ಯಾನ್ಯುಫ್ಯಾಕ್ಚರಿಂಗ್ ಕೋಆಪರೇಟಿವ್ ಸೊಸೈಟಿ ಲಿಮಿಟೆಡ್ ಮತ್ತು ಮೆ. ಗಂಗಾವತಿ ಶುಗರ್ಸ್ ಲಿಮಿಟೆಡ್ ಅವರಿಂದ ವಸೂಲಾದ ಕೂಡಲೇ ಮೇಲ್ಕಂಡ ಸಾಲವನ್ನು ಕರ್ನಾಟಕ ಸರ್ಕಾರಕ್ಕೆ ಮರುಪಾವತಿ ಮಾಡತಕ್ಕದ್ದಾಗಿರುತ್ತದೆ. B. ಅಲ್ಲದೇ, ಅರ್ಹ ಕಂಪೆನಿಗಳಿಗೆ ಬೀಜಧನ ಸಹಾಯವನ್ನು ಒದಗಿಸುವ ಸಲುವಾಗಿ ಕಂಪೆನಿಯು ಐಡಿಬಿಐನಿಂದ ಸಾಲವನ್ನು ಪಡೆದುಕೊಂಡಿರುತ್ತದೆ. ಅದರಂತೆ, ಕಂಪೆನಿಯು ಸಾಲದ ಮೊಬಲಗನ್ನು ಹಲವಾರು ಕಂಪೆನಿಗಳಿಗೆ ವಿತರಿಸಿರುತ್ತದೆ ಮತ್ತು ಮೇಲ್ಕಂಡ ಕಂಪೆನಿಗಳಿಂದ ವಸೂಲಾದ ನಂತರ ಐಡಿಬಿಐಗೆ ವಾಪಾಸು ಮಾಡಬೇಕಾಗಿರುತ್ತದೆ.
3	"ಕಂಪೆನಿಯು ವಿವಿಧ ಮೂಲಸೌಲಭ್ಯ ಯೋಜನೆಗಾಗಿ ಕರ್ನಾಟಕ ಸರ್ಕಾರದಿಂದ ನಿಧಿಗಳನ್ನು ಸ್ವೀಕರಿಸುತ್ತಿದ್ದು, ಇದನ್ನು ತನ್ನ ಲೆಕ್ಕದ ಪುಸ್ತಕಗಳಲ್ಲಿ ಹೊಣೆಗಾರಿಕೆಗಳು ಎಂದು ತೋರಿಸುತ್ತಿದೆ. ಸಂಬಂದಪಟ್ಟ ಯೋಜನೆಗಳಿಂದ ಬೇಡಿಕೆಯನ್ನು ಸ್ವೀಕರಿಸಿದ ಕೂಡಲೇ ಕಂಪೆನಿಯು ವಿವಿಧ ಯೋಜನೆಗಳಿಗೆ ನಿಧಿಗಳನ್ನು ವಿತರಿಸುತ್ತಿದೆ. ಉಪಯೋಗಿಸದೇ ಇರುವ ನಿಧಿಗಳನ್ನು ಕಂಪೆನಿಯು ನಿಶ್ಚಿತ ಠೇವಣಿಗಳಲ್ಲಿ ಹೂಡುತ್ತಿದ್ದು, ಇದರ ಮೇಲೆ ಕೂಡಿಬಂದಿರುವ ಬಡ್ಡಿಯನ್ನು ದಿನಾಂಕ 18/01/2016ರ ಸರ್ಕಾರೀ ಆದೇಶದಂತೆ ಇದರ ಮೇಲೆ ಕೂಡಿಬಂದಿರುವ ಬಡ್ಡಿಯನ್ನು ಕರ್ನಾಟಕ ಸರ್ಕಾರಕ್ಕೆ ಮರುಪಾವತಿಸುತ್ತಿದೆ. ಆದಾಗ್ಯೂ, ಈ ಕೆಳಕಂಡ ಯೋಜನೆಗಳಾದ ಸಿಟಿ ಗ್ಯಾಸ್ ಲೈನ್ ಪ್ರಾಜೆಕ್ಟ್, ಕಿರು ವಿಮಾನ ನಿಲ್ದಾಣ/ಸಮುದ್ರ ಬಂದರು, ಶಿವಮೊಗ್ಗ ಮಾಸ್ಟರ್ ಪ್ಲಾನ್, ತದಡಿ ಬಂದರು, ಪ್ರಿ ಫೀಸಿಬಿಲಿಟಿ ಸ್ಟಡೀಸ್, ಬಿಐಎಪಿ ಸೆಲ್/ವಿಮಾನಯಾನ ಅಭಿವೃದ್ಧಿ ಸೆಲ್, ಕೆಪ್ಯಾಸಿಟಿ ಬಿಲ್ಡಿಂಗ್ ಪಿಪಿಪಿಗಳಲ್ಲಿ ಕಂಪೆನಿಯು ಬಡ್ಡಿಯನ್ನು ಸರ್ಕಾರಕ್ಕೆ ವಾಪಾಸು ಮಾಡಿರುವುದಿಲ್ಲ ಮತ್ತು ಅದನ್ನು ತನ್ನ ಲೆಕ್ಕದ ಪುಸ್ತಕಗಳಲ್ಲಿ ಲಾಭಗಳು ಎಂದು ತೋರಿಸಿರುತ್ತದೆ. ಅಲ್ಲದೇ, ಕಂಪೆನಿಯು ನಿಧಿಗಳನ್ನು ಸ್ವೀಕರಿಸಿದ ನಂತರ ಹಾಗೂ ಸಂಬಂದಪಟ್ಟ ಯೋಜನೆಗಳಿಗೆ ನಿಧಿಗಳನ್ನು ವಿತರಿಸಿದಾಗ ಪ್ರತ್ಯೇಕ ರಿಜಿಸ್ಟರನ್ನು ನಿರ್ವಹಿಸುತ್ತಿದೆ. ಸರ್ಕಾರದಿಂದ ನಿಧಿಗಳ ಸ್ವೀಕೃತಿಗೆ ಮತ್ತು ತನ್ನ ಉಸ್ತುವಾರಿಯಲ್ಲಿರುವ ಪ್ರತೀ ಯೋಜನೆಗೆ ವಿತರಣೆ ಮಾಡಿರುವ ಬಗ್ಗೆ ಕಂಪೆನಿಯು ಪ್ರತ್ಯೇಕವಾದ ಬ್ಯಾಂಕ್ ಖಾತೆಯನ್ನು ನಿರ್ವಹಿಸುತ್ತಿಲ್ಲ.
ಹೆಚ್ಚುವರಿ ಕಂಪೆನಿ ನಿಗಧಿಪಡಿಸಿರುವ ನಿರ್ದೇಶನಗಳು:	
(a)	
	ಕಂಪೆನಿಯು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದಿಂದ ಎನ್‌ಬಿಎಫ್‌ಸಿ ನೋಂದಣಿ ಪ್ರಮಾಣಪತ್ರವನ್ನು ಪಡೆದಿರುತ್ತದೆ. ಆರ್‌ಬಿಐ ನಿರ್ದೇಶನಗಳಂತೆ, ಎನ್‌ಬಿಎಫ್‌ಸಿಯಾಗಿ ಅರ್ಹತೆ ಪಡೆಯಲು ಕಂಪೆನಿಯು ತನ್ನ ಒಟ್ಟು ಆಸ್ತಿಗಳ 50%ಗಿಂತ ಜಾಸ್ತಿ ಹಣಕಾಸಿನ ಆಸ್ತಿಗಳನ್ನು ಹೊಂದಿರತಕ್ಕದ್ದು ಮತ್ತು ಹಣಕಾಸಿನ ಆಸ್ತಿಗಳಿಂದ ಆದಾಯವು ಅದರ ಒಟ್ಟು ಆದಾಯದ 50%ಗಿಂತ ಜಾಸ್ತಿ ಇರತಕ್ಕದ್ದು. ಆದರೆ, ಕಂಪೆನಿಯು ಮೇಲ್ಕಂಡ ಶರತ್ತುಗಳನ್ನು ಪೂರೈಸಿರುವುದಿಲ್ಲವಾದ್ದರಿಂದ ವರ್ಷದ ಅವಧಿಯಲ್ಲಿ ಎನ್‌ಬಿಎಫ್‌ಸಿ ನೋಂದಣಿಯನ್ನು ರದ್ದುಮಾಡಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ಅರ್ಜಿಯನ್ನು ಸಲ್ಲಿಸಿದ್ದು, ಇದಕ್ಕೆ ಇನ್ನೂ ಅನುಮೋದನೆ ದೊರೆಯಬೇಕಾಗಿರುತ್ತದೆ.
	ಹಣಕಾಸಿನ ವರ್ಷ 2019–2020ರಲ್ಲಿ ಕಂಪನಿಯು ಯಾವುದೇ ಹೊಸ ಸಾಲಗಳನ್ನೂ ಮಂಜೂರು ಮಾಡಿರುವುದಿಲ್ಲ. ಆದಾಗ್ಯೂ, ಈ ಹಿಂದೆ ಮಂಜೂರು ಮಾಡಲಾಗಿರುವ ಎಲ್ಲಾ ಸಾಲಗಳಿಗೂ ಉಪಬಂಧವನ್ನು ಸೃಷ್ಟಿಸಿದೆ ಹಾಗೂ ಎನ್‌ಪಿಎ ಎಂದು ಪರಿಗಣಿಸಿದೆ. ನಂತರದಲ್ಲಿ, ಸಾಲದ ವಸೂಲಾತಿಯ ನಂತರ ಉಪಬಂಧಗಳನ್ನು ಹಿಂಪಡೆಯಲಾಗುವುದು.

	ಆರ್‌ಬಿಐನ ನಿರ್ದೇಶನಗಳಂತೆ, ಪ್ರತೀ ಎನ್‌ಬಿಎಫ್‌ಸಿಯು ತನ್ನ ಬಂಡವಾಳದ ಕನಿಷ್ಟ 15%ರಷ್ಟು ರಿಸ್ಕ್ ವೈಟೆಡ್ ಅಸೆಟ್ ರೇಷಿಯೋ (ಸಿಆರ್‌ಎಆರ್) ಹೊಂದಿರತಕ್ಕದ್ದು. ಕೆಎಸ್‌ಐಐಡಿಸಿಯು ಬಂಡವಾಳಕ್ಕೆ ಅಪಾಯದ ಆಸ್ತಿ ಅನುಪಾತವನ್ನು 89%ಗೆ ಕಾಪಾಡಿಕೊಂಡಿರುತ್ತದೆ. ಆದರೆ, ಈ ಪ್ರಸ್ತುತ ಪ್ರಕರಣದಲ್ಲಿ ಕಂಪೆನಿಯು ಸಾಲ ನೀಡುವಿಕೆ ವ್ಯವಹಾರವನ್ನು ನಡೆಸುತ್ತಿಲ್ಲವಾದ್ದರಿಂದ ಹಾಗೂ ಎನ್‌ಬಿಎಫ್‌ಸಿ ಪ್ರಮಾಣ ಪತ್ರದ ರದ್ದತಿಗೆ ಆರ್‌ಬಿಐಗೆ ಅರ್ಜಿ ಸಲ್ಲಿಸಿರುವುದರಿಂದ ಈ ಅನುಪಾತಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರುವುದಿಲ್ಲ.
(b)	"ಹಣಕಾಸಿನ ವರ್ಷ 2019–20ರಲ್ಲಿ ಕಂಪೆನಿಯು ಯಾವುದೇ ಹೊಸ ಸಾಲಗಳನ್ನೂ ಮಂಜೂರು ಮಾಡಿರುವುದಿಲ್ಲ. ಸದ್ಯದಲ್ಲಿ ಕಂಪೆನಿಯು ಹಿಂದಿನ ವರ್ಷಗಳಲ್ಲಿ ಮಂಜೂರು ಮಾಡಿರುವ ಸಾಲದ ವಸೂಲಾತಿಯ ಪ್ರಕ್ರಿಯೆಯಲ್ಲಿರುತ್ತದೆ. ಬೀಗಮುದ್ರೆ ಮಾಡಲಾಗಿರುವ ಘಟಕಗಳನ್ನು ಸಮಯದ ಅವಧಿಯನ್ನು ನಿಗಧಿಪಡಿಸಿ ವಿಲೇವಾರಿ ಮಾಡಬೇಕೆನ್ನುವ ನಿರ್ದಿಷ್ಟ ಮಾರ್ಗಸೂಚಿಯನ್ನು ಕಂಪೆನಿಗೆ ನಿಗಧಿಪಡಿಸಿರುವುದಿಲ್ಲವಾದ್ದರಿಂದ ಬೀಗಮುದ್ರೆ ಮಾಡಲಾಗಿರುವ ಘಟಕಗಳ ವಿಲೇವಾರಿಯಲ್ಲಿ ಅನಗತ್ಯವಾದ ವಿಳಂಭವಾಗಿರುವ ಯಾವುದೇ ಪ್ರಕರಣಗಳನ್ನು ಗುರುತಿಸಲು ನಮಗೆ ಸಾಧ್ಯವಾಗಿರುವುದಿಲ್ಲ. ಚಾಲ್ತಿ ವರ್ಷದಲ್ಲಿ ಕಂಪೆನಿಯು ಮೆ. ಕಲಬುರ್ಗಿ ಗ್ರಾನೈಟ್ಸ್ ಘಟಕವನ್ನು ಬೀಗಮುದ್ರೆಗೆ ಒಳಪಡಿಸಿದ್ದು, ಇದನ್ನು 31ನೇ ಮಾರ್ಚಿ 2020ರಲ್ಲಿ ಇರುವಂತೆ ವಿಲೇವಾರಿ ಮಾಡಿರುವುದಿಲ್ಲ."
(c)	ಬಾಕಿಗಳ ಇತ್ಯರ್ಥಕ್ಕಾಗಿ ಕಂಪೆನಿಯಲ್ಲಿ ಹೊಸ ಯೋಜನೆಯನ್ನು ಜಾರಿಗೊಳಿಸಲು ಯಾವುದೇ ನಿರ್ದಿಷ್ಟ ಮಾರ್ಗಸೂಚಿಗಳೂ ಇರುವುದಿಲ್ಲ. ಚಾಲ್ತಿ ವರ್ಷದಲ್ಲಿ ಕಂಪೆನಿಯು ಮಂಡಳಿಯ ಅನುಮೋದನೆಯ ಮೂಲಕ ಹೊಸ ಒಟಿಎಸ್ ಯೋಜನೆಯನ್ನು ಪರಿಚಯಿಸಿದ್ದು, ಇದನ್ನು ಗೌರವಾನ್ವಿತ ರಾಜ್ಯಪಾಲರ ಒಪ್ಪಿಗೆಯ ನಂತರ 23ನೇ ಮಾರ್ಚಿ 2020ರಿಂದ ಜಾರಿಗೆ ತರಲಾಗಿದೆ.
(d)	" ವರ್ಷಾವಧಿಯಲಿ ಕಂಪೆನಿಯು ಯಾವುದೇ ಸಾಲ ಅಥವಾ ದೇಣಿಗೆ/ಸಹಾಯಧನವನ್ನು ಪಡೆದಿರುವುದಿಲ್ಲ. ಕಂಪೆನಿಯ ಹಣಕಾಸಿನ ಕೋಷ್ಟಕಗಳಲ್ಲಿ ತಿಳಿಸಲಾಗಿರುವ ಈಗ ಅಸ್ತಿತ್ವದಲ್ಲಿರುವ ಸಾಲಗಳನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಕರ್ನಾಟಕ ಸರ್ಕಾರದಿಂದ ಪಡೆಯಲಾಗಿದ್ದು, ನಿಧಿಗಳು ಮಾರ್ಗಪಲ್ಲಟವಾದ ಯಾವುದೇ ಉದಾಹರಣೆಗಳೂ ಇರುವುದಿಲ್ಲ. 1. ಮೆ. ಪಾರ್ಟಿಕಲ್ ಬೋರ್ಡ್ ಮ್ಯಾನ್ಯುಫ್ಯಾಕ್ಚರಿಂಗ್ ಕೋಆಪರೇಟಿವ್ ಸೊಸೈಟಿ ಲಿಮಿಟೆಡ್ ಇವರ ಪುನರ್ವಸತಿ ಮತ್ತು ದುಡಿಮೆಯ ಬಂಡವಾಳದ ಅಗತ್ಯತೆಯನ್ನು ಪೂರೈಸಲು ವಿತರಿಸುವ ಸಲುವಾಗಿ ರೂ. 15,00,000/ 2. ಕೆಎಸ್‌ಐಐಡಿಸಿಯು ಅಫೀಶಿಯಲ್ ಲಿಕ್ವಿಡೇಟರ್ ಅವರಿಗೆ ಬೇಡಿಕೆ ಸಲ್ಲಿಸಿ ವಸೂಲಿ ಮಾಡಿ ಕರ್ನಾಟಕ ಸರ್ಕಾರಕ್ಕೆ ಮರುಪಾವತಿ ಮಾಡಬೇಕೆನ್ನುವ ಶರತ್ತಿನೊಂದಿಗೆ ಮೆ. ಗಂಗಾವತಿ ಶುಗರ್ಸ್ ಲಿಮಿಟೆಡ್ ಇದರ ನೌಕರರ ಬಾಕಿಗಳನ್ನು ಉಪ ಆಯುಕ್ತರು, ಕೊಪ್ಪಳ ಅವರ ಮೂಲಕ ಪಾವತಿಮಾಡಲು ರೂ. 3,49,67,555/–. ಸಂಬಂದಪಟ್ಟ ಪಾರ್ಟಿಗಳಿಂದ ವಸೂಲಾದ ಕೂಡಲೇ ಮೇಲ್ಕಂಡ ಸಾಲವನ್ನು ಕರ್ನಾಟಕ ಸರ್ಕಾರಕ್ಕೆ ಮರುಪಾವತಿ ಮಾಡತಕ್ಕದ್ದಾಗಿರುತ್ತದೆ. ನಂತರದಲ್ಲಿ, ಅಲ್ಲದೇ, ಅರ್ಹ ಕಂಪೆನಿಗಳಿಗೆ ಬೀಜಧನ ಸಹಾಯವನ್ನು ಒದಗಿಸುವ ಸಲುವಾಗಿ ಕಂಪೆನಿಯು ಐಡಿಬಿಐನಿಂದ ಸಾಲವನ್ನು ಪಡೆದುಕೊಂಡಿರುತ್ತದೆ. ಅದರಂತೆ, ಕಂಪೆನಿಯು ಸಾಲದ ಮೊಬಲಗನ್ನು ಹಲವಾರು ಕಂಪೆನಿಗಳಿಗೆ ವಿತರಿಸಿರುತ್ತದೆ ಮತ್ತು ಮೇಲ್ಕಂಡ ಕಂಪೆನಿಗಳಿಂದ ವಸೂಲಾದ ನಂತರ ಐಡಿಬಿಐಗೆ ವಾಪಾಸು ಮಾಡಬೇಕಾಗಿರುತ್ತದೆ. "
(e)	ವರ್ಷಾವಧಿಯಲ್ಲಿ ಕಂಪೆನಿಯು ಯಾವುದೇ ಪ್ರಮುಖ ಬಂಡವಾಳ ವೆಚ್ಚಗಳನ್ನು ಮಾಡಿರುವುದಿಲ್ಲ. ಆದ್ದರಿಂದ ವರ್ಷಾವಧಿಯಲ್ಲಿ ಕೋಸ್ಟ್ ಬೆನಫಿಟ್ ಎನಾಲಿಸಿಸ್‌ನ್ನು ಕೈಗೊಂಡಿರುವುದಿಲ್ಲ.

ಹಣಕಾಸಿನ ವರದಿ ಮಾಡುವಿಕೆಯ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ವರದಿ

ಪರಿಶೋಧಕರ' ವರದಿಗೆ ಅನುಬಂಧ – ಸಿ

ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ ಸ್ಟಾಂಡ್‌ಅಲೋನ್ ಹಣಕಾಸಿನ ಕೋಷ್ಟಕದ ಮೇಲೆ ಇದೇ ದಿನಾಂಕದ ಸ್ವತಂತ್ರ ಲೆಕ್ಕಪರಿಶೋಧಕರ ಪರಿಷ್ಕೃತ ವರದಿಗೆ ಅನುಬಂಧ– ಸಿ

ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 143ರ ಉಪ ಕಂಡಿಕೆ 3ರ ಕಲಮು (i)ರ ಅಡಿಯಲ್ಲಿ ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲೆ ವರದಿ

31ನೇ ಮಾರ್ಚಿ 2020ರಲ್ಲಿ ಇರುವಂತೆ ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ ಹಣಕಾಸಿನ ಕೋಷ್ಟಕಗಳ ಲೆಕ್ಕಪರಿಶೋಧನೆಯ ಜೊತೆಗೆ ಆ ದಿನಕ್ಕೆ ಕೊನೆಯಾಗುವ ದಿನಾಂಕದಲ್ಲಿ ಕಂಪೆನಿಯ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳ ಸಂಯೋಗದ ಲೆಕ್ಕಪರಿಶೋಧನೆಯನ್ನು ನಾವು ನಡೆಸಿರುತ್ತೇವೆ.

ಆಂತರಿಕ ಹಣಕಾಸಿನ ನಿಯಂತ್ರಣಗಳಿಗೆ ಆಡಳಿತ ವರ್ಗದ' ಜವಾಬ್ದಾರಿ

ಕಂಪೆನಿಯ ಆಡಳಿತ ಮಂಡಳಿಯು ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣ ವರದಿಗಳಿಗೆ ಸಂಬಂಧಿಸಿದಂತೆ ಇನ್‌ಸ್ಟಿಟ್ಯೂಟ್ ಆಫ್ ಚಾಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರು ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿಯಂತೆ ಕಂಪೆನಿಯ ಹಣಕಾಸಿನ ವರದಿ ಮಾಡುವಿಕೆ ನೀತಿ, ದಿ ಗೈಡೆನ್ಸ್ ನೋಟ್ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯನ್ನು ಸ್ಥಾಪಿಸಿ ಕಂಪೆನಿಯ ಆಂತರಿಕ ಹಣಕಾಸು ನಿಯಂತ್ರಣವನ್ನು ಕಾಪಾಡಿಕೊಂಡು ಬರುವುದು ಕಂಪೆನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ. ಕಂಪೆನಿಗಳ ಕಾಯಿದೆ, 2013ರ ಅಡಿಯಲ್ಲಿ ಅಗತ್ಯವಾಗಿರುವಂತೆ ಕಂಪೆನಿಯ ಕಾರ್ಯನೀತಿಯನ್ನು ವಿನ್ಯಾಸ ಮಾಡಿ ಪಾಲಿಸಿಕೊಂಡು ಹೋಗುವುದು, ಆಸ್ತಿಗಳನ್ನು ಕಾಪಾಡುವುದು, ವಂಚನೆಗಳು ಮತ್ತು ಲೋಪಗಳನ್ನು ತಡೆಗಟ್ಟುವುದು ಮತ್ತು ಕಂಡುಹಿಡಿಯುವುದು, ಲೆಕ್ಕಪತ್ರಗಳ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ ಮತ್ತು ಕಂಪೆನಿಗಳ ಕಾಯಿದೆಯ ಪ್ರಕಾರ ಕೇಳಿರುವಂತೆ ಕ್ಲಪ್ತ ಸಮಯದಲ್ಲಿ ನಂಬಲರ್ಹ ಹಣಕಾಸಿನ ಕೋಷ್ಟಕಗಳನ್ನು ಸಿದ್ಧಪಡಿಸುವುದು ಈ ಜವಾಬ್ದಾರಿಗಳಲ್ಲಿ ಸೇರಿರುತ್ತದೆ.

ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಕಂಪೆನಿಯ ಹಣಕಾಸಿನ ಪಟ್ಟಿಯ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಇನ್‌ಸ್ಟಿಟ್ಯೂಟ್ ಆಫ್ ಚಾಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರು ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿ "ಆಡಿಟ್ ಆಫ್ ಇಂಟರ್ನಲ್ ಫೈನಾನ್ಶಿಯಲ್ ಕಂಟ್ರೋಲ್ಸ್ ಓವರ್ ಫೈನಾನ್ಶಿಯಲ್ ರಿಪೋರ್ಟಿಂಗ್ ("ದಿ ಗೈಡೆನ್ಸ್ ನೋಟ್") ಮತ್ತು ಐಸಿಎಐ ಅವರು ಹೊರಡಿಸಿರುವ ಲೆಕ್ಕಪರಿಶೋಧನಾ ಮಾನಕಗಳು ಎರಡನ್ನೂ ಸೇರಿಸಿ ಮತ್ತು ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 143(10)ನ್ನು ಆಂತರಿಕ ಹಣಕಾಸಿನ ನಿಯಂತ್ರಣ ಲೆಕ್ಕಪರಿಶೋಧನೆಗೆ ಅನ್ವಯಿಸುವಷ್ಟು ಪರಿಗಣಿಸಿ ನಿರ್ದಿಷ್ಟವಾಗಿ ನಿಗಧಿಪಡಿಸಿರುವಂತೆ ಮತ್ತು ಲೆಕ್ಕಪರಿಶೋಧನಾ ಮಾನಕಗಳಿಗೆ ಅನುಸಾರವಾಗಿ ನಾವು ಲೆಕ್ಕಪರಿಶೋಧನೆಯನ್ನು ನಿರ್ವಹಿಸಿರುತ್ತೇವೆ. ಅಂತಹ ಮಾನಕಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳ ಅನ್ವಯ ನೈತಿಕ ಅಗತ್ಯತೆಗಳು ಮತ್ತು ಯೋಜನೆ ಮತ್ತು ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಧಿಸಲ್ಪಟ್ಟಿವೆಯೇ ಮತ್ತು ಮುಂದುವರಿಸಿಕೊಂಡು ಹೋಗಲಾಗಿದೆಯೇ ಎಂಬ ಬಗ್ಗೆ ಸಮಂಜಸವಾದ ಭರವಸೆಯನ್ನು ಹೊಂದುವುದರ ಜೊತೆಗೆ ಎಲ್ಲಾ ಭೌತಿಕ ಅಂಶಗಳಲ್ಲೂ ಅಂತಹ ಆಂತರಿಕ ನಿಯಂತ್ರಣ ವ್ಯವಸ್ಥೆಯು ಕಾರ್ಯನಿರ್ವಹಿಸಲ್ಪಡುತ್ತದೆಯೋ ಎಂಬ ಬಗ್ಗೆ ಕೂಡಾ ಖಚಿತಪಡಿಸಿಕೊಳ್ಳುವುದು ಅಗತ್ಯವಾಗಿರುತ್ತದೆ.

ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯ ಸಮರ್ಪಕತೆ ಬಗ್ಗೆ ಲೆಕ್ಕಪರಿಶೋಧನಾ ಸಾಕ್ಷ್ಯಗಳನ್ನು ಪಡೆಯುವುದು ಮತ್ತು ಅವುಗಳ ಪರಿಣಾಮಕಾರೀ ಕಾರ್ಯನಿರ್ವಹಣೆಯನ್ನು ದೃಢೀಕರಿಸುವುದು ನಮ್ಮ ಲೆಕ್ಕಪರಿಶೋಧನೆಯಲ್ಲಿ ಸೇರಿದೆ. ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಲೆಕ್ಕಪರಿಶೋಧನೆಯಲ್ಲಿ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವನ್ನು ಸಾಧಿಸುವುದು ಮತ್ತು ಅರ್ಥಮಾಡಿಕೊಳ್ಳುವುದು, ಇರಬಹುದಾದ ಭೌತಿಕ ದೌರ್ಬಲ್ಯಗಳ ಅಪಾಯಗಳನ್ನು ನಿರ್ಣಯಿಸುವುದು, ನಿರ್ಣಯಿಸಲ್ಪಟ್ಟ ದೌರ್ಬಲ್ಯಗಳನ್ನು ಪರೀಕ್ಷಿಸಿ ವಿನ್ಯಾಸದ ಮೌಲ್ಯಮಾಪನ ಮಾಡಿ ಪರಿಣಾಮಕಾರೀ ಕಾರ್ಯನಿರ್ವಹಣೆಯ ಆಂತರಿಕ ನಿಯಂತ್ರಣ ವ್ಯವಸ್ಥೆಯು ನಮ್ಮ ಲೆಕ್ಕಪರಿಶೋಧನೆಯಲ್ಲಿ ಸೇರಿದೆ. ಆಯ್ಕೆ ಮಾಡಲ್ಪಟ್ಟ ಈ ಪದ್ಧತಿಯು ವಂಚನೆಯ ಅಥವಾ ತಪ್ಪಿನ ಕಾರಣದಿಂದ ಹಣಕಾಸಿನ ತಪ್ಪು ಹೇಳಿಕೆಗಳ ಮೌಲ್ಯಮಾಪನದ ಅಪಾಯವನ್ನು ಅಂದಾಜಿಸುವುದೂ ಸೇರಿದಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಬಿಸಿರುತ್ತದೆ.

ನಾವು ಪಡೆದಿರುವ ಲೆಕ್ಕಪರಿಶೋಧನಾ ಸಾಕ್ಷ್ಯಗಳು ಮತ್ತು ಬೇರೆ ಲೆಕ್ಕಪರಿಶೋಧಕರು ತಮ್ಮ ವರದಿಯ ಶರತ್ತುಗಳಂತೆ ಪಡೆದಿರುವ ಲೆಕ್ಕಪರಿಶೋಧನಾ ಸಾಕ್ಷ್ಯಗಳು ಕಂಪೆನಿಯ ಹಣಕಾಸಿನ ಕೋಷ್ಟಕಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಬಗ್ಗೆ ಲೆಕ್ಕಪರಿಶೋಧನಾ ಅಭಿಪ್ರಾಯ ನೀಡಲು ಸಾಕಷ್ಟು ಸೂಕ್ತ ಆಧಾರ ನೀಡುತ್ತದೆ ಎಂದು ನಾವು ನಂಬುತ್ತೇವೆ.

ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಅರ್ಥ

ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವು ಕಂಪೆನಿಯ ಹಣಕಾಸಿನ ಸ್ಥಿತಿಯ ಬಗ್ಗೆ ವಿಶ್ವಾಸಾರ್ಹ ವರದಿ ಮಾಡುವಿಕೆಯ ಬಗ್ಗೆ ಯೋಗ್ಯವಾದ ಭರವಸೆಯನ್ನು ಒದಗಿಸುವುದು ಮತ್ತು ಸಾಮಾನ್ಯವಾಗಿ ಒಪ್ಪಲ್ಪಟ್ಟ ಲೆಕ್ಕಪತ್ರ ಸಿದ್ಧಾಂತಗಳಂತೆ ಬಾಹ್ಯ ಉದ್ದೇಶಗಳಿಗಾಗಿ ಹಾಣಕಾಸಿನ ಕೋಷ್ಟಕಗಳನ್ನು ಸಿದ್ಧಪಡಿಸಲು ವಿನ್ಯಾಸಗೊಳಿಸಲಾಗಿರುವ ಕಾರ್ಯವಿಧಾನವಾಗಿರುತ್ತದೆ. ಕಂಪೆನಿಯ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿ ಈ ಕೆಳಕಂಡ ನೀತಿ ಮತ್ತು ವಿಧಾನಗಳನ್ನು ಒಳಗೊಂಡಿದ್ದು, ಅವುಗಳೆಂದರೆ:

(1) ಕಂಪೆನಿಯ ಆಸ್ತಿಗಳ ವ್ಯವಹಾರ ಮತ್ತು ವಿಲೇವಾರಿಯನ್ನು ನಿಖರವಾಗಿ ಮತ್ತು ನ್ಯಾಯಯುತವಾಗಿ ಪ್ರತಿಬಿಂಬಿಸಲು ಪೂರಕವಾದ ಸಾಕಷ್ಟು ವಿವರವಾದ ದಾಖಲೆ ಪತ್ರಗಳನ್ನು ನಿರ್ವಹಿಸುವುದು;

(2) ಸಾಮಾನ್ಯವಾಗಿ ಒಪ್ಪಲ್ಪಟ್ಟ ಲೆಕ್ಕಪತ್ರ ಮಾನಕಗಳಿಗೆ ಅನುಸಾರವಾಗಿ ಹಣಕಾಸಿನ ಕೋಷ್ಟಕಗಳನ್ನು ಸಿದ್ಧಪಡಿಸಲು ಅನುವಾಗುವಂತೆ ವ್ಯವಹಾರಗಳನ್ನು ದಾಖಲಿಸುವ ಸೂಕ್ತ ಭರವಸೆ ನೀಡುವುದೂ ಅಲ್ಲದೇ, ಕಂಪೆನಿಯ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಕಂಪೆನಿಯ ಆಡಳಿತ ಮತ್ತು ನಿರ್ದೇಶಕರ ಒಪ್ಪಿಗೆಯ ಅನುಸಾರ ಮಾತ್ರ ಮಾಡುವ ವ್ಯವಸ್ಥೆ ಹೊಂದುವುದು ಮತ್ತು

(3) ಕಂಪೆನಿಯ ಹಣಕಾಸಿನ ಕೋಷ್ಟಕಗಳ ಮೇಲೆ ಪರಿಣಾಮ ಬೀರುವಂತಹ ಕಂಪೆನಿಗಳ ಆಸ್ತಿಗಳನ್ನು ಅನಧಿಕೃತವಾಗಿ ಸ್ವಾಧೀನಪಡಿಸಿಕೊಳ್ಳುವಿಕೆ, ಉಪಯೋಗಿಸಿಕೊಳ್ಳುವಿಕೆ, ಅಥವಾ ವಿಲೇವಾರಿಯನ್ನು ತಡೆಯುವುದು ಮತ್ತು ಸಕಾಲದಲ್ಲಿ ಕಂಡುಹಿಡಿಯುವ ಬಗ್ಗೆ ವಿವೇಚನಾಯುಕ್ತ ಭರವಸೆಯನ್ನು ನೀಡುವುದು.

ಆಂತರಿಕ ಹಣಕಾಸಿನ ನಿಯಂತ್ರಣದ ಮೇಲೆ ಹಣಕಾಸಿನ ವರದಿ ಮಾಡುವಿಕೆಯ ಅಂತರ್ಗತ ಮಿತಿಗಳು

ಒಳಸಂಚೂ ಸೇರಿದಂತೆ ಅಥವಾ ನಿಯಂತ್ರಣಗಳ ಮೇಲೆ ಅಸಮರ್ಪಕ ಆಡಳಿತ ವ್ಯವಸ್ಥೆಯು ಸವಾರಿ ಮಾಡುವುದು, ದೋಷಗಳಿಂದಾಗಿ ಅಥವಾ ವಂಚನೆಗಳಿಂದಾಗಿ ಭೌತಿಕ ತಪ್ಪು ಹೇಳಿಕೆಗಳು ಕಾಣಿಸಿಕೊಂಡು ಪತ್ತೆಮಾಡಲಾಗದೇ ಇರುವುದು, ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಅಂತರ್ಗತ ಮಿತಿಗಳಾಗಿರುತ್ತವೆ. ಅಲ್ಲದೇ, ಭವಿಷ್ಯದ ಅವಧಿಗಳಿಗೆ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಭವಿಷ್ಯದ ಅಂದಾಜು ಮೌಲ್ಯಮಾಪನವು ಅಪಾಯಕ್ಕೆ ಸಿಲುಕುವ ಸಾಧ್ಯತೆ ಇರುತ್ತದೆ ಏಕೆಂದರೆ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವು ಪರಿಸ್ಥಿತಿಯ ಬದಲಾವಣೆಗಳಿಂದಾಗಿ ಅಸಮರ್ಪಕವಾಗಬಹುದು ಅಥವಾ ನೀತಿಗಳು ಅಥವಾ ಪದ್ಧತಿಗಳ ಅನುಸರಿಸುವಿಕೆಯ ಮಟ್ಟವು ಕ್ಷೀಣಿಸುವ ಸಾಧ್ಯತೆಯೂ ಇರುತ್ತದೆ.

ಅರ್ಹ ಅಭಿಪ್ರಾಯಕ್ಕೆ ಆಧಾರ

1. ನಮ್ಮ ಅಭಿಪ್ರಾಯದಲ್ಲಿ, ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಂತೆ ಮತ್ತು ನಾವು ನಿರ್ವಹಿಸಿರುವ ಲೆಕ್ಕಪರಿಶೋಧನಾ ಪದ್ಧತಿಯಂತೆ 31ನೇ ಮಾರ್ಚಿ 2020ರಲ್ಲಿ ಇರುವಂತೆ, ಹೋಲ್ಡಿಂಗ್ ಕಂಪೆನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲೆ ಅದರ ವರದಿ ಮಾಡುವಿಕೆಯನ್ನು ಕಾರ್ಯ ನಿರ್ವಹಣಾ ಪರಿಣಾಮಕಾರಿತ್ವದಲ್ಲಿ ಈ ಕೆಳಕಂಡ ಭೌತಿಕ ದೌರ್ಬಲ್ಯಗಳನ್ನು ಗುರುತಿಸಲಾಗಿರುತ್ತದೆ.

ಈ ಕೆಳಕಂಡ ಪ್ರದೇಶಗಳಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸುವುದು ಅಗತ್ಯವಾಗಿರುತ್ತದೆ:

- ಸಂಬಂಧಪಟ್ಟ ವಿಭಾಗಗಳಿಂದ ಸಾಲಗಳು, ಮುಂಗಡಗಳು ಮತ್ತು ಕ್ಲೈಮುಗಳಲ್ಲಿ ಚುರುಕಾದ ಮತ್ತು ವಿಳಂಭವಿಲ್ಲದ ಅನುಸರಣೆ.
- ಕಾಲಕಾಲಕ್ಕೆ ಬಾಕಿ ಉಳಿದಿರುವ ಶಿಲ್ಕುಗಳು, ಸಾಲಗಾರರ, ಸಾಲ ನೀಡುವವರ, ವ್ಯವಹಾರೀ ಸಹಸಂಸ್ಥೆಗಳು ಮತ್ತು ಇತರೆ ಸೂಕ್ಷ್ಮ ಲೆಕ್ಕಗಳ ಶಿರೋನಾಮೆಗಳ ಖಾತೆಯ ಪುನರ್‌ಪರಿಶೀಲನೆ.
- ನ್ಯಾಯಾಲಯದಲ್ಲಿ ಕಂಪೆನಿಯ ಪರವಾಗಿ ನೀಡಲಾದ ನ್ಯಾಯಾಲಯದ ಆದೇಶಗಳ ಜಾರಿಗೊಳಿಸುವಿಕೆ/ ಘೋಶಿಸಲಾಗಿರುವ ಆದೇಶಗಳಂತೆ ವಸೂಲಿಗಳ ಅನುಸರಣೆ ಮಾಡುವುದು.
- ಒಪ್ಪಂದಗಳ ಶರತ್ತು ಮತ್ತು ನಿಬಂಧನೆಗಳಲ್ಲಿ ತಪ್ಪುಗಳನ್ನು ಮತ್ತು ತತ್ಸಂಬಂದದ ನಷ್ಟಗಳನ್ನು ತೊಡೆದುಹಾಕುವ ಸಲುವಾಗಿ ಯೋಜನೆಗಳ ವಿಭಾಗದಲ್ಲಿ ಆಸ್ತಿ ನಿರ್ವಹಣೆಯ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸಬೇಕಾಗಿರುತ್ತದೆ.
- ಬಾಡಿಗೆ ಒಪ್ಪಂದಗಳು ಮತ್ತು ಸ್ವೀಕೃತಿಗಳಲ್ಲಿ:

a) ನವೀಕರಣಕ್ಕೆ ಬಾಕಿ ಇರುವ ಸಹಿಮಾಡದೇ ಇರುವ ಒಪ್ಪಂದಗಳನ್ನು ಗುರುತಿಸುವಂತಹ ಗುತ್ತಿಗೆ ಒಪ್ಪಂದ ಪತ್ರಗಳ ಪುನರ್‌ಪರಿಶೀಲನೆಯಲ್ಲಿ ಕೊರತೆ;

b) 'ಬಾಡಿಗೆ/ನಿರ್ವಹಣಾ ಸ್ವೀಕಾರಾರ್ಹವಾದವುಗಳ' ಮತ್ತು ತದನಂತರದ ಸ್ವೀಕೃತಿಗಳ ಪುನರ್ ಪರಿಶೀಲನೆಯು ಸ್ಥಿರವಾಗಿಲ್ಲ;

c) ಬಾಡಿಗೆಗಳ ಸ್ವೀಕೃತಿಯಲ್ಲಿ ತಡವಾಗಿರುವುದಕ್ಕೆ ಬಡ್ಡಿಯನ್ನು ವಿಧಿಸದೇ ಇರುವುದು. ತಡವಾಗಿರುವುದು.

d) ಕರ್ನಾಟಕ ಸರ್ಕಾರಕ್ಕೆ ಪಾವತಿಸಬೇಕಾಗಿರುವ ಬಡ್ಡಿಯನ್ನೂ ಸೇರಿದಂತೆ, ಅದರ ಪರಿಣಾಮವು ವರಮಾನ ಮತ್ತು ಹೊಣೆಗಾರಿಕೆಯ ಮೇಲೆ ಆಗುವುದರಿಂದ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆಯಲ್ಲಿ ವಿವರವಾದ ಕಾರ್ಯಯೋಜನೆಯ ಅಗತ್ಯತೆ ಇರುತ್ತದೆ.

e) ಕರ್ನಾಟಕ ಸರ್ಕಾರಕ್ಕೆ ಪಾವತಿಸಬೇಕಾಗಿರುವ ಬಡ್ಡಿಯನ್ನೂ ಸೇರಿದಂತೆ, ಅದರ ಪರಿಣಾಮವು ವರಮಾನ ಮತ್ತು ಹೊಣೆಗಾರಿಕೆಯ ಮೇಲೆ ಆಗುವುದರಿಂದ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆಯಲ್ಲಿ ವಿವರವಾದ ಕಾರ್ಯಯೋಜನೆಯ ಅಗತ್ಯತೆ ಇರುತ್ತದೆ.

- ಕರ್ನಾಟಕ ಸರ್ಕಾರಕ್ಕೆ ಪಾವತಿಸಬೇಕಾಗಿರುವ ಬಡ್ಡಿಯನ್ನೂ ಸೇರಿದಂತೆ, ಅದರ ಪರಿಣಾಮವು ವರಮಾನ ಮತ್ತು ಹೊಣೆಗಾರಿಕೆಗಳ ಮೇಲೆ ಆಗುವುದರಿಂದ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆಯ ಬಗ್ಗೆ ವಿವರವಾದ ಕಾರ್ಯಯೋಜನೆಯ ಅಗತ್ಯತೆ ಇರುತ್ತದೆ.

ಅರ್ಹ ಅಭಿಪ್ರಾಯ

ನಮ್ಮ ಅಭಿಪ್ರಾಯದಂತೆ ಹಾಗೂ ಕಂಪೆನಿಗಳ ಆಂತರಿಕ ಹಣಕಾಸಿನ ನಿಯಂತ್ರಣದ ಮೇಲೆ ಹಣಕಾಸಿನ ವರದಿ ಮಾಡುವಿಕೆಗೆ ಸಂಬಂಧಿಸಿದಂತೆ ಅರ್ಹ ಅಭಿಪ್ರಾಯಕ್ಕೆ ಆಧಾರ ಕಂಡಿಕೆಯಲ್ಲಿ ವಿವರಿಸಲಾಗಿರುವ ಭೌತಿಕ ದೌರ್ಬಲ್ಯಗಳ ಸಂಭಾವ್ಯ ಪರಿಣಾಮಗಳನ್ನು ಹೊರತುಪಡಿಸಿ, ಕಂಪೆನಿಯಲ್ಲಿ ಎಲ್ಲಾ ಭೌತಿಕ ವಿಚಾರಗಳಲ್ಲಿ ಸಮರ್ಪಕವಾದ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ವ್ಯವಸ್ಥೆಯು ಇದ್ದು, ಅಂತಹ ವ್ಯವಸ್ಥೆಯು 31ನೇ ಮಾರ್ಚಿ 2020ರಲ್ಲಿ ಇರುವಂತೆ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬಂದಿದ್ದು ಇನ್‌ಸ್ಟಿಟ್ಯೂಟ್ ಆಫ್ ಚಾಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರು ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿ ಆಡಿಟ್ ಆಫ್ ಇಂಟರ್ನಲ್ ಫೈನಾನ್ಶಿಯಲ್ ಕಂಟ್ರೋಲ್ಸ್ ಓವರ್ ಫೈನಾನ್ಶಿಯಲ್ ರಿಪೋರ್ಟಿಂಗ್‌ನಲ್ಲಿ ವಿವರಿಸಿರುವ ಆಂತರಿಕ ನಿಯಂತ್ರಣ ವಿಷಯಕ್ಕೆ ಸಂಬಂಧಿಸಿದ ಅತ್ಯವಶ್ಯಕ ಅಂಶಗಳನ್ನು ಒಳಗೊಂಡ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ವ್ಯವಸ್ಥೆಯನ್ನು ಕಂಪೆನಿಯು ಸ್ಥಾಪಿಸಿದೆ.

ಎನ್‌ಎಸ್‌ವಿಎಂ & ಅಸೋಸಿಯೇಟ್ಸ್
ಚಾರ್ಟರ್ಡ್ ಎಕೌಂಟೆಂಟ್ಸ್ ಪರವಾಗಿ,
ಸಂಸ್ಥೆ ನೋಂದಣಿ ಸಂಖ್ಯೆ: 010072S
ಸಹಿ/–
(ಸಿಎ. ವಿ.ಎಸ್. ರಂಗನಾಥನ್)
ಪಾಲುದಾರ
ಸದಸ್ಯತ್ವ ನಂ. 0201872
ಯುಡಿಐಎನ್: 20201872AAAEK**6126**

ಸ್ಥಳ : ಬೆಂಗಳೂರು

ದಿನಾಂಕ: 09.12.2020

2019–20ರ ಹಣಕಾಸಿನ ವರ್ಷದ ಸ್ಟಾಂಡ್‌ಅಲೋನ್ ಹಣಕಾಸಿನ ಕೋಷ್ಟಕಗಳ ಮೇಲೆ ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳಿಗೆ ಉತ್ತರಗಳು

ಕ್ರಮ ಸಂಖ್ಯೆ	ಲೆಕ್ಕಪರಿಶೋಧಕರ ಆಕ್ಷೇಪಣೆಗಳು	ನಿಗಮದ ಉತ್ತರಗಳು
1	ಎನ್‌ಬಿಎಫ್‌ಸಿಯಾಗಿ ನೋಂದಾಯಿಸಲ್ಪಟ್ಟಿರುವ ಕಂಪೆನಿಯಾಗಿ ರುವುದರಿಂದ ವರ್ಷದಿಂದ ವರ್ಷಕ್ಕೆ ಆಧಾರದ ಮೇಲೆ ಈ ಕೆಳಕಂಡ ಪ್ರಮುಖ ವ್ಯಾವಹಾರಿಕ ಚಟುವಟಿಕೆಗಳ ಮಾನದಂಡ ವನ್ನು ಅನುಸರಣೆ ಮಾಡಬೇಕಾಗಿರುತ್ತದೆ: ಕಂಪೆನಿಯು ಎರಡೂ ಮಾನದಂಡಗಳನ್ನು ತೃಪ್ತಿಪಡಿಸಿದಲ್ಲಿ ಪ್ರಮುಖ ವ್ಯಾವಹಾರಿಕ ಚಟುವಟಿಕೆಯು ಹಣಕಾಸಿನ ಚಟುವಟಿಕೆಯೆಂದು ತಿಳಿಯಲ್ಪಡುತ್ತದೆ: a) ಅದರ ಹಣಕಾಸಿನ ಆಸ್ತಿಗಳು ಅದರ ಒಟ್ಟು ಆಸ್ತಿಗಳಿಗಿಂತ 50% ಗಿಂತ ಜಾಸ್ತಿಯಾಗಿದ್ದಲ್ಲಿ; b) ಹಣಕಾಸಿನ ಆಸ್ತಿಗಳಿಂದ ಬರುವ ಆದಾಯವು ಒಟ್ಟು ಆದಾಯದ 50%ಗಿಂತಲೂ ಹೆಚ್ಚಾಗಿದ್ದಲ್ಲಿ. 31ನೇ ಮಾರ್ಚಿ 2020ರಲ್ಲಿ ಇರುವಂತೆ ಪ್ರಮುಖ ವ್ಯಾವಹಾರಿಕ ಮಾನದಂಡಕ್ಕೆ ಸಂಬಂಧಿಸಿದಂತೆ ಕಂಪೆನಿಯು ಎರಡೂ ಷರತ್ತುಗಳನ್ನು ತೃಪ್ತಿಪಡಿಸುವುದಿಲ್ಲವಾದರೂ ಕೂಡಾ, ಆ ದಿನಾಂಕದಂದು ಕಂಪೆನಿಯು ಎನ್‌ಬಿಎಫ್‌ಸಿ ಯಾಗಿ ಅಧಿಕೃತ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿ ರುವುದು ಮುಂದುವರಿದಿರುತ್ತದೆ. ಮುಂದುವರಿದಂತೆ, ವರ್ಷಾವಧಿ ಯಲ್ಲಿ ಕಂಪೆನಿಯು ಎನ್‌ಬಿಎಫ್‌ಸಿ ನೋಂದಣಿಯನ್ನು ರದ್ದುಪಡಿಸಲು ಆರ್‌ಬಿಐಗೆ ಅರ್ಜಿ ಹಾಕಿದ್ದು, ಇದಕ್ಕೆ ಇನ್ನೂ ಅನುಮೋದನೆ ದೊರಕಿರುವುದಿಲ್ಲ.	ಕೆಎಸ್‌ಐಐಡಿಸಿಯು 2002ರ ನಂತರದಿಂದ ಸಾಲ ನೀಡಿಕೆ ಚಟುವಟಿಕೆಗಳನ್ನು ನಿಲ್ಲಿಸಿರುತ್ತದೆ. ಆದಾಗ್ಯೂ ಅದಕ್ಕೂ ಮುಂಚೆ ನೀಡಲಾಗಿರುವ ಸಾಲದ ವಸೂಲಾತಿಯು ಮುಂದುವರಿದಿರುತ್ತದೆ. ಈ ಆಸ್ತಿಗಳಿಂದ ವಸೂಲಾತಿಯು ಪ್ರತೀ ವರ್ಷ ಮುಂದುವರಿದಿರುವುದರಿಂದ ವಸೂಲಾತಿ ಖಾತೆಯು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಬಾಕಿ ಉಳಿದಿರುವ ಸಾಲದ ವಸೂಲಾತಿ ಖಾತೆಗೆ ಲೆಕ್ಕದ ಪುಸ್ತಕಗಳಲ್ಲಿ ಸಂಪೂರ್ಣವಾಗಿ ಉಪಬಂಧವನ್ನು ಕಲ್ಪಿಸಲಾಗಿರುತ್ತದೆ. ಆದಾಗ್ಯೂ, ಕೆಎಸ್‌ಐಐಡಿಸಿಯು ದಿನಾಂಕ 31.03.2020ರಲ್ಲಿ ಇರುವಂತೆ ಎನ್‌ಬಿಎಫ್‌ಸಿ ಪ್ರಮಾಣಪತ್ರವನ್ನು ಹೊಂದಿರುತ್ತದೆ. ಸಾಲದ ಖಾತೆಯಲ್ಲಿ ಸವಕಳಿಯಾಗುತ್ತಿರುವುದರಿಂದ ಮತ್ತು ಈ ಖಾತೆಗಳಿಂದ ಬಡ್ಡಿಯ ನಗದಾಗುವಿಕೆಯು ವಿಳಂಬ ಆಗುತ್ತಿರುವುದರಿಂದ ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿರುವ ಪ್ರಮುಖ ವ್ಯಾವಹಾರಿಕ ಮಾನದಂಡವನ್ನು ತಲುಪಲು ಸಾಧ್ಯವಾಗುತ್ತಿಲ್ಲ. ಮೇಲ್ಕಂಡ ಕಾರಣದಿಂದ ಕೆಎಸ್‌ಐಐಡಿಸಿಯು ಎನ್‌ಬಿಎಫ್‌ಸಿ ಯಾಗಿ ಹೊಂದಿರುವ ನೋಂದಣಿ ಪ್ರಮಾಣ ಪತ್ರವನ್ನು (ಸಿಒಆರ್) ರದ್ದುಪಡಿಸಲು ಮನವಿ ಮಾಡಲು ದಿನಾಂಕ 27.09.2019ರಂದು ನಡೆದ ಮಂಡಳಿಯ ಸಭೆಯಲ್ಲಿ ಠರಾವನ್ನು ಅಂಗೀಕರಿಸಲಾಯಿತು. ಆದಾಗ್ಯೂ, ಕಂಪೆನಿಯು ಈ ದಿನಾಂಕದವರೆಗೂ ಸಿಒಆರ್‌ನ್ನು ಹೊಂದಿರುವಿಕೆಯನ್ನು ಮುಂದುವರಿಸಿರುತ್ತದೆ.
2.	ಆರ್‌ಬಿಐ ಕಾಯಿದೆ 1934ರ ಉಪಬಂಧಗಳಂತೆ ಮತ್ತು ನಂತರದಲ್ಲಿ ಅದಕ್ಕೆ ಮಾಡಲಾಗಿರುವ ತಿದ್ದುಪಡಿಗಳಂತೆ ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆ 1934ರ ಕಂಡಿಕೆ 45 (1ಅ)ಯಂತೆ ಎನ್‌ಬಿಎಫ್‌ಸಿಗಳು ತಮ್ಮ ಲಾಭದ 20%ನ್ನು ಮೀಸಲಿಗೆ ವರ್ಗಾಯಿಸುವುದನ್ನು ಜಾರಿಗೊಳಿಸಬೇಕಾಗಿರುತ್ತದೆ. ವರ್ಷಾವಧಿಯಲ್ಲಿ ನಿಗಮವು ಎನ್‌ಬಿಎಫ್‌ಸಿ ಪ್ರಮಾಣ ಪತ್ರವನ್ನು ಹೊಂದಿರುವುದು ಮುಂದುವರಿದಿರುವುದರಿಂದ ಹಾಗೂ 31ನೇ ಮಾರ್ಚಿ 2020ರಲ್ಲಿರುವಂತೆ ಅದರ ರದ್ದತಿಗೆ ಆರ್‌ಬಿಐಯವರ ಅನುಮೋದನೆ ಇನ್ನೂ ದೊರೆತಿಲ್ಲವಾದ್ದರಿಂದ ಕಂಡಿಕೆ 45 (1)(C)ಯಂತೆ ಲಾಭದ 20%ನ್ನು ಮೀಸಲು ಖಾತೆಗೆ ವರ್ಗಾಯಿಸದೇ ಇರುವುದು ಕಂಡಿಕೆಯ ಉಲ್ಲಂಘನೆ ಯಾಗುತ್ತದೆ.	ಕಂಪೆನಿಯು ಠೇವಣಿ ಪಡೆಯದ ಬ್ಯಾಂಕಿಂಗೇತರ ಹಣಕಾಸು ಕಂಪೆನಿಯಾಗಿ (ಎನ್‌ಬಿಎಫ್‌ಸಿ) ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ನೋಂದಣಿ ಹೊಂದಿರುತ್ತದೆ. ಆರ್‌ಬಿಐ ಕಾಯಿದೆ, 1934ರ ಕಂಡಿಕೆ 45IC(1)ರ ಅಡಿಯಲ್ಲಿ ಆರ್‌ಬಿಐನವರು ಹೊರಡಿಸಿರುವ ಸೂಚನೆಗಳಂತೆ ಎನ್‌ಬಿಎಫ್‌ಸಿಗಳು ತಮ್ಮ ನಿವ್ವಳ ಲಾಭದ 20%ನ್ನು ಪ್ರತ್ಯೇಕವಾದ ಮೀಸಲು ಖಾತೆಗೆ ವರ್ಗಾಯಿಸಲು ಭಾದ್ಯಸ್ಥರಾಗಿರುತ್ತಾರೆ. ಕಂಪೆನಿಯು ಹಿಂದಿನ ವರ್ಷ(ಗಳಲ್ಲಿ) ಲಾಭವನ್ನು ಗಳಿಸಿರುತ್ತದೆ. ಕಂಪೆನಿಗೆ ವರ್ಷಾವಧಿಯಲ್ಲಿ ಎಲ್ಲಾ ಸಾಲಗಳನ್ನು ತೊಡೆದು ಹಾಕಲು ಸಾಧ್ಯವಾಗಿದೆಯಾದರೂ, ಇದರ ಫಲಿತಾಂಶದ ಹೆಚ್ಚುವರಿ ಶಿಲ್ಕನ್ನು ಲಾಭಾಂಶ ಘೋಷಿಸಲು ಅಥವಾ ಮೊಬಲಗನ್ನು ಸರಿಹೊಂದಿಸಲು ಉಪಯೋಗಿಸಿರುವುದಿಲ್ಲ. ಆಕ್ಷೇಪಣೆ ನಂ. 1ರಲ್ಲಿ ತಿಳಿಸಿರುವಂತೆ ಕಂಪೆನಿಯು ನೋಂದಣಿಯನ್ನು ರದ್ದುಪಡಿಸಲು ಮನವಿಮಾಡಿ ಆರ್‌ಬಿಐಗೆ ಸಲ್ಲಿಸಿರುವ ಅರ್ಜಿಯು ಕೂಡಾ ಬಾಕಿ ಇರುತ್ತದೆ. ಮೇಲ್ಕಂಡ ಕಾರಣದಿಂದ ಆರ್‌ಬಿಯನಿಂದ ಮಾಹಿತಿ ಬಂದ ನಂತರ ಕಂಪೆನಿಯು ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ.

3	ಕಂಪೆನಿಯು ಈಕ್ವಿಟಿ ಪತ್ರಗಳಲ್ಲಿ ಹೂಡಿಕೆಯನ್ನು ಹೊಂದಿದ್ದು, ಇದರಲ್ಲಿ ಲಿಸ್ಟ್ ಆಗಿರುವ ಮತ್ತು ಲಿಸ್ಟ್ ಆಗದೇ ಇರುವ ಸಂಸ್ಥೆಗಳ ಪತ್ರಗಳೂ ಸೇರಿರುತ್ತವೆ. ಐಎನ್‌ಡಿ ಎಎಸ್ 109ರಂತೆ ಹೂಡಿಕೆಗಳನ್ನು ಮೌಲ್ಯೀಕರಿಸಬೇಕಾಗಿರುತ್ತದೆ ಹಾಗೂ ಐಎನ್‌ಡಿ ಎಎಸ್ 113ರಂತೆ ನ್ಯಾಯಯುತ ದರದಲ್ಲಿ ಪ್ರಸ್ತುತಪಡಿಸಬೇಕಾಗಿರುತ್ತದೆ. ಕಂಪೆನಿಯ ಕೆಲವೊಂದು ಹೂಡಿಕೆಗಳನ್ನು ಮುಂಚೆಯೇ ಲಿಸ್ಟ್‌ನಿಂದ ತೆಗೆದು ಹಾಕಿರುವುದರಿಂದ ಅವುಗಳನ್ನು ನಾಮಕಾವಸ್ಥೆ ದರಕ್ಕೆ ಅಂದರೆ ರೂ. 1/–ಕ್ಕೆ ಮೌಲ್ಯಮಾಪನ ಮಾಡಿರುತ್ತದೆ. ಅಸಮರ್ಪಕ ಮಾಹಿತಿಗಳಿಂದಾಗಿ ಕಂಪೆನಿಯು 31ನೇ ಮಾರ್ಚಿ 2020ರಲ್ಲಿ ಇರುವಂತೆ ಇದನ್ನು ಮತ್ತು ಅದರ ತುಲನಾತ್ಮಕ ಅವಧಿಯನ್ನು (ಗಳನ್ನು) ನಾಮಕಾವಸ್ಥೆ ಮೌಲ್ಯದಲ್ಲಿಯೇ ತೋರಿಸಿರುವುದನ್ನು ಮುಂದುವರಿಸಿದೆ. ಕಂಪೆನಿಯ ಹಣಕಾಸಿನ ಕೋಷ್ಟಕಗಳ ಮೇಲೆ ಅವುಗಳ ಪರಿಣಾಮವನ್ನು ಮೌಲ್ಯೀಕರಿಸಲು ನಾವು ಅಸಮರ್ಥರಾಗಿದ್ದೇವೆ.	ವ್ಯವಹಾರ ಮತ್ತು/ಅಥವಾ ಹಣಕಾಸಿನ ಸ್ಥಿತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದ ಕೆಲವು ಕಂಪೆನಿಗಳಿಗೆ ಸಂಬಂಧಿಸಿದಂತೆ ಹೂಡಿಕೆಗಳನ್ನು ರೂ. 1ರ (ನಾಮಕಾವಸ್ಥೆ ಮೌಲ್ಯ) ಕನಿಷ್ಟ ಮೌಲ್ಯಕ್ಕೆ ನಿಗದಿಪಡಿಸಲಾಗಿದೆ ಹಾಗೂ ಈ ಷೇರುಗಳನ್ನು ಷೇರು ವಿನಿಮಯ ಕೇಂದ್ರದ ಲಿಸ್ಟ್‌ನಿಂದ ತೆಗೆದುಹಾಕಲ್ಪಟ್ಟಿರುತ್ತದೆ. ಐಎನ್‌ಡಿ ಎಎಸ್ 109ರ ಉಪಬಂಧಗಳಿಗೆ ಅನುಸಾರವಾಗಿ ಇವುಗಳನ್ನು ಸಮರ್ಪಕವಾಗಿ ಮೌಲ್ಯೀಕರಿಸಲಾಗಿರುವುದರಿಂದ ಇದನ್ನು ನಾಮಕಾವಸ್ಥೆ ಮೌಲ್ಯದಲ್ಲಿಯೇ ಗುರುತಿಸಲಾಗಿರುತ್ತದೆ.
4	31ನೇ ಮಾರ್ಚಿ 2020ರ ವರ್ಷದ ಅಂತ್ಯದಲ್ಲಿ ಕಂಪೆನಿಯ ಲಿಸ್ಟ್ ಆಗದೇ ಇರುವ ಮೂರು ಕಂಪೆನಿಗಳಲ್ಲಿರುವ ಹೂಡಿಕೆಗಳನ್ನು 31ನೇ ಮಾರ್ಚಿ 2020ರ ಮಾಹಿತಿಗಳು ಲಭ್ಯವಿಲ್ಲವಾದ್ದರಿಂದ 31ನೇ ಮಾರ್ಚಿ 2019ರಲ್ಲಿ ಲಭ್ಯವಿರುವ ಮಾಹಿತಿಗಳ ಆಧಾರದ ಮೇಲೆ ಸಮರ್ಪಕ ಬೆಲೆಯಲ್ಲಿ ಮೌಲ್ಯೀಕರಿಸಿರುತ್ತದೆ. ಹಣಕಾಸಿನ ಕೋಷ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ಪ್ರಮಾಣೀಕರಿಸಲು ನಾವು ಅಸಮರ್ಥರಾಗಿರುತ್ತೇವೆ.	ಈಗ ಚಾಲ್ತಿಯಲ್ಲಿರುವ ಕೋವಿಡ್–19ರ ಪಿಡುಗಿನ ಕಾರಣದಿಂದಾಗಿ ಈ ಕಂಪೆನಿಗಳಿಗೆ ತಮ್ಮ ಹಣಕಾಸಿನ ಕೋಷ್ಟಕಗಳನ್ನು ಸಕಾಲದಲ್ಲಿ ಅಂತಿಮಗೊಳಿಸಲು ಸಾಧ್ಯವಾಗಿರುವುದಿಲ್ಲ. ಎಲ್ಲಾ ಕಂಪೆನಿಗಳೂ ಕಾರ್ಯ ನಿರ್ವಹಿಸುತ್ತಿರುವುದರಿಂದ ಕಂಪೆನಿಯು ಈ ಹೂಡಿಕೆಗಳನ್ನು 31ನೇ ಮಾರ್ಚಿ 2019ರಲ್ಲಿ ಗುರುತಿಸಲಾಗಿರುವ ಮೌಲ್ಯದಲ್ಲಿ ಲೆಕ್ಕಹಾಕಿರುತ್ತದೆ. ಕಂಪೆನಿಯ ಅಭಿಪ್ರಾಯದಲ್ಲಿ, 31.03.2020ರಲ್ಲಿ ಇರುವಂತಹ ಸಮರ್ಪಕ ಮೌಲ್ಯವು 31.03.2019ರಲ್ಲಿ ಗುರುತಿಸಿರುವಂತಹ ಸಮರ್ಪಕ ಮೌಲ್ಯಕ್ಕಿಂತ ಕಡಿಮೆಯಾಗಿರಲಿಕ್ಕಿಲ್ಲ.
5	31ನೇ ಮಾರ್ಚಿ 2020ರಲ್ಲಿ ಇರುವಂತೆ ಕಂಪೆನಿಯು ರೂ. 4570.00 ಲಕ್ಷಗಳ ಮೊಬಲಗನ್ನು ಸ್ವೀಪ್ ಠೇವಣಿಯಲ್ಲಿ ಇಟ್ಟಿರುತ್ತದೆ. ಐಎನ್‌ಡಿ ಎಎಸ್‌ನಂತೆ ಠೇವಣಿಗಳ ಮೇಲೆ ಗಳಿಸಲಾಗಿರುವ ಬಡ್ಡಿಯನ್ನು ಸೇರಿಕೆ ಆಧಾರದ ಮೇಲೆ ಲೆಕ್ಕಹಾಕಬೇಕಾಗಿರುತ್ತದೆ. ಆದಾಗ್ಯೂ, ಕಂಪೆನಿಯು ಬಡ್ಡಿಯನ್ನು ಸ್ವೀಕೃತಿ ಆಧಾರದ ಮೇಲೆ ಲೆಕ್ಕಹಾಕಿದ್ದು, 31ನೇ ಮಾರ್ಚಿ 2020ರಲ್ಲಿ ಇರುವಂತೆ ಸೇರಿಕೆಗೆ ಒಳಪಡಿಸಿರುವುದಿಲ್ಲ. ಹಣಕಾಸಿನ ಕೋಷ್ಟಕಗಳ ಮೇಲೆ ಇದರ ಪರಿಣಾಮವನ್ನು ನಾವು ಪ್ರಮಾಣೀಕರಿಸಲಾಗುವುದಿಲ್ಲ.	ನಿಗಮವು ಸ್ವೀಪ್ ಠೇವಣಿಯ ಮೇಲಿನ ಬಡ್ಡಿಯನ್ನು ಅದರ ಮುಕ್ತಾಯದಂದು ಸತತವಾಗಿ ಲೆಕ್ಕಹಾಕುತ್ತಿದೆ. ಆದಾಗ್ಯೂ ಅದನ್ನು ಚಾಲ್ತಿ ಹಣಕಾಸಿನ ವರ್ಷದಲ್ಲಿ ಪುನರ್‌ಪರಿಶೀಲಿಸಲಾಗುತ್ತಿದ್ದು, ಅದನ್ನು ಸೇರಿಕೆ ಆಧಾರದ ಮೇಲೆ ಲೆಕ್ಕಹಾಕಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ.

6	ಕಂಪೆನಿಯು ತನ್ನ ಸಹಸಂಸ್ಥೆಯಾಗಿರುವ ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತಕ್ಕೆ (ಬಿಐಎಎಲ್) ಸಾಲ ಸೌಲಭ್ಯದ ವಿಸ್ತರಣೆಗಾಗಿ ಈ ಹಿಂದೆ ಒಪ್ಪಿರುವ ಷರತ್ತನ್ನು ನೆರವೇರಿಸುವ ಸಲುವಾಗಿ ಬಿಐಎಎಲ್‌ನಲ್ಲಿ ಹೊಂದಿರುವ 2,80,48,878 ಷೇರುಗಳನ್ನು ಎಸ್‌ಬಿಐ ಕ್ಯಾಪ್ಸ್ ಟ್ರಸ್ಟೀ ಕಂಪೆನಿ ಇವರಿಗೆ ಅಡಮಾನ ಮಾಡಿರುತ್ತದೆ. ಐಎನ್‌ಡಿ ಎಎಸ್–109ರಂತೆ ಶೇರುಗಳ ಅಡಮಾನವು ಹಣಕಾಸಿನ ಖಾತರಿ ಒಪ್ಪಂದವನ್ನು ಉಂಟುಮಾಡುತ್ತಿದ್ದು, ನೀಡಲಾಗಿರುವ ಅಡಮಾನಕ್ಕೆ ಕಂಪೆನಿಯು ಹಣಕಾಸಿನ ಹೊಣೆಗಾರಿಕೆಯನ್ನು ಗುರುತಿಸತಕ್ಕದ್ದು ಹಾಗೂ ನಂತರದಲ್ಲಿ ಐಎನ್‌ಡಿ ಎಎಸ್–115ರಂತೆ ಆದಾಯವನ್ನು ಗುರುತಿಸಬೇಕಾಗಿರುತ್ತದೆ. ಆದಾಗ್ಯೂ, ಕಂಪೆನಿಯು ಅಡಮಾನಕ್ಕಾಗಿ ಹಣಕಾಸಿನ ಹೊಣೆಗಾರಿಕೆಯನ್ನು ಗುರುತಿಸದೇ ಇರುವುದನ್ನು ಹಾಗೂ ಐಎನ್‌ಡಿ ಎಎಸ್–115ರಂತೆ 31ನೇ ಮಾರ್ಚಿ, 2020ರಲ್ಲಿ ಇರುವಂತೆ ಆದಾಯವನ್ನು ದಾಖಲಿಸದೇ ಇರುವುದನ್ನು ನಾವು ಗಮನಿಸಿರುತ್ತೇವೆ. ಕಂಪೆನಿಯು ಈ ವ್ಯವಹಾರಕ್ಕೆ ನಿಗದಿತ ಲೆಕ್ಕಪತ್ರ ಮಾನದಂಡವನ್ನು ಅನುಸರಿಸಿರುವುದಿಲ್ಲವಾದ್ದರಿಂದ ಹಣಕಾಸಿನ ಕೋಷ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ಪ್ರಮಾಣೀಕರಿಸಲು ನಮಗೆ ಅಸಾಧ್ಯವಾಗಿರುತ್ತದೆ.	ಕಂಪೆನಿಯು ಬಿಐಎಎಲ್‌ನಲ್ಲಿ ಹೊಂದಿರುವ 13% ಷೇರುಗಳಲ್ಲಿ 51%ನ್ನು ಎಸ್‌ಬಿಐನಿಂದ ಹಣಕಾಸಿನ ಸೌಲಭ್ಯವನ್ನು ಪಡೆಯುವ ಸಲುವಾಗಿ ಎಸ್‌ಬಿಐ ಕ್ಯಾಪ್ ಟ್ರಸ್ಟೀ ಕಂಪೆನಿ ಲಿಮಿಟೆಡ್ ಇವರ ಪರವಾಗಿ ಅಡಮಾನ ಮಾಡಿರುತ್ತದೆ. ನಿಗಮವು ಈ ರೂ. 2804.89 ಲಕ್ಷ ಮೊಬಲಗನ್ನು ಅನಿಶ್ಚಿತ ಹೊಣೆಗಾರಿಕೆಯಲ್ಲಿ ತೋರಿಸಿರುತ್ತದೆ. ಮೇಲ್ಕಂಡ ಅಡಮಾನವನ್ನು ಸೃಷ್ಟಿಸುವ ಸಲುವಾಗಿ ಕಂಪೆನಿಯು ಯಾವುದೇ ಶುಲ್ಕವನ್ನೂ ವಿಧಿಸಿರುವುದಿಲ್ಲ. ಇಂತಹ ಸನ್ನಿವೇಶಗಳಲ್ಲಿ ಶುಲ್ಕಕ್ಕೆ ಉಪಬಂಧವನ್ನು ಕಲ್ಪಿಸುವಿಕೆಯನ್ನು ನಿಗಧಿಪಡಿಸಲು ಸಾರ್ವಜನಿಕ ಕ್ಷೇತ್ರದಲ್ಲಿರುವ ಮಾಹಿತಿಗಳ ಕೊರತೆಯಿಂದಾಗಿ ಕಂಪೆನಿಯು ಅದರ ಮೇಲೆ ಯಾವುದೇ ಆದಾಯವನ್ನೂ ಗುರುತಿಸಿರುವುದಿಲ್ಲ.
7.	ಕಂಪೆನಿಯು ವಿವಿಧ ಮೇಲ್ಮನವಿ ಪ್ರಾಧಿಕಾರಗಳ ಮುಂದೆ ಇರುವ ದಾವೆಗಳಲ್ಲಿ ಪ್ರತಿಭಟನೆಯ ಮೂಲಕ ಪಾವತಿಸಿರುವ ತೆರಿಗೆಗೆ ಸಂಬಂಧಿಸಿದಂತೆ ತಾನು ಯಶಸ್ವಿಯಾಗಲಿಕ್ಕಿಲ್ಲವೆಂದು ಒಪ್ಪದೇ ಇದ್ದರೂ ಕೂಡಾ ಊಹಾತ್ಮಕವಾಗಿ ಆದಾಯ–ತೆರಿಗೆ ಕಾಯಿದೆ, 1961ರ (“ಎಂಎಟಿ ಕ್ರೆಡಿಟ್”) ಕಂಡಿಕೆ 115 JBಯಂತೆ ವರ್ಷಾವಧಿಯಲ್ಲಿ ಜಮಾ ಮಾಡುವುದಕ್ಕೆ ಹಕ್ಕು ಸಾಧಿಸಿರುತ್ತಾರೆ. ನಮ್ಮ ಅಭಿಪ್ರಾಯದಂತೆ ಕಂಪೆನಿಯು ಗುರುತಿಸಿರುವ ಭಾರತೀಯ ರೂಪಾಯಿ 700.27 ಲಕ್ಷದ ಎಂಎಟಿ ಜಮಾಕ್ಕೆ ಕಂಪೆನಿಯು ಇದೇ ಆದಾಯ ತೆರಿಗೆಯ ಉಪಬಂಧವನ್ನು ಕಲ್ಪಿಸಬೇಕಾಗಿರುತ್ತದೆ. ಆದಾಗ್ಯೂ, ಕಂಪೆನಿಯು ರೂ. 700.27 ಲಕ್ಷಕ್ಕೆ ಆದಾಯ ತೆರಿಗೆಗೆ ಉಪಬಂಧವನ್ನು ಸೃಷ್ಟಿಸದೇ ಇರುವುದನ್ನು ನಾವು ಗಮನಿಸಿದ್ದು, ಇದರಿಂದಾಗಿ ಲಾಭ ಮತ್ತು ನಷ್ಟ ಖಾತೆಯಲ್ಲಿ ಭಾರತೀಯ ರೂಪಾಯಿ 7,00,26,599 ರಿಂದ ಹೆಚ್ಚು ದಾಖಲಿಸಲ್ಪಟ್ಟಿರುತ್ತದೆ.	ಹಿಂದಿನ ಮೌಲ್ಯಮಾಪನ ವರ್ಷಗಳಿಗೆ ಸಂಬಂಧಪಟ್ಟಂತೆ, ಕಾಯಿದೆಯ ಕಂಡಿಕೆ 115 JB ಯಂತೆ ಪುಸ್ತಕದಲ್ಲಿರುವ ಲಾಭಗಳನ್ನು ಲೆಕ್ಕಹಾಕುವ ವಿಚಾರಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಪ್ರಾಧಿಕಾರದ ಹಲವಾರು ನ್ಯಾಯ ನಿರ್ಣಯ ಪ್ರಾಧಿಕಾರದ ಮುಂದೆ ಕಂಪೆನಿಯು ಹೂಡಿರುವ ದಾವೆಗಳು ಬಾಕಿ ನಿಂತಿದ್ದು ಇದರ ಪರಿಣಾಮವಾಗಿ ರೂ. 700.27 ಲಕ್ಷಗಳ ಹೆಚ್ಚುವರಿ ಎಂಎಟಿ ವೆಚ್ಚಗಳಿಗೆ ಕಾರಣವಾಗಿರುತ್ತದೆ. ಕಾಯಿದೆಯ ಉಪಬಂಧಗಳ ಅಡಿಯಲ್ಲಿ ಕಂಪೆನಿಯು ಮಾಡಿರುವ ಪಾವತಿಗೆ ಜಮಾವನ್ನು ಪಡೆಯಲು 15 ವರ್ಷಗಳ ಕಾಲಾವಕಾಶ ಇದ್ದು, ಕಾಲಾವಧಿಯು ಇನ್ನೂ ಮುಗಿದಿರುವುದಿಲ್ಲ. ಉಪಯೋಗಿಸದೇ ಇರವ ತೆರಿಗೆ ಜಮಾವನ್ನು ಮುಂದೂಡಲ್ಪಟ್ಟ ತೆರಿಗೆ ಜಮಾ ಎಂದು ಪರಿಗಣಿಸಲು ಐಎನ್‌ಡಿ ಎಎಸ್ 12 ಅನುಮತಿ ನೀಡಿದ್ದು, ಇದನ್ನು ಸರಿಯಾಗಿ ಮಾಡಲಾಗಿದೆ. ಮೇಲ್ಕಂಡ ಕಾರಣಗಳಿಂದ ಲಾಭವನ್ನು ಹೆಚ್ಚಾಗಿ ತೋರಿಸಿರುವುದಿಲ್ಲ.

31ನೇ ಮಾರ್ಚ್ 2020ಕ್ಕೆ ಅಂತ್ಯಗೊಂಡ ಅವಧಿಗೆ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಹಣಕಾಸಿನ ಕೋಷ್ಟಕಗಳ ಮೇಲೆ ಕಂಪೆನಿಗಳ ಕಾಯಿದೆ, 2013ರ ಅಧಿನಯಮ 143 (6) (ಬಿ) ಅನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು ನೀಡಿರುವ ಹೇಳಿಕೆಗಳು

ಕಂಪೆನಿಗಳ ಕಾಯಿದೆ 2013ರಲ್ಲಿ ನಿಗಧಿಪಡಿಸಿರುವ ಹಣಕಾಸಿಗೆ ಸಂಬಂಧಿಸಿದ ವರದಿಮಾಡುವಿಕೆ ಚೌಕಟ್ಟಿನಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಹಣಕಾಸಿನ ಪಟ್ಟಿಯನ್ನು ಸಿದ್ದಪಡಿಸುವುದು ಕಂಪೆನಿಯ ಆಡಳಿತವರ್ಗದ ಜವಾಬ್ದಾರಿಯಾಗಿರುತ್ತದೆ. ಕಂಪೆನಿಗಳ ಕಾಯಿದೆ 2013ರ ಕಂಡಿಕೆ 139 (5)ರಂತೆ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರಿಂದ ನೇಮಿಸಲ್ಪಟ್ಟ ಶಾಸನಬದ್ಧ ಲೆಕ್ಕಪರಿಶೋಧಕರು ಹಣಕಾಸಿನ ಪಟ್ಟಿಯ ಮೇಲೆ ಕಾಯಿದೆಯ ಕಂಡಿಕೆ 143(10)ರಲ್ಲಿ ನಿಗಧಿಪಡಿಸಿರುವ ಮಾನಕಗಳಿಗೆ ಅನುಸಾರವಾಗಿ ಸ್ವತಂತ್ರವಾಗಿ ಲೆಕ್ಕಪರಿಶೋಧನೆ ನಡೆಸಿ ಕಾಯಿದೆಯ ಕಂಡಿಕೆ 143ರ ಅಡಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಜವಾಬ್ದಾರಿಯಾಗಿರುತ್ತದೆ. ಶಾಸನಬದ್ಧ ಲೆಕ್ಕಪರಿಶೋಧಕರ ದಿನಾಂಕ 27ನೇ ಡಿಸೆಂಬರ್ 2020ರ ವರದಿಯಂತೆ ಇದನ್ನು ಮಾಡಲಾಗಿದೆಯೆಂದು ತಿಳಿಸಲಾಗಿದೆ.

ನಾನು, ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಪರವಾಗಿ ಕಾಯಿದೆಯ ಕಂಡಿಕೆ 143 (6)(ಎ)ಯಂತೆ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, ಇವರ 31ನೇ ಮಾರ್ಚ್ 2020ರ ವರ್ಷಾಂತ್ಯದ ಹಣಕಾಸಿನ ಕೋಷ್ಟಕಗಳ ಮೇಲೆ ಪೂರಕ ಲೆಕ್ಕಪರಿಶೋಧನೆ ಮಾಡಿರುತ್ತೇನೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ಲೆಕ್ಕಾಚಾರದ ಕಾಗದಪತ್ರಗಳತ್ತ ಗಮನ ಹರಿಸದೇ ಪ್ರಾಥಮಿಕವಾಗಿ ಶಾಸನಬದ್ಧ ಲೆಕ್ಕಪರಿಶೋಧಕರೊಂದಿಗೆ ಮತ್ತು ಕಂಪೆನಿಯ ಸಿಬ್ಬಂದಿಗಳೊಂದಿಗೆ ವಿಚಾರಣೆ ನಡೆಸಿ ಮತ್ತು ಕಂಪೆನಿಯ ಆಯ್ದ ಕೆಲವು ಲೆಕ್ಕಪತ್ರ ದಾಖಲೆಗಳ ಪರಿಶೀಲನೆ ನಡೆಸುವುದಕ್ಕೆ ಮಿತಿಗೊಳಿಸಿ ಸ್ವತಂತ್ರವಾಗಿ ನಿರ್ವಹಿಸಿರುತ್ತೇವೆ.

ಪೂರಕ ಲೆಕ್ಕಪರಿಶೋಧನೆಯ ಅವಧಿಯಲ್ಲಿ ನನ್ನ ಲೆಕ್ಕಪರಿಶೋಧನಾ ಅವಲೋಕನವನ್ನು ಅನುಷ್ಠಾನಗೊಳಿಸುವ ಸಲುವಾಗಿ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಮಾಡಲಾಗಿರುವ ಪರಿಷ್ಕರಣೆಯ ಹಿನ್ನೆಲೆಯಲ್ಲಿ ಲೆಕ್ಕಪರಿಶೋಧಕರ ವರದಿಗೆ ಪೂರಕವಾಗಿ ಕಾಯಿದೆಯ ಕಂಡಿಕೆ 143 (6)(ಬಿ)ಯಂತೆ ನೀಡಲು ನನ್ನಲ್ಲಿ ಮುಂದಿನ ಯಾವುದೇ ಹೇಳಿಕೆಗಳೂ ಇರುವುದಿಲ್ಲ.

ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಪರವಾಗಿ

ಸಹಿ/–
(ಅನುಪ್ ಫ್ರಾನ್ಸಿಸ್ ಡುಂಗ್‌ಡುಂಗ್)
ಅಕೌಂಟೆಂಟ್ ಜನರಲ್
(ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ)
ಕರ್ನಾಟಕ, ಬೆಂಗಳೂರು.

ಬೆಂಗಳೂರು
ದಿನಾಂಕ: 31.12.2020

ಸ್ಟಾಂಡ್ ಅಲೋನ್ ಹಣಕಾಸು ಹೇಳಿಕೆಗಳು

31ನೇ ಮಾರ್ಚ್ 2020ರಲ್ಲಿ ಇರುವಂತೆ ಆಸ್ತಿ ಹೊಣೆ ತಃಖ್ತೆ

(ಮೊಬಲಗು ರೂಪಾಯಿಗಳು ಲಕ್ಷಗಳಲ್ಲಿ)

ವಿವರಗಳು	ಟಿಪ್ಪಣಿ ಸಂಖ್ಯೆ	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿ ಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿ ಅಂಶಗಳು
I. **ಆಸ್ತಿಗಳು**			
(1) ಹಣಕಾಸಿನ ಆಸ್ತಿಗಳು			
(a) ನಗದು ಮತ್ತು ನಗದಿಗೆ ಸಮಾನವಾದದ್ದು	3	5,449.26	3,096.90
(b) ಬ್ಯಾಂಕಿನಲ್ಲಿರುವ ಶಿಲ್ಕು ಮತ್ತು ಮೇಲಿನ (a) ಅಲ್ಲದಿರುವುದು	3A	37,400.00	28,822.18
(c) ಸ್ವೀಕರಿಸಬೇಕಾಗಿರುವುದು			
(i) ವ್ಯಾಪಾರೀ ಸ್ವೀಕೃತಿಗಳು	4	419.16	292.04
(ii) ಇತರೆ ಸ್ವೀಕೃತಿಗಳು	4	70.64	40.27
(d) ಸಾಲಗಳು	5	227.76	392.60
(e) ಹೂಡಿಕೆಗಳು	6		
(i) ಅಂಗಸಂಸ್ಥೆಗಳು, ಸಹ ಸಂಸ್ಥೆಗಳು ಜಂಟೀ ಉದ್ಯಮಗಳು		7,685.78	7,685.78
(ii) ಇತರೆ ಹೂಡಿಕೆಗಳು		18,231.09	32,130.66
(f) ಇತರೆ ಹಣಕಾಸಿನ ಆಸ್ತಿಗಳು	7	2,466.47	2,251.03
ಒಟ್ಟು ಹಣಕಾಸಿನ ಆಸ್ತಿಗಳು		**71,950.16**	**74,711.45**
(2) ಹಣಕಾಸೇತರ ಆಸ್ತಿಗಳು			
(a) ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳು (ನಿವ್ವಳ)	8	6,497.64	6,346.71
(b) ಹೂಡಿಕೆ ಆಸ್ತಿಗಳು	9	32,475.49	33,764.24
(c) ಆಸ್ತಿ ಸ್ಥಾವರ ಮತ್ತು ಸಾಮಗ್ರಿಗಳು	10	253.49	258.29
(d) ಉಪಯೋಗೀ–ಹಕ್ಕು–ಆಸ್ತಿಗಳು	10A	932.31	–
(e) ಇತರೆ ಅಸ್ಪಶ್ಯ ಆಸ್ತಿಗಳು,	10	0.53	0.42
(f) ಇತರೆ ಹಣಕಾಸೇತರ ಆಸ್ತಿಗಳು	11	1,474.74	1,528.46
ಒಟ್ಟು ಹಣಕಾಸೇತರ ಆಸ್ತಿಗಳು		**41,634.20**	**41,898.12**
ಒಟ್ಟು ಆಸ್ತಿಗಳು		**113,584.36**	**116,609.57**

ವಿವರಗಳು	ಟಿಪ್ಪಣಿ ಸಂಖ್ಯೆ	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿ ಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿ ಅಂಶಗಳು
II. ಹೊಣೆಗಾರಿಕೆಗಳು ಮತ್ತು ಬಂಡವಾಳ			
ಹೊಣೆಗಾರಿಕೆಗಳು			
(1) ಹಣಕಾಸಿನ ಹೊಣೆಗಾರಿಕೆಗಳು			
(a) ಪಾವತಿಸತಕ್ಕವುಗಳು			
(I) ವ್ಯಾವಹಾರಿಕ ಪಾವತಿಸತಕ್ಕವುಗಳು	12		
(i) ಅತಿಸಣ್ಣ ಮತ್ತು ಸಣ್ಣ ಉದ್ಯಮಗಳಿಂದ ನಿಂತಿರುವ ಬಾಕಿ			
(ii) ಅತಿಸಣ್ಣ ಮತ್ತು ಸಣ್ಣ ಉದ್ಯಮಗಳಲ್ಲದ ಸಾಲಗಾರರಿಂದ ನಿಂತಿರುವ ಬಾಕಿ		282.83	224.94
(II) ಇತರೆ ಪಾವತಿಸತಕ್ಕವುಗಳು		–	–
(i) ಅತಿಸಣ್ಣ ಮತ್ತು ಸಣ್ಣ ಉದ್ಯಮಗಳಿಂದ ನಿಂತಿರುವ ಬಾಕಿ		–	–
(ii) ಅತಿಸಣ್ಣ ಮತ್ತು ಸಣ್ಣ ಉದ್ಯಮಗಳಲ್ಲದ ಸಾಲಗಾರರಿಂದ ನಿಂತಿರುವ ಬಾಕಿ		–	–
(b) ಸಾಲದ ಭದ್ರತೆಗಳು		–	–
(c) ಸಾಲಗಳು	13	1,004.61	1,004.61
(d) ಠೇವಣಿಗಳು	14	2,273.20	2,157.41
(e) ಅಧೀನ ಹೊಣೆಗಾರಿಕೆಗಳು		–	–
(f) ಇತರೆ ಹಣಕಾಸಿನ ಹೊಣೆಗಾರಿಕೆಗಳು	15	10,735.48	4,742.46
ಒಟ್ಟು ಹಣಕಾಸಿನ ಹೊಣೆಗಾರಿಕೆಗಳು		**14,296.12**	**8,129.42**
(2) ಹಣಕಾಸೇತರ ಹೊಣೆಗಾರಿಕೆಗಳು			
(a) ಉಪಬಂಧಗಳು,	16	764.84	826.51
(b) ಇತರೆ ಹಣಕಾಸಲ್ಲದ ಹೊಣೆಗಾರಿಕೆಗಳು	17	1,392.59	1,586.10
ಒಟ್ಟು ಹಣಕಾಸಲ್ಲದ ಹೊಣೆಗಾರಿಕೆಗಳು		**2,157.43**	**2,412.61**
(3) ಬಂಡವಾಳ			
(a) ಈಕ್ವಿಟಿ ಶೇರು ಬಂಡವಾಳ	18	69,470.60	69,470.60
(b) ಇತರೆ ಈಕ್ವಿಟಿಗಳು	19	27,660.21	36,596.94
ಒಟ್ಟು ಈಕ್ವಿಟಿಗಳು		**97,130.81**	**106,067.54**
ಒಟ್ಟು ಈಕ್ವಿಟಿ ಮತ್ತು ಬಂಡವಾಳಗಳು		113,584.36	116,609.57

ಪ್ರಮುಖ ಲೆಕ್ಕಪತ್ರ ನೀತಿಗಳು ಮತ್ತು ಈ ಹಣಕಾಸಿನ ಕೋಷ್ಟಕಗಳ ಅಂತರ್ಗತ ಭಾಗವಾಗಿರುವ ಟಿಪ್ಪಣಿಗಳು 1&2
ಸ್ಟಾಂಡ್ ಅಲೋನ್ ಹಣಕಾಸಿನ ಕೋಷ್ಟಕಗಳಿಗೆ ಟಿಪ್ಪಣಿಗಳು 3–43
ನಗದು ಹರಿವು ಪಟ್ಟಿ ಲಗತ್ತಿಸಿದೆ.

ಇದೇ ದಿನಾಂಕದ ನಮ್ಮ ವರದಿಯಂತೆ
ಎನ್ಎಸ್ವಿಎಂ & ಅಸೋಸಿಯೇಟ್ಸ್ ಪರವಾಗಿ,
ಚಾರ್ಟರ್ಡ್ ಅಕೌಂಟೆಂಟ್ಸ್ (ಸಂಸ್ಥೆ ನೋಂದಣಿ ಸಂಖ್ಯೆ. 010072S)
ಸಹಿ/– (ಸಿ.ಎ. ವಿ.ಎಸ್. ರಂಗನಾಥನ್)
ಪಾಲುದಾರ
ಸದಸ್ಯ ನಂ.201872

ಸ್ಥಳ: ಬೆಂಗಳೂರು
ದಿನಾಂಕ: 09.12.2020

ನಿರ್ದೇಶಕರ ಮಂಡಳಿಗೆ ಮತ್ತು ಅದರ ಪರವಾಗಿ

(ಸಹಿ/–)	(ಸಹಿ/–)
(ಡಾ. ಪಿ.ಸಿ.ಜಾಫರ್)	**(ಎಂ.ಎಸ್. ಶ್ರೀಕರ್, ಭಾಆಸೇ)**
ನಿರ್ದೇಶಕರು	ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 08574909	ಡಿಐಎನ್: 07882939

(ಸಹಿ/–)
(ವೈ.ಶ್ರೀನಿವಾಸಪ್ಪ)
ಉ.ಪ್ರ.ವ್ಯ (ಹ & ಲೆ)

31ನೇ ಮಾರ್ಚ್ 2020ರಲ್ಲಿ ಇರುವಂತೆ ಲಾಭ ಮತ್ತು ನಷ್ಟ ಕೋಷ್ಟಕ

(ರೂಪಾಯಿಗಳು ಲಕ್ಷಗಳಲ್ಲಿ)

	ವಿವರಗಳು	ಟಿಪ್ಪಣಿ ಸಂಖ್ಯೆ	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು
I.	ನಿರ್ವಹಣೆಯಿಂದ ವರಮಾನಗಳು			
i.	ಬಡ್ಡಿ ಆದಾಯ	20	2,532.96	3,705.11
ii.	ಲಾಭಾಂಶದ ಆದಾಯ		719.25	493.15
iii.	ಬಾಡಿಗೆ ಆದಾಯ	20	4,190.83	3,921.28
iv.	ಇತರೆ (ನಿರ್ದಿಷ್ಟವಾಗಿ ತಿಳಿಸುವುದು)	20	1,081.24	2,300.64
	ನಿರ್ವಹಣೆಯಿಂದ ಒಟ್ಟು ವರಮಾನಗಳು		8,524.28	10,420.18
II.	**ಇತರೆ ಆದಾಯ**	**21**	**66.65**	**192.89**
III.	**ಒಟ್ಟು ಆದಾಯ** (I+II)		**8,590.92**	**10,613.07**
	ವೆಚ್ಚಗಳು			
i.	ಹಣಕಾಸಿನ ವೆಚ್ಚಗಳು	22	135.24	141.14
ii.	ಸಿಬ್ಬಂದಿ ಸೌಲಭ್ಯ ವೆಚ್ಚಗಳು	23	886.73	882.79
iii.	ಸವಕಳಿ, ಅಡಮಾನ ಮತ್ತು ಹಾನಿಗಳು	24	396.12	380.42
iv.	ಇತರೆ ವೆಚ್ಚಗಳು (ನಿರ್ದಿಷ್ಟವಾಗಿ ತಿಳಿಸುವುದು)	25	1,082.96	1,047.78
IV.	**ಒಟ್ಟು ವೆಚ್ಚಗಳು**		**2,501.06**	**2,452.13**
V	ಅಸಾಧಾರಣ ವಿಷಯಗಳು ಮತ್ತು ತೆರಿಗೆಗಳ ಮೊದಲು ಲಾಭ/ (ನಷ್ಟ) (III- IV)		6,089.86	8,160.95
VI	ಅಸಾಧಾರಣ ವಿಷಯಗಳು		–	
VII	ತೆರಿಗೆಗೆ ಮುಂಚೆ ಲಾಭ/(ನಷ್ಟ) (V-VI)		6,089.86	8,160.95
VIII	ತೆರಿಗೆ ವೆಚ್ಚಗಳು: (ಟಿಪ್ಪಣಿ 5ನ್ನು ಗಮನಿಸಿ)			
	(1) ಚಾಲ್ತಿ ತೆರಿಗೆ		(812.23)	(1,243.01)
	(2) ಹಿಂದಿನ ವರ್ಷಗಳು		(100.95)	–
	(3) ಮುಂದೂಡಲ್ಪಟ್ಟ ತೆರಿಗೆಗಳು		–	–
	ಉಪಯೋಗಿಸದೇ ಇರುವ ಹಿಂದಿನ ವರ್ಷಗಳ ತೆರಿಗೆ ಜಮಾಗಳು–ಈ ವರ್ಷ ಗುರುತಿಸಿದ್ದು		700.27	–
	ವರ್ಷಾವಧಿಯಲ್ಲಿ ಉಪಯೋಗಿಸಿರುವ ತೆರಿಗೆ ಜಮಾಗಳು		(424.40)	(297.89)
	ವರ್ಷಾವಧಿಯಲ್ಲಿ ಹಿಂಪಡೆದುದು (ಸಮಯದಲ್ಲಿ ವ್ಯತ್ಯಾಸ)		(203.78)	(543.70)
			(841.10)	**(2,084.60)**

	ವಿವರಗಳು	ಟಿಪ್ಪಣಿ ಸಂಖ್ಯೆ	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿ ಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿ ಅಂಶಗಳು
XIV	ಡಿಸ್ಕೌಂಟಿಂಗ್ ನಿರ್ವಹಣೆಯಿಂದ ಲಾಭ/(ನಷ್ಟ) (ತೆರಿಗೆ ನಂತರ) (XII-XIII)		–	–
IX	ನಿರ್ವಹಣೆಗಳನ್ನು ಮುಂದುವರಿಸಿರುವುದರಿಂದ ಲಾಭ/(ನಷ್ಟ) (VII-VIII)		5,248.76	6,076.35
X	ನಿರ್ವಹಣೆಗಳನ್ನು ಮುಂದುವರಿಸದೇ ಇರುವುದರಿಂದ ಲಾಭ/(ನಷ್ಟ)		–	–
XI	ಮುಂದುವರಿಸದೇ ಇರುವ ನಿರ್ವಹಣೆಯ ತೆರಿಗೆ ವೆಚ್ಚಗಳು		–	–
XII	ನಿರ್ವಹಣೆಗಳನ್ನು ಮುಂದುವರಿಸದೇ ಇರುವುದರಿಂದ ಲಾಭ/(ನಷ್ಟ) (ತೆರಿಗೆ ನಂತರ) (X-XI)		–	–
XIII	ಅವಧಿಯ ಲಾಭ/(ನಷ್ಟ)		5,248.76	6,076.35
XIV	ಇತರೆ ಸಮಗ್ರ ಆದಾಯ			
	A. (i) ಲಾಭ ಮತ್ತು ನಷ್ಟಕ್ಕೆ ಪುನರ್ ವರ್ಗೀಕರಣ ಮಾಡದ ವಿಷಯಗಳು			
	(a) ವ್ಯಾಖ್ಯಾನಿಸಲ್ಪಟ್ಟ ಸೌಲಭ್ಯ ಯೋಜನೆಗಳ ಪುನರ್ ಮೌಲ್ಯಮಾಪನ		(15.84)	(87.21)
	(b) ಈಕ್ವಿಟಿ ಹೂಡಿಕೆಗಳ ಹಣಕಾಸಿನ ಮೌಲ್ಯ ಬದಲಾವಣೆ		(14,238.38)	(554.91)
	B. (ii) ಲಾಭ ಅಥವಾ ನಷ್ಟಕ್ಕೆ (ಶುಲ್ಕ)/ಜಮಾ ಪುನರ್ ವರ್ಗೀಕರಣ ಮಾಡದೇ ಇರುವುದಕ್ಕೆ ಆದಾಯ ತೆರಿಗೆ			
	(a) ಚಾಲ್ತಿ ತೆರಿಗೆ		4.61	25.39
	(b) ಮುಂದೂಡಲ್ಪಟ್ಟ ತರಿಗೆ		64.12	(77.09)
	D. ಲಾಭ ಮತ್ತು ನಷ್ಟ ಖಾತೆಗೆ ಪುನರ್‌ವರ್ಗೀಕರಣ ಮಾಡಿರುವ ರಖಮಿಗೆ ಆದಾಯ ತೆರಿಗೆ		–	–
	ಒಟ್ಟು ಇತರೆ ಸಮಗ್ರ ಆದಾಯಗಳು		**(14,185.49)**	**(693.81)**
XV	ಅವಧಿಯಲ್ಲಿ ಒಟ್ಟು ಇತರೆ ಸಮಗ್ರ ಆದಾಯಗಳು (XIII+XIV) (ಅವಧಿಯಲ್ಲಿನ ಲಾಭ(ನಷ್ಟ) ಮತ್ತು ಇತರೆ ವ್ಯಾಪಕವಾದ ಆದಾಯ ಸೇರಿದೆ.		(8,936.73)	5,382.54
XVI	ಪ್ರತೀ ಈಕ್ವಿಟಿ ಷೇರಿನ ಗಳಿಕೆ	26		
	ಮೂಲ		0.76	0.91
	ದುರ್ಬಲಗೊಳಿಸಿರುವುದು		0.76	0.91
ಹಣಕಾಸಿನ ಕೋಷ್ಟಕಗಳ ಅವಿಭಾಜ್ಯ ಭಾಗವಾಗಿರುವ ಲಗತ್ತಿಸಲ್ಪಟ್ಟ ಟಿಪ್ಪಣಿಗಳನ್ನು ಗಮನಿಸಿ.				

ಪ್ರಮುಖ ಲೆಕ್ಕಪತ್ರ ನೀತಿಗಳು ಮತ್ತು ಈ ಹಣಕಾಸಿನ ಕೋಷ್ಟಕಗಳ ಅಂತರ್ಗತ ಭಾಗವಾಗಿರುವ ಟಿಪ್ಪಣಿಗಳು 1&2
ಸ್ಟಾಂಡ್ ಅಲೋನ್ ಹಣಕಾಸಿನ ಕೋಷ್ಟಕಗಳಿಗೆ ಟಿಪ್ಪಣಿಗಳು 3–42
ನಗದು ಹರಿವು ಪಟ್ಟಿ ಲಗತ್ತಿಸಿದೆ.

ಇದೇ ದಿನಾಂಕದ ನಮ್ಮ ವರದಿಯಂತೆ
ಎನ್‌ಎಸ್‌ವಿಎಂ & ಅಸೋಸಿಯೇಟ್ಸ್ ಪರವಾಗಿ,
ಚಾರ್ಟರ್ಡ್ ಅಕೌಂಟೆಂಟ್ಸ್ (ಸಂಸ್ಥೆ ನೋಂದಣಿ ಸಂಖ್ಯೆ. 010072S)
ಸಹಿ/– (ಸಿ.ಎ. ವಿ.ಎಸ್. ರಂಗನಾಥನ್)
ಪಾಲುದಾರ
ಸದಸ್ಯ ನಂ.201872

ಸ್ಥಳ: ಬೆಂಗಳೂರು
ದಿನಾಂಕ: 09.12.2020

ನಿರ್ದೇಶಕರ ಮಂಡಳಿಗೆ ಮತ್ತು ಅದರ ಪರವಾಗಿ

(ಸಹಿ/–)	(ಸಹಿ/–)
(ಡಾ. ಪಿ.ಸಿ.ಜಾಫರ್)	(ಎಂ.ಎಸ್. ಶ್ರೀಕರ್, ಭಾಆಸೇ)
ನಿರ್ದೇಶಕರು	ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 08574909	ಡಿಐಎನ್: 07882939

(ಸಹಿ/–)
(ವೈ.ಶ್ರೀನಿವಾಸಪ್ಪ)
ಉ.ಪ್ರ.ವ್ಯ (ಹ & ಲೆ)

31ನೇ ಮಾರ್ಚ್ 2020ರ ವರ್ಷಾಂತ್ಯಕ್ಕೆ ಇರುವಂತೆ ನಗದು ಹರಿವಿನ ಪಟ್ಟಿ

(ರೂಪಾಯಿಗಳು ಲಕ್ಷಗಳಲ್ಲಿ)

ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು		ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	
ಎ. ನಿರ್ವಹಣಾ ಚಟುವಟಿಕೆಗಳಿಂದ ನಗದು ಹರಿವು				
ತೆರಿಗೆಗೆ ಮುಂಚೆ ಲಾಭ		6,089.86		8,160.95
ಹೊಂದಾಣಿಕೆಗಳು				
ಸವಕಳಿ ಮತ್ತು ಭೋಗ್ಯ	396.12		380.42	
ಆಸ್ತಿಗಳ ಮಾರಾಟದಿಂದ ಲಾಭ	(0.02)		(1.11)	
ಹಣಕಾಸಿನ ವೆಚ್ಚಗಳು (ಗುತ್ತಿಗೆ ಹೊಣೆಗಾರಿಕೆ)	0.02		–	
ಪಾವತಿಸಲ್ಪಟ್ಟ ಗುತ್ತಿಗೆ ಬಾಡಿಗೆಗಳು	(0.04)		–	
ಸರ್ಕಾರೀ ದೇಣಿಗೆ ಆದಾಯ	–		–	
ಹಣಕಾಸಿನ ವೆಚ್ಚಗಳಲ್ಲಿ ಸೇರಿರುವ ಆದಾಯದ ಮೇಲೆ ಬಡ್ಡಿ	–		8.33	
ಒಸಿಐ ಗೆ ಪುನಃ ವರ್ಗೀಕರಿಸಲ್ಪಟ್ಟ ಪುನಃ ಮೌಲ್ಯಮಾಪನ ಲಾಭಗಳು	(15.84)		(87.21)	
ಹಿಂತೆಗೆಯಲ್ಪಟ್ಟ ನಷ್ಟ ಭತ್ಯೆಗಳಿಗೆ ಉಪಬಂಧಗಳು	(733.42)	(353.17)	(1,936.90)	(1,636.48)
ನಗದು ಹರಿವಿಗೆ ಮೊದಲು ದುಡಿಮೆಯ ಬಂಡವಾಳದಲ್ಲಿ ಬದಲಾವಣೆಗಳು		**5,736.69**		**6,524.47**
ದುಡಿಮೆಯ ಬಂಡವಾಳದಲ್ಲಿ ಬದಲಾವಣೆಗಳು				
ಸ್ವೀಕಾರಾರ್ಹವಾದವುಗಳು	(157.50)		11.00	
ಸಾಲಗಳು	898.26		1,951.43	
ಇತರೆ ಹಣಕಾಸಿನ ಆಸ್ತಿಗಳು	(215.44)		(247.49)	
ಇತರೆ ಹಣಕಾಸೇತರ ಆಸ್ತಿಗಳು	(57.35)		0.15	
ವ್ಯಾಪಾರೀ ಪಾವತಿಗಳು	57.89		14.29	
ಠೇವಣಿಗಳು	115.78		241.16	
ಇತರೆ ಹಣಕಾಸಿನ ಹೊಣೆಗಾರಿಕೆಗಳು	5,992.80		658.98	
ವೆಚ್ಚಗಳಿಗೆ ಉಪಬಂಧಗಳು	(76.83)		54.01	
ಇತರೆ ಹಣಕಾಸೇತರ ಹೊಣೆಗಾರಿಕೆಗಳು	(193.51)		(2,256.69)	
ದುಡಿಮೆಯ ಬಂಡವಾಳದಲ್ಲಿ ನಿವ್ವಳ ಬದಲಾವಣೆಗಳು		6,364.09		426.83
ಕಾರ್ಯಚರಣೆಗಳಲ್ಲಿ ಉತ್ಪತ್ತಿಯಾದ ನಗದು		12,100.78		6,951.30
ಆದಾಯ ತೆರಿಗೆ ಮರುಪಾವತಿ ಸ್ವೀಕರಿಸಿದ್ದು		68.64		84.88
ಪಾವತಿಸಲ್ಪಟ್ಟ ಆದಾಯ ತೆರಿಗೆ		(865.72)		(1,185.60)
ಕಾರ್ಯಚರಣೆಗಳಲ್ಲಿ ಉತ್ಪತ್ತಿಯಾದ ನಿವ್ವಳ ನಗದು		**11,303.71**		**5,850.58**

ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು		ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	
ಬಿ. ಹೂಡಿಕೆಯ ಚಟುವಟಿಕೆಗಳಲ್ಲಿ ನಗದು ಹರಿವು				
ಆಸ್ತಿಗಳು, ಸ್ಥಾವರ ಮತ್ತು ಸಾಮಗ್ರಿಗಳಿಗೆ ಸೇರಿಕೆಗಳು	(33.15)		(3.09)	
ಅದೃಷ್ಯ ಆಸ್ತಿಗಳಿಗೆ ಸೇರಿಕೆಗಳು	(0.25)		–	
ಹೂಡಿಕೆ ಆಸ್ತಿಗಳಿಗೆ ಸೇರಿಕೆಗಳು	(1.36)		(2,757.85)	
ಗುತ್ತಿಗೆ ಆಧಾರಿತ ಹಕ್ಕುಗಳ ಮಾರಾಟ	–		21.00	
ಆಸ್ತಿಗಳ ಮಾರಾಟದಿಂದ ಸ್ವೀಕರಿಸಲಾಗಿರುವ ಮೊಬಲಗು	0.05		0.33	
ನಗದು ಮತ್ತು ನಗದಿಗೆ ಸಮಾನವಾದದ್ದನ್ನು ಹೊರತುಪಡಿಸಿ ಬ್ಯಾಂಕ್ ಶಿಲ್ಕಿನಲ್ಲಿ ಬದಲಾವಣೆ	(8,577.82)		(3,366.48)	
ವೆಂಚರ್ ಕ್ಯಾಪಿಟಲ್ ಫಂಡಿನಲ್ಲಿ ಹೂಡಿಕೆಗಳು	(357.94)		(50.54)	
ವಿಸಿಎಫ್‌ನಿಂದ ಹಿಂಪಡೆದಿರುವುದು	19.13		36.31	
ಹೂಡಿಕೆ ಚಟುವಟಿಕೆಗಳಲ್ಲಿ (ಉಪಯೋಗಿಸಿರುವ) ನಿವ್ವಳ ನಗದು		(8,951.35)		(6,120.32)
ಸಿ. ಹಣಕಾಸಿನ ಚಟುವಟಿಕೆಗಳಿಂದ ನಗದು ಹರಿವು				
ಶೇರು ಬಂಡವಾಳ ಹೊರಡಿಸುವಿಕೆಯಿಂದ ಉಳಿಕೆ	–		2,755.93	
ದೀರ್ಘಾವಧಿ ಸಾಲಗಳು ಮರುಪಾವತಿಸಿದ್ದು	–		–	
ಶೇರು ಬಂಡವಾಳ ಹೊರಡಿಸುವಿಕೆ ವೆಚ್ಚಗಳು	–		(2.76)	
ಹೂಡಿಕೆ ಚಟುವಟಿಕೆಗಳಲ್ಲಿ (ಉಪಯೋಗಿಸಿರುವುದು) ನಿವ್ವಳ ನಗದು		–		2,753.18
ನಗದು ಮತ್ತು ನಗದಿಗೆ ಸಮಾನವಾಗಿರುವುದರ ನಿವ್ವಳ ಹೆಚ್ಚಳ (ಕಡಿಮೆಯಾಗಿರುವುದು)		2,352.36		2,483.43
ನಗದು ಮತ್ತು ನಗದಿಗೆ ಸಮಾನವಾಗಿರುವುದು ವರ್ಷದ ಆರಂಭದಲ್ಲಿ		3,096.90		613.47
ನಗದು ಮತ್ತು ನಗದಿಗೆ ಸಮಾನವಾಗಿರುವುದು ವರ್ಷದ ಕೊನೆಯಲ್ಲಿ		5,449.26		3,096.90
ಟಿಪ್ಪಣಿಗಳು: ನಿರ್ವಹಣಾ ಚಟುವಟಿಕೆಗೆ ಆದಾಯ ತೆರಿಗೆ ಪಾವತಿಸಿರುವುದರಿಂದ ನಿರ್ವಹಣಾ ಚಟುವಟಿಕೆಯ ಅಡಿಯಲ್ಲಿ ವರ್ಗೀಕರಿಸಲಾಗಿದೆ.				

ಪ್ರಮುಖ ಲೆಕ್ಕಪತ್ರ ನೀತಿಗಳು ಮತ್ತು ಈ ಹಣಕಾಸಿನ ಕೋಷ್ಟಕಗಳ ಅಂತರ್ಗತ ಭಾಗವಾಗಿರುವ ಟಿಪ್ಪಣಿಗಳು 1&2
ಸ್ಟಾಂಡ್ ಅಲೋನ್ ಹಣಕಾಸಿನ ಕೋಷ್ಟಕಗಳಿಗೆ ಟಿಪ್ಪಣಿಗಳು 3–42
ನಗದು ಹರಿವು ಪಟ್ಟಿ ಲಗತ್ತಿಸಿದೆ.

ಇದೇ ದಿನಾಂಕದ ನಮ್ಮ ವರದಿಯಂತೆ
ಎನ್‌ಎಸ್‌ವಿಎಂ & ಅಸೋಸಿಯೇಟ್ಸ್ ಪರವಾಗಿ,
ಚಾರ್ಟರ್ಡ್ ಅಕೌಂಟೆಂಟ್ಸ್ (ಸಂಸ್ಥೆ ನೋಂದಣಿ ಸಂಖ್ಯೆ. 010072S)
ಸಹಿ/– (ಸಿ.ಎ. ವಿ.ಎಸ್. ರಂಗನಾಥನ್)
ಪಾಲುದಾರ
ಸದಸ್ಯ ನಂ.201872

ಸ್ಥಳ: ಬೆಂಗಳೂರು
ದಿನಾಂಕ: 09.02.2020

ನಿರ್ದೇಶಕರ ಮಂಡಳಿಗೆ ಮತ್ತು ಅದರ ಪರವಾಗಿ

(ಸಹಿ/–)	(ಸಹಿ/–)
(ಡಾ. ಪಿ.ಸಿ.ಜಾಫರ್)	**(ಎಂ.ಎಸ್. ಶ್ರೀಕರ್, ಭಾಆಸೇ)**
ನಿರ್ದೇಶಕರು	ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 08574909	ಡಿಐಎನ್: 07882939

(ಸಹಿ/–)
(ವೈ.ಶ್ರೀನಿವಾಸಪ್ಪ)
ಉ.ಪ್ರ.ವ್ಯ (ಹ & ಲೆ)

ಹಾಲಿ ವರದಿ ಮಾಡುವ ಅವಧಿ 31ನೇ ಮಾರ್ಚಿ 2020ಕ್ಕೆ ಈಕ್ವಿಟಿಯಲ್ಲಿ ಬದಲಾವಣೆಯ ಕೋಷ್ಟಕ

(ರೂಪಾಯಿಗಳು ಲಕ್ಷಗಳಲ್ಲಿ)

(A) ಈಕ್ವಿಟಿ ಶೇರು ಬಂಡವಾಳ	ಶೇರುಗಳ ಸಂಖ್ಯೆ	ಮೊಬಲಗು
1ನೇ ಏಪ್ರಿಲ್ 2018ರಲ್ಲಿ ಇರುವಂತೆ ಶಿಲ್ಕು	**667,146,690**	**66,714.67**
31ನೇ ಮಾರ್ಚಿ 2019ರ ವರ್ಷಾವಧಿಯಲ್ಲಿ ಬದಲಾವಣೆಗಳು	27,559,334	2,755.93
31ನೇ ಮಾರ್ಚಿ 2019ರಲ್ಲಿರುವಂತೆ ಶಿಲ್ಕು	**694,706,024**	**69,470.60**
31ನೇ ಮಾರ್ಚಿ 2020ರ ವರ್ಷಾವಧಿಯಲ್ಲಿ ಬದಲಾವಣೆಗಳು	–	–
31ನೇ ಮಾರ್ಚಿ 2020ರಲ್ಲಿರುವಂತೆ ಶಿಲ್ಕು	**694,706,024**	**69,470.60**

(B) ಇತರೆ ಈಕ್ವಿಟಿ	ಮೀಸಲು ಮತ್ತು ಹೆಚ್ಚುವರಿ		ಇತರೆ ಸಮಗ್ರ ಆದಾಯ	ಮೊತ್ತ
	ಉಳಿಸಿಕೊಂಡಿರುವ ಆದಾಯ	ಅಸಲು ಬಿಡುಗಡೆ ಮೀಸಲು		
1ನೇ ಏಪ್ರಿಲ್ 2018ರಲ್ಲಿ ಇರುವಂತೆ ಶಿಲ್ಕು	**(7,969.25)**	**9,881.59**	**29,304.82**	**31,217.16**
ವರ್ಷಾವಧಿಯ ಲಾಭ	6,076.35	–	(693.81)	5,382.54
ಶೇರು ಹೊರಡಿಸುವಿಕೆ ವೆಚ್ಚಗಳು	(2.76)	–	–	(2.76)
31ನೇ ಮಾರ್ಚಿ 2019ರಲ್ಲಿ ಇರುವಂತೆ ಶಿಲ್ಕು	(1,895.66)	9,881.59	28,611.01	36,596.94
ವರ್ಷಾವಧಿಯ ಲಾಭ	5,248.76	–	(14,185.49)	(8,936.73)
31ನೇ ಮಾರ್ಚಿ 2020ರಲ್ಲಿ ಶಿಲ್ಕು	**3,353.10**	**9,881.59**	**14,425.52**	**27,660.21**

ಟಿಪ್ಪಣಿ 3: ನಗದು ಮತ್ತು ನಗದಿಗೆ ಸಮಾನವಾದದ್ದು (ರೂಪಾಯಿಗಳು ಲಕ್ಷಗಳಲ್ಲಿ)

ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು
ಕೈಯಲ್ಲಿರುವ ನಗದು	0.13	0.05
ಬ್ಯಾಂಕಿನಲ್ಲಿರುವ ಶಿಲ್ಕುಗಳು		
ಚಾಲ್ತಿ ಖಾತೆಗಳಲ್ಲಿ	5,449.13	3,096.86
3 ತಿಂಗಳುಗಳಿಗಿಂತ ಕಡಿಮೆ ಮುಕ್ತಾಯದ ಅವಧಿಯದ್ದು	–	–
ಮೊತ್ತ	**5,449.26**	**3,096.90**

ಟಿಪ್ಪಣಿ 3ಎ: ನಗದು ಮತ್ತು ನಗದಿಗೆ ಸಮಾನವಾದದ್ದನ್ನು ಹೊರತುಪಡಿಸಿ ಬ್ಯಾಂಕ್ ಶಿಲ್ಕು

ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು
ಬ್ಯಾಂಕಿನಲ್ಲಿರುವ ಸ್ಥಿರ ಠೇವಣಿಗಳು (ಮೂಲ ಮುಕ್ತಾಯದ ಅವಧಿಯ ಆಧಾರದ ಮೇಲೆ)		
– 3 ತಿಂಗಳುಗಳಿಗಿಂತ ಹೆಚ್ಚಿನ ಆದರೆ 12 ತಿಂಗಳುಗಳ ವರೆಗಿನದ್ದು	37,400.00	28,822.18
– 12 ತಿಂಗಳುಗಳಿಗಿಂತ ಹೆಚ್ಚಿನ ಮುಕ್ತಾಯದ ಅವಧಿ ಇರುವುದು	–	–
ಮೊತ್ತ	**37,400.00**	**28,822.18**

ಟಿಪ್ಪಣಿ 4: ಸ್ವೀಕಾರಾರ್ಹವಾದವುಗಳು (ರೂಪಾಯಿಗಳು ಲಕ್ಷಗಳಲ್ಲಿ)

ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು
(i) **ವ್ಯಾಪಾರೀ ಸ್ವೀಕಾರಾರ್ಹವಾದವುಗಳು**		
(a) **ಉತ್ತಮವೆಂದು ಪರಿಗಣಿಸಲ್ಪಟ್ಟಿರುವ ಸ್ವೀಕಾರಾರ್ಹವಾದವುಗಳು– ಭದ್ರತೆಯಿಲ್ಲದ್ದು**		
ಸ್ವೀಕಾರಾರ್ಹವಾದ ಬಾಡಿಗೆ – ಖನಿಜ ಭವನ	139.00	22.75
ಸ್ವೀಕಾರಾರ್ಹವಾದ ಬಾಡಿಗೆ – ಐಟಿಬಿಟಿ ಪಾರ್ಕ್	88.71	71.20
ನಿರ್ವಹಣಾ ಶುಲ್ಕ ವಸೂಲಾಗತಕ್ಕವುಗಳು	191.45	198.09
ನಿವ್ವಳ	419.16	292.04
(b) **ಸ್ವೀಕಾರಾರ್ಹವಾದವುಗಳು – ಭೋಗ್ಯದ ಸಾಲ**		
ಸ್ವೀಕಾರಾರ್ಹವಾಗಿರುವ ಬಾಡಿಗೆ ಮತ್ತು ನಿರ್ವಹಣೆ	13.93	13.93
ಇತರೆ	79.68	79.68
	93.61	93.61
ಕಳೆಯಿರಿ: ದುರ್ಬಲಗೊಳಿಸುವ ನಷ್ಟಕ್ಕೆ ಭತ್ಯೆ	93.61	93.61
ನಿವ್ವಳ	–	–
ಮೊತ್ತ	**419.16**	**292.04**
(ii) ಇತರೆ ಸ್ವೀಕಾರಾರ್ಹವಾದವುಗಳು		
(a) ಸ್ವೀಕೃತಾರ್ಹವಾದವುಗಳು ಉತ್ತಮವೆಂದು ಪರಿಗಣಿಸಿದ್ದು–ಭದ್ರತೆಯಿಲ್ಲದ್ದು		
ಇತರೆ	70.64	40.27
ನಿವ್ವಳ	70.64	40.27
(b) ಸ್ವೀಕೃತಾರ್ಹವಾದವುಗಳು – ದುರ್ಬಲಗೊಳಿಸುವುದಕ್ಕೆ ಕ್ರೆಡಿಟ್		
ಇತರೆ ಸ್ವೀಕೃತಾರ್ಹವಾದವುಗಳು	2.39	2.39
ಕಳೆಯಿರಿ: ದುರ್ಬಲಗೊಳಿಸುವ ನಷ್ಟ ಭತ್ಯೆ	(2.39)	(2.39)
ನಿವ್ವಳ	–	–
ಮೊತ್ತ	**70.64**	**40.27**

ಟಿಪ್ಪಣಿ 5: ಸಾಲಗಳು (ರೂಪಾಯಿಗಳು ಲಕ್ಷಗಳಲ್ಲಿ)

ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು
ಭಾರತದಲ್ಲಿರುವ ಸಾಲಗಳು – ಭದ್ರತೆಯಿಲ್ಲದ್ದು – ದುರ್ಬಲಗೊಳಿಸಲ್ಪಟ್ಟ ದರದಲ್ಲಿ		
(i) **ಖರೀದಿಸಲ್ಪಟ್ಟ ಬಿಲ್‌ಗಳು ಮತ್ತು ಡಿಸ್ಕೌಂಟ್ ಮಾಡಿದ್ದು**	**500.27**	**500.27**
ಕಳೆಯಿರಿ: ದುರ್ಬಲಗೊಳಿಸಲ್ಪಟ್ಟ ನಷ್ಟ	(500.27)	(500.27)
ನಿವ್ವಳ	–	–
(ii) **ಬೇಡಿಕೆಯ ಮೇಲೆ ಮರುಪಾವತಿಸಲ್ಪಡುವ ಸಾಲಗಳು**	**227.76**	**392.58**
ಕಳೆಯಿರಿ: ದುರ್ಬಲಗೊಳಿಸಲ್ಪಟ್ಟ ನಷ್ಟಗಳು	–	–
ನಿವ್ವಳ	227.76	392.58
(iii) **ಇತರೆ ಸಾಲಗಳು ಮತ್ತು ಮುಂಗಡಗಳು–ಅವಧಿ ಸಾಲಗಳು**		
ಸಂಬಂಧಪಟ್ಟ ಪಾರ್ಟಿಗಳಿಗೆ ಅವಧಿ ಸಾಲಗಳು	49.83	49.83
ಇತರೆಯವರಿಗೆ ಅವಧಿ ಸಾಲಗಳು	12,294.87	12,613.09
ಕಳೆಯಿರಿ: ದುರ್ಬಲಗೊಳಿಸಲ್ಪಟ್ಟ ನಷ್ಟಗಳು	(12,344.69)	(12,662.92)
ನಿವ್ವಳ	–	–
(iv) **ಇತರೆ – ಮುಂಗಡಗಳು**		
ಸಂಬಂದಪಟ್ಟ ಪಕ್ಷಗಳಿಗೆ ಮುಂಗಡಗಳು	9.11	9.11
ಇತರೆಯವರಿಗೆ ಮುಂಗಡಗಳು	747.34	757.40
ಕಳೆಯಿರಿ: ದುರ್ಬಲಗೊಳಿಸಲ್ಪಟ್ಟ ನಷ್ಟಗಳು	(756.45)	(766.48)
ನಿವ್ವಳ	–	0.02
(v) ಇತರೆಗಳು – ಕಾರ್ಪೊರೇಟ್ ಸಾಲಗಳು	**3,236.00**	**3,641.16**
ಕಳೆಯಿರಿ: ದುರ್ಬಲಗೊಳಿಸಲ್ಪಟ್ಟ ನಷ್ಟಗಳು	(3,236.00)	(3,641.16)
ನಿವ್ವಳ	–	–
(vi) **ಇತರೆಗಳು – ಬ್ರಿಡ್ಜ್ ಸಾಲಗಳು**	**416.80**	**416.80**
ಕಳೆಯಿರಿ: ದುರ್ಬಲಗೊಳಿಸಲ್ಪಟ್ಟ ನಷ್ಟಗಳು	(416.80)	(416.80)
ನಿವ್ವಳ	–	–
ಮೊತ್ತ	**227.76**	**392.60**

ಟಿಪ್ಪಣಿಗಳು: ಎಲ್ಲಾ ಸಾಲಗಳನ್ನು ಭೋಗ್ಯಕ್ಕೆ ಒಳಪಡಿಸಿದ ದರದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದ್ದು, ಯಾವುದೇ ಸಾಲಗಳನ್ನು ಲಾಭ & ನಷ್ಟದ ಖಾತೆಯಲ್ಲಿ /ಇತರೆ ಸಮಗ್ರ ಆದಾಯದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

ಟಿಪ್ಪಣಿ.6(i): ಅಂಗ ಸಂಸ್ಥೆಗಳು, ಸಹಸಂಸ್ಥೆಗಳು ಮತ್ತು ಜಂಟೀ ಸಹಯೋಗ ಉದ್ಯಮದಲ್ಲಿ ಹೂಡಿಕೆಗಳು (ರೂಪಾಯಿಗಳು ಲಕ್ಷಗಳಲ್ಲಿ)

ಕ್ರ ಸಂ.	ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು
	ಕ್ವೋಟ್ ಮಾಡದೇ ಇರುವ ಈಕ್ವಿಟಿ ಶೇರುಗಳು		
	(ಎಲ್ಲಾ ಹೂಡಿಕೆಗಳು ಭಾರತದಲ್ಲಿವೆ)		
1	**ಅಂಗಸಂಸ್ಥೆಗಳಲ್ಲಿ ಹೂಡಿಕೆಗಳು**		
	ತದಡಿ ಬಂದರು ನಿಯಮಿತ	5.00	5.00
	ಉಪ ಮೊತ್ತ	**5.00**	**5.00**
2	**ಸಹಸಂಸ್ಥೆಗಳಲ್ಲಿ ಹೂಡಿಕೆಗಳು**		
	ಭದ್ರಾವತಿ ಬಾಲಾಜಿ ಆಯಿಲ್ ಪಾಲ್ಮ್ಸ್ ಲಿಮಿಟೆಡ್	196.00	196.00
	ಫುಡ್ ಕರ್ನಾಟಕ ಲಿಮಿಟೆಡ್	551.82	551.82
	ಕರ್ನಾಟಕ ಆಂಟಿ ಬಯಾಟಿಕ್ಸ್ & ಫಾರ್ಮಾ ಲಿಮಿಟೆಡ್	22.00	22.00
	ಸಿದ್ಧಾರ್ಥ ಮೆಟಲ್ಸ್ ಲಿಮಿಟೆಡ್	1,993.66	1,993.66
	ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್	1.00	1.00
	ಕರ್ನಾಟಕ ಅಸೆಟ್ ಮ್ಯಾನೇಜ್‌ಮೆಂಟ್ ಕಂಪೆನಿ ಲಿಮಿಟೆಡ್	16.50	16.50
	ಕರ್ನಾಟಕ ಟ್ರಸ್ಟೀ ಕಂಪೆನಿ ಪ್ರೈವೇಟ್ ಲಿಮಿಟೆಡ್	0.50	0.50
	ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ (ಕೆಳಗೆ ಟಿಪ್ಪಣಿ 2ನ್ನು ಗಮನಿಸಿ)	4,999.80	4,999.80
	ಹಟ್ಟಿ ಗೋಲ್ಡ್ ಮೈನ್ಸ್ ಕಂ.ಲಿಮಿಟೆಡ್ (ಕೆಳಗೆ ಟಿಪ್ಪಣಿ2ನ್ನು ಗಮನಿಸಿ)	115.00	115.00
	ಉಪ ಮೊತ್ತ	**7,896.28**	**7,896.28**
	ಕಳೆಯಿರಿ: ದುರ್ಬಲಗೊಳಿಸಿದ ನಷ್ಟಗಳು	(218.00)	(218.00)
	ಉಪ ಮೊತ್ತ	**7,678.28**	**7,678.28**
3	**ಜಂಟೀ ಸಹಯೋಗ ಉದ್ಯಮದಲ್ಲಿ ಹೂಡಿಕೆಗಳು**		
	ಕೆಎಸ್‌ಐಐಡಿಸಿ–ಐಎಲ್‌ಎಫ್‌ಎಸ್ ಇನ್‌ಫ್ರಾ ಡೆವಲಪ್‌ಮೆಂಟ್ ಕಂಪೆನಿ ಲಿ.	2.50	2.50
	ಉಪ ಮೊತ್ತ	**2.50**	**2.50**
	ಮೊತ್ತ	**7,685.78**	**7,685.78**

Note. **6** (i): **ಮುಂದುವರಿದುದು**

ಅಂಗಸಂಸ್ಥೆ/ಸಹಸಂಸ್ಥೆಯ ಹೆಸರು	ಸಂಸ್ಥೆಯವರು ಹೊಂದಿರುವ ಆಸಕ್ತಿಯ ಪಾಲುದಾರಿಕೆಯ ಭಾಗ		ಸಂಬಂಧಗಳು
	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	
ದಿ ತದಡಿ ಬಂದರು ನಿಯಮಿತ	100%	100%	ಅಂಗಸಂಸ್ಥೆ
ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್	46%	46%	ಸಹಸಂಸ್ಥೆ
ಫುಡ್ ಕರ್ನಾಟಕ ಲಿಮಿಟೆಡ್ (ಎಂಎಸ್‌ಐಎಲ್ ಮೂಲಕ ಹೊಂದಿರುವುದೂ ಸೇರಿ)	33%	33%	ಸಹಸಂಸ್ಥೆ
ಕರ್ನಾಟಕ ಆಂಟಿ ಬಯಾಟಿಕ್ಸ್ & ಫಾರ್ಮಾ ಲಿಮಿಟೆಡ್	40.83%	40.83%	ಸಹಸಂಸ್ಥೆ
ಭದ್ರಾವತಿ ಬಾಲಾಜಿ ಆಯಿಲ್ ಪಾಲ್ಮ್ಸ್ ಲಿಮಿಟೆಡ್	49%	49%	ಸಹಸಂಸ್ಥೆ
ಸಿದ್ಧಾರ್ಥ ಮೆಟಲ್ಸ್ ಲಿಮಿಟೆಡ್	21.78%	21.78%	ಸಹಸಂಸ್ಥೆ
ಕೆಎಸ್‌ಐಐಡಿಸಿ–ಐಎಲ್‌ಎಫ್‌ಎಸ್ ಇನ್‌ಫ್ರಾ ಡೆವಲಪ್‌ಮೆಂಟ್ ಕಂಪೆನಿ ಲಿ.	50%	50%	ಜಂಟೀ ಉದ್ಯಮ
ಕರ್ನಾಟಕ ಅಸೆಟ್ ಮ್ಯಾನೇಜ್‌ಮೆಂಟ್ ಕಂಪೆನಿ ಲಿಮಿಟೆಡ್	33.33%	33.33%	ಸಹಸಂಸ್ಥೆ
ಕರ್ನಾಟಕ ಟ್ರಸ್ಟೀ ಕಂಪೆನಿ ಪ್ರೈವೇಟ್ ಲಿಮಿಟೆಡ್	50%	50%	ಸಹಸಂಸ್ಥೆ
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ (ಕೆಳಗೆ ಟಿಪ್ಪಣಿ ಗಮನಿಸಿ)	13%	13%	ಸಹಸಂಸ್ಥೆ
ಹಟ್ಟಿ ಚಿನ್ನದ ಗಣಿ ಕಂಪೆನಿ ನಿಯಮಿತ (ಕೆಳಗೆ ಟಿಪ್ಪಣಿ ಗಮನಿಸಿ)	19.41%	19.41%	ಸಹಸಂಸ್ಥೆ

ಟಿಪ್ಪಣಿಗಳು

1. ಶೇರುದಾರರ ಒಪ್ಪಂದ ಪತ್ರದ ಶರತ್ತುಗಳಲ್ಲಿ ವಿವರಿಸಿರುವಂತೆ ಬಿಐಎಎಲ್‌ಗೆ ರೂ. 102600 ಲಕ್ಷಗಳ ಸಾಲದ ಬಿಡುಗಡೆಗಾಗಿ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದ 51% ಅಂದರೆ 5,49,97,800 ಶೇರುಗಳನ್ನು ಕಂಪೆನಿಯು ಮೆ. ಎಸ್‌ಬಿಐ ಕ್ಯಾಪ್ಸ್ ಟ್ರಸ್ಟೀ ಕಂಪೆನಿ ನಿಯಮಿತ ಇವರಿಗೆ ಅಡಮಾನ ಮಾಡಿರುತ್ತದೆ. ಮೆ. ಎಸ್‌ಬಿಐ ಕ್ಯಾಪ್ಸ್ ಟ್ರಸ್ಟೀ ಕಂಪೆನಿ ನಿಯಮಿತದಲ್ಲಿ ಅಡಮಾನ ಮಾಡಲಾಗಿರುವ ಶೇರುಗಳು ತರುವ ಮೊಬಲಗು ರೂ. 2804.89 ಲಕ್ಷಗಳು. ಬಿಐಎಎಲ್‌ನವರು ಸಾಲವನ್ನು ಸಂಪೂರ್ಣವಾಗಿ ಮರುಪಾವತಿಸಿದ ನಂತರ ಈ ಅಡಮಾನವನ್ನು ತೆಗೆದುಹಾಕಲಾಗುವುದು.

2. ಹಣಕಾಸಿನ ಕೋಷ್ಟಕಗಳಲ್ಲಿ ಹೂಡಿಕೆಗಳನ್ನು ಪರಿಗಣಿಸಲ್ಪಟ್ಟ ದರದಲ್ಲಿ ಪರಿಗಣಿಸಲಾಗಿರುತ್ತದೆ, ಅಂದರೆ, ಬದಲಾವಣೆಯ ದಿನಾಂಕದಲ್ಲಿ ಹಿಂದಿನ ಜಿಎಎಪಿಯು ಹೊಂದಿರುವ ದರದಲ್ಲಿ ತೋರಿಸಲಾಗಿರುತ್ತದೆ. (ಐಎಸ್ 101ರಂತೆ ಸ್ವಯಂಪ್ರೇರಿತ ರಿಯಾಯತಿಯನ್ನು ಪಡೆಯಲಾಗಿದೆ)

3. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತದಲ್ಲಿ ಮತ್ತು ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್‌ನಲ್ಲಿ ಹೂಡಿಕೆಯು 20%ಗಿಂತ ಕಡಿಮೆ ಇದ್ದರೂ ಕೂಡಾ (a) ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತವು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಜಂಟೀ ಭಾಗವಹಿಸುವಿಕೆಯ ಹಾಗೂ ತೀರ್ಮಾನ ತೆಗೆದುಕೊಳ್ಳುವಿಕೆಯೊಂದಿಗೆ ಹೂಡಿಕೆಯಲ್ಲಿ 20%ಗಿಂತ ಜಾಸ್ತಿ ಆಗಿರುವ ಕಾರಣದಿಂದ ಸಹಸಂಸ್ಥೆಯಲ್ಲಿ ಹೂಡಿಕೆಯೆಂದು ವರ್ಗೀಕರಿಸಲಾಗಿದೆ. (b) ಹಟ್ಟಿ ಗೋಲ್ಡ್ ಮೈನ್ಸ್ ಕಂ. ಲಿಮಿಟೆಡ್ ಸಂಸ್ಥೆಯು ಪ್ರಮುಖವಾಗಿ ಕರ್ನಾಟಕ ಸರ್ಕಾರದ ಮಾಲೀಕತ್ವದ ಸಂಸ್ಥೆಯಾಗಿದ್ದು, ಕೆಎಸ್‌ಐಐಡಿಸಿಯು ಕರ್ನಾಟಕ ಸರ್ಕಾರದ 100% ಮಾಲೀಕತ್ವದ ಸಂಸ್ಥೆಯಾಗಿರುವುದರಿಂದ ಅದಕ್ಕೆ ಸಂಸ್ಥೆಯ ಮಾಲೀಕತ್ವದಲ್ಲಿ ಪ್ರಮುಖ ಪ್ರಭಾವ ಇದೆಯೆಂದು ಪರಿಗಣಿಸಲಾಗಿರುವ ಕಾರಣದಿಂದ ಅದನ್ನು ಸಹಸಂಸ್ಥೆಯೆಂದು ಪರಿಗಣಿಸಲಾಗಿರುತ್ತದೆ.

ಟಿಪ್ಪಣಿ.6(ii): ಹೂಡಿಕೆಗಳು (ರೂಪಾಯಿಗಳು ಲಕ್ಷಗಳಲ್ಲಿ)

ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು
ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ದಾಖಲಿಸಲ್ಪಟ್ಟದ್ದು		
ಭಾರತದಲ್ಲಿ ಹೂಡಿಕೆಗಳು		
(i) **ಈಕ್ವಿಟಿ ಪತ್ರಗಳು**		
ಕ್ವೋಟ್ ಮಾಡಲ್ಪಟ್ಟದ್ದು	14,170.60	28,325.80
ಕ್ವೋಟ್ ಮಾಡದೇ ಇರುವುದು	3,254.47	3,257.09
ಮೊತ್ತ	17,425.07	31,582.88
ನಿವ್ವಳ	17,425.07	31,582.88
(ii) ಇತರೆಗಳು – ಪ್ರಿಫರೆನ್ಸ್ ಹೂಡಿಕೆ ಪತ್ರಗಳು		
ಕ್ವೋಟ್ ಮಾಡದೇ ಇರುವುದು	20.87	20.87
ಮೊತ್ತ	20.87	20.87
ಕಳೆಯಿರಿ: ದುರ್ಬಲಗೊಳಿಸಿರುವಿಕೆಯ ನಷ್ಟ	(20.87)	(20.87)
ಮೊತ್ತ	–	–
(iii) **ಇತರೆಗಳು–ವೆಂಚರ್ ಕ್ಯಾಪಿಟಲ್ ಫಂಡ್ (ಕೆಳಗೆ ಟಿಪ್ಪಣಿ–2ನ್ನು ಗಮನಿಸಿ)**	**806.02**	**547.78**
(iv) ಸಾಲಕ್ಕೆ ಭದ್ರತೆಗಳು	**600.00**	**600.00**
ಕಳೆಯಿರಿ: ದುರ್ಬಲಗೊಳಿಸಿರುವುದರಿಂದ ನಷ್ಟ	(600.00)	(600.00)
ನಿವ್ವಳ	–	–
ಉಪ ಮೊತ್ತ	**18,231.09**	**32,130.66**

ಟಿಪ್ಪಣಿ 1: ಐಎನ್‌ಡಿ ಎಎಸ್ 109ರಲ್ಲಿ ಅನುಮತಿ ನೀಡಿರುವಂತೆ ಇತರೆ ಸಮಗ್ರ ಆದಾಯದ ಮೂಲಕ ಸಂಸ್ಥೆಯ ಶೇರು ಪತ್ರಗಳಲ್ಲಿ ಗೊತ್ತುಪಡಿಸಿರುವ ಹೂಡಿಕೆಯನ್ನು ಸಮರ್ಪಕ ಬೆಲೆಯಲ್ಲಿ ಲೆಕ್ಕಹಾಕಲಾಗಿರುತ್ತದೆ. (ಬದಲಿಸಲಾಗದ ಆಯ್ಕೆ) ಎಫ್‌ವಿಟಿಒಸಿಐ ಸಂಸ್ಥೆಯು ವ್ಯಾಪಾರೀ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿಲ್ಲದ ಕಾರಣದಿಂದ ಇದರ ಬಂಡವಾಳ ಪತ್ರಗಳಲ್ಲಿ ಗೊತ್ತುಪಡಿಸಿರುವ ಹೂಡಿಕೆಯೆಂದು ಪರಿಗಣಿಸಲಾಗಿರುತ್ತದೆ.

ಲಾಭಾಂಶಗಳನ್ನು ಬೇರೆ ಎಲ್ಲಾ ಗಳಿಕೆ ಆಥವಾ ನಷ್ಟಗಳ ಜೊತೆಗೆ ಒಸಿಐನಲ್ಲಿ ಗುರುತಿಸಲಾಗಿದೆ. ಒಸಿಐನಲ್ಲಿರುವ ಮೊಬಲಗಿನ ಗುರುತಿಸುವಿಕೆಯನ್ನು ಹಿಂಪಡೆದಿರುವುದರಿಂದ ಇದನ್ನು ಲಾಭ ಅಥವಾ ನಷ್ಟದ ಖಾತೆಗೆ ಪುನಃ ವರ್ಗೀಕರಿಸಲಾಗಿಲ್ಲ.

ಟಿಪ್ಪಣಿ 2: ಐಎನ್‌ಡಿ ಎಎಸ್ 109ರ ಪ್ಯಾರಾ 5.7.5 ರಂತೆ ಬಂಡವಾಳ ಪತ್ರದಲ್ಲಿ ಹೂಡಿಕೆಯನ್ನು ಬದಲಿಸಲಾಗದ ಪತ್ರಗಳೆಂದು ಪರಿಗಣಿಸಿ ಒಸಿಐ ಮೂಲಕ ಸಮರ್ಪಕ ಮೌಲ್ಯದಲ್ಲಿ ಲೆಕ್ಕಹಾಕಲಾಗಿದೆ. ಹೂಡಿಕೆಗಳು ನೇರ ಹೂಡಿಕೆಯೋ ಅಥವಾ ವೆಂಚರ್ ಕ್ಯಾಪಿಟಲ್ ಫಂಡಿನ ಮೂಲಕ ಹೂಡಿಕೆಯೋ ಎಂಬ ಬಗ್ಗೆ ತಿಳಿಸಲು ಏನೂ ಇರುವುದಿಲ್ಲ. ಸಂಬಂಧಪಟ್ಟ ನಿಧಿಯವರು ಒಪ್ಪಿಸಿರುವ ಮೌಲ್ಯಮಾಪನ ವರದಿಯಂತೆ ನಿಧಿಯ ಹೂಡಿಕೆಯನ್ನು ವಿಸಿಎಫ್‌ನವರು ವಿವಿಧ ಬಂಡವಾಳದಲ್ಲಿ ಹೂಡಿರುತ್ತಾರೆ.

ಟಿಪ್ಪಣಿ 3: ಕೋವಿಡ್ – 19ರ ಪರಿಣಾಮಗಳ ಕಾರಣದಿಂದ ಶೇರು ಮಾರುಕಟ್ಟೆಯಲ್ಲಿ ಕೆಳಮುಖ ಸ್ಥಿತಿ ಕಂಡುಬಂದಿದ್ದು, ಕಂಪೆನಿಯು ಹೊಂದಿರುವ ಹೂಡಿಕೆಗಳ ಮೇಲೆ ಪರಿಣಾಮ ಬೀರಿರುವ ಕಾರಣದಿಂದ ಅವುಗಳ ಬೆಲೆಯಲ್ಲಿ ತೀವ್ರವಾದ ಇಳಿಮುಖವಾಗಿರುತ್ತದೆ. ಆದಾಗ್ಯೂ, ಬೆಲೆಯಲ್ಲಿ ಹಠಾತ್ ಕುಸಿತವು ತಾತ್ಕಾಲಿಕ ಮತ್ತು ಕಾಲಕ್ರಮೇಣ ಸುಧಾರಿಸುತ್ತದೆ ಎಂದು ಕಂಪೆನಿಯು ಭರವಸೆ ಹೊಂದಿರುತ್ತದೆ. ಕಂಪೆನಿಯ ಹಣಕಾಸಿನ ಕೋಷ್ಟಕಗಳ ಮೇಲೆ ಕೋವಿಡ್–19ರ ಪರಿಣಾಮದ ಈ ಹಣಕಾಸಿನ ಕೋಷ್ಟಕಗಳಿಗೆ ಅನುಮೋದನೆ ನೀಡಿರುವ ದಿನಾಂಕದಂದು ವ್ಯತ್ಯಾಸವಾಗಬಹುದಾಗಿರುತ್ತದೆ ಹಾಗೂ ಹಣಕಾಸಿನ ಕೋಷ್ಟಕಗಳ ಮೇಲೆ ಇದರ ಪರಿಣಾಮವನ್ನು ಕಂಪೆನಿಯು ನಿಗಾ ವಹಿಸುವುದನ್ನು ಮುಂದುವರಿಸಿದೆ.

ಟಿಪ್ಪಣಿ 6(iii): **ಹೂಡಿಕೆಗಳು**

(ರೂಪಾಯಿಗಳು ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು
	(i) ಬಂಡವಾಳ ಪತ್ರಗಳು		
	ಕ್ವೋಟ್ ಮಾಡಲ್ಪಟ್ಟದ್ದು	**14,170.60**	**28,325.80**
1	ಬಂಗಾಳ್ ಮತ್ತು ಅಸ್ಸಾಂ ಕಂ. ಲಿಮಿಟೆಡ್ (ಕೆ.ಕೆ.ಇಂಡಸ್ಟ್ರೀಸ್ ಲಿ., ಗ್ರೂಪ್ ಕಂಪೆನಿ)	165.44	235.71
2	ಸೆರೆಬ್ರಾ ಇಂಟಿಗ್ರೇಟೆಡ್ ಟೆಕ್ ಲಿಮಿಟೆಡ್	11.60	16.51
3	ಜೆಎಸ್‌ಡಬ್ಲ್ಯೂ ಸ್ಟೀಲ್ ಲಿ.,(ಜಿಂದಾಲ್ ವಿಜಯನಗರ್ ಸ್ಟೀಲ್ ಲಿಮಿಟೆಡ್)	13,296.96	26,589.37
4	ಜೆ.ಕೆ. ಟೈರ್ಸ್ & ಇಂಡಸ್ಟ್ರೀಸ್ ಲಿ., (ಈ ಹಿಂದೆ ವಿಕ್ರಾಂತ್ ಟೈರ್ಸ್ ಲಿ.,)	436.91	959.02
5	ಜೆ.ಕೆ. ಟೈರ್ಸ್ & ಇಂಡಸ್ಟ್ರೀಸ್ ಲಿ., (ಈ ಹಿಂದೆ ವಿಕ್ರಾಂತ್ ಟೈರ್ಸ್ ಲಿ.,) ಹಕ್ಕಿನ ಶೇರಿನ ಬಿಡುಗಡೆ	159.82	350.81
6	ಖೊಡೇ ಇಂಡಿಯಾ ಲಿಮಿಟೆಡ್	1.12	1.87
7	ನಾಗಾರ್ಜುನ ಅಗ್ರಿಟೆಕ್ ಲಿಮಿಟೆಡ್	12.75	9.35
8	ಸಂಗೀತ ಗ್ರಾನೈಟ್ಸ್ ಲಿಮಿಟೆಡ್ (ಮೈಲ್‌ಸ್ಟೋನ್ ಗ್ಲೋಬಲ್ ಲಿಮಿಟೆಡ್)	3.86	4.46
9	ಶ್ರೀ ಜಯಲಕ್ಷ್ಮಿ ಆಟೋಸ್ಪಿನ್ ಲಿಮಿಟೆಡ್	1.95	1.95
10	ಸೌತ್ ಇಂಡಿಯಾ ಪೇಪರ್ ಮಿಲ್ಸ್ ಲಿ.,	80.18	156.75
	ಕ್ವೋಟ್ ಮಾಡದೇ ಇರುವುದು	**3,830.88**	**3,828.50**
1	ಐಶ್ವರ್ಯ ಅಲಾಯ್ಸ್ ಲಿಮಿಟೆಡ್	10.00	10.00
2	ಅರುಂಧತಿ ಲ್ಯಾಬೊರೇಟರೀಸ್ ಲಿ.,	10.00	10.00
3	ಬೆಂಗಳೂರು ಏರ್‌ಪೋರ್ಟ್ ರೈಲ್ ಲಿಂಕ್ ಲಿ.	5.00	5.00
4	ಜಯಶಿಲ್ಪ ಫ್ಲೋರಿಟೆಕ್ ಲಿಮಿಟೆಡ್	25.00	25.00
5	ಜಮಖಂಡಿ ಶುಗರ್ಸ್ ಲಿಮಿಟೆಡ್	337.40	337.20
6	ಕೆಎಸ್ಎಸ್ಐಡಿಸಿ	70.16	67.98
7	ಕೆಬಿಡಿ ಶುಗರ್ಸ್ & ಡಿಸ್ಟಲ್ಲರೀಸ್ ಲಿಮಿಟೆಡ್	16.72	16.72
8	ಕರಾವಳಿ ಫಿಶರೀಸ್ ಲಿಮಿಟೆಡ್	4.15	4.15
9	ಲೋಕಾಮರ್ ಸಿಮೆಂಟ್ಸ್ ಲಿಮಿಟೆಡ್	5.45	5.45
10	ಲಾಲ್ಜಿ ಮಾನೆಕ್‌ಜಿ ಇಂಡಸ್ಟ್ರೀಸ್ ಲಿಮಿಟೆಡ್	5.00	5.00
11	ಮಲ್ಟಿ ಸ್ಪೀಡ್ ಹಬ್ಸ್ ಲಿಮಿಟೆಡ್	1.50	1.50
12	ಮೈಸೂರು ಮಿನರಲ್ಸ್ ಲಿಮಿಟೆಡ್	1,898.76	1,898.76
13	ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿ.,	931.43	931.43
14	ಓಮೆಕ್ ಸೆಲ್ ಇಂಡಸ್ಟ್ರೀಸ್ ಪ್ರೈ ಲಿಮಿಟೆಡ್	0.80	0.80
15	ರಾಮ್ ಗೋಪಾಲ್ ಪೇಪರ್ ಮಿಲ್ಸ್ ಲಿಮಿಟೆಡ್	3.00	3.00
16	ಸಹ್ಯಾದ್ರಿ ಇಂಡಸ್ಟ್ರಿಯಲ್ ಗ್ಯಾಸಸ್ ಲಿಮಿಟೆಡ್	1.85	1.85
17	ಸ್ಕಾಂಬ್ ಪಾಲಿ ಲಿಮಿಟೆಡ್	11.00	11.00
18	ಶ್ರೀ ಕೃಷ್ಣದೇವರಾಯ ಸ್ಟ್ರಾ ಬೋರ್ಡ್ ಪ್ರೈ ಲಿ.,	2.00	2.00

19	ಸುಪರ್ ಸೋನಿಕ್ ರಬ್ಬರ್ ಇಂಡಸ್ಟ್ರೀಸ್ ಲಿ.	15.00	15.00
ಕ್ರಮ ಸಂಖ್ಯೆ	**ವಿವರಗಳು**	**ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು**	**ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು**
20	ಟ್ಯಾನ್ ಫೋರ್ಟ್ ಟೈರ್ಸ್ ಲಿಮಿಟೆಡ್	6.89	6.89
21	ವಿಷ್ಣು ಫೋರ್ಜ್ (ಮೈಸೂರು) ಲಿಮಿಟೆಡ್	3.50	3.50
	ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ಲಿಸ್ಟ್‌ನಿಂದ ತೆಗೆಯಲಾದ ಹೂಡಿಕೆಗಳು		
22	ಅಥೆನಾ ಫೈನಾನ್ಷಿಯಲ್ ಸರ್ವಿಸಸ್ ಲಿ., (20ನೇ ಸೆಂಚುರಿ)	17.50	17.50
23	ಏಶಿಯನ್ ಫ್ಲೋರಾ ಲಿಮಿಟೆಡ್	25.00	25.00
24	ಬೃಂದಾವನ್ ಅಲಾಯ್ಸ್	1.35	1.35
25	ಕೊಯಂಬತ್ತೂರ್ ಪಾಪ್ಯುಲರ್ ಸ್ಪಿನ್ನಿಂಗ್ ಮಿಲ್ಸ್ ಲಿ,	10.00	10.00
26	ಡಯಮಂಡ್ ಡೈಸ್ ಮ್ಯಾನ್ಯುಫ್ಯಾಕ್ಚರಿಂಗ್ ಕಂ. ಲಿ.	3.49	3.49
27	ಗಂಗಾವತಿ ಶುಗರ್ಸ್ ಲಿಮಿಟೆಡ್	37.70	37.70
28	ಗ್ರಾಂಡ್ಲೀಸ್ ಫ್ಲೋರೆಕ್ಸ್ ಲಿಮಿಟೆಡ್	25.00	25.00
29	ಕರ್ನಾಟಕ ಸಿಮೆಂಟ್ಸ್ ಲಿಮಿಟೆಡ್	21.52	21.52
30	ಕರ್ನಾಟಕ ಪಾಲಿ ಪ್ರಾಡಕ್ಟ್ಸ್ ಲಿಮಿಟೆಡ್	6.00	6.00
31	ಕಿಟ್‌ಪ್ಲೈ ಇಂಡಸ್ಟ್ರೀಸ್ ಲಿಮಿಟೆಡ್	25.00	25.00
32	ಲಾಯಿಡ್ಸ್ ಫಯನಾನ್ಸ್ ಲಿಮಿಟೆಡ್ – ಶೇರ್ಸ್	1.61	1.61
33	ಲಾಯಿಡ್ ಫೈನಾನ್ಸ್ ಲಿಮಿಟೆಡ್ – ಕನ್‌ವರ್ಟೆಡ್	0.13	0.13
34	ಲಾಯಿಡ್ ಫೈನಾನ್ಸ್ ಲಿಮಿಟೆಡ್ – ಕನ್‌ವರ್ಟೆಡ್	9.17	9.17
35	ಮಾರುತಿ ಆರ್ಗಾನಿಕ್ಸ್ ಲಿಮಿಟೆಡ್	5.00	5.00
36	ಮೆಟ್ರೋಪೋಲಿ ಓವರ್‌ಸೀಸ್ ಲಿಮಿಟೆಡ್	15.00	15.00
37	ಮೈಕ್ರೋಫೋರ್ಜ್ (ಇಂಡಿಯಾ) ಲಿಮಿಟೆಡ್	4.50	4.50
38	ನಾನಾವತಿ ಡೈಮಂಡ್ ಇಂಡಸ್ಟ್ರೀಸ್ ಲಿಮಿಟೆಡ್	10.00	10.00
39	ಓಮ್ನಿಟೆಲ್ ಇಂಡಸ್ಟ್ರೀಸ್ ಲಿಮಿಟೆಡ್	10.00	10.00
40	ಪಿಟ್ಟೀ ಸಿಮೆಂಟ್ಸ್ & ಇಂಡಸ್ಟ್ರೀಸ್ ಲಿಮಿಟೆಡ್	11.31	11.31
41	ಪಿಟ್ಟೀ ಸಿಮೆಂಟ್ಸ್ & ಇಂಡಸ್ಟ್ರೀಸ್ ಲಿಮಿಟೆಡ್	7.83	7.83
42	ಆರ್.ಕೆ.ಎಸ್ ಆಗ್ರೋ ಟೆಕ್ ಲಿಮಿಟೆಡ್	10.00	10.00
43	ಸಂಡೂರ್ ಲ್ಯಾಮಿನೇಟ್ಸ್ ಲಿಮಿಟೆಡ್	40.00	40.00
44	ಶ್ರೀ ಕ್ವಾಲಿಟಿ ಸಿಮೆಂಟ್ಸ್ ಲಿಮಿಟೆಡ್	21.75	21.75
45	ಶ್ರೀಶ್ಟಾ ಫೈನ್ ಕೆಮಿಕಲ್ಸ್ & ಫಾರ್ಮಾ	18.00	18.00
46	ಸೌತ್ ಈಸ್ಟ್ ಆಗ್ರೋ ಇಂಡಸ್ಟ್ರೀಸ್ ಲಿಮಿಟೆಡ್	10.00	10.00
47	ಸೌತ್ ಇಂಡಿಯ ಸಿಮೆಂಟ್ಸ್ ಲಿಮಿಟೆಡ್	36.00	36.00
48	ಟ್ರಾನ್ಸ್ ಇಂಡಿಯಾ ಲ್ಯಾಂಪ್ಸ್ ಲಿಮಿಟೆಡ್	50.00	50.00
49	ಯೂನಿಯನ್ ಹೋಂ ಪ್ರಾಡಕ್ಟ್ಸ್ ಲಿಮಿಟೆಡ್	3.58	3.58
50	ವಿಂಟೇಜ್ ಫುಡ್ಸ್ ಇಂಡಸ್ಟ್ರೀಸ್ ಲಿಮಿಟೆಡ್	29.82	29.82

ಕ್ರಮ ಸಂಖ್ಯೆ	ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು
	ದುರ್ಬಲಗೊಳಿಸಿರುವಿಕೆಯ ನಷ್ಟಗಳು (ಕ್ವೋಟ್ ಮಾಡದೇ ಇರುವುದು)	**(576.41)**	**(571.41)**
	ಕ್ವೋಟ್ ಮಾಡದೇ ಇರುವುದು	**(576.41)**	**(571.41)**
1	ಐಶ್ವರ್ಯ ಅಲಾಯ್ಸ್ ಲಿಮಿಟೆಡ್	10.00	10.00
2	ಅರುಂಧತಿ ಲ್ಯಾಬೊರೇಟರೀಸ್ ಲಿಮಿಟೆಡ್	10.00	10.00
3	ಬೆಂಗಳೂರು ಏರ್‌ಪೋರ್ಟ್ ರೈಲ್ ಲಿಂಕ್ ಲಿಮಿಟೆಡ್	5.00	–
4	ಜಯಶಿಲ್ಪ ಫ್ಲೋರಿಟೆಕ್ ಲಿಮಿಟೆಡ್	25.00	25.00
5	ಕರಾವಳಿ ಫಿಶರೀಸ್ ಲಿಮಿಟೆಡ್	4.15	4.15
6	ಲೋಕಾಪುರ್ ಸಿಮೆಂಟ್ಸ್ ಲಿಮಿಟೆಡ್	5.45	5.45
7	ಲಾಲ್ಜಿ ಮಾನೆಕ್‌ಜಿ ಇಂಡಸ್ಟ್ರೀಸ್ ಲಿಮಿಟೆಡ್	5.00	5.00
8	ಮಲ್ಟಿ ಸ್ಪೀಡ್ ಹಬ್ಸ್ ಲಿಮಿಟೆಡ್	1.50	1.50
9	ಓಮೆಕ್ ಸೆಲ್ ಇಂಡಸ್ಟ್ರೀಸ್ ಪ್ರೈ ಲಿಮಿಟೆಡ್	0.80	0.80
10	ರಾಮ್ ಗೋಪಾಲ್ ಪೇಪರ್ ಮಿಲ್ಸ್ ಲಿಮಿಟೆಡ್	3.00	3.00
11	ಸಹ್ಯಾದ್ರಿ ಇಂಡಸ್ಟ್ರಿಯಲ್ ಗ್ಯಾಸಸ್ ಲಿಮಿಟೆಡ್	1.85	1.85
12	ಸ್ಕಾಂಬ್ ಪಾಲಿ ಲಿಮಿಟೆಡ್	11.00	11.00
13	ಶ್ರೀ ಕೃಷ್ಣದೇವರಾಯ ಸ್ಟಾ ಬೋರ್ಡ್ ಪ್ರೈ ಲಿ.,	2.00	2.00
14	ಸುಪರ್ ಸೋನಿಕ್ ರಬ್ಬರ್ ಇಂಡಸ್ಟ್ರೀಸ್ ಲಿಮಿಟೆಡ್	15.00	15.00
15	ಟ್ರಾನ್ಸ್‌ಫೋರ್ಟ್ ಟೈರ್ಸ್ ಲಿಮಿಟೆಡ್	6.89	6.89
16	ವಿಷ್ಣು ಫೋರ್ಜ್ (ಮೈಸೂರು) ಲಿಮಿಟೆಡ್	3.50	3.50
	ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ಲಿಸ್ಟ್‌ನಿಂದ ತೆಗೆಯಲಾದ ಸಂಸ್ಥೆಗಳು		
1	ಅಥೆನಾ ಫೈನಾನ್ಶಿಯಲ್ ಸರ್ವೀಸಸ್ ಲಿ., (20ನೇ ಸೆಂಚುರಿ)	17.50	17.50
2	ಏಶಿಯನ್ ಫ್ಲೋರಾ ಲಿಮಿಟೆಡ್	25.00	25.00
3	ಬೃಂದಾವನ್ ಅಲಾಯ್ಸ್ ***	1.35	1.35
4	ಕೊಯಂಬತ್ತೂರ್ ಪಾಪ್ಯುಲರ್ ಸ್ಪಿನ್ನಿಂಗ್ ಮಿಲ್ಸ್ ಲಿ.,***	10.00	10.00
5	ಡಯಮಂಡ್ ಡೈಸ್ ಮ್ಯಾನ್ಯುಫ್ಯಾಕ್ಚರಿಂಗ್ ಕಂ. ಲಿ.***	3.49	3.49
6	ಗಂಗಾವತಿ ಶುಗರ್ಸ್ ಲಿಮಿಟೆಡ್ ***	37.70	37.70
7	ಗ್ರಾಂಡ್ಲೀಸ್ ಫ್ಲೋರೆಕ್ಸ್ ಲಿಮಿಟೆಡ್ ***	25.00	25.00
8	ಕರ್ನಾಟಕ ಸಿಮೆಂಟ್ಸ್ ಲಿಮಿಟೆಡ್ ***	21.52	21.52
9	ಕರ್ನಾಟಕ ಪಾಲಿ ಪ್ರಾಡಕ್ಟ್ಸ್ ಲಿಮಿಟೆಡ್ ***	6.00	6.00
10	ಕಿಟ್‌ಪ್ಲೈ ಇಂಡಸ್ಟ್ರೀಸ್ ಲಿಮಿಟೆಡ್	25.00	25.00
11	ಲ್ಲಾಯಿಡ್ಸ್ ಫೈನಾನ್ಸ್ ಲಿಮಿಟೆಡ್ – ಶೇರ್ಸ್	1.61	1.61
12	ಲಾಯಿಡ್ ಫೈನಾನ್ಸ್ ಲಿಮಿಟೆಡ್ – ಕನ್‌ವರ್ಟೆಡ್	0.13	0.13
13	ಲಾಯಿಡ್ ಫೈನಾನ್ಸ್ ಲಿಮಿಟೆಡ್ – ಕನ್‌ವರ್ಟೆಡ್	9.17	9.17
14	ಮಾರುತಿ ಆರ್ಗಾನಿಕ್ಸ್ ಲಿಮಿಟೆಡ್ ***	5.00	5.00
15	ಮೆಟ್ರೋಪೋಲಿ ಓವರ್‌ಸೀಸ್ ಲಿಮಿಟೆಡ್ ***	15.00	15.00
16	ಮೈಕ್ರೋಫೋರ್ಜ್ (ಇಂಡಿಯಾ) ಲಿಮಿಟೆಡ್	4.50	4.50
17	ನಾನಾವತಿ ಡಯಮಂಡ್ ಇಂಡಸ್ಟ್ರೀಸ್ ಲಿಮಿಟೆಡ್ ***	10.00	10.00

ಕ್ರಮ ಸಂಖ್ಯೆ	ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು
18	ಓಮ್ನಿಟೆಲ್ ಇಂಡಸ್ಟ್ರೀಸ್ ಲಿಮಿಟೆಡ್ ***	10.00	10.00
19	ಪಿಟ್ಟೀ ಸಿಮ್ಮೆಂಟ್ಸ್ & ಇಂಡಸ್ಟ್ರೀಸ್ ಲಿಮಿಟೆಡ್ ***	11.31	11.31
20	ಪಿಟ್ಟೀ ಸಿಮ್ಮೆಂಟ್ಸ್ & ಇಂಡಸ್ಟ್ರೀಸ್ ಲಿಮಿಟೆಡ್ ***	7.83	7.83
21	ಆರ್.ಕೆ.ಎಸ್ ಆಗ್ರೋ ಟೆಕ್ ಲಿಮಿಟೆಡ್***	10.00	10.00
22	ಸಂಡೂರ್ ಲ್ಯಾಮಿನೇಟ್ಸ್ ಲಿಮಿಟೆಡ್	40.00	40.00
23	ಶ್ರೀ ಕ್ವಾಲಿಟಿ ಸಿಮೆಂಟ್ಸ್ ಲಿಮಿಟೆಡ್ ***	21.75	21.75
24	ಶ್ರೀಶ್ಟಾ ಫೈನ್ ಕೆಮಿಕಲ್ಸ್ & ಫಾರ್ಮಾ	18.00	18.00
25	ಸೌತ್ ಈಸ್ಟ್ ಆಗ್ರೋ ಇಂಡಸ್ಟ್ರೀಸ್ ಲಿಮಿಟೆಡ್	10.00	10.00
26	ಸೌತ್ ಇಂಡಿಯ ಸಿಮೆಂಟ್ಸ್ ಲಿಮಿಟೆಡ್ ***	36.00	36.00
27	ಟ್ರಾನ್ಸ್ ಇಂಡಿಯಾ ಲ್ಯಾಂಪ್ಸ್ ಲಿಮಿಟೆಡ್ ***	50.00	50.00
28	ಯೂನಿಯನ್ ಹೋಂ ಪಾಡಕ್ಟ್ಸ್ ಲಿಮಿಟೆಡ್ ***	3.58	3.58
29	ವಿಂಟೇಜ್ ಫುಡ್ಸ್ ಇಂಡಸ್ಟ್ರೀಸ್ ಲಿಮಿಟೆಡ್	29.82	29.82
	(ii) ಪ್ರಿಫರೆನ್ಸ್ ಕಾಗದ ಪತ್ರಗಳು		
	ಕ್ವೋಟ್ ಮಾಡದೇ ಇರುವುದು	**20.87**	**20.87**
1	9.5% ಆಂಧ್ರಾ ಸ್ಟೀಲ್ ಕಾರ್ಪೊರೇಷನ್	6.99	6.99
2	11% ಬ್ರಂದಾವನ್ ಅಲಾಯ್ಸ್ ಲಿಮಿಟೆಡ್	2.50	2.50
3	9.5% ಶಿವಮೋನಿ ಸ್ಟೀಲ್ ಟ್ಯೂಬ್ಸ್ ಲಿಮಿಟೆಡ್	2.93	2.93
1	9% ಬೆಂಗಾಳ್ ಇಲೆಕ್ಟ್ರಿಕ್ ಲ್ಯಾಂಪ್ ವರ್ಕ್ಸ್ ಲಿಮಿಟೆಡ್	2.50	2.50
2	9% ಜಯರಾಮ್‌ದಾಸ್ ಉದ್ಯೋಗ್ ಪ್ರೈ ಲಿಮಿಟೆಡ್	3.00	3.00
3	9.5% ಟ್ರಾನ್‌ಫೋರ್ಟ್ ಟೈರ್ಸ್ ಲಿಮಿಟೆಡ್	2.95	2.95
	ಕಳೆಯಿರಿ: ದುರ್ಬಲಗೊಳಿಸಿರುವ ನಷ್ಟಗಳು	**(20.87)**	**(20.87)**
1	9.5% ಆಂಧ್ರಾ ಸ್ಟೀಲ್ ಕಾರ್ಪೊರೇಷನ್	6.99	6.99
2	11% ಬ್ರಂದಾವನ್ ಅಲಾಯ್ಸ್ ಲಿಮಿಟೆಡ್	2.50	2.50
3	9.5% ಶಿವಮೋನಿ ಸ್ಟೀಲ್ ಟ್ಯೂಬ್ಸ್ ಲಿಮಿಟೆಡ್	2.93	2.93
4	9% ಬೆಂಗಾಳ್ ಇಲೆಕ್ಟ್ರಿಕ್ ಲ್ಯಾಂಪ್ ವರ್ಕ್ಸ್ ಲಿಮಿಟೆಡ್	2.50	2.50
5	9% ಜಯರಾಮ್‌ದಾಸ್ ಉದ್ಯೋಗ್ ಪ್ರೈ ಲಿಮಿಟೆಡ್	3.00	3.00
6	9.5% ಟ್ರಾನ್‌ಫೋರ್ಟ್ ಟೈರ್ಸ್ ಲಿಮಿಟೆಡ್	2.95	2.95
	(iii) : ವೆಂಚರ್ ಕ್ಯಾಪಿಟಲ್ ಫಂಡ್	**806.02**	**547.78**
1	ಕೆಐಟಿವಿಇಎನ್ ವಿಸಿಎಫ್ – 2	189.35	234.86
2	ಕೆಎಆರ್‌ಎಸ್‌ಇಎಂವಿಇಎನ್ ಫಂಡ್	426.47	195.35
3	ಕೆಐಟಿವಿಇಎನ್ ಫಂಡ್ – 4 (ಎವಿಜಿಸಿ)	14.43	–
4	ಕೆಐಟಿವಿಇಎನ್ ಫಂಡ್ – 3 (ಜೈವಿಕ ತಂತ್ರಜ್ಞಾನ)	175.77	117.56
	(iv) ಸಾಲದ ಭದ್ರತೆಗಳು	**600.00**	**600.00**
1	19% ಸಿಆರ್‌ಬಿ ಕಾರ್ಪೊರೇಷನ್ ಲಿಮಿಟೆಡ್	300.00	300.00
2	23% ಗ್ರಾಫ್ಟೋ ಇಂಡಸ್ಟ್ರೀಸ್ ಲಿಮಿಟೆಡ್	300.00	300.00

	ಕಳೆಯಿರಿ: ದುರ್ಬಲಗೊಳಿಸಿರುವ ನಷ್ಟಗಳು	**(600.00)**	**(600.00)**
1	19% ಸಿಆರ್‌ಬಿ ಕಾರ್ಪೊರೇಷನ್ ಲಿಮಿಟೆಡ್	300.00	300.00
2	23% ಗ್ರಾಫ್ಕೋ ಇಂಡಸ್ಟ್ರೀಸ್ ಲಿಮಿಟೆಡ್	300.00	300.00

ಟಿಪ್ಪಣಿ: ಸ್ಟ್ರಿಪ್ಸ್‌ಗಳು ಈ ಹಿಂದೆ ಮಾರಾಟವಾದ ದರವು ಮಾರುಕಟ್ಟೆ ದರವನ್ನು ಪ್ರತಿನಿಧಿಸುತ್ತದೆ ಅಥವಾ ಇತ್ತೀಚಿನ ಹಣಕಾಸಿನ ಕೋಷ್ಟಕದಂತೆ ಬ್ರೇಕ್–ಅಪ್ ಮೌಲ್ಯ.

* ಕಂಪೆನಿಯು ಹೊರಡಿಸಿರುವ ಬೋನಸ್ ಶೇರುಗಳನ್ನೂ ಒಳಗೊಂಡಿದೆ.

*** ಎಂಸಿಎ ದಾಖಲೆಗಳಂತೆ ಈ ಕ್ವೋಟ್ ಮಾಡಲಾದ ಶೇರುಗಳನ್ನು ಲಿಸ್ಟ್ ಆಗದೇ ಇರುವ ಶೇರುಗಳೆಂದು ತೋರಿಸಲಾಗಿದೆ.

ಟಿಪ್ಪಣಿ 7: ಇತರೆ ಹಣಕಾಸಿನ ಆಸ್ತಿಗಳು **(ರೂಪಾಯಿಗಳು ಲಕ್ಷಗಳಲ್ಲಿ)**

	ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು
i)	ಸಿಬ್ಬಂದಿಗೆ ಮುಂಗಡಗಳು–ಭದ್ರತೆಯುಳ್ಳ ಉತ್ತಮವೆಂದು ಪರಿಗಣಿಸಲ್ಪಟ್ಟದ್ದು	22.52	27.76
ii)	ಸಿಬ್ಬಂದಿಗೆ ಸಾಲಗಳು–ಭದ್ರತೆಯಿಲ್ಲದ ಉತ್ತಮವೆಂದು ಪರಿಗಣಿಸಲ್ಪಟ್ಟದ್ದು	0.89	0.65
iii)	ಇತರೆಗಳು	101.71	116.00
iv)	ಬಂಡವಾಳ ನೆರವು – ಸಿಒಎಸ್	606.40	606.40
v)	ನಿಶ್ಚಿತ ಠೇವಣಿಯ ಮೇಲೆ ಕೂಡಿಬಂದ ಬಡ್ಡಿ	1,527.17	1,292.43
vi)	ಭದ್ರತಾ ಠೇವಣಿಗಳು	207.79	207.79
vii)	ಹಂಚಿಕೆ ಬಾಕಿ ಇರುವ ಶೇರು ಅರ್ಜಿ ಹಣ	5.16	5.16
	ಕಳೆಯಿರಿ: ದುರ್ಬಲಗೊಳಿಸಲ್ಪಟ್ಟ ನಷ್ಟ	(5.16)	(5.16)
	ಮೊತ್ತ	**2,466.47**	**2,251.03**

ಟಿಪ್ಪಣಿ 1: ಐಎನ್‌ಡಿ ಎಎಸ್ 109ರಂತೆ, ನೌಕರರಿಗೆ ರಿಯಾಯತಿ ದರದಲ್ಲಿ ನೀಡಲಾಗಿರುವ ಸಾಲಗಳನ್ನು ಸಮರ್ಪಕ ಮೌಲ್ಯದಲ್ಲಿ ಪರಿಗಣಿಸಬೇಕು ಮತ್ತು ನಂತರದಲ್ಲಿ ಭೋಗ್ಯದ ದರದ ಆಧಾರದ ಮೇಲೆ ಪರಿಣಾಮಕಾರೀ ಬಡ್ಡಿ ದರದಲ್ಲಿ ಗುರುತಿಸತಕ್ಕದ್ದು. ಮೇಲ್ಕಂಡ ಪ್ರಕರಣದಲ್ಲಿ, ಸಿಬ್ಬಂದಿಗೆ ನೀಡಲಾದ ಸಾಲಗಳು ಮತ್ತು ಮುಂಗಡಗಳು ಮಾರುಕಟ್ಟೆಯ ಬಡ್ಡಿ ದರದಲ್ಲಿ ಅಥವಾ ಅದಕ್ಕಿಂತ ಹೆಚ್ಚು ಇರುತ್ತದೆ. ಆದ್ದರಿಂದ ದಾಖಲಿಸಲಾಗಿರುವ ವ್ಯವಹಾರದ ಮೌಲ್ಯವು ಸಾಲಗಳು ಮತ್ತು ಮುಂಗಡಗಳ ಸಮರ್ಪಕ ಮೌಲ್ಯದಲ್ಲಿರುತ್ತದೆ.

ಟಿಪ್ಪಣಿ 2: ಕೆಲವೊಂದು ಸಿಬ್ಬಂದಿ ಮುಂಗಡಗಳಿಗೆ ಸಂಬಂಧಿಸಿದಂತೆ ಕಾಗದಪತ್ರಗಳು/ಅಡಮಾನ ಮಾಡುವ ಪ್ರಕ್ರಿಯೆಗಳು ಬಾಕಿ ಇರುತ್ತವೆ.

ಟಿಪ್ಪಣಿ 8: ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳು (ನಿವ್ವಳ) **(ರೂಪಾಯಿಗಳು ಲಕ್ಷಗಳಲ್ಲಿ)**

ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು
(A) ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳು		
ತೆರಿಗೆ ಕಳೆಯುವಿಕೆಯ ಸಮಯದ ವ್ಯತ್ಯಾಸ	5,266.88	5,470.66
ಉಪಯೋಗಿಸದೇ ಇರುವ ತೆರಿಗೆ ನಷ್ಟಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿರುವುದು	–	–
ಉಪಯೋಗಿಸದೇ ಇರುವ ತೆರಿಗೆ ಜಮಾಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿರುವುದು	1,566.87	1,276.27
	6,833.75	**6,746.93**
(B) **ಮುಂದೂಡಲ್ಪಟ್ಟ ತೆರಿಗೆ ಹೊಣೆಗಾರಿಕೆಗಳು**		
ತೆರಿಗೆ ಕಳೆಯುವಿಕೆಯ ಸಮಯದ ವ್ಯತ್ಯಾಸ	336.10	400.22
	336.10	400.22
ನಿವ್ವಳ ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳು	**6,497.64**	**6,346.71**

31ನೇ ಮಾರ್ಚಿ 2020ರಲ್ಲಿ ಚಾಲ್ತಿಯಲ್ಲಿರುವ ದರದಂತೆ ತೆರಿಗೆ ದರವು 29.12% ಮತ್ತು 31ನೇ ಮಾರ್ಚಿ, 2019ರಲ್ಲಿ ಮುಂದೂಡಲ್ಪಟ್ಟ ತೆರಿಗೆ ಉದ್ದೇಶಗಳಿಗೆ 29.12% ಆಗಿರುತ್ತದೆ.

ಐಎನ್‌ಡಿ ಎಎಸ್ – 12ರ ಕಂಡಿಕೆ 44ರಂತೆ ಅಂಗಸಂಸ್ಥೆಗಳು ಮತ್ತು ಸಹಸಂಸ್ಥೆಗಳಲ್ಲಿ ಹೂಡಿಕೆಗಳ ಮೇಲೆ ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳು/ಹೊಣೆಗಾರಿಕೆಗಳನ್ನು ಗುರುತಿಸಿರುವುದಿಲ್ಲ. ಮುಂದುವರಿದಂತೆ, ಕ್ವೋಟ್ ಮಾಡದೇ ಇರುವ ಶೇರುಗಳ ಮೇಲಿನ ಹೂಡಿಕೆಯ ಮೇಲೆ ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳನ್ನು ಕಂಪೆನಿಯು ಗುರುತಿಸಿರುವುದಿಲ್ಲ ಮತ್ತು ಕ್ವೋಟ್ ಮಾಡದೇ ಇರುವ ಶೇರುಗಳ ಮಾರಾಟ ಮಾಡುವ ಬಗ್ಗೆ ಮತ್ತು ಮುಂದೂಡಲ್ಪಟ್ಟ ತೆರಿಗೆ ಆಸ್ತಿ/ಹೊಣೆಗಾರಿಕೆಗಳು ವಸೂಲಾಗುವ ಬಗ್ಗೆ ಖಾತರಿ ಇಲ್ಲವಾದ್ದರಿಂದ ಇದಕ್ಕಾಗಿ ಹಣಕಾಸಿನ ಕೋಷ್ಟಕಗಳಲ್ಲಿ ಉಪಬಂಧಗಳನ್ನು ಕಲ್ಪಿಸಲಾಗಿರುತ್ತದೆ.

ಹಣಕಾಸಿನ ಕೋಷ್ಟಕಗಳಲ್ಲಿ ತಕರಾರಿನ ಅಡಿಯಲ್ಲಿ ಈ ಹಿಂದೆ ಕಂಪೆನಿಯು ರೂ. 700.27 ಲಕ್ಷಗಳ ಎಂಎಟಿ ಜಮಾವನ್ನು ಚಾಲ್ತಿ ವರ್ಷದಲ್ಲಿ ಗುರುತಿಸಿರುತ್ತದೆ. ಲೆಕ್ಕಾಚಾರದ ವರ್ಷ 2008–09 ರಿಂದ ಲೆಕ್ಕಾಚಾರದ ವರ್ಷ 2012–13, ಲೆಕ್ಕಾಚಾರದ ವರ್ಷ 2014–15 ಮತ್ತು ಲೆಕ್ಕಾಚಾರದ ವರ್ಷ 2016–17ರ ಸಾಲಿಗೆ ಕಂಪೆನಿಯು ಲೆಕ್ಕಾಚಾರ ಮಾಡಿ ತೆರಿಗೆ ಪಾವತಿಸಿರುವ ಮೊಬಲಗಿನ ಮೇಲೆ ತೆರಿಗೆ ಪ್ರಾಧಿಕಾರವು ಕಂಡಿಕೆ 115ಜೆಬಿಯಂತೆ ಹೆಚ್ಚುವರಿ ಸೇರಿಸಿರುವುದಕ್ಕೆ ಈ ಮೊಬಲಗು ಸೇರಿರುತ್ತದೆ. ತೆರಿಗೆ ಪ್ರಾಧಿಕಾರವು ಮಾಡಿರುವ ಕಂಡಿಕೆ 115ಜೆಬಿಯಂತೆ ಈ ಸೇರಿಕೆಯ ವಿರುದ್ಧ ಕಂಪೆನಿಯು ಮೇಲ್ಮನವಿ ಸಲ್ಲಿಸಿರುತ್ತದೆ ಮತ್ತು ಸಂಪ್ರದಾಯ ಪದ್ಧತಿಯನ್ನು ಅಳವಡಿಸಿ ಪ್ರತಿಭಟನೆಯೊಂದಿಗೆ ಪಾವತಿಸಿರುವ ತೆರಿಗೆ ಮೊಬಲಗನ್ನು ಎಂಎಟಿ ಜಮಾ ಎಂದು ಗುರುತಿಸಿರುತ್ತದೆ.

ಟಿಪ್ಪಣಿ 8.: ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳು ನಿವ್ವಳ (ಮುಂದುವರಿದಿದೆ) **(ರೂಪಾಯಿಗಳು ಲಕ್ಷಗಳಲ್ಲಿ)**

a) ಮೊಬಲಗನ್ನು ಲಾಭ ಮತ್ತು ನಷ್ಟ ಖಾತೆಗಳಲ್ಲಿ ಗುರುತಿಸಲಾಗಿದೆ.		
ವಿವರಗಳು	**ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು**	**ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು**
ಚಾಲ್ತಿ ತೆರಿಗೆ ವೆಚ್ಚಗಳು	(812.23)	(1,243.01)
ಹಿಂದಿನ ತೆರಿಗೆ ವೆಚ್ಚಗಳು:	(100.95)	–
ಮುಂದೂಡಲ್ಪಟ್ಟ ತೆರಿಗೆ:		
ವರ್ಷಾವಧಿಯಲ್ಲಿ ಉಪಯೋಗಿಸಿರುವ ತೆರಿಗೆ ಜಮಾಗಳು	(424.40)	(297.89)
ಕಾಲಾವಧಿಯ ವ್ಯತ್ಯಾಸವನ್ನು ಗುರುತಿಸಿರುವುದು	(203.78)	(543.70)
ಹಿಂದಿನ ಅವಧಿಯಲ್ಲಿ (ಗಳಲ್ಲಿ) ಉಪಯೋಗಿಸದೇ ಇರುವ ತೆರಿಗೆ ಜಮಾಗಳು	700.27	–
ನಿವ್ವಳ ತೆರಿಗೆ ವೆಚ್ಚಗಳು	**841.10**	**(2,084.60)**
b) ಒಸಿಐನಲ್ಲಿ ಗುರುತಿಸಲ್ಪಟ್ಟ ಮೊಬಲಗು		
ವಿವರಗಳು	**ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು**	**ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು**
a) **ಲಾಭ ಮತ್ತು ನಷ್ಟ ಖಾತೆಗೆ ಪುನರ್ ವರ್ಗೀಕರಣ ಮಾಡದೇ ಇರುವ ವಿಷಯಗಳು**		
ಉದ್ಯೋಗದ ನಂತರದಲ್ಲಿ ವಿವರಿಸಿರುವ ಸೌಲಭ್ಯ ಯೋಜನೆಗಳ ಪುನಃ ಲೆಕ್ಕಾಚಾರದಿಂದ (ನಷ್ಟಗಳು)/ಗಳಿಕೆಗಳು	(15.84)	87.21
ಮೇಲ್ಕಂಡ ವಿಷಯದ ಮೇಲೆ ತೆರಿಗೆ ಪರಿಣಾಮ	4.61	(25.00)
ವೆಚ್ಚಗಳು (ಆದಾಯ ತೆರಿಗೆಯ ನಿವ್ವಳ)	(11.22)	62.21
ಈಕ್ವಿಟಿ ಪತ್ರಗಳ ಸಮರ್ಪಕ ಮೌಲ್ಯಮಾಪನ	(14,238.38)	(554.91)
ಹೂಡಿಕೆಗಳ ಸಮರ್ಪಕ ಮೌಲ್ಯಮಾಪನದ ಮೇಲೆ ಮುಂದೂಡಲ್ಪಟ್ಟ ತೆರಿಗೆ	64.12	(77.09)
b) **ಲಾಭ ಮತ್ತು ನಷ್ಟ ಖಾತೆಗೆ ಪುನರ್ ವರ್ಗೀಕರಣ ಮಾಡಿರುವ ವಿಷಯಗಳು**	–	–
ಮೊತ್ತ	**(14,185.49)**	**(569.79)**

c) ಪರಿಣಾಮಕಾರೀ ಆದಾಯ ತೆರಿಗೆ ದರದ ಪುನಃಪರಿಶೀಲನೆ

ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು		ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	
	ಮೊಬಲಗು	ದರ	ಮೊಬಲಗು	ದರ
ನಿರ್ವಹಣೆಯನ್ನು ಮುಂದುವರಿಸಿರುವುದರಿಂದ ತೆರಿಗೆಗೆ ಮುಂಚಿನ ಲಾಭ/(ನಷ್ಟ)	6,089.86	29.12%	8,160.95	29.12%
ನಿರೀಕ್ಷಿತ ಆದಾಯ ತೆರಿಗೆ ವೆಚ್ಚಗಳು		1,773.37		2,376.00
ವರದಿ ಮಾಡಲ್ಪಟ್ಟ ಆದಾಯ ತೆರಿಗೆಗೆ ನಿರೀಕ್ಷಿತ ಆದಾಯ ತೆರಿಗೆ ವೆಚ್ಚಗಳ ಪ್ರಸ್ತಾವಿತ ಆದಾಯ ತೆರಿಗೆಯ ಪುನಃಪರಿಶೀಲನೆಯ ತೆರಿಗೆಯ ಪರಿಣಾಮಗಳು		–		
ತೆರಿಗೆಯಿಂದ ವಿನಾಯತಿ ಪಡೆದ ಆದಾಯ	(1,760.36)	(512.62)	(1,462.44)	(426.00)
ಹೆಚ್ಚುವರಿ ಪರಿಗಣಿಸಲ್ಪಟ್ಟವುಗಳು/(ಪರಿಗಣಿಸದೇ ಇರುವವು)	376.62	109.67	246.96	72.00
ವ್ಯತ್ಯಾಸದ ತೆರಿಗೆ ದರಗಳ ಪರಿಣಾಮಗಳು	–	–	–	–
ಶಾಶ್ವತ ವ್ಯತ್ಯಾಸಗಳು	240.35	69.99	216.22	63.00
ಹೊಂದಣಿಕೆಗಳ ಪರಿಣಾಮ (ನಿವ್ವಳ)	**(1,143.40)**	**(332.96)**	**(999.27)**	**(291.00)**
ವರ್ಷಾವಧಿಗೆ ಒಟ್ಟು ಆದಾಯ ತೆರಿಗೆ ವೆಚ್ಚಗಳು		**1,440.41**		**2,085.00**
ಜಾರಿಯಲ್ಲಿರುವ ತೆರಿಗೆ ದರ		**23.65%**		**25.55%**

d) ಮುಂದೂಡಲ್ಪಟ್ಟ ತೆರಿಗೆ ಶಿಲ್ಕುಗಳಲ್ಲಿ ಚಲನೆ

ವಿವರಗಳು	01.04.2018ರಲ್ಲಿ ಇರುವಂತೆ	ಲಾಭ&ನಷ್ಟದಲ್ಲಿ ಗುರುತಿಸಿರುವುದು	ಒಸಿಐ ನಲ್ಲಿ ಗುರುತಿಸಿರುವುದು	31.03.2019ರಲ್ಲಿ ಇರುವಂತೆ
	ತೆರಿಗೆ ಆಸ್ತಿಗಳು			ತೆರಿಗೆ ಆಸ್ತಿಗಳು
ತೆರಿಗೆ ಕಳೆಯುವಿಕೆಗಳ ಸಮಯದ ವ್ಯತ್ಯಾಸ				
ಸಾಲಗಳಿಗೆ ಎದುರು ದುರ್ಬಲಗೊಳಿಸುವಿಕೆ ಭತ್ಯೆಗಳು	5,900.27	(564.03)	–	5,336.24
ಶಾಸನಬದ್ಧ ಕಳೆಯುವಿಕೆಗಳು	61.54	24.69	–	86.24
ಆಸ್ತಿ ಸ್ಥಾವರ ಮತ್ತು ಸಾಮಗ್ರಿಗಳು	52.55	(4.37)	–	48.18
ಸರಿಹೊಂದಿಸುವಿಕೆಗೆ ಮೊದಲು ತೆರಿಗೆ (ಆಸ್ತಿಗಳು)/ ಹೊಣೆಗಾರಿಕೆಗಳು	6,014.36	(543.70)	–	5,470.66
ಉಪಯೋಗಿಸದೇ ಇರುವ ತೆರಿಗೆ ಕ್ರೆಡಿಟ್‌ಗಳು ಮುಂದಕ್ಕೆ ರವಾನಿಸಿದ್ದು **	1,574.16	(297.89)	–	1,276.27
	ತೆರಿಗೆ ಹೊಣೆಗಾರಿಕೆಗಳು		**ತೆರಿಗೆ ಹೊಣೆಗಾರಿಕೆಗಳು**	
ತೆರಿಗೆಗೆ ಒಳಪಡುವ ತಾತ್ಕಾಲಿಕ ವ್ಯತ್ಯಾಸ				
ಹೂಡಿಕೆಗಳ ಮೇಲೆ ನಿವ್ವಳ ಮುಂದೂಡಲ್ಪಟ್ಟ ಹೊಣೆಗಾರಿಕೆ	323.13	–	77.09	400.22
ನಿವ್ವಳ ಮುಂದೂಡಲ್ಪಟ್ಟ ತೆರಿಗೆ(ಆಸ್ತಿಗಳು)/ ಹೊಣೆಗಾರಿಕೆ	7,265.38	(918.67)	(400.22)	6,346.71

e) ಮುಂದೂಡಲ್ಪಟ್ಟ ತೆರಿಗೆ ಶಿಲ್ಕುಗಳಲ್ಲಿ ಚಲನೆ

ವಿವರಗಳು	01/04/2019ರಲ್ಲಿ ಇರುವಂತೆ	ಲಾಭ&ನಷ್ಟದಲ್ಲಿ ಗುರುತಿಸಿರುವುದು	ಒಸಿಐ ನಲ್ಲಿ ಗುರುತಿಸಿರುವುದು	31/03/2020ರಲ್ಲಿ ಇರುವಂತೆ
	ತೆರಿಗೆ ಆಸ್ತಿಗಳು		ತೆರಿಗೆ ಆಸ್ತಿಗಳು	
ತೆರಿಗೆ ಕಳೆಯುವಿಕೆಗಳ ಸಮಯದ ವ್ಯತ್ಯಾಸ				
ಸಾಲಗಳಿಗೆ ಎದುರಾಗಿ ದುರ್ಬಲಗೊಳಿಸುವಿಕೆ ಭತ್ಯೆಗಳು	5,336.24	(213.57)	–	5,122.67
ಶಾಸನಬದ್ಧ ಕಳೆಯುವಿಕೆಗಳು	86.24	16.04	–	102.28
ಸ್ಥಾವರ ಮತ್ತು ಸಾಮಗ್ರಿ ಆಸ್ತಿಗಳು	42.93	(6.25)	–	41.94
ತೆಗೆದುಹಾಕುವಿಕೆಗೆ ಮೊದಲು ತೆರಿಗೆ (ಆಸ್ತಿಗಳು)/ ಹೊಣೆಗಾರಿಕೆಗಳು	**5,465.41**	**(203.78)**	–	**5,266.88**
ಉಪಯೋಗಿಸದೇ ಇರುವ ತೆರಿಗೆ ಜಮಾಗಳನ್ನು ಮುಂದೆ ತೆಗೆದುಕೊಂಡು ಹೋಗಿರುವುದು **	1,276.27	290.60	–	1,566.87
	ತೆರಿಗೆ ಹೊಣೆಗಾರಿಕೆಗಳು		ತೆರಿಗೆ ಹೊಣೆಗಾರಿಕೆಗಳು	
ತೆರಿಗೆಗೆ ಒಳಪಡುವ ತಾತ್ಕಾಲಿಕ ವ್ಯತ್ಯಾಸಗಳು				
ಹೂಡಿಕೆಗಳ ಮೇಲೆ ಮುಂದೂಡಲ್ಪಟ್ಟ ತೆರಿಗೆ ಹೊಣೆಗಾರಿಕೆಗಳು	400.22	–	(64.12)	336.10
ಮುಂದೂಡಲ್ಪಟ್ಟ ನಿವ್ವಳ ತೆರಿಗೆ (ಆಸ್ತಿಗಳು)/ ಹೊಣೆಗಾರಿಕೆಗಳು	**6,341.46**	**150.94**	**(336.10)**	**6,497.64**

** ವರ್ಷಾವಧಿಯಲ್ಲಿ ತಕರಾರಿನ ತೆರಿಗೆಯಿಂದ ವರ್ಗಾವಣೆಯಾಗಿರುವುದು ಸೇರಿದೆ.

ಟಿಪ್ಪಣಿ 9: ಹೂಡಿಕೆ ಆಸ್ತಿಗಳು

(ರೂಪಾಯಿಗಳು ಲಕ್ಷಗಳಲ್ಲಿ)

ವಿವರಗಳು	ಭೂಮಿ–ಬಿಐಎಪಿ ಯೋಜನೆ (ಟಿಪ್ಪಣಿ 1ನ್ನು ಗಮನಿಸಿ)		ಗುತ್ತಿಗೆ ಹಕ್ಕಿನ ಅಡಿಯಲ್ಲಿನ ಕಟ್ಟಡಗಳು *			ಗುತ್ತಿಗೆ ಹಕ್ಕಿನ ಜಮೀನಿನ ಮೇಲೆ ಇರುವ ಕಟ್ಟಡಗಳು*			ಮೊತ್ತ
	ಗುತ್ತಿಗೆ ಮೇಲೆ ಕೊಟ್ಟದ್ದು	ಕೆಎಸ್ಐಐಡಿಸಿಯಲ್ಲಿ ಉಳಿಸಿಕೊಂಡದ್ದು	ಖನಿಜ ಭವನ (ಟಿಪ್ಪಣಿ 2ನ್ನು ಗಮನಿಸಿ)	ಐಟಿ/ಬಿಟಿ ಪಾರ್ಕ್ ರಾಜಾಜಿನಗರ (ಟಿಪ್ಪಣಿ 3ನ್ನು ಗಮನಿಸಿ)	ಲಿಫ್ಟ್‌ಗಳು ಐಟಿ/ಬಿಟಿ ಪಾರ್ಕ್ ರಾಜಾಜಿನಗರ (ಟಿಪ್ಪಣಿ 3ನ್ನು ಗಮನಿಸಿ)	ಮಂಗಳೂರು ಕಛೇರಿ	ಪೀಣ್ಯ ಕೈಗಾರಿಕಾ ಮಳಿಗೆ	ನಂದಿನಿ ಬಡಾವಣೆ ಫ್ಲಾಟುಗಳು	
ಪರಿಗಣಿಸಲ್ಪಟ್ಟ ದರ									
1ನೇ ಏಪ್ರಿಲ್ 2019ರಲ್ಲಿರುವಂತೆ ಶಿಲ್ಕು	27,470.46	2,588.50	1,783.40	2,571.88	74.74				34,488.98
ಕಳೆಯಿರಿ: ಉಪಯೋಗಿಸುವ ಹಕ್ಕಿನ ಆಸ್ತಿಗಳಾಗಿ ವರ್ಗಾಯಿಸಲ್ಪಟ್ಟದ್ದು	–	–	(463.38)	(771.57)	–				(1234.95)
ಸೇರಿಸಿ: ಸ್ಥಾವರಗಳು, ಆಸ್ತಿಗಳು ಮತ್ತು ಸಾಮಗ್ರಿಗಳಿಂದ ವರ್ಗಾಯಿಸಲ್ಪಟ್ಟದ್ದು						13.97	0.00	5.84	19.81
ವರ್ಷಾವಧಿಯಲ್ಲಿ ಸೇರಿಕೆ	–	–	1.36	–	–				1.36
ವರ್ಷಾವಧಿಯಲ್ಲಿ ಕಳೆಯುವಿಕೆ	–	–	–	–	–				–
31ನೇ ಮಾರ್ಚ್ 2020ರಲ್ಲಿರುವಂತೆ ಶಿಲ್ಕು	**27,470.46**	**2,588.50**	**1,321.38**	**1,800.32**	**74.74**	**13.97**	**0.00**	**5.84**	**33,275.21**
ಕೂಡಿಬಂದಿರುವ ಸವಕಳಿ									
1ನೇ ಏಪ್ರಿಲ್ 2019ರಲ್ಲಿ ಇರುವಂತೆ ಕೂಡಿಬಂದ ಸವಕಳಿ									
ಕಳೆಯಿರಿ: ಉಪಯೋಗಿಸುವ ಹಕ್ಕಿನ ಆಸ್ತಿಗಳಾಗಿ ವರ್ಗಾಯಿಸಲ್ಪಟ್ಟದ್ದು	–	–	364.22	350.33	10.19				724.74
ಸೇರಿಸಿ: ಸ್ಥಾವರಗಳು, ಆಸ್ತಿಗಳು ಮತ್ತು ಸಾಮಗ್ರಿಗಳಿಂದ ವರ್ಗಾಯಿಸಲ್ಪಟ್ಟದ್ದು			**(94.63)**	**(105.10)**					**(199.73)**
ಆವಧಿಯ ಸವಕಳಿ ದರ						0.73	–	0.36	1.09
ಅವಧಿಯಲ್ಲಿ ವಿಲೇವಾರಿಗಳು	–	–	145.18	122.81	5.10	0.37	–	0.18	273.63
	–	–	–	–	–				–
31ನೇ ಮಾರ್ಚ್ 2020ರಲ್ಲಿ ನಿವ್ವಳ ಲೆಕ್ಕಕ್ಕೆ ತೆಗೆದುಕೊಂಡಿರುವ ಮೊಬಲಗು	–	–	**414.77**	**368.04**	**15.29**	**1.10**	–	**0.53**	**799.72**
ನಿವ್ವಳ ಲೆಕ್ಕಕ್ಕೆ ತೆಗೆದುಕೊಂಡಿರುವ ಮೊಬಲಗು									
31ನೇ ಮಾರ್ಚ್ 2019ರಲ್ಲಿ ನಿವ್ವಳ ಲೆಕ್ಕಕ್ಕೆ ತೆಗೆದುಕೊಂಡಿರುವ ಮೊಬಲಗು	27,470.46	2,588.50	1,419.18	2,221.55	64.54				33,764.24
31ನೇ ಮಾರ್ಚ್ 2020ರಲ್ಲಿ ನಿವ್ವಳ ಲೆಕ್ಕಕ್ಕೆ ತೆಗೆದುಕೊಂಡಿರುವ ಮೊಬಲಗು	**27,470.46**	**2,588.50**	**906.62**	**1,432.28**	**59.45**	**12.88**	**0.00**	**5.31**	**32,475.49**

ಟಿಪ್ಪಣಿ

ಬೆಂಗಳೂರಿನಲ್ಲಿ ಗ್ರೀನ್ ಫೀಲ್ಡ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣಕ್ಕೆ ಉಪಯೋಗಿಸುವ ಸಲುವಾಗಿ ಕಂಪೆನಿಯು ಸರ್ಕಾರದಿಂದ 2001–02ರಲ್ಲಿ 545 ಹೆಕ್ಟೇರ್ ಅರಣ್ಯ ಜಮೀನನ್ನು ಶಾಶ್ವತ ಗುತ್ತಿಗೆಯ ಆಧಾರದ ಮೇಲೆ ಪಡೆದಿರುತ್ತದೆ. ತಜ್ಞ ಸಲಹಾ ಸಮಿತಿಯಂತೆ ವಾಸ್ತವಾಂಶದ ಸಿದ್ಧಾಂತದ ಆಧಾರದ ಮೇಲೆ ಶಾಶ್ವತವಾಗಿ ಗುತ್ತಿಗೆಯ ಮೇಲೆ ಪಡೆದಿರುವ ಜಮೀನಿಗೆ ಗುತ್ತಿಗೆ ಪಡೆದಿರುವವರೇ ಮಾಲೀಕರೆಂದು ಪರಿಗಣಿಸಬೇಕಾಗಿರುತ್ತದೆ. ಅದರಂತೆ ಈ ಪ್ರಕರಣದಲಿ ಜಮೀನನ್ನು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತಕ್ಕಾಗಿ ಶಾಶ್ವತ ಗುತ್ತಿಗೆಯ ಆಧಾರದ ಮೇಲೆ ಸರ್ಕಾರದಿಂದ ಪಡೆದಿರುವುದರಿಂದ ಕಂಪೆನಿಯು ಈ ಜಮೀನಿನ ಮಾಲೀಕರೆಂದು ಪರಿಗಣಿಸುತ್ತದೆ ಮತ್ತು ಇದನ್ನು ಲೆಕ್ಕ ಪತ್ರಗಳಲ್ಲಿ ಹೂಡಿಕೆ ಆಸ್ತಿಯೆಂದು ಘೋಷಿಸಲ್ಪಟ್ಟಿರುತ್ತದೆ.

a) ನಿಗಮವು ದೇವನಹಳ್ಳಿಯಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಯ (ಕೆಐಎಪಿ) ಅಭಿವೃದ್ಧಿಗಾಗಿ ಕೆಎಐಡಿಬಿ ಮೂಲಕ ರೂ. 30058.56 ಲಕ್ಷಗಳ ವೆಚ್ಚದಲ್ಲಿ 4429 ಎಕರೆ 07 ಗುಂಟೆ ಜಮೀನನ್ನು (ಪುನರ್ ಇತ್ಯರ್ಥ ಮತ್ತು ಪುನರ್ವಸತಿಗಾಗಿ ಬಾಕಿ 11 ಎಕರೆ ಮತ್ತು 23 ಗುಂಟೆ ಜಮೀನಿನ ಸ್ವಾಧೀನವನ್ನೂ ಸೇರಿಸಿ) ಸ್ವಾಧೀನಕ್ಕೆ ಪಡೆದಿರುತ್ತದೆ. ಇಂಜಿನಿಯರಿಂಗ್ ಅಳತೆಯಂತೆ ಜಮೀನಿನ ನೈಜ ವಿಸ್ತೀರ್ಣ 4429 ಎಕರೆ ಮತ್ತು 07 ಗುಂಟೆಗಳು ಆಗಿರುತ್ತವೆ. ಆದಾಗ್ಯೂ, ಕಂಪೆನಿಯು 4390 ಎಕರೆ ಮತ್ತು 33 1/2 ಗುಂಟೆ ಜಮೀನಿಗೆ ಮಾತ್ರ ಸ್ವಾಧೀನ ಪ್ರಮಾಣ ಪತ್ರವನ್ನು ಪಡೆದಿರುತ್ತದೆ. ಕಂಪೆನಿಯು ದೇವನಹಳ್ಳಿಯಲ್ಲಿರುವ 4008 ಎಕರೆ ಮತ್ತು 31 ಗುಂಟೆ ಜಮೀನನ್ನು ಅತ್ಯಂತ ನವೀನವಾದ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಜಂಟೀ ಸಹಭಾಗಿತ್ವದ ಸಂಸ್ಥೆಯಾಗಿರುವ ಮೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತಕ್ಕೆ, (ಬಿಐಎಎಲ್) 24.05.2008ರಿಂದ (ವಿಮಾನ ನಿಲ್ದಾಣ ಆರಂಭದ ದಿನಾಂಕ) ಪ್ರಾರಂಭವಾಗುವಂತೆ 30 ವರ್ಷಗಳ ಗುತ್ತಿಗೆಗೆ ನೀಡಿದ್ದು ಇದನ್ನು ಮತ್ತೆ 30 ವರ್ಷಗಳ ಅವಧಿಗೆ ನವೀಕರಿಸಿ ವಿಸ್ತರಿಸಬಹುದಾಗಿರುತ್ತದೆ. ಬಾಕಿ ಉಳಿದಿರುವ 420 ಎಕರೆ ಮತ್ತು 16 ಗುಂಟೆ ಜಮೀನಿನಲ್ಲಿ (11 ಎಕರೆಗಳು ಮತ್ತು 23 ಗುಂಟೆಗಳು) ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಹಣಕಾಸಿನ ವರ್ಷ 2014–15ರಲ್ಲಿ 21.5 ಗುಂಟೆ ಜಮೀನನ್ನು ಸ್ವಾಧೀನಕ್ಕೆ ಪಡೆದಿರುತ್ತದೆ. ಬಾಕಿ ಉಳಿದಿರುವ 419 ಎಕರೆ ಮತ್ತು 35 ಗುಂಟೆ ಜಮೀನನ್ನು ವಿಮಾನ ನಿಲ್ದಾಣ ಸಂಬಂಧಿತ ಚಟುವಟಿಕೆಗಳಿಗಾಗಿ ಕಂಪೆನಿಯು ಉಳಿಸಿಕೊಂಡಿರುತ್ತದೆ. ದಿನಾಂಕ 3.11.2017ರಲ್ಲಿ ನಡೆದ ಮಂಡಳಿಯ ಸಭೆಯಲ್ಲಿ ಬಿಎಸ್‌ಬಿಪಿಗಾಗಿ ಹಂತ–1ರ ಟ್ರಂಕ್ ಮೂಲಸೌಲಭ್ಯ ಕಾಮಗಾರಿಗಳನ್ನು ಜಾರಿಗೆ ತರಲು ತಾತ್ಪೂರ್ವಕ ಒಪ್ಪಿಗೆಯನ್ನು ನೀಡಿರುತ್ತದೆ. ವಿವರವಾದ ಯೋಜನಾ ವರದಿಯ ಆಧಾರದ ಮೇಲೆ ಹಾಗೂ ಸಲಹೆಗಾರರು ಸಿದ್ಧಪಡಿಸಿರುವ ಬಿಡ್ ದಾಖಲೆ ಪತ್ರಗಳ ಆಧಾರದ ಮೇಲೆ ಹಂತ – 1ರ ಟ್ರಂಕ್ ಮೂಲಸೌಲಭ್ಯ ಕಾಮಗಾರಿಗಳ ನಿರ್ವಹಣೆಗಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಸರ್ಕಾರದಿಂದ ಸೂಕ್ತ ಅನುಮೋದನೆಯನ್ನು ಪಡೆದ ನಂತರ ಕಾಮಗಾರಿಗಳನ್ನು ಅತ್ಯಂತ ಕಡಿಮೆ ಮೊಬಲಗು ಬಿಡ್ ಮಾಡಿರುವ ಸಂಸ್ಥೆಗೆ ಒಟ್ಟು ರೂ. 16781.54 ಲಕ್ಷಗಳ ಗುತ್ತಿಗೆ ಮೌಲ್ಯಕ್ಕೆ 2020ರಲ್ಲಿ ವಹಿಸಿಕೊಡಲಾಗಿದ್ದು, 15 ತಿಂಗಳ ಅವಧಿಯ ನಿರ್ಮಾಣ ಕಾಮಗಾರಿಯು ಈಗಾಗಲೇ ಪ್ರಾರಂಭವಾಗಿರುತ್ತದೆ.

b) ದಿನಾಂಕ 06–05–1995ರ ಸರ್ಕಾರೀ ಆದೇಶ ಸಂಖ್ಯೆ ಸಿಐ 184 ಎಂಜಿಎಸ್ 90 (ಪಾರ್ಟ್)ರಂತೆ ರಾಜ್ಯ ಸರ್ಕಾರವು ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯಲ್ಲಿ 3.02 ಎಕರೆ ಜಮೀನನ್ನು ಕಛೇರಿ ಸಂಕೀರ್ಣದ ನಿರ್ಮಾಣಕ್ಕಾಗಿ (“ಖನಿಜ ಭವನ”) ನಿಗಮದ ಪರವಾಗಿ ವರ್ಷಕ್ಕೆ ಪ್ರತೀ ಎಕರೆಗೆ ರೂ. 1000/–ದ ಗುತ್ತಿಗೆ ಬಾಡಿಗೆಯಂತೆ ದಿನಾಂಕ 10.01.1997ರಿಂದ ಜಾರಿಗೆ ಬರುವಂತೆ 30 ವರ್ಷಗಳಿಗೆ ಗುತ್ತಿಗೆಯ ಆಧಾರದ ಮೇಲೆ ವರ್ಗಾವಣೆ ಮಾಡಿರುತ್ತದೆ. ಗುತ್ತಿಗೆ ಒಪ್ಪಂದ ಪತ್ರದ ಷರತ್ತಿನಂತೆ, ಸರ್ಕಾರವು ಒದಗಿಸಿರುವ ಜಮೀನಿಗೆ ಬದಲಾಗಿ 81,224 ಚದರ ಅಡಿ (ಅಂದಾಜು 25.98%) ಕಟ್ಟಡ ಪ್ರದೇಶವನ್ನು ಸರ್ಕಾರಕ್ಕೆ ಉಚಿತವಾಗಿ ಹಸ್ತಾಂತರಿಸಲಾಗಿರುತ್ತದೆ. ನಿರ್ಮಾಣಕ್ಕಾಗಿ ಮಾಡಲಾಗಿರುವ ಒಟ್ಟು ವೆಚ್ಚಗಳ ಉಳಿಕೆ ಭಾಗದ ಬಾಬ್ತು ಕಟ್ಟಡದ ಉಳಿದ ಭಾಗವನ್ನು (74.02%) ಕೆಎಸ್‌ಐಐಡಿಸಿಯು ನಿಯಂತ್ರಿಸುತ್ತಿದ್ದು, ಮೇಲ್ಕಂಡ ಅನುಸೂಚಿಯಲ್ಲಿ ಘೋಷಿಸಲಾಗಿರುತ್ತದೆ.

c) ಬೆಂಗಳೂರಿನ ರಾಜಾಜಿನಗರ ಕೈಗಾರಿಕಾ ಪ್ರದೇಶದಲ್ಲಿ ಕೆಎಸ್‌ಎಸ್‌ಐಡಿಸಿಗೆ ಸೇರಿದ 1.6 ಎಕರೆ ಜಮೀನಿನಲ್ಲಿ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕಿನ ಅಭಿವೃದ್ಧಿಗಾಗಿ ನಿಗಮವು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ (ಕೆಎಸ್‌ಎಸ್‌ಐಡಿಸಿ) 08.03.2001ರಲ್ಲಿ ಒಪ್ಪಂದವನ್ನು ಮಾಡಿಕೊಂಡಿರುತ್ತದೆ. ಈ ಒಪ್ಪಂದದಂತೆ ಕೆಎಸ್‌ಎಸ್‌ಐಡಿಸಿಯು ರಾಜಾಜಿನಗರ ಕೈಗಾರಿಕಾ ಪ್ರದೇಶದಲ್ಲಿ ವಾರ್ಷಿಕ ಗುತ್ತಿಗೆ ಬಾಡಿಗೆಯಾಗಿ ರೂ. 1000/–ದಂತೆ 1.60 ಎಕರೆ ಜಮೀನನ್ನು ನಿಗಮದ ಪರವಾಗಿ 30 ವರ್ಷಗಳ ಗುತ್ತಿಗೆ ಅವಧಿಗೆ ವರ್ಗಾವಣೆ ಮಾಡಿರುತ್ತದೆ. ಜಮೀನಿನ ಸ್ವಾಧೀನವನ್ನು ಹಸ್ತಾಂತರಿಸಿದ ದಿನಾಂಕದಿಂದ ಅಂದರೆ ದಿನಾಂಕ 26.11.2001ರಿಂದ ಗುತ್ತಿಗೆ ಅವಧಿಯು ಪ್ರಾರಂಭವಾಗಿರುತ್ತದೆ.

ದಿನಾಂಕ 8.3.2001ರ ಗುತ್ತಿಗೆ ಒಪ್ಪಂದ ಪತ್ರದ ಶರತ್ತಿನಂತೆ, ನಿಗಮವು 22,273 ಚದರ ಮೀಟರ್ ಕಟ್ಟಡ ಪ್ರದೇಶದ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕನ್ನು ನಿರ್ಮಿಸಿರುತ್ತದೆ. ದಿನಾಂಕ 8.3.2001ರ ಜಂಟೀ ಸಹಯೋಗ ಉದ್ಯಮದ ಒಪ್ಪಂದದಂತೆ, ಕೆಎಸ್‌ಐಐಡಿಸಿ ಮತ್ತು ಕೆಎಸ್‌ಎಸ್‌ಐಡಿಸಿಯ ನಡುವಿನ ವರಮಾನ ಹಂಚಿಕೆಯ ಅನುಪಾತವು ಕ್ರಮವಾಗಿ 70:30ಆಗಿರುತ್ತದೆ. ಕಟ್ಟಡ ನಿರ್ಮಾಣಕ್ಕಾಗಿ ಮಾಡಲಾಗಿರುವ ಒಟ್ಟು ವೆಚ್ಚಗಳ 70%ನ್ನು ಕೆಎಸ್‌ಐಐಡಿಸಿಯು ನಿಯಂತ್ರಿಸುತ್ತಿದ್ದು, ಮೇಲ್ಕಂಡ ಅನುಸೂಚಿಯಲ್ಲಿ ಘೋಷಿಸಲಾಗಿರುತ್ತದೆ.

d) ವರ್ಷಾವಧಿಯಲ್ಲಿ ಸ್ಥಾವರ & ಸಾಮಗ್ರಿಗಳ ಆಸ್ತಿಯಿಂದ ಮಾಡಲಾಗಿರುವ ವರ್ಗಾವಣೆಯು ಕಂಪೆನಿಯ ಮಾಲೀಕತ್ವದ ಆಸ್ತಿಯನ್ನು ಪ್ರತಿನಿಧಿಸುತ್ತಿದ್ದು, ಇದನ್ನು ಆದಾಯ ಗಳಿಸಲು ಅಥವಾ ಬಂಡವಾಳ ಹೆಚ್ಚಳಕ್ಕೆ ಉಪಯೋಗಿಸಲಾಗುತ್ತಿದ್ದು, ಇದನ್ನು ವರ್ಷಾವಧಿಯಲ್ಲಿ ಪುನರ್ ವರ್ಗೀಕರಿಸಲಾಗಿರುತ್ತದೆ.

9A. ಹೂಡಿಕೆ ಆಸ್ತಿಗಳ ಆದಾಯ ಮತ್ತು ವೆಚ್ಚಗಳ ಬಗ್ಗೆ ಮಾಹಿತಿಗಳು (ರೂಪಾಯಿಗಳು ಲಕ್ಷಗಳಲ್ಲಿ)

ವಿವರಗಳು	ಹಾಲಿ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು	ಹಿಂದಿನ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಅಂಕಿಅಂಶಗಳು
ಹೂಡಿಕೆ ಆಸ್ತಿಗಳಿಂದ ಗಳಿಸಲಾಗಿರುವ ಬಾಡಿಗೆ ಆದಾಯ	5,647.08	5,335.11
ಬಾಕಿ ಇರುವ ಕ್ಲೈಮುಗಳು ಯಶಸ್ವಿಯಾಗುವ ಸಾಧ್ಯತೆಯ ಬಗ್ಗೆ ಅಥವಾ ಒಂದು ಹೊಣೆಗಾರಿಕೆಯು ಬರಬಹುದೆಂಬ ಬಗ್ಗೆ ಮತ್ತು ಹಣಕಾಸಿನ ಇತ್ಯರ್ಥದ ಮೊಬಲಗನ್ನು ಲೆಕ್ಕಹಾಕಲು ವಿವೇಚನೆಯು ಅಗತ್ಯವಾಗಿರುತ್ತದೆ. ಈ ಮೌಲ್ಯಮಾಪನದ ಪ್ರಕ್ರಿಯೆಯ ಸ್ವಾಭಾವಿಕ ಅನಿಶ್ಚಿತತೆಯ ಕಾರಣದಿಂದ ನೈಜ ನಷ್ಟಗಳು ಮೊದಲು ಮಾಡಿರುವ ಅಂದಾಜು ಉಪಬಂಧಗಳಿಗಿಂತ ಬೇರೆಯೇ ಆಗಿರುವ ಸಾಧ್ಯತೆ ಇರುತ್ತದೆ.

(i) ಆಸ್ತಿಗಳು ಮತ್ತು ಹೂಡಿಕೆ ಆಸ್ತಿಗಳ ವರ್ಗೀಕರಣ

ಆಸ್ತಿಯ ಒಂದು ಭಾಗವನ್ನು ಬಾಡಿಗೆ ಗಳಿಕೆಗೆ ಇಟ್ಟುಕೊಳ್ಳಲು ಅಥವಾ ಬಂಡವಾಳ ಹೆಚ್ಚಳಕ್ಕೆ ಮತ್ತು ಮತ್ತೊಂದು ಭಾಗವನ್ನು ಉತ್ಪಾದನೆಗೆ ಉಪಯೋಗಿಸಲು ಅಥವಾ ಸಾಮಗ್ರಿಗಳ ಸರಬರಾಜು ಅಥವಾ ಸೇವೆಗೆ ಅಥವಾ ಆಡಳಿತಾತ್ಮಕ ಉದ್ದೇಶಕ್ಕೆ ಒಂದು ಆಸ್ತಿಯನ್ನು ಹೂಡಿಕೆ ಆಸ್ತಿಯೆಂದು ವರ್ಗೀಕರಿಸುವಲ್ಲಿ ಗ್ರೂಪಿನ ಆಡಳಿತ ವರ್ಗವು ತನ್ನ ವಿವೇಚನೆಯನ್ನು ಚಲಾಯಿಸುತ್ತದೆ.

(j) ಗುತ್ತಿಗೆ ವ್ಯವಸ್ಥೆಯನ್ನು ಹಣಕಾಸು ಗುತ್ತಿಗೆ ಅಥವಾ ನಿರ್ವಹಣಾ ಗುತ್ತಿಗೆಯೆಂದು ವರ್ಗೀಕರಿಸುವ ಬಗ್ಗೆ

ಗುತ್ತಿಗೆಯು ಎಲ್ಲಾ ಅಪಾಯಗಳನ್ನು ಗಣನೀಯವಾಗಿ ವರ್ಗಾಯಿಸಿದಲ್ಲಿ ಮತ್ತು ಮಾಲೀಕತ್ವಕ್ಕೆ ಸಾಂದರ್ಭಿಕ ಗಳಿಕೆಯನ್ನೂ ತಂದು ಕೊಡುವುದನ್ನು ಹಣಕಾಸಿನ ಗುತ್ತಿಗೆಯೆಂದು ವರ್ಗೀಕರಿಲಾಗಿರುತ್ತದೆ. ಗುತ್ತಿಗೆಯು ಎಲ್ಲಾ ಅಪಾಯಗಳನ್ನು ಗಣನೀಯವಾಗಿ ವರ್ಗಾಯಿಸದೇ ಇದ್ದಲ್ಲಿ ಮತ್ತು ಮಾಲೀಕತ್ವಕ್ಕೆ ಸಾಂದರ್ಭಿಕ ಲಾಭವನ್ನು ವರ್ಗಾಯಿಸದೇ ಇದ್ದಲ್ಲಿ ಅದನ್ನು ನಿರ್ವಹಣಾ ಗುತ್ತಿಗೆಯೆಂದು ವರ್ಗೀಕರಿಸಲಾಗಿರುತ್ತದೆ.

ಇದಕ್ಕಾಗಿ ಪ್ರತೀ ಗುತ್ತಿಗೆ ಒಪ್ಪಂದ ಪತ್ರವನ್ನು ಮೌಲ್ಯ ಮಾಪನ ಮಾಡುವ ಅಗತ್ಯವಿರುತ್ತದೆ ಮತ್ತು ಒಪ್ಪಂದದ ಸಾರಾಂಶವನ್ನು ಅರ್ಥಮಾಡಿಕೊಂಡು ಅದನ್ನು ಗುತ್ತಿಗೆ

ಒಪ್ಪಂದದ ಪ್ರಾರಂಭದಲ್ಲಿಯೇ ಹಣಕಾಸಿನ ಗುತ್ತಿಗೆ ಅಥವಾ ನಿರ್ವಹಣಾ ಗುತ್ತಿಗೆಯೆಂದು ವರ್ಗೀಕರಿಸುವ ಅಗತ್ಯತೆ ಇರುತ್ತದೆ.

ಹೊಸ ಲೆಕ್ಕಪತ್ರ ಮಾನಕಗಳ ಅನ್ವಯಿಸುವಿಕೆ

ಕಂಪೆನಿಯು 1ನೇ ಏಪ್ರಿಲ್ 2019ರಿಂದ ಜಾರಿಗ ಬರುವಂತೆ ಐಎನ್‌ಡಿ ಎಎಸ್116, ಗುತ್ತಿಗೆಗಳು–ಟಿಪ್ಪಣಿ 42ರಲ್ಲಿ ವಿವರಿಸಿರುವಂತೆ ಜಾರಿಗೆ ತಂದಿರುತ್ತವೆ. ಐಎನ್‌ಡಿ ಎಎಸ್ 116ರ ಜಾರಿಗೊಳಿಸುವಿಕೆಯಿಂದ ಈಗಾಗಲೇ ದಾಖಲಿಸಿರುವ ಕಂಪೆನಿಯ ಹಿಂದಿನ ವ್ಯವಹಾರಗಳ ಮೇಲೆ ಯಾವುದೇ ಪರಿಣಾಮಗಳೂ ಇರುವುದಿಲ್ಲ.

2.2 ಆದಾಯ ಗುರುತಿಸುವಿಕೆ

ಐಎನ್‌ಡಿ ಎಎಸ್ 115ರಂತೆ ಗ್ರಾಹಕರೊಂದಿಗೆ ಒಪ್ಪಂದದ ಆದಾಯವನ್ನು ಲೆಕ್ಕಹಾಕುವ ಒಂದು ಸಮಗ್ರ ಮಾದರಿಯ ಬಾಹ್ಯ ಚಿತ್ರಣ ನೀಡಿದ್ದು ಇದು ಹಿಂದಿನ ವರಮಾನ ಗಳಿಕೆ ಮಾರ್ಗದರ್ಶನವನ್ನು ಐಎನ್‌ಡಿ ಎಎಸ್‌ನಲ್ಲಿ ಕಂಡುಬಂದಿರುವಂತೆ ಅತಿಕ್ರಮಿಸುತ್ತದೆ. ಐಎನ್‌ಡಿ ಎಎಸ್ 115ಲ್ಲಿ ಸ್ಪಷ್ಟಪಡಿಸಿರುವಂತೆ ಗುಂಪು ಒಪ್ಪಂದದಿಂದ ವರಮಾನವನ್ನು 5 ಹಂತದ ಮಾದರಿಯಲ್ಲಿ ಗುರುತಿಸುತ್ತದೆ.

ಹಂತ 1: ಗ್ರಾಹಕರೊಂದಿಗೆ ಒಪ್ಪಂದವನ್ನು ಗುರುತಿಸುವುದು: ಎರಡು ಅಥವಾ ಹೆಚ್ಚು ಪಕ್ಷಗಳ ನಡುವೆ ಹಕ್ಕುಗಳು ಮತ್ತು ಭಾದ್ಯತೆಗಳನ್ನು ಸೃಷ್ಟಿಸಿ, ಪ್ರತೀ ಒಪ್ಪಂದವೂ ಅನುಸರಿಸಲೇಬೇಕಾದ ಕಡ್ಡಾಯ ನೀತಿಯನ್ನು ಒಪ್ಪಂದವೆಂದು ವಿವರಿಸಲಾಗಿದೆ.

ಹಂತ 2: ಗುತ್ತಿಗೆಯಲ್ಲಿ ನಿರ್ವಹಣಾ ಭಾದ್ಯತೆಯನ್ನು ಗುರುತಿಸುವುದು: ಒಪ್ಪಂದದಲ್ಲಿ ಗ್ರಾಹಕರೊಂದಿಗೆ ನಿರ್ವಹಣಾ ಭಾದ್ಯತೆಯೆಂದರೆ ಗ್ರಾಹಕರಿಗೆ ಸರಕು ಅಥವಾ ಸೇವೆಯನ್ನು ಒದಗಿಸುವ ವಾಗ್ದಾನವನ್ನು ನೀಡುವುದು.

ಹಂತ 3: ವ್ಯವಹಾರದ ದರವನ್ನು ಕಂಡುಕೊಳ್ಳುವುದು: ಮೂರನೇ ಪಕ್ಷದವರ ಪರವಾಗಿ ವಸೂಲಿ ಮಾಡಿರುವ ಮೊಬಲಗುಗಳನ್ನು ಹೊರತುಪಡಿಸಿ ಗ್ರಾಹಕರಿಗೆ ವಾಗ್ದಾನ ನೀಡಿರುವಂತೆ ಸರಕು ಅಥವಾ ಸೇವೆಗಳನ್ನು ವರ್ಗಾಯಿಸಿರುವುದಕ್ಕೆ ಬದಲಿಯಾಗಿ ಕಂಪೆನಿಯು ಹಕ್ಕಿನೊಂದಿಗೆ ನಿರೀಕ್ಷಿಸುವ ಪರಿಗಣನಾ ಮೊಬಲಗು ವ್ಯವಹಾರದ ದರವಾಗಿರುತ್ತದೆ.

ಹಂತ 4: ಒಪ್ಪಂದದಲ್ಲಿ ವ್ಯವಹಾರದ ದರವನ್ನು ನಿರ್ವಹಣೆಯ ಭಾದ್ಯತೆಗೆ ಹಂಚಿಕೆ ಮಾಡುವುದು: ಒಂದಕ್ಕಿಂತ ಹೆಚ್ಚು ನಿರ್ವಹಣಾ ಭಾದ್ಯತೆ ಇರುವ ಒಪ್ಪಂದದಲ್ಲಿ ಕಂಪೆನಿಯು ತೃಪ್ತಿಕರವಾಗಿ ನಿರ್ವಹಿಸಲ್ಪಡುವ ನಿರ್ವಹಣಾ ಭಾದ್ಯತೆಗೆ ಬದಲಿಯಾಗಿ ನಿರೀಕ್ಷಿಸುವ ಹಕ್ಕಿನ ಮೊಬಲಗನ್ನು ಪ್ರತಿನಿಧಿಸಲ್ಪಡುವ ವ್ಯವಹಾರದ ದರವನ್ನು ಪ್ರತೀ ನಿರ್ವಹಣೆಯ ಭಾದ್ಯತೆಗೆ ಹಂಚಿಕೆ ಮಾಡುವುದು.

ಹಂತ 5: ಕಂಪೆನಿಯು ನಿರ್ವಹಣಾ ಭಾದ್ಯತೆಯನ್ನು ಈಡೇರಿಸಿದಾಗ ವರಮಾನವನ್ನು ಗುರುತಿಸುವುದು.

ಗ್ರೂಪಿನ ವಿವಿಧ ಆದಾಯ ಸಂಪನ್ಮೂಲಗಳಿಗೆ ನಿರ್ದಿಷ್ಟ ನೀತಿಗಳನ್ನು ಕೆಳಗೆ ವಿವರಿಸಿದೆ:

ಐಎನ್‌ಡಿ ಎಎಸ್ 115ರಂತೆ ವರಮಾನವನ್ನು ಗುರುತಿಸ ಲಾಗಿದ್ದು, ಅನ್ವಯಿಸಬಹುದಾದಲ್ಲಿ, ಐಎನ್‌ಡಿ ಎಎಸ್ 109ರಂತೆ (ಹಣಕಾಸಿನ ಪತ್ರಗಳು) ಮತ್ತು ಐಎನ್‌ಡಿ ಎಎಸ್ 17ರಂತೆ (ಗುತ್ತಿಗೆ) ವರಮಾನವನ್ನು ಈ ಕೆಳಗೆ ತಿಳಿಸಿರುವಂತೆ ಗುರುತಿಸಲಾಗಿದೆ:

a) ಸಾಲ ನೀಡಿಕೆ ವ್ಯವಹಾರದಿಂದ ಆದಾಯ:

ಹಣಕಾಸಿನ ಆಸ್ತಿಗಳ ಮೇಲಿನ ಬಡ್ಡಿ ಆದಾಯವನ್ನು ಸಮಯದ ಅನುಪಾತದ ಆಧಾರದ ಮೇಲೆ ಬಾಕಿ ಇರುವ ಮೊಬಲಗಿನ ಮೇಲೆ ಪರಿಣಾಮಕಾರಿ ಬಡ್ಡಿ ದರದಲ್ಲಿ ಭೋಗ್ಯಕ್ಕೊಳಪಡಿಸಿದ ದರದಲ್ಲಿ ಗುರುತಿಸಲಾಗಿದೆ. ಕ್ರೆಡಿಟ್‌ನ ದುರ್ಬಲಗೊಳಿಸುವಿಕೆಯಲ್ಲದ ಹಣಕಾಸಿನ ಆಸ್ತಿಗಳ ಲೆಕ್ಕಕ್ಕೆ ತೆಗೆದುಕೊಳ್ಳುವ ಒಟ್ಟು ಮೌಲ್ಯದ ಮೇಲೆ ಇಐಆರ್‌ನ್ನು ಅನುಸರಿಸಿ ಬಡ್ಡಿಯ ಆದಾಯವನ್ನು ಲೆಕ್ಕಹಾಕಲಾಗಿದೆ. ಕ್ರೆಡಿಟ್ ದುರ್ಬಲಗೊಳಿಸಲ್ಪಟ್ಟ ಆಸ್ತಿಗಳಿಗೆ ಸಂಬಂಧಿಸಿದಂತೆ, ಅಂತಹ ಆಸ್ತಿಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನವರು ನಿಧಿಪಡಿಸಿರುವ ಶಾಸನಾತ್ಮಕ ಅಗತ್ಯತೆಗಳನ್ನು ಪರಿಗಣಿಸಿ ಬಡ್ಡಿಯನ್ನು ಗುರುತಿಸಲಾಗಿದೆ.

b) ಲಾಭಾಂಶದ ಆದಾಯ:

ಲಾಭಾಂಶವನ್ನು ಈ ಕೆಳಗಿನ ಸಂದರ್ಭಗಳಲ್ಲಿ ಮಾತ್ರ ಲಾಭ ಮತ್ತು ನಷ್ಟದಲ್ಲಿ ಗುರುತಿಸಲಾಗಿದೆ:

i) ಅಂತಹ ಲಾಭಾಂಶದ ಪಾವತಿಯನ್ನು ಸ್ವೀಕರಿಸಲು ಗ್ರೂಪಿನ ಹಕ್ಕು ಸ್ಥಾಪಿಸಲ್ಪಟ್ಟಾಗ.

ii) ಲಾಭಾಂಶದ ಆರ್ಥಿಕ ಸೌಲಭ್ಯಗಳು ಗ್ರೂಪಿಗೆ ಹರಿದು ಬರುವುದು ನಿರೀಕ್ಷಿತವೆಂದು ಕಂಡುಬಂದಾಗ.

iii) ಲಾಭಾಂಶದ ಮೊಬಲಗನ್ನು ನಂಬಲರ್ಹವಾಗಿ ಲೆಕ್ಕಹಾಕಿದಾಗ.

c) ಹೂಡಿಕೆ ಆಸ್ತಿಗಳಿಂದ ಆದಾಯ (ಗುತ್ತಿಗೆ ಬಾಡಿಗೆಗಳು)

ಸಮಯದ ಅನುಪಾತದ ಆಧಾರದ ಮೇಲೆ, ಗ್ರಾಹಕರೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಶರತ್ತು ಮತ್ತು ನಿಬಂಧನೆಗಳಿಗೆ ಅನುಸಾರವಾಗಿ ಹೂಡಿಕೆ ಆಸ್ತಿಗಳ ಮೇಲಿನ ಆದಾಯವನ್ನು ಗುರುತಿಸಲಾಗುತ್ತದೆ. ಅನ್ವಯಿಸಬಹುದಾದಲ್ಲಿ ವಾರ್ಷಿಕ ಹೆಚ್ಚಳವನ್ನು ಗುತ್ತಿಗೆದಾರರ ನಿರೀಕ್ಷಿತ ಹೆಚ್ಚಳದ ದರವನ್ನು

ಸರಿದೂಗಿಸಲು ಸಾಮಾನ್ಯ ಹಣದುಬ್ಬರವನ್ನು ಪರಿಗಣಿಸಿ ಅನ್ವಯವಾಗುವಲ್ಲಿ ಭಡ್ತಿಯನ್ನು ಪರಿಗಣಿಸಲಾಗಿರುವುದರಿಂದ ಅವುಗಳು ಯಾವಾಗ ಉದ್ಭವಿಸುತ್ತದೊ ಆಗ ಮಾತ್ರ ಗುರುತಿಸಲಾಗಿದೆ.

d) ತೆಗೆದುಹಾಕಲ್ಪಟ್ಟ ಹಣಕಾಸಿನ ಆಸ್ತಿಗಳ ವಸೂಲಿ:

ತೆಗೆದುಹಾಕಲ್ಪಟ್ಟ ಹಣಕಾಸಿನ ಆಸ್ತಿಗಳ ಮೇಲೆ ವಸೂಲಾಗುವ ಆದಾಯವನ್ನು ಕಂಪೆನಿಯು ಅಂತಹ ಆದಾಯದ ವಸೂಲಿ ಬಗ್ಗೆ ಯಾವುದೇ ಅನಿಶ್ಚಿತತೆಯೂ ಇಲ್ಲವೆಂಬ ಬಗ್ಗೆ ಖಚಿತವಾದ ನಂತರವೇ ಅದನ್ನು ಆದಾಯವೆಂದು ಗುರುತಿಸುವುದು.

ಒಂದೇ ಬಾರಿ ಇತ್ಯರ್ಥ ಯೋಜನೆಯ ಪ್ರಕರಣದಲ್ಲಿ (ಒಟಿಎಸ್) ಸ್ಟೇಟ್ ಫೈನಾನ್ಶಿಯಲ್ ಕಾರ್ಪೊರೇಷನ್ಸ್ (ಎಸ್ಎಫ್ಸಿಗಳು) ಕಾಯಿದೆಯ ಕಂಡಿಕೆ 29ರಂತೆ ಸ್ವಾಧೀನಪಡಿಸಿಕೊಳ್ಳಲಾಗಿರುವ ಆಸ್ತಿಗಳ ಮಾರಾಟದಿಂದ ಬಂದ ಮೊಬಲಗನ್ನು ಮೊದಲು ಇತರ ಸಾಲಗಳಿಗೆ ಸರಿಹೊಂದಿಸಲಾಗುವುದು ಮತ್ತು ತದನಂತರ ಅಸಲಿಗೆ ಮತ್ತು ಉಳಿಕೆಯನ್ನು ಬಡ್ಡಿಗೆ ಸರಿಹೊಂದಿಸಲಾಗುವುದು.

ಪೂರಕ ಭದ್ರತೆಗಳ ಬಿಡುಗಡೆಗಾಗಿ ಸ್ವೀಕರಿಸಲ್ಪಟ್ಟ ಮೊಬಲಗಿಗೆ ಸಂಬಂಧಿಸಿದಂತೆ ಮೊದಲು ಇತರ ಸಾಲಗಳಿಗೆ ಸರಿಹೊಂದಿಸಲಾಗುವುದು ಮತ್ತು ತದನಂತರ ಅಸಲಿಗೆ ಮತ್ತು ಉಳಿಕೆಯನ್ನು ಬಡ್ಡಿಗೆ ಸರಿಹೊಂದಿಸಲಾಗುವುದು.

ಅಫೀಶಿಯಲ್ ಲಿಕ್ವಿಡೇಟರ್ ಅವರಿಂದ (ಒಎಲ್) ಮೊಬಲಗನ್ನು ಸ್ವೀಕರಿಸಲ್ಪಟ್ಟ ಪ್ರಕರಣಗಳಲ್ಲಿ, ಕಂಪೆನಿಯು ಮೊದಲು ಮೊಬಲಗನ್ನು ಇತರೆ ಬಾಕಿಗಳಿಗೆ ಸರಿಹೊಂದಿಸಿ, ನಂತರದಲ್ಲಿ ಅಸಲಿನ ಕಡೆಗೆ ಮತ್ತು ಉಳಿಕೆಯನ್ನು ಬಡ್ಡಿಗೆ ಸರಿಹೊಂದಿಸಲಾಗುವುದು.

ಒಟಿಎಸ್/ಒಎಲ್/ಆಸ್ತಿಗಳ ಮಾರಾಟ/ಪೂರಕ ಭದ್ರತೆಗಳ ಬಿಡುಗಡೆಯ ಅಡಿಯಲ್ಲಿ ಸ್ವೀಕರಿಸಲಾದ ಮೊಬಲಗನ್ನು ಪ್ರಾರಂಭದಲ್ಲಿ ಇತರೆ ಹೊಣೆಗಾರಿಕೆಗಳು ಖಾತೆಯಲ್ಲಿ ಇಡಲಾಗಿದೆ. ಸಂಪೂರ್ಣವಾಗಿ ಅನುಮೋದಿಸಲ್ಪಟ್ಟ ಮೊಬಲಗನ್ನು ಸ್ವೀಕರಿಸಿದ ನಂತರ ಮೇಲ್ಕಂಡ ನೀತಿಯ ಅನುಸಾರ ಸರಿಹೊಂದಿಸುವಿಕೆಯನ್ನು ಮಾಡಲಾಗುವುದು. ಮಂಜೂರಾತಿಯ ಶರತ್ತುಗಳನ್ನು ಅನುಸರಣೆ ಮಾಡದೇ ಇರುವ ಕಾರಣದಿಂದ ಒಟಿಎಸ್ನ ರದ್ದತಿಯ ಕಾರಣದಿಂದ ಸ್ವೀಕರಿಸಲಾಗಿರುವ ಭಾಗಶಃ ಮೊಬಲಗನ್ನು, ಮಂಡಳಿಯು ಒಟಿಎಸ್ನ್ನು ಪುನಃ ಸ್ಥಾಪಿಸದೇ ಇದ್ದಲ್ಲಿ ಸಾಲದ ಒಪ್ಪಂದ ಪತ್ರದ ಶರತ್ತಿಗೆ ಅನುಸಾರವಾಗಿ ಸರಿಹೊಂದಿಸಲಾಗುವುದು.

e) ಇತರೆ ಆದಾಯ:

ಇತರೆ ವಿಷಯಗಳ ಆದಾಯವನ್ನು ಗ್ರೂಪಿನ ಅಂತಹ ಆದಾಯ ಸ್ವೀಕರಿಸುವ ಹಕ್ಕು ಖಚಿತವಾದ ನಂತರ ಮತ್ತು ಅದರ ಆರ್ಥಿಕ ಸೌಲಭ್ಯಗಳು ಸಂಸ್ಥೆಗೆ ಹರಿದುಬರುವುದೆಂದು ನಂಬಲರ್ಹವಾಗಿ ಖಚಿತವಾದ ನಂತರವೇ ಅದನ್ನು ಆದಾಯವೆಂದು ಗುರುತಿಸಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

2.3 ಗುತ್ತಿಗೆಗಳು

ವ್ಯವಸ್ಥೆಯಲ್ಲಿ ಗುತ್ತಿಗೆ ಆಧಾರದ ವ್ಯವಸ್ಥೆಯನ್ನು ಹೊಂದುವ ಅಗತ್ಯ ಕಂಡುಬಂದಲ್ಲಿ, ಗುತ್ತಿಗೆ ವ್ಯವಸ್ಥೆಯ ಆರಂಭದಲ್ಲಿಯೇ ಕಂಡುಕೊಳ್ಳಲಾಗುವುದು. ವ್ಯವಸ್ಥೆಯಲ್ಲಿ ಗುತ್ತಿಗೆ ಆಧಾರದ ವ್ಯವಸ್ಥೆಯನ್ನು ಹೊಂದುವ ಅಗತ್ಯ ಕಂಡುಬಂದಲ್ಲಿ, ಗುತ್ತಿಗೆ ವ್ಯವಸ್ಥೆಯ ಆರಂಭದಲ್ಲಿಯೇ ಕಂಡುಕೊಳ್ಳುವುದರ ಜೊತೆಗೆ ನಿರ್ದಿಷ್ಟ ಆಸ್ತಿ ಅಥವಾ ಆಸ್ತಿಗಳು ಈ ವ್ಯವಸ್ಥೆಯಲ್ಲಿ ಹಕ್ಕುಗಳನ್ನು ವಿಶೇಷವಾಗಿ ಸ್ಪಷ್ಟಪಡಿಸದೇ ಇದ್ದರೂ ಕೂಡಾ ನಿರ್ದಿಷ್ಟ ಆಸ್ತಿಯನ್ನು ಉಪಯೋಗಿಸಿಕೊಳ್ಳುವುದೂ ಸೇರಿರುತ್ತದೆ.

ಕಂಪೆನಿಯು ಗುತ್ತಿಗೆದಾರನ ಪಾತ್ರ ನಿರ್ವಹಿಸುವುದು

ಗುತ್ತಿಗೆಯನ್ನು ಅದರ ಆರಂಭದ ದಿನಾಂಕದಲ್ಲಿಯೇ ಹಣಕಾಸಿನ ಗುತ್ತಿಗೆ ಅಥವಾ ನಿರ್ವಹಣಾ ಗುತ್ತಿಗೆಯೆಂದು ವರ್ಗೀಕರಿಸಲಾಗುವುದು. ಗುತ್ತಿಗೆಯು ತನ್ನ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಎಲ್ಲಾ ಅಪಾಯಗಳನ್ನೂ ಮತ್ತು ಸಾಂದರ್ಭಿಕ ಲಾಭಗಳನ್ನು ಮೂರನೇ ಪಕ್ಷಕ್ಕೆ ವರ್ಗಾಯಿಸುವ ಗುತ್ತಿಗೆಯನ್ನು ಹಣಕಾಸಿನ ಗುತ್ತಿಗೆಯೆಂದು ವರ್ಗೀಕರಿಸಲಾಗಿದೆ. ಇತರೆ ಎಲ್ಲಾ ಗುತ್ತಿಗೆಗಳನ್ನೂ ನಿರ್ವಹಣಾ ಗುತ್ತಿಗೆಯೆಂದು ವರ್ಗೀಕರಿಸಲಾಗಿದೆ. ಮೇಲ್ಕಂಡ ಸಿದ್ಧಾಂತದ ಆಧಾರದ ಮೇಲೆ ಕಂಪೆನಿಯು ಒಳಗೊಂಡಿರುವ ಎಲ್ಲಾ ಗುತ್ತಿಗೆಗಳನ್ನೂ ನಿರ್ವಹಣಾ ಗುತ್ತಿಗೆಯೆಂದು ವರ್ಗೀಕರಿಸಲಾಗಿದೆ.

ನಿರ್ವಹಣಾ ಗುತ್ತಿಗೆ

ನಿರ್ವಹಣಾ ಗುತ್ತಿಗೆಯಲ್ಲಿ ನೀಡಲಾಗಿರುವ ಆಸ್ತಿಗಳನ್ನು ಕೂಡಿಬಂದಿರುವ ಸವಕಳಿಯನ್ನು ಕಳೆದು ಮೂಲದರದಲ್ಲಿ ತೋರಿಸಲಾಗಿದೆ.

ಗುತ್ತಿಗೆ ಕರಾರಿನ ಶರತ್ತುಗಳಂತೆ ಕಾಲಕಾಲಕ್ಕೆ ಬಾಕಿ ನಿಲ್ಲುವ ನಿರ್ವಹಣಾ ಗುತ್ತಿಗೆಯ ಮೇಲಿನ ಗುತ್ತಿಗೆ ಬಾಡಿಗೆಯನ್ನು ಲಾಭ ಮತ್ತು ನಷ್ಟದ ಕೋಷ್ಟಕದಲ್ಲಿ ಸಂಬಂದಪಟ್ಟ ಗುತ್ತಿಗೆಯ ಶರತ್ತಿನ ಅನ್ವಯ ಸ್ಟೈಟ್ ಲೈನ್ ಆಧಾರದಲ್ಲಿ ಗುರುತಿಸಲಾಗಿದ್ದು, ಈ ಕೆಳಗಿನವುಗಳನ್ನು ಹೊರತುಪಡಿಸಿದೆ:

i) ಸಮಯದ ಪದ್ಧತಿಯನ್ನು ಹೆಚ್ಚಾಗಿ ಪ್ರತಿನಿಧಿಸುವ ಮತ್ತೊಂದು ವ್ಯವಸ್ಥಿತ ಪದ್ಧತಿಯ ಆಧಾರದ ಮೇಲೆ, ಗುತ್ತಿಗೆ ನೀಡುವವರ ಪಾವತಿಯು ಆ ಆಧಾರದ ಮೇಲೆ ಇರದಿದ್ದರೂ ಕೂಡಾ ಗುತ್ತಿಗೆಯ ಆಸ್ತಿಗಳ ಮೇಲೆ ಬರುವ ಸೌಲಭ್ಯಗಳು ಕಡಿಮೆಯಾಗುವಂತಹದ್ದು;

ii) ಸಾಮಾನ್ಯವಾಗಿ ನಿರೀಕ್ಷಿಸುವ ಹಣದುಬ್ಬರ ಪ್ರಮಾಣದ ಹೆಚ್ಚಳದ ದರವನ್ನು ಪರಿಹರಿಸುವಂತೆ ಗುತ್ತಿಗೆ ನೀಡುವವರ ಪಾವತಿಯನ್ನು ರೂಪಿಸುವುದು. ಗುತ್ತಿಗೆ ನೀಡುವವರಿಗೆ ಪಾವತಿಯು ಹಣದುಬ್ಬರದ ಅಂಶಗಳನ್ನು ಒಳಗೊಳ್ಳದೇ ಇದ್ದಲ್ಲಿ, ಆಗ ಈ ಶರತ್ತು ಒಳಪಡುವುದಿಲ್ಲ.

ಈ ಕೆಳಕಂಡವುಗಳನ್ನು ಹೊರತುಪಡಿಸಿ, ಆಸ್ತಿಗಳ–ಉಪಯೋಗೀ–ಹಕ್ಕುಗಳನ್ನು ಮತ್ತು ಗುತ್ತಿಗೆ ಹೊಣೆಗಾರಿಕೆಗಳನ್ನು ಗುರುತಿಸಿ ಎಲ್ಲಾ ಗುತ್ತಿಗೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ:

– ಕಡಿಮೆ ಮೌಲ್ಯದ ಆಸ್ತಿಗಳ ಗುತ್ತಿಗೆ; ಮತ್ತು

– 12 ತಿಂಗಳುಗಳ ಅವಧಿ ಅಥವಾ ಕಡಿಮೆಯ ಗುತ್ತಿಗೆಗಳು

ಗುತ್ತಿಗೆ ಹೊಣೆಗಾರಿಕೆಗಳನ್ನು ಗುತ್ತಿಗೆ ಅವಧಿಯ ಮೇಲೆ ಗುತ್ತಿಗೆದಾರರಿಗೆ ಒಪ್ಪಂದದಂತೆ ಪಾವತಿಸಬೇಕಾಗಿರುವ ಪ್ರಸಕ್ತ ಮೌಲ್ಯದ ಆಧಾರದ ಮೇಲೆ, ಗುತ್ತಿಗೆಗೆ ಸೇರಿರುವ ಡಿಸ್ಕೌಂಟ್ ದರದ ಜೊತೆಗೆ, ಇದು ಸಿದ್ಧವಾಗಿ ಲಭ್ಯವಿಲ್ಲದೇ ಇರುವ ಪ್ರಕರಣಗಳನ್ನು ಹೊರತುಪಡಿಸಿ, (ಪ್ರತೀ ಪ್ರಕರಣಕ್ಕೆ ನಿರ್ದಿಷ್ಟವಾಗಿ) ಇಂತಹ ಪ್ರಕರಣಗಳಲ್ಲಿ ಗುತ್ತಿಗೆಯು ಪ್ರಾರಂಭವಾದ ದಿನಾಂಕದಂದು ಇರುವ ಹೆಚ್ಚಳವಾಗುವ ಅವಕಾಶ ಇರುವ ದರದ ಆಧಾರದ ಮೇಲೆ ಲೆಕ್ಕಹಾಕಲಾಗಿದೆ.

ಪ್ರಾರಂಭಿಕ ಗುರುತಿಸುವಿಕೆಯಲ್ಲಿ, ಗುತ್ತಿಗೆ ಹೊಣೆಗಾರಿಕೆಯ ಲೆಕ್ಕಹಾಕುವ ಮೌಲ್ಯವು ಈ ಕೆಳಕಂಡವುಗಳನ್ನೂ ಒಳಗೊಂಡಿರುತ್ತದೆ:

(i) ಯಾವುದೇ ಉಳಿಕೆ ಮೌಲ್ಯ ಖಾತರಿಯಿಂದ ಪಾವತಿಸಲು ನಿರೀಕ್ಷಿಸಿರುವ ಮೊಬಲಗು;

(ii) ಕಂಪೆನಿಯ ಪರವಾಗಿ ಯಾವುದೇ ಖರೀದಿ ಮೌಲ್ಯದ ಆಯ್ಕೆ ಮಂಜೂರಾಗಿದ್ದು, ಆ ಆಯ್ಕೆಯನ್ನು ಪಡೆಯುವುದು ಖಚಿತವಾಗಿದ್ದಲ್ಲಿ;

(iii) ರದ್ದುಪಡಿಸುವಿಕೆಯ ಆಯ್ಕೆಯನ್ನು ಉಪಯೋಗಿಸಿಕೊಂಡಲ್ಲಿ ಗುತ್ತಿಗೆಯ ಅವಧಿಯನ್ನು ಅಂದಾಜು ಮಾಡಲು ಅವಕಾಶ ಇದ್ದಲ್ಲಿ, ಗುತ್ತಿಗೆಯ ಶರತ್ತುಗಳನ್ನು ರದ್ದುಪಡಿಸಿ ಯಾವುದಾದರೂ ದಂಡವನ್ನು ಪಾವತಿಸಿದ್ದಲ್ಲಿ,

ಆಸ್ತಿಯ–ಉಪಯೋಗ–ಹಕ್ಕುಗಳ ಮೊಬಗನ್ನು ಪ್ರಾರಂಭದಲ್ಲಿ ಗುತ್ತಿಗೆಯ ಹೊಣೆಗಾರಿಕೆಯಲ್ಲಿ ಲೆಕ್ಕಹಾಕಿದ್ದರೆ, ಯಾವುದೇ ರೀತಿಯ ಗುತ್ತಿಗೆ ಪ್ರೋತ್ಸಾಹ ಧನ ಸಿಕ್ಕಿರುವ ಕಾರಣದಿಂದ ಕಡಿಮೆ ಮಾಡಿದ್ದಲ್ಲಿ, ಮತ್ತು ಈ ಕೆಳಗಿನ ಕಾರಣದಿಂದ ಹೆಚ್ಚಿಸಿದ್ದಲ್ಲಿ:

(i) ಗುತ್ತಿಗೆಯ ಸಮಯದಲ್ಲಿ ಅಥವಾ ಗುತ್ತಿಗೆಗೆ ಮೊದಲು ಗುತ್ತಿಗೆಯ ಪಾವತಿಯನ್ನು ಮಾಡಿದ್ದಲ್ಲಿ;

(ii) ಪ್ರಾರಂಭಿಕ ನೇರ ವೆಚ್ಚಗಳನ್ನು ಮಾಡಿದ್ದಲ್ಲಿ; ಮತ್ತು

(iii) ಒಪ್ಪಂದದ ಪ್ರಕಾರ ಕಂಪೆನಿಯು ಗುತ್ತಿಗೆ ಆಸ್ತಿಯನ್ನು ಕಳಚಬೇಕಾಗಿದ್ದಲ್ಲಿ, ತೆಗೆದುಹಾಕಬೇಕಾಗಿದ್ದಲ್ಲಿ ಅಥವಾ ಪುನರ್ ಸ್ಥಾಪಿಸಬೇಕಾಗಿದ್ದು, ಅದಕ್ಕೆ ಉಪಬಂಧ ಕಲ್ಪಿಸಬೇಕಾದ ಮೊಬಲಗು ಯಾವುದಾದರೂ ಇದ್ದಲ್ಲಿ.

ಪ್ರಾರಂಭಿಕ ಲೆಕ್ಕಹಾಕಿರುವಿಕೆಯ ನಂತರದಲ್ಲಿ ಉಳಿದಿರುವ ಬಾಕಿಯ ಮೇಲೆ ಒಂದೇ ರೀತಿಯ ದರದಲ್ಲಿ ವಿಧಿಸಿರುವ ಬಡ್ಡಿಯ ಕಾರಣದಿಂದ ಗುತ್ತಿಗೆ ಹೊಣೆಗಾರಿಕೆಯು ಜಾಸ್ತಿಯಾಗಿದ್ದಲ್ಲಿ, ಮತ್ತು ಗುತ್ತಿಗೆ ಪಾವತಿ ಮಾಡುವಾಗ ಕಡಿಮೆಯಾಗಿದ್ದಲ್ಲಿ. ಆಸ್ತಿಗಳ–ಉಪಯೋಗೀ–ಹಕ್ಕನ್ನು ಗುತ್ತಿಗೆಯ ಉಳಿದ ಅವಧಿಗೆ ಅಥವಾ ಆಸ್ತಿಯ ಉಳಿಕೆಯ ಆರ್ಥಕ ಜೀವಿತಾವಧಿಗೆ ಸ್ಟ್ರೈಟ್–ಲೈನ್ ಆಧಾರದಲ್ಲಿ ಭೋಗ್ಯಕ್ಕೆ ಒಳಪಡಿಸಿದ್ದಲ್ಲಿ, ವಿರಳವಾಗಿ ಇದನ್ನು ಗುತ್ತಿಗೆಯ ಅವಧಿಗಿಂತ ಕಡಿಮೆ ಅವಧಿಗೆ ಲೆಕ್ಕಹಾಕಲ್ಪಡುತ್ತದೆ.

ಕಂಪೆನಿಯು ಯಾವುದೇ ಗುತ್ತಿಗೆಯ ಶರತ್ತಿನ ಅಂದಾಜನ್ನು ಪರಿಷ್ಕರಿಸಿದಾಗ, ಅದು ಗುತ್ತಿಗೆ ಹೊಣೆಗಾರಿಕೆಯ ಲೆಕ್ಕಕ್ಕೆ ತೆಗೆದುಕೊಳ್ಳುವ ಮೊಬಲಗನ್ನು ಪರಿಷ್ಕೃತ ಅವಧಿಯ ಮೇಲೆ ಮಾಡಲಾಗಿರುವ ಪಾವತಿಯನ್ನು ಪರಿಷ್ಕೃತ ದರದಲ್ಲಿ ಡಿಸ್ಕೌಂಟ್ ಪದ್ಧತಿಯನ್ನು ಉಪಯೋಗಿಸುತ್ತದೆ. ಅದೇ ರೀತಿ ಭವಿಷ್ಯದ ಗುತ್ತಿಗೆಯ ಪಾವತಿಯು ಡಿಸ್ಕೌಂಟ್ ದರದಲ್ಲಿ ಯಾವುದೇ ಬದಲಾವಣೆ ಇಲ್ಲದಿರುವಿಕೆಗೆ ಹೊರತುಪಡಿಸಿ, ಪರಿಷ್ಕೃತ ದರ ಅಥವಾ ಇಂಡೆಕ್ಸ್‌ನ್ನು ಅವಲಂಭಿಸಿದ್ದು, ಗುತ್ತಿಗೆ ಹೊಣೆಗಾರಿಕೆಯ ಲೆಕ್ಕಹಾಕಲಾಗುವ ಮೊಬಲಗನ್ನು ಅದೇ ರೀತಿ ಪರಿಷ್ಕರಿಸಿ ಅನುಸರಿಸಲಾಗುತ್ತಿದೆ. ಎರಡೂ ಪ್ರಕರಣಗಳಲ್ಲಿ ಆಸ್ತಿಗಳ–ಉಪಯೋಗೀ–ಹಕ್ಕಿಗೆ ಪರಿಷ್ಕೃತ ಲೆಕ್ಕಹಾಕುವ ಮೊಬಲಗನ್ನು ಗುತ್ತಿಗೆಯ ಉಳಿದ (ಪರಿಷ್ಕೃತ) ಅವಧಿಗೆ ಭೋಗ್ಯಕ್ಕೆ ಒಳಪಡಿಸಿ ಸಮಾನವಾದ ಹೊಂದಾಣಿಕೆಯನ್ನು ಮಾಡಲಾಗುತ್ತಿದೆ. ಉಪಯೋಗಿಸುವ–ಹಕ್ಕಿನ–ಆಸ್ತಿಗಳ ಲೆಕ್ಕ ಹಾಕಲಾಗುವ ಮೌಲ್ಯವು ಸೊನ್ನೆಯಾಗಿದ್ದಲ್ಲಿ, ಯಾವುದೇ ಮುಂದಿನ ಕಡಿಮೆಗೊಳಿಸುವಿಕೆಯನ್ನು ಲಾಭ ಮತ್ತು ನಷ್ಟದ ಕೋಷ್ಟಕದಲ್ಲಿ ಗುರುತಿಸಲಾಗುವುದು.

2.4 ಸಿಬ್ಬಂದಿ ಸೌಲಭ್ಯಗಳು

ಅಲ್ಪಾವಧಿ ಸಿಬ್ಬಂದಿ ಸೌಲಭ್ಯಗಳು:

ಸಿಬ್ಬಂದಿ ಸೌಲಭ್ಯಗಳಲ್ಲಿ, ವೇತನಗಳು, ಭತ್ಯೆಗಳು, ಭವಿಷ್ಯನಿಧಿ, ನಿವೃತ್ತಿ ಉಪದಾನ, ಉಪಯೋಗಿಸದೇ ಇರುವ ರಜೆಗಳಿಗೆ ರಜೆ ನಗದೀಕರಣ, ಪರಿಹಾರಧನವನ್ನು ಒಳಗೊಂಡಿರುವ ಗೈರುಹಾಜರಿಗಳು ಸೇರಿರುತ್ತವೆ. ಎಲ್ಲಾ ರೀತಿಯ ಅಲ್ಪಾವಧಿ ಸಿಬ್ಬಂದಿ ಸೌಲಭ್ಯಗಳನ್ನು ಲೆಕ್ಕಪತ್ರಗಳ ಅವಧಿಯಲ್ಲಿ, ಅವುಗಳನ್ನು ವೆಚ್ಚ ಮಾಡಿದಾಗ ಡಿಸ್ಕೌಂಟ್ ಮಾಡದೇ ಇರುವ ಮೊಬಲಗಿನಲ್ಲಿ ಗುರುತಿಸಲ್ಪಡುತ್ತದೆ.

ಉದ್ಯೋಗದ ನಂತರದ ಸೌಲಭ್ಯಗಳು

ವ್ಯಾಖ್ಯಾನಿಸಲ್ಪಟ್ಟ ದೇಣಿಗೆ ಯೋಜನೆಗಳು

ವ್ಯಾಖ್ಯಾನಿಸಲ್ಪಟ್ಟ ದೇಣಿಗೆ ಯೋಜನೆಗಳ ಅಡಿಯಲ್ಲಿ ಸಿಬ್ಬಂದಿ ಸೌಲಭ್ಯಗಳಲ್ಲಿ ಭವಿಷ್ಯ ನಿಧಿಯು ಸೇರಿದ್ದು, ಯೋಜನೆಗೆ ಕಂಪೆನಿಯ ದೇಣಿಗೆಯ ರೂಪದಲ್ಲಿ ಡಿಸ್ಕೌಂಟ್ ಮಾಡದ ಮೊಬಲಗಿನ ಭಾದ್ಯತೆಗಳನ್ನು ಒಳಗೊಂಡಿರುತ್ತದೆ.

ನೌಕರರ ಭವಿಷ್ಯನಿಧಿ ಕಾಯಿದೆ, 1952ರ ಕಂಡಿಕೆ 17ರಂತೆ ನಿಗಮದ ಭವಿಷ್ಯನಿಧಿಯ ಮೊಬಲಗು ವಿನಾಯತಿ ಪಡೆದಿರುತ್ತದೆ. ಟ್ರಸ್ಟಿನವರು ಘೋಷಿಸಿರುವ ಬಡ್ಡಿ ದರದವು ಶಾಸನಬದ್ದ ದರದಲ್ಲಿ ಹೋಲಿಸಿದಲ್ಲಿ ಯಾವುದಾದರೂ ವ್ಯತ್ಯಾಸಗಳು ಕಂಡುಬಂದಲ್ಲಿ ಮಾಲೀಕರು ಅಂತಹ ಕೊರತೆಗಳನ್ನು ಭರಿಸತಕ್ಕವರಾಗಿರುತ್ತಾರೆ.

ವ್ಯಾಖ್ಯಾನಿಸಲ್ಪಟ್ಟ ಸೌಲಭ್ಯ ಯೋಜನೆಗಳು

a) ನಿವೃತ್ತಿ ಉಪದಾನ

ಹೋಲ್ಡಿಂಗ್ ಕಂಪೆನಿಯು ಒಂದು ಗ್ರಾಚ್ಯುಯಿಟಿ ಟ್ರಸ್ಟನ್ನು ಸ್ಥಾಪಿಸಿದ್ದು, ಇದು ಭಾರತೀಯ ಜೀವವಿಮಾ ನಿಗಮದಿಂದ ಗ್ರೂಪ್ ಗ್ರಾಚ್ಯುಯಿಟಿ (ಕ್ಯಾಷ್ ಅಕ್ಯುಮ್ಯುಲೇಷನ್) ಕಮ್ ಲೈಫ್ ಅಶ್ಯೂರೆನ್ಸ್ ಸ್ಕೀಮ್‌ನಿಂದ ಪಾಲಿಸಿಯೊಂದನ್ನು ಪಡೆದುಕೊಂಡಿರುತ್ತದೆ. ಈ ಯೊಜನೆಯ ದೇಣಿಗೆಯನ್ನು ವರ್ಷದಿಂದ ವರ್ಷಕ್ಕೆ ಮಾಡಲಾಗುತ್ತಿದೆ. ಭಾದ್ಯತೆಯ ಪ್ರಸಕ್ತ ಮೌಲ್ಯವನ್ನು ಪ್ರೊಜೆಕ್ಟೆಡ್ ಯೂನಿಟ್ ಕ್ರೆಡಿಟ್ ಮೆಥಡ್‌ನಲ್ಲಿ ನೈಜ ಮೌಲ್ಯೀಕರಣದ ಆಧಾರದ ಮೇಲೆ ಮಾಡಲಾಗುತ್ತಿದ್ದು, ಇದರಲ್ಲಿ ಪ್ರತೀ ಸೇವೆಯ ಅವಧಿಗೆ ಲಭ್ಯವಾಗುವ ಹೆಚ್ಚುವರಿ ಸಿಬ್ಬಂದಿ ಸೌಲಭ್ಯವನ್ನು ನೀಡುವ ಅವಕಾಶವಿದ್ದು, ಪ್ರತೀ ಘಟಕವನ್ನು ಪ್ರತ್ಯೇಕವಾಗಿ ಲೆಕ್ಕ ಹಾಕಿ ಅಂತಿಮ ಬಾಧ್ಯತೆಯನ್ನು ಸಿದ್ಧಪಡಿಸಲಾಗುತ್ತಿದೆ. ಹಿಂದಿನ ಸೇವಾ ಅವಧಿಯ ಮೇಲೆ ನೈಜ ಆಧಾರದ ಮೌಲ್ಯಮಾಪನ ಮಾಡಿ ಲೆಕ್ಕಹಾಕಲಾಗಿರುವ ಮೊಬಲಗು ಮತ್ತು ನಗದು ಸೇರಿಕೆ ರನ್ನಿಂಗ್ ಖಾತೆಯಲ್ಲಿ ಇರುವ ಮೊಬಲಗಿನ ವ್ಯತ್ಯಾಸವನ್ನು ವರ್ಷದ ಅಂತ್ಯದಲ್ಲಿ ಪಾವತಿ ಮಾಡಲಾಗಿಲ್ಲ ಮತ್ತು ಲೆಕ್ಕದ ಪುಸ್ತಕಗಳಲ್ಲಿ ಉಪಬಂಧವನ್ನು ಕಲ್ಪಿಸಲಾಗಿರುತ್ತದೆ. ನೈಜ ಗಳಿಕೆಗಳು ಮತ್ತು ನಷ್ಟಗಳನ್ನು ಒಳಗೊಂಡಿರುವ ಪುನರ್–ಲೆಕ್ಕಾಚಾರಗಳು, ಆಸ್ತಿಗಳ ಮಿತಿಗೊಳಿಸಿರುವಿಕೆಯ ಪರಿಣಾಮಗಳು, ಮತ್ತು ಯೋಜನಾ ಆಸ್ತಿಗಳ ಮೇಲಿನ ವರಮಾನವನ್ನು ಅವುಗಳು ಘಟಿಸಿದ ಅವಧಿಯಲ್ಲಿ ಉಳಿಸಿಕೊಂಡಿರುವ ಗಳಿಕೆಗಳಿಗೆ ಸಂಬಂದಪಟ್ಟ ಜಮಾ ಅಥವಾ ಖರ್ಚುಗಳನ್ನು ಒಸಿಐ ಮೂಲಕ ದಾಖಲಿಸಿ ಆಸ್ತಿಹೊಣೆ ತಃಖ್ತೆಯಲ್ಲಿ ಕೂಡಲೇ ಗುರುತಿಸಲಾಗುವುದು. ಪುನರ್–ಲೆಕ್ಕಾಚಾರಗಳನ್ನು ನಂತರದ ಅವಧಿಗಳಲ್ಲಿ ಲಾಭ ಮತ್ತು ನಷ್ಟದ ಖಾತೆಗಳಿಗೆ ವರ್ಗೀಕರಿಸಲಾಗುವುದಿಲ್ಲ.

b) ರಜೆ ನಗದೀಕರಣ

ಉಪಯೋಗಿಸದೇ ಇರುವ ಗಳಿಕೆ ರಜೆ ನಗದೀಕರಣ ಮತ್ತು ಅರ್ಧ ವೇತನ ರಜೆಗಳಿಂದ ಬರಬಹುದಾದ ಹೊಣೆಗಾರಿಕೆಗಳಿಗೆ ನೈಜ ಮೌಲ್ಯೀಕರಣದ ಆಧಾರದ ಮೇಲೆ ಉಪಬಂಧವನ್ನು ಕಲ್ಪಿಸಲಾಗಿರುತ್ತದೆ.

ನೌಕರಿಯ ನಂತರದ ವ್ಯಾಖ್ಯಾನಿಸಲ್ಪಟ್ಟ ಸೌಲಭ್ಯ ಯೋಜನೆಗಳ ಪುನರ್–ಲೆಕ್ಕಾಚಾರಗಳನ್ನು ಇತರೆ ಒಟ್ಟಾರೆ ಆದಾಯಗಳಲ್ಲಿ ಲೆಕ್ಕಕ್ಕೆ ಸೇರಿಸಲಾಗುವುದು.

2.5 ಯೋಜನಾ ಅಭಿವೃದ್ಧಿ ವೆಚ್ಚಗಳು

ಅಭಿವೃದ್ಧಿಯ ಪ್ರಾರಂಭಿಕ ಹಂತದಲ್ಲಿರುವ ಅಥವಾ ಬಿಟ್ಟುಕೊಟ್ಟಿರುವ ಯೋಜನೆಗಳಿಗಾಗಿ ಮಾಡಲಾಗಿರುವ ವೆಚ್ಚಗಳನ್ನು ಅವುಗಳನ್ನು ಗುರುತಿಸಿರುವ/ ತೀರ್ಮಾನಿಸಿರುವ ವರ್ಷದಲ್ಲಿ ಲಾಭ ಮತ್ತು ನಷ್ಟ ಖಾತೆಗೆ ಚಾರ್ಜ್ ಆಫ್ ಮಾಡಲಾಗಿದೆ. ಆದಾಗ್ಯೂ, ಯೋಜನೆಗಳು ಗುರುತಿಸಲ್ಪಡುವಲ್ಲಿ, ಅಂತಹ ಯೋಜನೆಗಳ ಮೇಲೆ ಬಂಡವಾಳ ವೆಚ್ಚವನ್ನೂ ಸೇರಿದಂತೆ ಮಾಡಲಾಗಿರುವ ಎಲ್ಲಾ ವೆಚ್ಚಗಳನ್ನು, ಅಂತಹ ಯೋಜನೆಗಳ ಮೇಲೆ ವಿನಿಯೋಗಿಸಿರುವ ಮೊಬಲಗಿನ ಮೇಲೆ ಕೂಡಿ ಬಂದಿರುವ ಬಡ್ಡಿಯನ್ನು ಮತ್ತು ವಾರ್ಷಿಕವಾಗಿ ಹೆಚ್ಚಿಸಲು ಒಪ್ಪಲಾಗಿರುವ ಸೇವಾ ಶುಲ್ಕದ ವೆಚ್ಚವನ್ನು ಸಂಬಂದಪಟ್ಟ ಯೋಜನಾ ಖಾತೆಗೆ ಸೇರಿಸಿ ಲೆಕ್ಕಹಾಕಲಾಗಿದೆ.

2.6 ಹಣಕಾಸಿನ ಪತ್ರಗಳು
ಹಣಕಾಸಿನ ಆಸ್ತಿಗಳು

A. ಗುರುತಿಸುವಿಕೆಯ ದಿನಾಂಕ

ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಅಂತಹ ಪತ್ರಗಳ ಒಪ್ಪಂದಗಳ ಉಪಬಂಧಗಳಲ್ಲಿ ಗ್ರೂಪ್ ಕೂಡಾ ಒಂದು ಪಕ್ಷವಾದ ಕೂಡಲೇ ಅವುಗಳನ್ನು ಗ್ರೂಪಿನ ಆಸ್ತಿ ಹೊಣೆ ತಃಖ್ತೆಯಲ್ಲಿ ಗುರುತಿಸಲಾಗುತ್ತದೆ.

B. ಪ್ರಾರಂಭದಲ್ಲಿ ಗುರುತಿಸುವಿಕೆ ಮತ್ತು ಲೆಕ್ಕಾಚಾರ

ಎಲ್ಲಾ ಹಣಕಾಸಿನ ಆಸ್ತಿಗಳನ್ನು ಪ್ರಾರಂಭದಲ್ಲಿಯೇ ಗುರುತಿಸಲ್ಪಟ್ಟು ಲೆಕ್ಕಹಾಕಾಗಿದ್ದು, ಇದು ಸಮರ್ಪಕ ಮೌಲ್ಯಕ್ಕೆ ಸಮಾನವಾಗಿರುತ್ತದೆ.

ಅ. ನಂತರದ ವರ್ಗೀಕರಣ ಮತ್ತು ಲೆಕ್ಕಾಚಾರ
ಹಣಕಾಸಿನ ಆಸ್ತಿಗಳು

ಹಣಕಾಸಿನ ಆಸ್ತಿಗಳನ್ನು ನಂತರದಲ್ಲಿ ಲೆಕ್ಕಾಚಾರ ಮಾಡಿ ವ್ಯವಹಾರದ ಮಾದರಿ ಹಾಗೂ ಒಪ್ಪಂದದ ವಿಶೇಷತೆಗನುಗುಣವಾಗಿ ಈ ಕೆಳಕಂಡ ಪ್ರವರ್ಗದಲ್ಲಿ ವರ್ಗೀಕರಿಸಲಾಗಿದೆ:

ಭೋಗ್ಯಕ್ಕೆ ಒಳಪಡಿಸಿರುವ ಮೊಬಲಗು

ಲಾಭ ಮತ್ತು ನಷ್ಟದ ಮೂಲಕ ಸಮರ್ಪಕ ಮೌಲ್ಯ (ಎಫ್‌ವಿಟಿಪಿಎಲ್)

ಇತರೆ ಸಮಗ್ರ ಆದಾಯದ ಮೂಲಕ ಸಮರ್ಪಕ ಮೌಲ್ಯ (ಎಫ್‌ವಿಒಸಿಐ)

(i) ಭೋಗ್ಯಕ್ಕೊಳಪಡಿಸಿದ ದರದಲ್ಲಿ ಹಣಕಾಸಿನ ಆಸ್ತಿಗಳನ್ನು ಪರಿಗಣಿಸಿದ್ದು

ಆಸ್ತಿಯು ಎಫ್‌ವಿಟಿಪಿಎಲ್‌ನಲ್ಲಿ ಪರಿಗಣಿಸದೇ ಇದ್ದಲ್ಲಿ ಈ ಕೆಳಕಂಡ ಎರಡು ಶರತ್ತುಗಳನ್ನು ಪೂರೈಸುವ ಹಣಕಾಸಿನ ಆಸ್ತಿಯನ್ನು ಭೋಗ್ಯಕ್ಕೊಳಪಡಿಸಿದ ದರದಲ್ಲಿ ಲೆಕ್ಕಹಾಕಲಾಗುವುದು (ದುರ್ಬಲಗೊಳಿಸುವಿಕೆಗೆ ನಿವ್ವಳ ಲೆಕ್ಕಕ್ಕೆ ತೆಗೆದುಕೊಳ್ಳುವ ಮೌಲ್ಯ).

ವ್ಯವಹಾರದ ಮಾದರಿ ಪರೀಕ್ಷೆ: ಕಂಪೆನಿಯ ವ್ಯವಹಾರದ ಮಾದರಿಯ ಉದ್ದೇಶವು ಹಣಕಾಸಿನ ಆಸ್ತಿಗಳನ್ನು ಒಪ್ಪಂದದ ನಗದು ಹರಿವಿಗೆ ತೆರೆದಿಡುವುದು ಆಗಿರುತ್ತದೆ. (ಪತ್ರವನ್ನು ಅದರ ಒಪ್ಪಂದದ ಮುಕ್ತಾಯದ ದಿನಾಂಕದ ಒಳಗೆ ಮಾರಾಟ ಮಾಡಿ ಅದರ ಸಮರ್ಪಕ ಮೌಲ್ಯದ ಬದಲಾವಣೆಗಳನ್ನು ಪಡೆಯುವ ಬದಲು)

ನಗದು ಹರಿವು ವಿಶೇಷಣಗಳ ಪರೀಕ್ಷೆ: ಹಣಕಾಸಿನ ಆಸ್ತಿಗಳ ಒಪ್ಪಂದದ ಶರತ್ತುಗಳು ನಿರ್ದಿಷ್ಟ ದಿನಾಂಕದಂದು ನಗದು ಹರಿವಿಗೆ ಅವಕಾಶ ಮಾಡಿಕೊಡಲಿದ್ದು, ಅವುಗಳು ಬಾಕಿ ನಿಂತಿರುವ ಅಸಲು ಮೊಬಲಗಿನ ಮೇಲೆ ಏಕೈಕವಾಗಿ ಅಸಲು ಮತ್ತು ಬಡ್ಡಿಯ ಪಾವತಿಗೆ ಅವಕಾಶ ಮಾಡಿಕೊಡುತ್ತದೆ.

ಸಮರ್ಪಕ ಮೌಲ್ಯದಲ್ಲಿ ಲೆಕ್ಕಹಾಕಲ್ಪಟ್ಟ ಹಣಕಾಸಿನ ಆಸ್ತಿಗಳು

ಭೋಗ್ಯಕ್ಕೊಳಪಡಿಸಿದ ದರದಲ್ಲಿ ವರ್ಗೀಕರಿಸದೇ ಇರುವ ಹಣಕಾಸಿನ ಆಸ್ತಿಗಳನ್ನು ನಂತರದಲ್ಲಿ ಸಮರ್ಪಕ ಮೌಲ್ಯದಲ್ಲಿ ಲೆಕ್ಕಹಾಕಲಾಗುವುದು. ಆಸ್ತಿಗಳನ್ನು ಸಮರ್ಪಕ ಮೌಲ್ಯದಲ್ಲಿ ಲೆಕ್ಕಹಾಕಲಾದ ಪ್ರಕರಣಗಳಲ್ಲಿ ಸಂಪೂರ್ಣವಾಗಿ ಲಾಭ ಮತ್ತು ನಷ್ಟದ ಕೋಷ್ಟಕಗಳಲ್ಲಿ ಗಳಿಕೆಗಳು ಮತ್ತು ನಷ್ಟಗಳೆಂದು ಲೆಕ್ಕಹಾಕಲಾಗಿರುವ ಪ್ರಕರಣಗಳಲ್ಲಿ (ಅಂದರೆ., ಲಾಭ ಮತ್ತು ನಷ್ಟದ ಮೂಲಕ ಸಮರ್ಪಕ ಮೌಲ್ಯ) ಅಥವಾ ಇತರೆ ಸಮಗ್ರ ಆದಾಯದ ಅಡಿಯಲ್ಲಿ ಗುರುತಿಸಲಾಗುತ್ತದೆ. (ಅಂದರೆ., ಇತರೆ ಸಮಗ್ರ ಆದಾಯದ ಮೂಲಕ ಸಮರ್ಪಕ ಮೌಲ್ಯ).

(ii) **ಲಾಭ ಮತ್ತು ನಷ್ಟದ ಮೂಲಕ ಸಮರ್ಪಕ ಮೌಲ್ಯದಲ್ಲಿ ಹಣಕಾಸಿನ ಆಸ್ತಿಗಳು (ಎಫ್‌ವಿಒಸಿಐ)**

ಹಣಕಾಸಿನ ಆಸ್ತಿಗಳನ್ನು ಒಂದು ವ್ಯವಹಾರದ ಮಾದರಿಯ ಒಳಗೆ ಹಿಡಿದಿಡಲ್ಪಟ್ಟಿದ್ದು, ಅದರ ಉದ್ದೇಶವು ಒಪ್ಪಂದದ ನಗದು ಹರಿವನ್ನು ಸಂಗ್ರಹಿಸುವುದೂ ಅಲ್ಲದೇ ಆಸ್ತಿಗಳನ್ನು ಮಾರಾಟ ಮಾಡಿ ನಂತರದಲ್ಲಿ ಇತರೆ ಸಮಗ್ರ ಆದಾಯದಲ್ಲಿ ('ಒಸಿಐ') ಲೆಕ್ಕ ಹಾಕುವುದು ಆಗಿರುತ್ತದೆ. ಲಾಭ ಮತ್ತು ನಷ್ಟದಲ್ಲಿ ಗುರುತಿಸಲಾಗುವ ಲಾಭಾಂಶದ ಆದಾಯವನ್ನು ಹೊರತುಪಡಿಸಿ ಅಂತಹ ಹಣಕಾಸಿನ ಆಸ್ತಿಗಳು ಕೊಂಡೊಯ್ಯುವ ಮೊಬಲಗನ್ನು ಇತರೆ ಸಮಗ್ರ ಆದಾಯದಲ್ಲಿ (ಒಸಿಐ) ಗುರುತಿಸಲಾಗುವುದು. ಒಸಿಐನಲ್ಲಿ ಗುರುತಿಸಲಾಗುವ ಮೊಬಲಗನ್ನು ನಂತರದಲ್ಲಿ ಲಾಭ ಮತ್ತು ನಷ್ಟ ಖಾತೆಗೆ ವರ್ಗಾಯಿಸಲ್ಪಡುವುದಿಲ್ಲ.

ಗುಂಪಿನ ಈಕ್ವಿಟಿ ಪತ್ರಗಳಲ್ಲಿ ಸಂಸ್ಥೆಯ ಹೂಡಿಕೆಯನ್ನು ಇತರೆ ಸಮಗ್ರ ಆದಾಯದ ಅಡಿಯಲ್ಲಿ ಸಮರ್ಪಕ ಮೌಲ್ಯದಲ್ಲಿ ಲೆಕ್ಕಹಾಕಲಾಗುವುದು ಮತ್ತು ಈ ರೀತಿ ಗುರುತಿಸಲಾಗಿರುವ ಮೊಬಲಗನ್ನು ನಂತರದಲ್ಲಿ ಲಾಭ ಮತ್ತು ನಷ್ಟದ ಖಾತೆಯಲ್ಲಿ ಪುನರ್ ವರ್ಗೀಕರಿಸಲ್ಪಡುವುದಿಲ್ಲ.

(iii) **ಲಾಭ ಮತ್ತು ನಷ್ಟದ ಮೂಲಕ ಸಮರ್ಪಕ ಮೌಲ್ಯದಲ್ಲಿ ಹಣಕಾಸಿನ ಆಸ್ತಿಗಳು (ಎಫ್‌ವಿಒಸಿಐ)**

ಹಣಕಾಸಿನ ಆಸ್ತಿಗಳು ಭೋಗ್ಯದ ದರದಲ್ಲಿ ಅಥವಾ ಎಫ್‌ವಿಒಸಿಐನಲ್ಲಿ ಗುರುತಿಸಿಕೊಳ್ಳುವ ಅಗತ್ಯವಿರುವ ಮಾನದಂಡಗಳನ್ನು ತಲುಪದೇ ಇದ್ದಲ್ಲಿ, ಅವುಗಳನ್ನು ಎಫ್‌ವಿಟಿಪಿಎಲ್‌ನಲ್ಲಿ ಲೆಕ್ಕಹಾಕಲಾಗುತ್ತದೆ. ನಂತರದಲ್ಲಿ ಸಮರ್ಪಕ ಮೌಲ್ಯದಲ್ಲಿನ ಬದಲಾವಣೆಗಳನ್ನು ಲಾಭ ಮತ್ತು ನಷ್ಟದ ಖಾತೆಯಲ್ಲಿ ಗುರುತಿಸಲಾಗುವುದು.

ಹಣಕಾಸಿನ ಹೊಣೆಗಾರಿಕೆಗಳು ಮತ್ತು ಈಕ್ವಿಟಿ

ಈಕ್ವಿಟಿ ಪತ್ರಗಳು

ಯಾವುದೇ ಗ್ರೂಪಿನ ಆಸ್ತಿಯು ಎಲ್ಲಾ ಹೊಣೆಗಾರಿಕೆಗಳನ್ನು ಕಳೆದು ಉಳಿಕೆ ಬಡ್ಡಿಗೆ ಕಾರಣವಾಗುವ ಆಸ್ತಿಯೇ ಈಕ್ವಿಟಿ ಪತ್ರ,

ಹಣಕಾಸಿನ ಹೊಣೆಗಾರಿಕೆಗಳು

ಹಣಕಾಸಿನ ಹೊಣೆಗಾರಿಕೆಗಳನ್ನು ಭೋಗ್ಯಕ್ಕೆ ಒಳಪಡುವ ದರದಲ್ಲಿ ಲೆಕ್ಕಹಾಕಲಾಗುತ್ತಿದೆ. ಲೆಕ್ಕಕ್ಕೆ ತೆಗೆದುಕೊಳ್ಳುವ ಮೊಬಲಗನ್ನು ಇಐಆರ್ ಪದ್ಧತಿಯಲ್ಲಿ ಗುರುತಿಸಲಾಗುತ್ತಿದೆ. ಬಡ್ಡಿಯ ವೆಚ್ಚಗಳನ್ನು ಲಾಭ ಮತ್ತು ನಷ್ಟದ ಖಾತೆಯಲ್ಲಿ ಗುರುತಿಸಲಾಗುತ್ತಿದೆ.

D. ಮಾನ್ಯಮಾಡದಿರುವಿಕೆ

(i) ಹಣಕಾಸಿನ ಆಸ್ತಿಗಳು

ಹಣಕಾಸಿನ ಆಸ್ತಿ ಅಥವಾ ಹಣಕಾಸಿನ ಆಸ್ತಿಯ ಭಾಗವನ್ನು ಈ ಕೆಳಗಿನ ಸಂದರ್ಭಗಳಲ್ಲಿ ಮಾನ್ಯಮಾಡಲಾಗುವುದಿಲ್ಲ:

ಹಣಕಾಸಿನ ಆಸ್ತಿಗಳಿಂದ ಸ್ವೀಕರಿಸಬಹುದಾದ ನಗದು ಹರಿವು ಕೊನೆಗೊಂಡ ಒಪ್ಪಂದದ ಹಕ್ಕುಗಳು.

ಕಂಪೆನಿಯು ಗಣನೀಯವಾಗಿ ತನ್ನ ಎಲ್ಲಾ ಅಪಾಯಗಳನ್ನು ಮತ್ತು ಹಣಕಾಸಿನ ಆಸ್ತಿಗಳ ಮಾಲೀಕತ್ವದ ಪ್ರತಿಫಲವನ್ನು ವರ್ಗಾಯಿಸಿದಾಗ ಅಥವಾ ತನ್ನ ಒಪ್ಪಂದದ ನಗದು ಹರಿವನ್ನು ವರ್ಗಾಯಿಸಿದಾಗ, ಮತ್ತು ಹಣಕಾಸಿನ ಆಸ್ತಿಯ ಮೇಲೆ ನಿಯಂತ್ರಣವನ್ನು ಇಟ್ಟುಕೊಳ್ಳದೇ ಇರುವಾಗ.

(ii) ಹಣಕಾಸಿನ ಹೊಣೆಗಾರಿಕೆಗಳು

ಕಂಪೆನಿಯು ತನ್ನ ಹಣಕಾಸಿನ ಒಪ್ಪಂದದ ಭಾದ್ಯತೆಯನ್ನು ನಿರ್ವಹಿಸಿದಾಗ ಅಥವಾ ರದ್ದುಮಾಡಲ್ಪಟ್ಟಾಗ.

E. ದುರ್ಬಲಗೊಳಿಸಲ್ಪಟ್ಟ ಹಣಕಾಸಿನ ಆಸ್ತಿಗಳು

ಐಎನ್‌ಡಿ ಎಎಸ್ 109ಕ್ಕೆ ಅನುಸಾರವಾಗಿ ಕಂಪೆನಿಯು ಹಣಕಾಸಿನ ಆಸ್ತಿಗಳ ಮೇಲೆ ಕ್ರೆಡಿಟ್ ಅಪಾಯವು ಬಹಿರಂಗ ಗೊಳ್ಳುವಿಕೆಯೊಂದಿಗೆ, ಹಣಕಾಸಿನ ಆಸ್ತಿಗಳ ಮೇಲೆ ದುರ್ಬಲಗೊಳಿಸುವಿಕೆಯ ನಷ್ಟವನ್ನು ಲೆಕ್ಕಹಾಕುವ ನಿರೀಕ್ಷಿತ ಕ್ರೆಡಿಟ್ ನಷ್ಟ ಪದ್ಧತಿಯನ್ನು (ಇಸಿಎಲ್) ಅನುಸರಿಸುತ್ತಿದೆ.

ಗುರುತಿಸಲ್ಪಟ್ಟಾಗಿನಿಂದ ಕ್ರೆಡಿಟ್ ಅಪಾಯದ ಬದಲಾವಣೆಯ ಆಧಾರದ ಮೇಲೆ ಹಣಕಾಸಿನ ಆಸ್ತಿಗಳನ್ನು ಕೆಳಕಂಡ 3 ಹಂತಗಳಲ್ಲಿ ವರ್ಗೀಕರಿಸಲಾಗಿರುತ್ತದೆ:

ಹಂತ 1: ಪ್ರಾರಂಭಿಕ ಗುರುತಿಸಲ್ಪಡುವಿಕೆ ದಿನಾಂಕದಿಂದ ಅದರ ಕ್ರೆಡಿಟ್ ಅಪಾಯದಲ್ಲಿ ಗಣನೀಯವಾದ ಹೆಚ್ಚಳವಾಗದೇ ಪ್ರಕಟಪಡಿಸುವಿಕೆ. ಅಂತಹ ಆಸ್ತಿಗಳಿಗೆ 12 ತಿಂಗಳುಗಳ ಇಸಿಎಲ್‌ನ್ನು ಉಪಬಂಧವಾಗಿ ಕಲ್ಪಿಸಲಾಗಿರುತ್ತದೆ.

ಹಂತ 2: ಪ್ರಾರಂಭಿಕ ಗುರುತಿಸಲ್ಪಡುವಿಕೆ ದಿನಾಂಕದಿಂದ ಅದರ ಕ್ರೆಡಿಟ್ ಅಪಾಯದಲ್ಲಿ ಗಣನೀಯವಾದ ಹೆಚ್ಚಳವಾಗಿದ್ದು, ಮತ್ತು ಕ್ರೆಡಿಟ್ ದುರ್ಬಲಗೊಳಿಸುವಿಕೆ ಇಲ್ಲದಿರುವಿಕೆಯನ್ನು ಈ ಹಂತದ ಅಡಿಯಲ್ಲಿ ವರ್ಗೀಕರಿಸಲ್ಪಟ್ಟಿದೆ. ಇಐಆರ್ ಪದ್ಧತಿಯನ್ನು ಉಪಯೋಗಿಸಿದ ಬಡ್ಡಿ ಆದಾಯವನ್ನು ಆಸ್ತಿಯ ಒಟ್ಟು ಲೆಕ್ಕಕ್ಕೆ ಒಳಪಡುವ ಮೊಬಲಗಿಗೆ ಸೇರಿಸಲಾಗಿದೆ.

ಹಂತ 3: ವರದಿ ಮಾಡುವ ದಿನಾಂಕದಂದು ದುರ್ಬಲಗೊಂಡಿರುವ ಬಗ್ಗೆ ಪುರಾವೆಗಳು ಇರುವ ಹಣಕಾಸಿನ ಆಸ್ತಿಗಳನ್ನು ಈ ಹಂತವು ಒಳಗೊಳ್ಳುತ್ತದೆ. ಈ ಹಂತದಲ್ಲಿ ವರ್ಗೀಕರಣಗೊಂಡ ಹಣಕಾಸಿನ ಆಸ್ತಿಗಳನ್ನು ಇಐಆರ್ ಪದ್ಧತಿಯನ್ನು ಅನುಸರಿಸಿ ಬಂದಂತಹ ಬಡ್ಡಿಯ ಆದಾಯವನ್ನು ಹಣಕಾಸಿನ ಆಸ್ತಿಯ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

ವ್ಯಾಪಾರೀ ಸ್ವೀಕಾರಾರ್ಹವಾದವುಗಳಿಗೆ ನಿರೀಕ್ಷಿತ ಕ್ರೆಡಿಟ್ ನಷ್ಟವನ್ನು ಲೆಕ್ಕಹಾಕುವ ಸಲುವಾಗಿ, ಪ್ರಾವಿಷನ್ ಮ್ಯಾಟ್ರಿಕ್ಸ್‌ನ್ನು ಉಪಯೋಗಿಸಿಕೊಂಡು ಸರಳೀಕೃತ ಸಂಪರ್ಕ ಮಾಧ್ಯಮವನ್ನು ಐಎನ್‌ಡಿ ಎಎಸ್ 109 ಕಲ್ಪಿಸುತ್ತದೆ. ಅಂತಹ ಮ್ಯಾಟ್ರಿಕ್ಸ್‌ನ್ನು ಕಂಡುಕೊಳ್ಳುವ ಸಲುವಾಗಿ ಕಂಪೆನಿಯು ವ್ಯಾಪಾರೀ ಸ್ವೀಕಾರಾರ್ಹವಾದ ಸೂಕ್ತ ಹಣಕಾಸಿನ ಆಸ್ತಿಗಳಿಗೆ ಅಂದಾಜು 12 ತಿಂಗಳುಗಳ ನಿರೀಕ್ಷಿತ ನಷ್ಟವನ್ನು ಅಂದಾಜು ಮಾಡುವ ಮೂಲಕ ಚಾರಿತ್ರಿಕ ಕ್ರೆಡಿಟ್ ನಷ್ಟ ಅನುಭವವನ್ನು ಉಪಯೋಗಿಸುತ್ತದೆ.

ಆ. ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪುನರ್ ವರ್ಗೀಕರಣ

ಈಕ್ವಿಟಿ ಪತ್ರಗಳು ಮತ್ತು ಹಣಕಾಸಿನ ಹೊಣೆಗಾರಿಕೆ ಪತ್ರಗಳಿಗೆ ಪ್ರಾರಂಭಿಕ ಗುರುತಿಸುವಿಕೆಯ ನಂತರ ಪುನರ್ ವರ್ಗೀಕರಣವನ್ನು ಮಾಡಿರುವುದಿಲ್ಲ. ಇತರ ಹಣಕಾಸಿನ ಆಸ್ತಿಗಳ ನಿರ್ವಹಣೆಗಾಗಿ ಅದರ ವ್ಯಾವಹಾರಿಕ ಮಾದರಿಯಲ್ಲಿ ಬದಲಾವಣೆಯಾದಾಗ ಮಾತ್ರ ಪುನರ್ ವರ್ಗೀಕರಣವನ್ನು ಮಾಡಲಾಗಿದೆ.

ಇ. ಸರಿದೂಗಿಸುವಿಕೆ

ಗುರುತಿಸಲ್ಪಟ್ಟ ಮೊಬಲಗನ್ನು ಸರಿದೂಗಿಸುವಂತೆ ಕಾನೂನಾತ್ಮಕವಾದ ಹಕ್ಕನ್ನು ಜಾರಿಗೊಳಿಸಬೇಕಾಗಿದ್ದಲ್ಲಿ ಮತ್ತು ಅವುಗಳನ್ನು ನಿವ್ವಳ ಆಧಾರದ ಮೇಲೆ ಇತ್ಯರ್ಥಗೊಳಿಸಬೇಕಾದಾಗ ಆಸ್ತಿ ಹೊಣೆ ತಃಖ್ತೆಯಲ್ಲಿ ಗುರುತಿಸಲಾಗಿರುವ ನಿವ್ವಳ ಮೊಬಲಗಿನ ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಸರಿದೂಗಿಸಲಾಗುತ್ತದೆ.

2.7 ಸ್ಥಾವರ ಮತ್ತು ಸಾಮಗ್ರಿಗಳ ಆಸ್ತಿ

A. ಗುರುತಿಸುವಿಕೆ ಮತ್ತು ಲೆಕ್ಕಹಾಕುವಿಕೆ

ಸ್ಪರ್ಷ ಆಸ್ತಿಗಳು, ಸ್ಥಾವರ ಮತ್ತು ಸಾಮಗ್ರಿಗಳನ್ನು ಕೂಡಿಬಂದ ಸವಕಳಿಯನ್ನು ಮತ್ತು ದುರ್ಬಲಗೊಂಡಿರುವಿಕೆಯನ್ನು ಕಳೆದು ಮೂಲದರದಲ್ಲಿ ತೋರಿಸಲಾಗಿದೆ. ಆಸ್ತಿಗಳು, ಸ್ಥಾವರ ಮತ್ತು ಸಾಮಗ್ರಿಗಳು ಖರೀದಿ ಬೆಲೆಯೊಂದಿಗೆ ಅದನ್ನು ಅದರ ಉದ್ದೇಶಿತ ಉಪಯೋಗಕ್ಕೆ ತರಲು ಕೆಲಸ ನಿರ್ವಹಿಸುವ ಸ್ಥಿತಿಗೆ ತರುವ ಸಲುವಾಗಿ ಯಾವುದೇ ಸೇರಿಬಹುದಾದ ದರವು ಆಸ್ತಿಯ ದರದಲ್ಲಿ ಸೇರಿರುತ್ತದೆ.

B. ನಂತರದ ವೆಚ್ಚಗಳು

ಆಸ್ತಿಗಳಿಗೆ ಸಂಬಂಧಿಸಿದ ನಂತರದ ವೆಚ್ಚಗಳು, ಸ್ಥಾವರ ಮತ್ತು ಸಾಮಗ್ರಿಗಳನ್ನು ಅವುಗಳೊಂದಿಗೆ ಸೇರಿಕೊಂಡಿರುವ ಅವುಗಳ ಭವಿಷ್ಯದ ಆರ್ಥಿಕ ಸೌಲಭ್ಯಗಳು ಕಂಪೆನಿಗೆ ಹರಿದು ಬರುವಂತಿದ್ದರೆ ಮತ್ತು ಅವುಗಳ ದರವನ್ನು ವಿಶ್ವಾಸಾರ್ಹವಾಗಿ ಲೆಕ್ಕಹಾಕುವಂತಿದ್ದಾಗ ಮಾತ್ರ ಬಂಡವಾಳೀಕರಿಸಲಾಗಿದೆ. ಇತರೆ ರಿಪೇರಿ ಮತ್ತು ನಿರ್ವಹಣಾ ವೆಚ್ಚಗಳನ್ನು ಮಾಡಿದಾಗ ಲಾಭ ಮತ್ತು ನಷ್ಟದ ಕೋಷ್ಟಕದಲ್ಲಿ ಗುರುತಿಸಲಾಗಿದೆ. ವೆಚ್ಚಗಳು ಮತ್ತು ಸಂಬಂಧಿತ ಸವಕಳಿಯನ್ನು ಆಸ್ತಿಗಳ ಮಾರಾಟ/ನಿವೃತ್ತಿಯ ನಂತರ ಹಣಕಾಸಿನ ಕೋಷ್ಟಕಗಳಿಂದ ತೆಗೆದುಹಾಕಲಾಗಿದೆ ಮತ್ತು ತತ್ಪರಿಣಾಮದ ಗಳಿಕೆ/ನಷ್ಟವನ್ನು ಲಾಭ ಮತ್ತು ನಷ್ಟದ ಕೋಷ್ಟಕದಲ್ಲಿ ಗುರುತಿಸಲಾಗಿದೆ.

C. ಸವಕಳಿ, ಅಂದಾಜು ಉಪಯೋಗೀ ಜೀವಿತಾವಧಿ, ಮತ್ತು ಉಳಿಕೆ ಮೌಲ್ಯ

ಕಂಪೆನಿಗಳ ಕಾಯಿದೆ, 2013ರ ಅನುಸೂಚಿ –II ರಂತೆ ಪಿಪಿಇ ಆಸ್ತಿಗಳ ಉಪಯೋಗೀ ಜೀವಿತಾವಧಿಯನ್ನು ಪರಿಗಣಿಸಿ, ಸ್ಟ್ರೈಟ್ ಲೈನ್ ಪದ್ಧತಿ ಮೇಲೆ ಪ್ರೋ–ರೇಟಾ ಆಧಾರದ ಮೇಲೆ ಸವಕಳಿಗೆ ಉಪಬಂಧವನ್ನು ಕಲ್ಪಿಸಲಾಗಿರುತ್ತದೆ. ಗುತ್ತಿಗೆ ಜಮೀನಿನಲ್ಲಿ ಕಟ್ಟಿರುವ ಕಟ್ಟಡಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಉಪಯೋಗಕ್ಕೆ ತೊಡಗಿಸಿರುವ ದಿನಾಂಕದಿಂದ ಗುತ್ತಿಗೆಯ ಉಳಿದ ಅವಧಿಯವರೆಗೆ ಲೆಕ್ಕಹಾಕಿ ಉಪಬಂಧವನ್ನು ಕಲ್ಪಿಸಲಾಗಿರುತ್ತದೆ. ರೂ. 5000 ಮತ್ತು ಕಡಿಮೆ ಇರುವ ಆಸ್ತಿಗಳನ್ನು ಅವುಗಳನ್ನು ಪಡೆದಿರುವ ವರ್ಷದಲ್ಲಿಯೇ ಸಂಪೂರ್ಣವಾಗಿ ಸವಕಳಿಗೆ ಒಳಪಡಿಸಲಾಗಿರುತ್ತದೆ. ಸಂಪೂರ್ಣವಾಗಿ ಸವಕಳಿಗೆ ಒಳಪಟ್ಟ ಪಿಪಿಇಗಳಿಗೆ ರೂ. 1/– ರ ನಾಮಮಾತ್ರದ ಉಳಿಕೆ ಮೊಬಲಗನ್ನು ಉಳಿಸಿಕೊಳ್ಳಲಾಗಿದೆ. ಹೆಚ್ಚುವರಿ ಆಸ್ತಿಗಳಿಗೆ ಮತ್ತು ವರ್ಷಾವಧಿಯಲ್ಲಿ ಮಾರಾಟ ಮಾಡಲಾಗಿರುವ ಆಸ್ತಿಗಳಿಗೆ ಅವುಗಳನ್ನು ಸೇರಿಸಿದ ಅಥವಾ ಮಾರಾಟ ಮಾಡಿದ ದಿನಾಂಕವನ್ನು ಉಲ್ಲೇಖಿಸಿ ಪ್ರೊರೇಟಾ ಆಧಾರದ ಮೇಲೆ ಸವಕಳಿಗೆ ಉಪಬಂಧವನ್ನು ಕಲ್ಪಿಸಲಾಗಿದೆ.

ಆಸ್ತಿಯ ಯಾವುದೇ ವಿಷಯವು, ಸ್ಥಾವರ ಮತ್ತು ಸಾಮಗ್ರಿಗಳು ಹಾಗೂ ಪ್ರಾರಂಭದಲ್ಲಿ ಗುರುತಿಸಲ್ಪಟ್ಟ ಅದರ ಯಾವುದೇ ಭಾಗವನ್ನು ಅವುಗಳ ವಿಲೇವಾರಿ ಅಥವಾ ಅವುಗಳ ಉಪಯೋಗದಿಂದ ಅಥವಾ ವಿಲೇವಾರಿಯಿಂದ ಯಾವುದೇ ಭವಿಷ್ಯದ ಆರ್ಥಿಕ ಸೌಲಭ್ಯಗಳನ್ನು ನಿರೀಕ್ಷಿಸದೇ ಇದ್ದಾಗ ಅದರ ಗುತಿಸುವಿಕೆಯನ್ನು ಹಿಂಪಡೆಯಲಾಗುವುದು. ಆಸ್ತಿಗಳ ಗುರುತಿಸುವಿಕೆಯನ್ನು ಹಿಂಪಡೆದ ಕಾರಣದಿಂದ ಬರಬಹುದಾದ ಗಳಿಕೆ/ನಷ್ಟವನ್ನು (ನಿವ್ವಳ ವಿಲೇವಾರಿ ಗಳಿಕೆಗಳು ಮತ್ತು ಆಸ್ತಿಗಳ ಲೆಕ್ಕಹಾಕುವಿಕೆಯ ಮೌಲ್ಯದ ನಡುವಿನ ವ್ಯತ್ಯಾಸ) ಲಾಭ ಮತ್ತು ನಷ್ಟ ಕೋಷ್ಟಕದ ಇತರೆ ಆದಾಯದಲ್ಲಿ ಸೇರಿಸಲಾಗಿದೆ.

ಉಳಿಕೆ ಮೌಲ್ಯಗಳು, ಉಪಯೋಗೀ ಜೀವಿತಾವಧಿ ಮತ್ತು ಆಸ್ತಿಯ ಸವಕಳಿಯ ವಿಧಾನವನ್ನು, ಸ್ಥಾವರ ಮತ್ತು ಸಾಮಗ್ರಿಗಳನ್ನು ಪ್ರತೀ ಹಣಕಾಸಿನ ವರ್ಷದ ಅಂತ್ಯದಲ್ಲಿ ಪುನರ್ ಪರಿಶೀಲಿಸಲಾಗುತ್ತಿದ್ದು, ಸೂಕ್ತವಾಗಿದ್ದಲ್ಲಿ ಆ ಅವಧಿಗೆ ಅನ್ವಯಿಸುವಂತೆ ಹೊಂದಾಣಿಕೆ ಮಾಡಲಾಗಿರುತ್ತದೆ.

2.8 ಹೂಡಿಕೆ ಆಸ್ತಿಗಳು

ನಿರ್ಮಾಣವಾಗುತ್ತಿರುವ ಕಟ್ಟಡಗಳೂ ಸೇರಿದಂತೆ, ಆಸ್ತಿಗಳನ್ನು ಬಾಡಿಗೆ ಮತ್ತು/ಅಥವಾ ಬಂಡವಾಳ ಹೆಚ್ಚಳಕ್ಕೆ ಉಳಿಸಿಕೊಳ್ಳಲಾಗಿದ್ದು ಅದನ್ನು ಹೂಡಿಕೆ ಆಸ್ತಿಯೆಂದು ವರ್ಗೀಕರಿಸಲಾಗಿದೆ ಮತ್ತು ಪ್ರಾರಂಭದಲ್ಲಿ ಅವುಗಳನ್ನು ವ್ಯಾವಹಾರಿಕ ವೆಚ್ಚಗಳನ್ನೂ ಸೇರಿಸಿ ಮೂಲದರದಲ್ಲಿ ಲೆಕ್ಕಹಾಕಲಾಗಿರುತ್ತದೆ. ಪ್ರಾರಂಭಿಕ ಗುರುತಿಸುವಿಕೆಯ ನಂತರ ಹೂಡಿಕೆ ಆಸ್ತಿಗಳನ್ನು ಒಟ್ಟು ಸೇರಿರುವ ಸವಕಳಿಯನ್ನು ಮತ್ತು ಒಟ್ಟು ಸೇರಿರುವ ದುರ್ಬಲಗೊಳಿಸಲ್ಪಟ್ಟಿರುವ ನಷ್ಟ ಇದ್ದಲ್ಲಿ ಅದನ್ನು ಕಳೆದು ಲೆಕ್ಕಹಾಕಲಾಗಿರುತ್ತದೆ.

ಆಸ್ತಿಗಳು, ಅವುಗಳ ಉದ್ದೇಶಿತ ಉಪಯೋಗಗಳಿಗೆ ಸಿದ್ಧವಾಗಿಲ್ಲದಾಗ ಅಂತಹ ದಿನಾಂಕದ ಮೊದಲು ಅವುಗಳನ್ನು ಪ್ರಗತಿಯಲ್ಲಿರುವ ಹೂಡಿಕೆ ಆಸ್ತಿಯೆಂದು ಘೋಷಿಸಲ್ಪಡುತ್ತದೆ.

ಆ ಆಸ್ತಿಗಳ ಸಂಭವನೀಯ ಭವಿಷ್ಯದ ಸೌಲಭ್ಯಗಳು ಕಂಪೆನಿಗೆ ಹರಿದುಬರಲು ಪ್ರಾರಂಭ ಆದ ನಂತರ ಹೂಡಿಕೆ ಆಸ್ತಿಗಳ ಮೇಲಿನ ನಂತರದ ವೆಚ್ಚಗಳನ್ನು ಆ ಆಸ್ತಿಗಳ ಲೆಕ್ಕಹಾಕುವಿಕೆಯ ಮೊಬಲಗಿಗೆ ಸೇರಿಸಲಾಗುತ್ತದೆ. ಆ ನಂತರದ ಎಲ್ಲಾ ವೆಚ್ಚಗಳನ್ನೂ, ವೆಚ್ಚ ಮಾಡಿದ ಅವಧಿಯಲ್ಲಿ ವೆಚ್ಚಗಳೆಂದು ಪರಿಗಣಿಸಲಾಗುವುದು. ಹೂಡಿಕೆ ಆಸ್ತಿಯು ವಿಲೇವಾರಿಯಾದಾಗ ಇದರ ಕಾರಣದಿಂದ ಗಳಿಕೆ ಅಥವಾ ನಷ್ಟಗಳನ್ನು ಲಾಭ ಮತ್ತು ನಷ್ಟದ ಕೋಷ್ಟಕದಲ್ಲಿ ಗುರುತಿಸಲಾಗುವ ವಿಲೇವಾರಿ ಮೊಬಲಗು ಮತ್ತು ಆಸ್ತಿಯ ಲೆಕ್ಕಕ್ಕೆ ತೆಗೆದುಕೊಳ್ಳುವ ಮೊಬಲಗಿನ ನಡುವಿನ ವ್ಯತ್ಯಾಸವಾಗಿರುತ್ತದೆ.

ಕಂಪೆನಿಗಳ ಕಾಯಿದೆ, 2013ರ ಅನುಸೂಚಿ – II ರಂತೆ ಸ್ಥಿರ ಆಸ್ತಿಗಳ ಉಪಯೋಗೀ ಜೀವಿತಾವಧಿಯನ್ನು ಪರಿಗಣಿಸಿ, ಸ್ಟ್ರೈಟ್ ಲೈನ್ ಪದ್ಧತಿ ಮೇಲೆ ಪ್ರೋ–ರೇಟಾ ಆಧಾರದ ಮೇಲೆ ಸವಕಳಿಗೆ ಉಪಬಂಧವನ್ನು ಕಲ್ಪಿಸಲಾಗಿರುತ್ತದೆ. ಗುತ್ತಿಗೆ ಜಮೀನಿನಲ್ಲಿ ಕಟ್ಟಿರುವ ಕಟ್ಟಡಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಉಪಯೋಗಕ್ಕೆ ತೊಡಗಿಸಿರುವ ದಿನಾಂಕದಿಂದ ಗುತ್ತಿಗೆಯ ಉಳಿದ ಅವಧಿಯವರೆಗೆ ಲೆಕ್ಕಹಾಕಿ ಗುತ್ತಿಗೆಯ ಪ್ರಾಥಮಿಕ/ದೃಢೀಕೃತ ವಿಸ್ತರಣೆಯ ಅವಧಿಗೆ ಉಪಬಂಧವನ್ನು ಕಲ್ಪಿಸಲಾಗಿರುತ್ತದೆ. ಸವಕಳಿ ಪದ್ಧತಿಗಳು, ಉಪಯೋಗೀ ಜೀವಿತಾವಧಿ, ಉಳಿಕೆಯ ಮೌಲ್ಯಗಳನ್ನು ಪ್ರತೀ ಹಣಕಾಸಿನ ವರ್ಷದ ಅಂತ್ಯಕ್ಕೆ ಪರಾಮರ್ಶಿಸಲಾಗುತ್ತಿದೆ ಮತ್ತು ಸಮರ್ಪಕವಾಗಿದ್ದಲ್ಲಿ ಹೊಂದಾಣಿಕೆ ಮಾಡಲಾಗಿದೆ. ವರ್ಷಾವಧಿಯಲ್ಲಿ ಖರೀದಿ ಮಾಡಲಾದ ಅಥವಾ ಮಾರಾಟ ಮಾಡಲಾದ ಎಲ್ಲಾ ಆಸ್ತಿಗಳ ಮೇಲೆ ಪ್ರೊ ರೇಟಾ ಆಧಾರದ ಮೇಲೆ ಸವಕಳಿಗೆ ಉಪಬಂಧ ಕಲ್ಪಿಸಿದೆ.

ಟಿಪ್ಪಣಿ: ಲಿಫ್ಟ್‌ಗಳು ಭೌತಿಕವಾಗಿ ಕಟ್ಟಡಗಳಿಗೆ ಜೋಡಿಸಲ್ಪಟ್ಟಿದ್ದು, ಈ ಕಾರಣದಿಂದ ಇದನ್ನು ಹೂಡಿಕೆ ಆಸ್ತಿಯ ಭಾಗವೆಂದು ಪರಿಗಣಿಸಲಾಗಿದೆ.

2.9 ಸ್ಪಷ್ಟ ಆಸ್ತಿಗಳು

ಪ್ರತ್ಯೇಕವಾಗಿ ಖರೀದಿಸಲಾಗಿರುವ ಅಸ್ಪಷ್ಟ ಆಸ್ತಿಗಳನ್ನು ಪ್ರಾರಂಭದಲ್ಲಿ ಮೂಲದರದಲ್ಲಿ ಲೆಕ್ಕಹಾಕಲಾಗಿದೆ. ನಂತರದಲ್ಲಿ, ಅವುಗಳನ್ನು ಕೂಡಿಬಂದಿರುವ ಭೋಗ್ಯದ

ಮತ್ತು ಕೂಡಿಬಂದಿರುವ ದುರ್ಬಲಗೊಳಿಸರುವ ವೆಚ್ಚಗಳು ಇದ್ದಲ್ಲಿ ಅವುಗಳನ್ನು ಕಳೆದು ಉಳಿದ ಮೂಲದರದಲ್ಲಿ ಲೆಕ್ಕಹಾಕಲಾಗಿದೆ.

ನಂತರದ ವೆಚ್ಚಗಳನ್ನು, ಅದಕ್ಕೆ ಸಂಬಂಧಿಸಿರುವ ಮತ್ತು ಒಳಗೊಂಡಿರುವ ನಿರ್ದಿಷ್ಟ ಆಸ್ತಿಗಳ ಭವಿಷ್ಯದ ಆರ್ಥಿಕ ಸೌಲಭ್ಯಗಳು ಹೆಚ್ಚಾದಾಗ ಮಾತ್ರ ನಂತರದ ವೆಚ್ಚಗಳನ್ನು ಬಂಡವಾಳೀಕರಿಸಲಾಗುತ್ತದೆ. ಬೇರೆ ಎಲ್ಲಾ ಖರ್ಚುಗಳನ್ನೂ ಅವುಗಳನ್ನು ವೆಚ್ಚ ಮಾಡಿದಾಗ ಲಾಭ ಮತ್ತು ನಷ್ಟ ಖಾತೆಯಲ್ಲಿ ಗುರುತಿಸಲಾಗುತ್ತದೆ.

ಅಸ್ಪ್ರಶ್ಯ ಆಸ್ತಿಗಳ ಉಪಯೋಗೀ ಜೀವಿತಾವಧಿಯನ್ನು ನಿರ್ದಿಷ್ಟವಾಗಿ ಅಥವಾ ಅನಿರ್ದಿಷ್ಟವಾಗಿ ಲೆಕ್ಕಹಾಕಲಾಗುತ್ತದೆ. ನಿರ್ದಿಷ್ಟ ಜೀವಿತಾವಧಿಯ ಉಪಯೋಗೀ ಆಸ್ತಿಗಳನ್ನು ಅವುಗಳ ನಿರೀಕ್ಷಿತ ಉಪಯೋಗೀ ಜೀವಿತಾವಧಿಯ ಮೇಲೆ ಸ್ಟ್ರೈಟ್ ಲೈನ್ ಪದ್ಧತಿಯಂತೆ ಭೋಗ್ಯಕ್ಕೊಳಪಡಿಸಲಾಗುವುದು.

ಅಸ್ಪ್ರಶ್ಯ ಆಸ್ತಿಗಳ ಉಪಯೋಗೀ ಜೀವಿತಾವಧಿಯನ್ನು ಈ ಕೆಳಕಂಡಂತೆ ಅಂದಾಜು ಮಾಡಲಾಗಿದೆ:

– ಕಂಪ್ಯೂಟರ್ ಸಾಫ್ಟ್‌ವೇರ್ 3 ವರ್ಷಗಳು

ಭೋಗ್ಯದ ಪದ್ಧತಿ, ಉಪಯೋಗೀ ಜೀವಿತಾವಧಿ ಮತ್ತು ಉಳಿಕೆಯ ಮೌಲ್ಯಗಳನ್ನು ಪ್ರತೀ ಹಣಕಾಸಿನ ವರ್ಷದ ಅಂತ್ಯದಲ್ಲಿ ಪುನರ್ ಪರಿಶೀಲನೆ ಮಾಡಲಾಗುತ್ತಿದೆ ಮತ್ತು ಅಗತ್ಯವೆಂದು ಕಂಡುಬಂದಲ್ಲಿ ಹೊಂದಾಣಿಕೆ ಮಾಡಲಾಗುತ್ತಿದೆ.

2.10 ಹಣಕಾಸೇತರ ಆಸ್ತಿಗಳ ದುರ್ಬಲಗೊಳಿಸುವಿಕೆ

ಯಾವುದೇ ಆಸ್ತಿಗಳು ದುರ್ಬಲಗೊಂಡಿರುವುದೇ ಎಂಬ ಬಗ್ಗೆ ಪರಿಶೀಲಿಸಲು ಗ್ರೂಪಿನವರು ಪ್ರತೀ ವರದಿ ಮಾಡುವ ಅವಧಿಯ ಅಂತ್ಯದಲ್ಲಿ ಎಲ್ಲಾ ಸ್ಪ್ರಶ್ಯ ಮತ್ತು ಅಸ್ಪ್ರಶ್ಯ ಆಸ್ತಿಗಳ ಲೆಕ್ಕಹಾಕಲಾಗುವ ಮೊಬಲಗನ್ನು ಪುನರ್ ಪರಿಶೀಲನೆ ನಡೆಸುತ್ತಿದೆ. ಅಂತಹ ಯಾವುದೇ ಸೂಚನೆಗಳು ಇದ್ದಲ್ಲಿ, ದುರ್ಬಲಗೊಳಿಸುವ ನಷ್ಟಗಳನ್ನು (ಯಾವುದಾದರೂ ಇದ್ದಲ್ಲಿ) ಗುರುತಿಸುವ ಸಲುವಾಗಿ ಆಸ್ತಿಯ ವಸೂಲಿ ಮಾಡಬಹುದಾದ ಮೊಬಲಗನ್ನು ಅಂದಾಜು ಮಾಡುತ್ತದೆ. ವಸೂಲಾಗಬಹುದಾದ ಮೊಬಲಗನ್ನು, ಆ ಆಸ್ತಿಯು ಯಾವುದೇ ನಗದು ಹರಿವನ್ನು ಉತ್ಪತ್ತಿ ಮಾಡದೇ ಇದ್ದಲ್ಲಿ ಮತ್ತು ಬೇರೆ ಆಸ್ತಿಗಳ ಗುಂಪಿನಿಂದ ಸ್ವತಂತ್ರವಾಗಿದ್ದಲ್ಲಿ ವೈಯಕ್ತಿಕ ಆಸ್ತಿಗಳ ವಸೂಲಾಗಬಹುದಾದ ಮೊಬಲಗನ್ನು ಗುರುತಿಸಲಾಗುತ್ತದೆ.

ವಸೂಲಾಗಬಹುದಾದ ಮೊಬಲಗು ಅಂದರೆ, ಸಮರ್ಪಕ ಮೌಲ್ಯದಲ್ಲಿ ಮಾರಾಟದ ವೆಚ್ಚಗಳು ಮತ್ತು ಉಪಯೋಗದಲ್ಲಿರುವ ಮೌಲ್ಯ ಇವಗಳಲ್ಲಿ ಯಾವುದು ಹೆಚ್ಚೋ ಅದು ಆಗಿರುತ್ತದೆ. ಉಪಯೋಗದಲ್ಲಿರುವ ಮೌಲ್ಯವನ್ನು ಲೆಕ್ಕ ಹಾಕುವಾಗ ಅಂದಾಜು ಮಾಡಲಾದ ಭವಿಷ್ಯದ ನಗದು ಹರಿವುಗಳನ್ನು ತೆರಿಗೆ ಮುಂಚಿನ ತೆರಿಗೆ ದರವನ್ನು ಉಪಯೋಗಿಸಿ ಸದ್ಯದ ಮಾರುಕಟ್ಟೆ ದರದ ಹಣದ ಸಮಯದ ಮೌಲ್ಯವನ್ನು ಪ್ರತಿಫಲಿಸುವ ಅವುಗಳ ಸದ್ಯದ ಮೌಲ್ಯಕ್ಕೆ ಡಿಸ್ಕೌಂಟ್‌ಗೊಳಿಸಲಾಗುವುದು ಮತ್ತು ಭವಿಷ್ಯದ ನಗದು ಹರಿವು ಅಂದಾಜನ್ನು ಹೊಂದಾಣಿಕೆ ಮಾಡದೇ ಇರುವ ಆಸ್ತಿಗಳಿಗೆ ನಿರ್ದಿಷ್ಟವಾಗಿರುವ ಅಪಾಯಗಳನ್ನು ಗುರುತಿಸಲಾಗುತ್ತದೆ.

ಒಂದು ಆಸ್ತಿಯ (ಅಥವಾ ನಗದು ಉತ್ಪಾದಿಸುವ ಘಟಕ) ವಸೂಲಾಗಬಹುದಾದ ಮೊಬಲಗನ್ನು ಅದರ ಲೆಕ್ಕಪತ್ರಗಳ ಮೌಲ್ಯಕ್ಕಿಂತ ಕಡಿಮೆಯೆಂದು ಅಂದಾಜು ಮಾಡಿದಾಗ ಅಂತಹ ಆಸ್ತಿಯ (ಅಥವಾ ನಗದು ಉತ್ಪಾದಿಸುವ ಘಟಕ) ಲೆಕ್ಕಪತ್ರಗಳಲ್ಲಿರುವ ಮೌಲ್ಯವನ್ನು ಅದರ ವಸೂಲಾಗಬಹುದಾದ ಮೌಲ್ಯಕ್ಕೆ ಇಳಿಸಲಾಗುವುದು.

ದುರ್ಬಲಗೊಂಡಿರುವ ನಷ್ಟವನ್ನು ನಂತರದಲ್ಲಿ ಹಿಂತಿರುಗಿಸಿದಾಗ, ಆಸ್ತಿಯ (ಅಥವಾ ನಗದು ಉತ್ಪಾದಿಸುವ ಘಟಕ) ಲೆಕ್ಕಕ್ಕೆ ತೆಗೆದುಕೊಳ್ಳುವ ಮೊಬಲಗನ್ನು ಅದರ ವಸೂಲಾಗಬಹುದಾದ ಮೊಬಲಗಿನ ಪರಿಷ್ಕೃತ ಮೌಲ್ಯದ ಪರಿಷ್ಕೃತ ಮೊಬಲಗಿಗಿಂತ ಹೆಚ್ಚಿಸಿಸಲಾಗಿದ್ದು, ಅದರ ಹೆಚ್ಚಿಸಲ್ಪಟ್ಟ ಲೆಕ್ಕಕ್ಕೆ ತೆಗೆದುಕೊಳ್ಳುವ ಮೌಲ್ಯವು ಹಿಂದಿನ ವರ್ಷಗಲ್ಲಿ ದುರ್ಬಲಗೊಳಿಸುವಿಕೆಯ ನಷ್ಟ ಇಲ್ಲದೇ ಗುರುತಿಸಿದ ನಂತರ ಆಸ್ತಿಯ (ಅಥವಾ ನಗದು ಉತ್ಪಾದಿಸುವ ಘಟಕ) ಮೌಲ್ಯಕ್ಕಿಂತ ಹೆಚ್ಚಿಗೆ ಆಗಬಾರದು. ದುರ್ಬಲಗೊಳಿಸುವಿಕೆಯ ನಷ್ಟವನ್ನು ಲಾಭ ಮತ್ತು ನಷ್ಟ ಕೊಷ್ಟಕದಲ್ಲಿ ಗುರುತಿಸಲಾಗಿದೆ.

2.11 ಆದಾಯ ತೆರಿಗೆ

A ಚಾಲ್ತಿ ತೆರಿಗೆ

ವರ್ಷಾವಧಿಯ ತೆರಿಗೆಗೆ ಒಳಪಡುವ ಮೊಬಲಗಿನ ಮೇಲೆ ಮತ್ತು ಪಾವತಿಸಲ್ಪಡುವ ತೆರಿಗೆಯ ಮೇಲೆ ಯಾವುದೇ ಹೊಂದಾಣಿಕೆ ಇದ್ದಲ್ಲಿ, ಮತ್ತು ಹಿಂದಿನ ವರ್ಷಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾಗಿರುವ ಮೊಬಲಗನ್ನು ಪರಿಗಣಿಸಿ, ಆದಾಯ ತೆರಿಗೆ ಕಾಯ್ದೆ, 1961ಕ್ಕೆ ಅನುಸಾರವಾಗಿ ನಿರೀಕ್ಷಿಸಲಾಗಿರುವ ಚಾಲ್ತಿ ತೆರಿಗೆಯನ್ನು ಲೆಕ್ಕಹಾಕಿ ತೆರಿಗೆ ಪ್ರಾಧಿಕಾರಕ್ಕೆ ಪಾವತಿಸಲಾಗುತ್ತಿದೆ.

B ಮುಂದೂಡಲ್ಪಟ್ಟ ತೆರಿಗೆ

ತೆರಿಗೆ ಆಧಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಮತ್ತು ಹಣಕಾಸಿನ ವರದಿ ಮಾಡುವಿಕೆಯ ಉದ್ದೇಶಕ್ಕಾಗಿ ಅವುಗಳ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿರುವ ಮೌಲ್ಯದ ಮೇಲೆ ತಾತ್ಕಾಲಿಕ ವ್ಯತ್ಯಾಸದ ಮೇಲೆ ಮುಂದೂಡಲ್ಪಟ್ಟ ತೆರಿಗೆ ಹೊಣೆಗಾರಿಕೆಯನ್ನು ಗುರುತಿಸಲಾಗುತ್ತಿದೆ.

(i) ಈ ಕೆಳಗೆ ಕಂಡವುಗಳನ್ನು ಹೊರತುಪಡಿಸಿ ಮುಂದೂಡಲ್ಪಟ್ಟ ತೆರಿಗೆ ಹೊಣೆಗಾರಿಕೆಯನ್ನು ತೆರಿಗೆಗೆ ಒಳಪಡುವ ಎಲ್ಲಾ ತಾತ್ಕಾಲಿಕ ವ್ಯತ್ಯಾಸಗಳ ಮೇಲೆ ಗುರುತಿಸಲಾಗಿರುತ್ತದೆ:

ವ್ಯವಹಾರದ ಸಂಯೋಜನೆ ಅಲ್ಲದ ಮತ್ತು ವ್ಯವಹಾರದ ಸಮಯದಲ್ಲಿ ಲೆಕ್ಕ ಹಾಕುವಿಕೆಯ ಲಾಭ ಅಥವಾ ತೆರಿಗೆಗೆ ಒಳಪಡುವ ನಷ್ಟದ ಮೇಲೆ ಪರಿಣಾಮ ಬೀರದೇ ಇರುವ ವ್ಯವಹಾರದಲ್ಲಿರುವ ಪ್ರಾರಂಭದಲ್ಲಿಯೇ ಗುರುತಿಸಲಾಗಿರುವ ಆಸ್ತಿ ಅಥವಾ ಹೊಣೆಗಾರಿಕೆಗಳಿಂದ ಬರಬಹುದಾದ ಮುಂದೂಡಲ್ಪಟ್ಟ ತೆರಿಗೆ ಹೊಣೆಗಾರಿಕೆಯು ಉಂಟಾಗುತ್ತದೆ.

(ii) ಉಪಯೋಗಿಸದೇ ಇರುವ ತೆರಿಗೆ ಜಮಾಗಳು ಮತ್ತು ತೆರಿಗೆ ನಷ್ಟಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಸಲುವಾಗಿ ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳನ್ನು ಕಳೆಯಬಹುದಾದ ಎಲ್ಲಾ ತಾತ್ಕಾಲಿಕ ವ್ಯತ್ಯಾಸಗಳಿಗೂ ಗುರುತಿಸಲಾಗುತ್ತಿದೆ. ಈ ಕೆಳಗಿನವುಗಳನ್ನು ಹೊರತುಪಡಿಸಿ, ಮುಂದೂಡಲ್ಪಟ್ಟ ತೆರಿಗೆ ವ್ಯತ್ಯಾಸಗಳನ್ನು ಅವುಗಳ ವ್ಯತ್ಯಾಸಗಳ ಮಟ್ಟಿಗೆ ಮತ್ತು ಉಪಯೋಗಿಸದೇ ಇರುವ ತೆರಿಗೆ ಜಮಾಗಳು ಮತ್ತು ತೆರಿಗೆ ನಷ್ಟಗಳನ್ನು ಉಪಯೋಗಿಸುವ ವರೆಗೆ ಗುರುತಿಸಲಾಗುತ್ತಿದೆ:

ವ್ಯವಹಾರದ ಸಂಯೋಜನೆ ಅಲ್ಲದ ಮತ್ತು ವ್ಯವಹಾರದ ಸಮಯದಲ್ಲಿ ಲೆಕ್ಕ ಹಾಕುವಿಕೆಯ ಲಾಭ ಅಥವಾ ತೆರಿಗೆಗೆ ಒಳಪಡುವ ನಷ್ಟದ ಮೇಲೆ ಪರಿಣಾಮ ಬೀರದೇ ಇರುವ ವ್ಯವಹಾರದಲ್ಲಿರುವ ಪ್ರಾರಂಭದಲ್ಲಿಯೇ ಗುರುತಿಸಲಾಗಿರುವ ಆಸ್ತಿ ಅಥವಾ ಹೊಣೆಗಾರಿಕೆಗಳಿಂದ ಬರಬಹುದಾದ ಮುಂದೂಡಲ್ಪಟ್ಟ ತೆರಿಗೆ ಹೊಣೆಗಾರಿಕೆಯು ಉಂಟಾಗುತ್ತದೆ.

ಮುಂದೂಡಲ್ಪಟ್ಟ ತೆರಿಗೆ ಆಸ್ತಿಯ ಮೊಬಲಗನ್ನು ಪ್ರತೀ ವರದಿ ಮಾಡುವ ದಿನಾಂಕದಂದು ಪುನರ್ ಪರಿಶೀಲನೆ ನಡೆಸಲಾಗುತ್ತಿದ್ದು ಉಪಯೋಗಿಸಬಹುದಾದ ಮುಂದೂಡಲ್ಪಟ್ಟ ತೆರಿಗೆ ಆಸ್ತಿಗೆ ಅವಕಾಶ ನೀಡುವಷ್ಟರ ಮಟ್ಟಿಗೆ ಸಾಕಷ್ಟು ತೆರಿಗೆಗೆ ಒಳಪಡುವ ಲಾಭವು ಲಭ್ಯವಾಗುವುದಿಲ್ಲ ಎಂಬುದರ ಮಟ್ಟಿಗೆ ಅದನ್ನು ಕಡಿಮೆ ಮಾಡಿ ಲೆಕ್ಕಕ್ಕೆ ತಗೆದುಕೊಳ್ಳಲಾಗುವುದು.

ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಆಸ್ತಿಗಳು ನಗದಾಗುವ ನಿರೀಕ್ಷೆ ಇರುವ ವರ್ಷದಲ್ಲಿ ಅಥವಾ ಹೊಣೆಗಾರಿಕೆಯು ಇತ್ಯರ್ಥವಾದಾಗ ಅಥವಾ ತೆರಿಗೆ ದರಗಳ ಆಧಾರದ ಮೇಲೆ (ಮತ್ತು ತೆರಿಗೆ ಕಾನೂನುಗಳು) ಕಾನೂನಾತ್ಮಕವಾಗಿ ಇರುವ ತೆರಿಗೆ ದರದಲ್ಲಿ ಅಥವಾ ವರದಿ ಮಾಡುವ ದಿನಾಂಕದಲ್ಲಿ ಗಣನೀಯವಾಗಿ ಜಾರಿಗೆ ಬರುವ ತೆರಿಗೆ ದರದಲ್ಲಿ ಲೆಕ್ಕಹಾಕಲಾಗುತ್ತಿದೆ.

ಚಾಲ್ತಿ ತೆರಿಗೆ ಆಸ್ತಿಗಳ ಎದುರು ಚಾಲ್ತಿ ತೆರಿಗೆ ಹೊಣೆಗಾರಿಕೆಗಳನ್ನು ಸರಿದೂಗಿಸಲು ಕಾನೂನಾತ್ಮಕವಾಗಿ ಜಾರಿಗೆ ತರುವ ಹಕ್ಕು ಇದ್ದಲ್ಲಿ ಮತ್ತು ಮುಂದೂಡಲ್ಪಟ್ಟ ತೆರಿಗೆಗಳು ಒಂದೇ ತೆರಿಗೆಗೆ ಒಳಪಡುವ ಸಂಸ್ಥೆಗೆ ಸಂಬಂಧಿಸಿದ್ದಾದಲ್ಲಿ ಮತ್ತು ಅದೇ ತೆರಿಗೆ ಪ್ರಾಧಿಕಾರದ್ದಾದಲ್ಲಿ ಮುಂದೂಡಲ್ಪಟ್ಟ ತೆರಿಗೆ ಆಸ್ತಿಗಳು ಮತ್ತು ಮುಂದೂಡಲ್ಪಟ್ಟ ತೆರಿಗೆ ಹೊಣೆಗಾರಿಕೆಗಳನ್ನು ಸರಿದೂಗಿಸಲಾಗುವುದು.

2.12 ಉಪಬಂಧಗಳು

ಸಂಪನ್ಮೂಲಗಳ ಹೊರಹರಿವಿನ ಸಾಧ್ಯತೆಗಳು ಇದ್ದು ಅದಕ್ಕೆ ಸಂಬಂಧಿಸಿದಂತೆ ನಂಬಲರ್ಹವಾದ ಅಂದಾಜುಗಳು ಮಾಡಬಹುದಾದಲ್ಲಿ ಹಿಂದಿನ ಘಟನೆಗಳ ಕಾರಣದಿಂದ ಸದ್ಯದ ಭಾದ್ಯತೆ ಇದ್ದಲ್ಲಿ ಉಪಬಂಧಗಳನ್ನು ಗುರುತಿಸಲಾಗಿದೆ.

ಪ್ರತೀ ಆಸ್ತಿಹೊಣೆ ತಃಖ್ತೆಯ ದಿನಾಂಕದಂದು ಉಪಬಂಧ ಗಳನ್ನು ಪುನರ್ ಪರಿಶೀಲಿಸಲಾಗುತ್ತಿದೆ ಮತ್ತು ಚಾಲ್ತಿ ಅತ್ಯುತ್ತಮ ಅಂದಾಜುಗಳನ್ನು ಪ್ರತಿಫಲಿಸುವಂತೆ ಹೊಂದಾಣಿಕೆ ಮಾಡಲಾಗಿದೆ. ಭಾದ್ಯತೆಗಳನ್ನು ಇತ್ಯರ್ಥ ಮಾಡಲು ಸಂಪನ್ಮೂಲಗಳ ಹೊರಹರಿಯುವಿಕೆಯು ಮುಂದೆ ಅಗತ್ಯವಿಲ್ಲವೆಂದು ಕಂಡುಬಂದಲ್ಲಿ ಉಪಬಂಧಗಳನ್ನು ಹಿಂಪಡೆಯಲಾಗಿದೆ.

ಸಂಭವನೀಯ ಭಾದ್ಯತೆ ಇದ್ದಲ್ಲಿ ಅಥವಾ ಹಾಲಿ ಇರುವ ಭಾದ್ಯತೆಗೆ ಸಂಬಂಧಿಸಿದಂತೆ ಸಂಪನ್ಮೂಲಗಳ ಹೊರಹರಿವಿನ ಸಾಧ್ಯತೆಗಳು ಕ್ಷೀಣ ಎಂದು ಕಂಡುಬಂದಲ್ಲಿ ಉಪಬಂಧಗಳು ಅಥವಾ ಘೋಷಣೆಗಳನ್ನು ಮಾಡಲಾಗಿಲ್ಲ.

2.13 ಅನಿಶ್ಚಿತ ಹೊಣೆಗಾರಿಕೆಗಳು ಮತ್ತು ಅನಿಶ್ಚಿತ ಆಸ್ತಿಗಳು

ಹೊಣೆಗಾರಿಕೆಯು ವಾಸ್ತವಿಕವಾಗಿದ್ದು, ಅದರ ಭವಿಷ್ಯದ ಫಲಿತಾಂಶವನ್ನು ನಿರ್ಣಯಿಸಲು ಸಾಧ್ಯವಾಗದಿದ್ದರೂ ಸಾಕಷ್ಟು ಭರವಸೆ ಇರುವಂತಹದ್ದನ್ನು ಅನಿಶ್ಚಿತ ಹೊಣೆಗಾರಿಕೆಯೆಂದು ಪರಿಗಣಿಸಿ, ಲೆಕ್ಕಪತ್ರಗಳಿಗೆ ಟಿಪ್ಪಣಿಯ ರೂಪದಲ್ಲಿ ಬಹಿರಂಗಪಡಿಸಲಾಗುತ್ತಿದೆ.

ಅನಿಶ್ಚಿತ ಹೊಣೆಗಾರಿಕೆಯು ಹಿಂದಿನ ಘಟನೆಗಳಿಂದ ಉದ್ಭವಿಸಬಹುದಾಗಿದೆ ಮತ್ತು ಅದರ ಇರುವಿಕೆಯುಸಂಸ್ಥೆಯ ಸಂಪೂರ್ಣ ನಿಯಂತ್ರಣಕ್ಕೆ ಒಳಪಡದೇ ನಡೆಯಬಹುದಾದ ಅಥವಾ ನಡೆಯದೇ ಇರುವ ಒಂದು ಅಥವಾ ಹೆಚ್ಚು ಭವಿಷ್ಯದ ಘಟನೆಗಳಿಂದ ದೃಢೀಕರಿಸುವಂತಹದ್ದಾಗಿರುತ್ತದೆ. ಅನಿಶ್ಚಿತ ಆಸ್ತಿಗಳನ್ನು ಹಣಕಾಸಿನ ಕೋಷ್ಟಕಗಳಲ್ಲಿ ಗುರುತಿಸಲಾಗುವುದಿಲ್ಲ.

2.14 ಪ್ರತೀ ಶೇರಿನ ಗಳಿಕೆ

ಗ್ರೂಪ್‌ನವರ ಪ್ರತೀ ಶೇರಿನ ಮೂಲ ಮತ್ತು ಡೈಲ್ಯೂಟ್ ಮಾಡಲ್ಪಟ್ಟ ಗಳಿಕೆಯನ್ನು ಕ್ರಮಬದ್ಧವಾಗಿ ಲಾಭ ಮತ್ತು

ನಷ್ಟದ ಕೋಷ್ಟಕದಲ್ಲಿ ವರದಿ ಮಾಡುತ್ತಿದೆ. ತೆರಿಗೆಯ ನಂತರದ ನಿವ್ವಳ ಲಾಭವನ್ನು ವರ್ಷಾವಧಿಯಲ್ಲಿ ಬಾಕಿ ಇರುವ ವೈಟೆಡ್ ಎವರೇಜ್ ನಂಬರ್ ಆಫ್ ಶೇರಿನಿಂದ ಭಾಗಿಸಿ ಪ್ರತೀ ಶೇರಿನ ಗಳಿಕೆಯನ್ನು ಲೆಕ್ಕಹಾಕಲಾಗುತ್ತಿದೆ. ಪ್ರತೀ ಶೇರಿನ ಡೈಲ್ಯೂಟೆಡ್ ಗಳಿಕೆಯನ್ನು ಲೆಕ್ಕಹಾಕುವ ಸಲುವಾಗಿ ಈಕ್ವಿಟಿ ಶೇರುದಾರರಿಗೆ ಸೇರಬೇಕಾಗಿರುವ ನಿವ್ವಳ ಲಾಭ ಅಥವಾ ನಷ್ಟವನ್ನು ಮತ್ತು ವರ್ಷಾವಧಿಯಲ್ಲಿ ಬಾಕಿ ಇರುವ ವೈಟೆಡ್ ಎವರೇಜ್ ನಂಬರ್ ಆಫ್ ಶೇರಿನೊಂದಿಗೆ ಸರಿಹೊಂದಿಸಿ, ಡೈಲ್ಯೂಟಿವ್ ಪೊಟೆನ್ಶಿಯಲ್ ಈಕ್ವಿಟಿ ಶೇರುಗಳ ಪರಿಣಾಮವನ್ನು ಕಂಡುಹಿಡಿಯಲಾಗುವುದು.

2.15 ನಗದು ಹರಿವಿನ ಕೋಷ್ಟಕ

ಐಎನ್‌ಡಿ ಎಎಸ್ 7ರಂತೆ ನಗದು ಹರಿವಿನ ಕೋಷ್ಟಕಗಳನ್ನು ವರದಿ ಮಾಡಲಾಗುತ್ತಿದೆ. ನಗದು ಹರಿವಿನ ಕೋಷ್ಟಕಗಳಲ್ಲಿ ವರದಿ ಮಾಡುವ ಉದ್ದೇಶದಿಂದ ನಗದು ಮತ್ತು ನಗದಿಗೆ ಸಮಾನವಾದದ್ದರಲ್ಲಿ ಕೈಯಲ್ಲಿರುವ ನಗದು, ಕರೆಯ ಠೇವಣಿಗಳು ಮತ್ತು ಮತ್ತಿತರ ಅಲ್ಪಾವಧಿಯ ಮತ್ತು ಮೂರು ತಿಂಗಳು ಅಥವಾ ಅದಕ್ಕಿಂತ ಕಡಿಮೆಯ ಮುಕ್ತಾಯದ ಅವಧಿಯ ಅತೀ ಹೆಚ್ಚಿನ ಲಿಕ್ವಿಡಿಟಿ ಇರುವ ಮೂಲ ಹೂಡಿಕೆಗಳು, ನಗದಿಗೆ ಬದಲಾಗುವುದೆಂದು ತಿಳಿಯಲಾಗುವ ನಗದುಗಳ ಮೊಬಲಗು ಮತ್ತು ಮೌಲ್ಯ ಬದಲಾವಣೆಯ ಗಣನೀಯವಲ್ಲದ ಅಪಾಯವಿರುವ ನಗದುಗಳೂ ಸೇರಿರುತ್ತವೆ.

2.16 ವಿಭಾಗವಾರು ವರದಿಮಾಡುವಿಕೆ

ಇಂಡ್ ಎಎಸ್ 108 "ನಿರ್ವಹಣಾ ವಿಭಾಗಗಳು" ಒಂದು ಹಣಕಾಸಿನ ವರದಿಯು ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳು ಮತ್ತು ಪ್ರತ್ಯೇಕ ಹಣಕಾಸಿನ ಕೋಷ್ಟಕಗಳನ್ನು ಒಳಗೊಂಡಿದ್ದಲ್ಲಿ, ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಆಧಾರದ ಮೇಲೆ ಕ್ರೋಢೀಕೃತ ಮಾಹಿತಿಗಳನ್ನು ನೀಡಬೇಕಾಗಿರುತ್ತದೆ. ಆದ್ದರಿಂದ ವಿಭಾಗವಾರು ವರದಿಗಳನ್ನು ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಅಡಿಯಲ್ಲಿ ಒಪ್ಪಿಸಲಾಗಿದೆ.

2.17 ಹೊರಡಿಸಿರುವ ಮಾನಕಗಳು ಆದರೆ ಇನ್ನೂ ಪರಿಣಾಮಕಾರಿಯಾಗದೇ ಇರುವುದು.

ಕಂಪೆನಿಗಳ ವ್ಯವಹಾರ ಸಚಿವಾಲಯವು ಈಗ ಚಾಲ್ತಿಯಲ್ಲಿರುವ ಮಾನಕಗಳಿಗೆ ಹೊಸ ಮಾನಕಗಳು ಅಥವಾ ತಿದ್ದುಪಡಿಗಳನ್ನು ಪ್ರಕಟಿಸುತ್ತದೆ. 1ನೇ ಏಪ್ರಿಲ್ 2020ರಿಂದ ಜಾರಿಗೆ ಬರುವಂತೆ ಸಚಿವಾಲಯವು ಮಾನಕಗಳಿಗೆ ಅಂತಹ ಯಾವುದೇ ಅಧಿಸೂಚನೆಯನ್ನೂ ಹೊರಡಿಸಿರುವುದಿಲ್ಲ.

2.18 01ನೇ ಏಪ್ರಿಲ್ 2020ರಿಂದ ಅನ್ವಯವಾಗುವಂತಹ ಐಎನ್‌ಡಿ ಎಎಸ್‌ಗೆ ಪ್ರಮುಖ ತಿದ್ದುಪಡಿಗಳು

(a) **ವ್ಯವಹಾರದ ಒಟ್ಟುಗೂಡಿಸುವಿಕೆ (ಐಎನ್‌ಡಿ ಎಎಸ್ 103)**

"ವ್ಯವಹಾರ" ಎಂಬ ಶಬ್ದದ ಬಗ್ಗೆ ಮತ್ತು ಇತರ ಸಂಬಂದಪಟ್ಟ ವಿಷಯಗಳ ಬಗ್ಗೆ ತಿದ್ದುಪಡಿಯು ಬಹಳ ವಿಸ್ತಾರವಾಗಿ ವಿವರಿಸುತ್ತದೆ. ಮಾನಕಗಳ ಆವರಣದಲ್ಲಿರುವ ಕಂಪೆನಿಯ ಮೇಲೆ ಪರಿಣಾಮ ಬೀರುವ ಯಾವುದೇ ಘಟನೆಗಳೂ ಇಲ್ಲವಾದ್ದರಿಂದ ಮಾನಕಗಳಿಂದ ಕಂಪೆನಿಯ ಹಣಕಾಸಿನ ಮೇಲೆ ಯಾವುದೇ ಪರಿಣಾಮಗಳೂ ಇರುವುದಿಲ್ಲ.

(b) ಹಣಕಾಸಿನ ಕಾಗದಪತ್ರಗಳು – ಘೋಷಣೆಗಳು (ಐಎನ್‌ಡಿ ಎಎಸ್ 107)

ಬಡ್ಡಿ ದರದ ಮಾನದಂಡದಲ್ಲಿ ಸುಧಾರಣೆಯ ಕಾರಣದಿಂದ ಬರಬಹುದಾದ ಅನಿಶ್ಚಿತತೆಯನ್ನು ಘೋಷಿಸುವುದಕ್ಕೆ ಈ ತಿದ್ದುಪಡಿಯು ಸಂಬಂಧಿಸಿರುತ್ತದೆ. ಕಂಪೆನಿಯಲ್ಲಿ ಯಾವುದೇ ಸಾಲಗಳೂ ಇಲ್ಲವಾದ್ದರಿಂದ ತಿದ್ದುಪಡಿಯಿಂದ ಕಂಪೆನಿಯ ಮೇಲೆ ಯಾವುದೇ ಪರಿಣಾಮಗಳೂ ಇರುವುದಿಲ್ಲ.

(c) ಹಣಕಾಸಿನ ಕಾಗದಪತ್ರಗಳು (ಐಎನ್‌ಡಿ ಎಎಸ್ 109)

ಕೆಲವೊಂದು ನಿರ್ದಿಷ್ಟ ಕಟ್ಟುಬೀಳದಿರುವ ಲೆಕ್ಕಪತ್ರ ಅಗತ್ಯತೆಗಳಿಗೆ ಅನ್ವಯಿಸುವ ತಾತ್ಕಾಲಿಕ ವಿನಾಯಿತಿಗೆ ಈ ತಿದ್ದುಪಡಿಯು ಸಂಬಂಧಿಸಿರುತ್ತದೆ. ಕಂಪೆನಿಯಲ್ಲಿ ಅಂತಹ ಯಾವುದೇ ಒಪ್ಪಂದಗಳು ಇರುವುದಿಲ್ಲವಾದ್ದರಿಂದ ಕಂಪೆನಿಯ ಮೇಲೆ ಯಾವುದೇ ಪರಿಣಾಮಗಳೂ ಇರುವುದಿಲ್ಲ.

(d) ಗುತ್ತಿಗೆಗಳು (ಐಎನ್‌ಡಿ ಎಎಸ್ 116)

ಕೋವಿಡ್–19ರ ಕಾರಣದಿಂದ ಗುತ್ತಿಗೆ ಬಾಡಿಗೆಗೆ ಸಂಬಂಧಿಸಿದಂತೆ ಬಾಡಿಗೆದಾರರಿಗೆ ರಿಯಾಯಿತಿಗಳನ್ನು ನೀಡುವ ನಿರೀಕ್ಷಗಳು ಇವೆ. ಪ್ರಸ್ತಾಪಿಸಿರುವ ರಿಯಾಯಿತಿಗಳನ್ನು ಲೆಕ್ಕಪತ್ರಗಳಲ್ಲಿ ಹೇಗೆ ಪರಿಗಣಿಸಬೇಕೆಂಬ ಬಗ್ಗೆ ತಿದ್ದುಪಡಿಯು ಮಾರ್ಗದರ್ಶನವನ್ನು ನೀಡುತ್ತದೆ. ಕಂಪೆನಿಯು ಯಾವುದೇ ಬಾಡಿಗೆದಾರರಿಗೆ ಯಾವುದೇ ರಿಯಾಯಿತಿಗಳನ್ನೂ ನೀಡಿಲ್ಲವಾದ್ದರಿಂದ ಈ ತಿದ್ದುಪಡಿಯಿಂದ ಕಂಪೆನಿಯ ಮೇಲೆ ಯಾವುದೇ ಪರಿಣಾಮಗಳೂ ಇರುವುದಿಲ್ಲ.

(e) ಐಎನ್‌ಡಿ ಎಎಸ್ 1 ಮತ್ತು ಐಎನ್‌ಡಿ ಎಎಸ್ 8 (ಹಣಕಾಸಿನ ಕೋಷ್ಟಕಗಳ ಮತ್ತು ಲೆಕ್ಕಹಾಕುವಿಕೆಯ ನೀತಿಗಳು, ಲೆಕ್ಕಹಾಕುವಿಕೆಯ ಅಂದಾಜುಗಳು ಮತ್ತು ತಪ್ಪುಗಳಲ್ಲಿ ಬದಲಾವಣೆಗಳನ್ನು ಒಪ್ಪಿಸುವ ಬಗ್ಗೆ)

"ಸಾಮಗ್ರಿಗಳು" ಶಬ್ದದ ವ್ಯಾಖ್ಯಾನಕ್ಕೆ ಹೆಚ್ಚು ಸ್ಪಷ್ಟತೆಯನ್ನು ಒದಗಿಸುವ ಸಲುವಾಗಿ ತಿದ್ದುಪಡಿಯನ್ನು ಜಾರಿಗೆ ತರಲಾಗಿದೆ. ಹಣಕಾಸಿನ ಮೇಲೆ ಭೌತಿಕ ಪರಿಣಾಮ ಇರುವ ವಿಷಯಗಳು

ಲೆಕ್ಕಪತ್ರಗಳಲ್ಲಿ ಬೀರುವ ಪರಿಣಾಮಗಳನ್ನು ಈ ವ್ಯಾಖ್ಯಾನವು ತಿಳಿಸುತ್ತದೆ. ಈ ತಿದ್ದುಪಡಿಗೆ ಸಂಬಂಧಿಸಿದಂತೆ, ಯಾವುದೇ ಪರಿಣಾಮವನ್ನೂ ಕಂಪೆನಿಯು ನಿರೀಕ್ಷಿಸುತ್ತಿಲ್ಲ.

(f) ವರದಿ ಮಾಡುವ ಅವಧಿಯ ನಂತರದ ಘಟನೆಗಳು (ಐಎನ್‌ಡಿ ಎಎಸ್ 10)

ಕೆಲವೊಂದು ಬದಲಾವಣೆಗಳನ್ನು ಸೇರಿಸಿಕೊಂಡು ಹೊಂದಾಣಿಕೆಯಾಗದ ಘಟನೆಗಳಿಗೆ ಕಾರಣವಾಗುವುಂತಹ ಈ ತಿದ್ದುಪಡಿಯು ಪರಿಸ್ಥಿತಿಯನ್ನು ಬದಲಾಯಿಸುತ್ತದೆ. ಕಂಪೆನಿಯಲ್ಲಿ ಅಂತಹ ಯಾವುದೇ ಪರಿಸ್ಥಿತಿಯೂ ಇರುವುದಿಲ್ಲವಾದ್ದರಿಂದ ಈ ತಿದ್ದುಪಡಿಯಿಂದ ಯಾವುದೇ ಪರಿಣಾಮಗಳೂ ಇರುವುದಿಲ್ಲವೆಂದು ಅಭಿಪ್ರಾಯಪಡಲಾಗಿದೆ.

(g) ಮಧ್ಯಂತರ ಹಣಕಾಸಿನ ವರದಿಮಾಡುವಿಕೆ (ಐಎನ್‌ಡಿ ಎಎಸ್ 34)

ಕಂಪೆನಿಯು ಮಧ್ಯಂತರ ಹಣಕಾಸಿನ ಕೋಷ್ಟಕಗಳನ್ನು ಹೊರಡಿಸುತ್ತಿಲ್ಲವಾದ್ದರಿಂದ ಈ ತಿದ್ದುಪಡಿಯಿಂದ ಹಣಕಾಸಿನ ಕೋಷ್ಟಕಗಳ ಮೇಲೆ ಯಾವುದೇ ಪರಿಣಾಮಗಳೂ ಇರುವುದಿಲ್ಲ.

(h) ಉಪಬಂಧಗಳು, ಅನಿಶ್ಚಿತ ಹೊಣೆಗಾರಿಕೆಗಳು ಮತ್ತು ಅನಿಶ್ಚಿತ ಆಸ್ತಿಗಳು (ಐಎನ್‌ಡಿ ಎಎಸ್ 37)

ಐಎನ್‌ಡಿ ಎಎಸ್ 1ರಲ್ಲಿ **"ಸಾಮಗ್ರಿಗಳು"** ಶಬ್ದದ ವ್ಯಾಖ್ಯಾನದ ಬದಲಾವಣೆಯ ಪರಿಣಾಮಗಳ ಕಾರಣದಿಂದ ತಿದ್ದುಪಡಿಗಳು ಅಗತ್ಯವಾಗಿರುವುದರಿಂದ ಕಂಪೆನಿಯ ಹಣಕಾಸಿನ ಮೇಲೆ ಯಾವುದೇ ಪರಿಣಾಮಗಳೂ ಇರುವುದಿಲ್ಲ.

(i) ಅನುಸೂಚಿ-III ರ ಘೋಷಣೆಗಳು: ಕಂಪೆನಿಯು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಆಕ್ಟ್, 1934ರ ಕಂಡಿಕೆ 45–IA ಯಂತೆ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಯಾಗಿ ತನ್ನ ವ್ಯವಹಾರವನ್ನು ನಡೆಸಿಕೊಂಡು ಹೋಗುವ ಸಲುವಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ನವರು (ಆರ್‌ಬಿಐ) ಹೊರಡಿಸಿರುವ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರುತ್ತದೆ. ಎನ್‌ಬಿಎಫ್‌ಸಿಯಾಗಿ ಮುಂದುವರಿಯಲು ಆರ್‌ಬಿಐನವರು ನಿಗಧಿಪಡಿಸಿರುವ ಕಂಪೆನಿಯ ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಆದಾಯ ಮಾನದಂಡವನ್ನು ಕಂಪೆನಿಯು ತಲುಪದೇ ಇರುವುದರಿಂದ ಕಂಪೆನಿಯು ಎನ್‌ಬಿಎಫ್‌ಸಿಯಾಗಿ ಮುಂದುವರಿದಿರುವ ಸ್ಥಿತಿಯ ಬಗ್ಗೆ ಆರ್‌ಬಿಐನವರು ಸ್ಪಷ್ಟೀಕರಣವನ್ನು ಕೇಳಿರುತ್ತಾರೆ. ಈ ವಿಚಾರದಲ್ಲಿ ಕಂಪೆನಿಯು ಆರ್‌ಬಿಐನೊಂದಿಗೆ ವ್ಯವಹರಿಸುತ್ತಿದ್ದು, ಆರ್‌ಬಿಐನವರು ನೀಡಿರುವ ಪ್ರಮಾಣಪತ್ರವು ಈ ದಿನಾಂಕದವರೆಗೂ ಊರ್ಜಿತದಲ್ಲಿರುತ್ತದೆ. ಕಂಪೆನಿಯು ಸಾಲಗಳು ಮತ್ತು ಮುಂಗಡಗಳ ರೂಪದಲ್ಲಿ ಹಣಕಾಸಿನ ಆಸ್ತಿಗಳನ್ನು ಸಾಲಗಾರರಿಗೆ ಮಾಡಿರುವ ಒಟ್ಟು ರೂ. 227.76 ಲಕ್ಷಗಳನ್ನು ಹೊಂದಿರುವುದನ್ನು ಮುಂದುವರಿಸಿರುತ್ತದೆ. ಇವುಗಳಿಗೆ ಸಾಮಾನ್ಯ ಸಾಲಗಾರರಿಗೆ ಅನ್ವಯವಾಗುವ ಎನ್‌ಪಿಎ ಮಾನದಂಡಗಳಿಗೆ ಅನುಸಾರವಾಗಿ ಸಂಪೂರ್ಣವಾಗಿ ಉಪಬಂಧಗಳನ್ನು ಒದಗಿಸಲಾಗಿರುತ್ತದೆ.

ಕಂಪೆನಿಯು ಸಾಲಗಾರರಿಂದ ಸಾಲವನ್ನು ವಸೂಲಿ ಮಾಡುವ ಬಗ್ಗೆ ಪ್ರಯತ್ನವನ್ನು ಮುಂದುವರಿಸುತ್ತಿದೆ ಮತ್ತು ಕಂಪೆನಿಯ ಸತತ ಪ್ರಯತ್ನವು ಭರವಸೆಯ ಬೆಳವಣಿಗೆಯನ್ನು ಕಂಡಿರುತ್ತದೆ. 31ನೇ ಮಾರ್ಚಿ 2020ರ ವರ್ಷದ ಅಂತ್ಯಕ್ಕೆ ಕಂಪೆನಿಯು ರೂ. 378.88 ಲಕ್ಷಗಳ ಅಸಲು ಮತ್ತು ಬಡ್ಡಿಗಳನ್ನು ವಸೂಲಿ ಮಾಡಲು ಯಶಸ್ವಿಯಾಗಿರುತ್ತದೆ. ಅಲ್ಲದೇ, ಕಂಪೆನಿಯು ವಿವಿಧ ಸಂಸ್ಥೆಗಳಲ್ಲಿ ಹೂಡಿಕೆಗಳನ್ನೂ ಹೂಡಿದ್ದು ಅವುಗಳು ಸತತ ಲಾಭಾಂಶವನ್ನೂ ನೀಡುತ್ತಿವೆ. 31ನೇ ಮಾರ್ಚಿ 2020ರಲ್ಲಿ ಇರುವಂತೆ ಅಂತಹ ಹೂಡಿಕೆಗಳ ಮಾರುಕಟ್ಟೆ ಮೌಲ್ಯವು (ಐಎನ್‌ಡಿ ಎಎಸ್‌ನ ಅಡಿಯಲ್ಲಿ ಮೌಲ್ಯಮಾಪನ ಮಾಡಿರುವಂತೆ) ರೂ. 18231.09 ಲಕ್ಷಗಳು ಆಗಿರುತ್ತದೆ. ಮೇಲ್ಕಂಡ ಕಾರಣಗಳಿಂದ ಕಂಪೆನಿಯು 31ನೇ ಮಾರ್ಚಿ 2020ರ ವರ್ಷದ ಅಂತ್ಯಕ್ಕೆ ಹಣಕಾಸಿನ ಲೆಕ್ಕಪತ್ರಗಳನ್ನು ಸಿದ್ದಪಡಿಸುವಾಗ ಮತ್ತು ಹಿಂದಿನ ಅವಧಿಗೆ (ಗಳಿಗೆ) ತುಲನಾತ್ಮಕ ಮಾಹಿತಿಗಳನ್ನು ಒದಗಿಸುವಾಗ ಅನುಸೂಚಿ–IIIರ ವಿಭಾಗ–III ನ್ನು ಅಳವಡಿಸಿಕೊಂಡಿದೆ.

(j) ನಿಗಮವು ಎನ್‌ಬಿಎಫ್‌ಸಿಯಾಗಿ ಇರುವ ನೋಂದಣಿ ಪ್ರಮಾಣ ಪತ್ರವನ್ನು ರದ್ದುಪಡಿಸಲು ಆರ್‌ಬಿಐ ಅವರಲ್ಲಿ ಮನವಿ ಮಾಡಲು ಮಂಡಳಿಯು ದಿನಾಂಕ 27ನೇ ಸೆಪ್ಟೆಂಬರ್ 2019ರಂದು ನಡೆದ ಸಭೆಯಲ್ಲಿ ತೀರ್ಮಾನಿಸಿತು. ಈ ಬಗ್ಗೆ ನೋಂದಣಿ ಪ್ರಮಾಣ ಪತ್ರವನ್ನು ರದ್ದುಪಡಿಸಲು ಕಂಪೆನಿಯು ಆರ್‌ಬಿಐಗೆ ಪತ್ರವನ್ನು ಬರೆದಿದ್ದು, ವಿಷಯ ಇನ್ನೂ ಬಾಕಿ ಇರುತ್ತದೆ. ಕಂಪೆನಿಗೆ ಸಂಬಂಧಿಸಿದಂತೆ ಆರ್‌ಬಿಐ ಮಾರ್ಗದರ್ಶನದ ಅನುಸಾರವಾಗಿ ಬ್ಯಾಂಕಿಂಗೇತರ ಹಣಕಾಸು ಕಂಪೆನಿಗಳಿಗೆ (ಎನ್‌ಬಿಎಫ್‌ಸಿ) ಸಂಬಂಧಿಸಿದ ಮಾಹಿತಿಗಳನ್ನು ಘೋಷಣೆ ಮಾಡುವುದಕ್ಕೆ ಸಂಬಂಧಿಸಿದಂತೆ ಸೂಕ್ತವಾದ ಘೋಷಣೆಯನ್ನು ಮಾಡಲಾಗಿದೆ.

(j) ಇಂಡ್ ಎಎಸ್–1, ಹಣಕಾಸು ಕೋಷ್ಟಕಗಳ ಮಂಡನೆಯ ವಿಭಾಗ IIIರ ಕಂಡಿಕೆ 60ರಲ್ಲಿ ಕಡ್ಡಾಯ ಮಾಡಿರುವಂತೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು **"ಚಾಲ್ತಿ ಮತ್ತು ಚಾಲ್ತಿಯಲ್ಲದ"**ವುಗಳ ಅಡಿಯಲ್ಲಿ ಮಂಡಿಸದೇ ಇರುವ ಆಯ್ಕೆಯನ್ನು ಚಲಾಯಿಸಲು ಕಂಪೆನಿಯು ಆಯ್ಕೆ ಮಾಡಿಕೊಂಡಿದೆ.

(k) ಹಿಂದಿನ ವರ್ಷಗಳ ಅಂಕಿ ಅಂಶಗಳನ್ನು ಚಾಲ್ತಿ ವರ್ಷದ ಅಂಕಿಅಂಶಗಳಿಗೆ ಹೋಲಿಕೆ ಮಾಡುವ ಸಲುವಾಗಿ ಅಗತ್ಯವಿರುವಲ್ಲಿ ಪುನಃ ವಿಂಗಡಿಸಿದೆ/ ಪುನಃ ವರ್ಗೀಕರಿಸಿದೆ/ಪುನಃ ಲೆಕ್ಕಹಾಕಲಾಗಿದೆ/ಪುನಃ ಮಂಡಿಸಲಾಗಿದೆ.

ಕ್ರೋಢೀಕೃತ ಹಣಕಾಸಿನ ಕೋಷ್ಟಕದ ಭಾಗವಾಗಿರುವ ಪ್ರಮುಖ ಲೆಕ್ಕಪತ್ರ ನೀತಿಗಳು 1&2

ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಿಗೆ ಟಿಪ್ಪಣಿಗಳು 3–42

ಇದೇ ದಿನಾಂಕದ ನಮ್ಮ ವರದಿಯಂತೆ
ಎನ್ಎಸ್ವಿಎಂ & ಅಸೋಸಿಯೇಟ್ಸ್ ಪರವಾಗಿ,
ಚಾರ್ಟರ್ಡ್ ಅಕೌಂಟೆಂಟ್ಸ್ (ಸಂಸ್ಥೆ ನೋಂದಣಿ ಸಂಖ್ಯೆ. 010072S)
ಸಹಿ/– (ಸಿ.ಎ. ವಿ.ಎಸ್. ರಂಗನಾಥನ್)
ಪಾಲುದಾರ
ಸದಸ್ಯ ನಂ.201872

ಸ್ಥಳ: ಬೆಂಗಳೂರು
ದಿನಾಂಕ: 09–12–2020

ನಿರ್ದೇಶಕರ ಮಂಡಳಿಗೆ ಮತ್ತು ಅದರ ಪರವಾಗಿ

(ಸಹಿ/–)
(ಡಾ. ಪಿ.ಸಿ.ಜಾಫರ್)
ನಿರ್ದೇಶಕರು
ಡಿಐಎನ್: 08574909

(ಸಹಿ/–)
(ಎಂ.ಎಸ್. ಶ್ರೀಕರ್, ಭಾಆಸೇ)
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 07882939

(ಸಹಿ/–)
(ವೈ.ಶ್ರೀನಿವಾಸಪ್ಪ)
ಉ.ಪ್ರ.ವ್ಯ (ಹ & ಲೆ)

6ನೇ ಕ್ರೋಢೀಕೃತ ಹಣಕಾಸಿನ ಹೇಳಿಕೆಗಳು

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ

ಸದಸ್ಯರುಗಳಿಗೆ,

ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಮೇಲಿನ ಲೆಕ್ಕಪರಿಶೋಧನೆಯ ಮೇಲೆ ವರದಿ

ಪರಿಣಿತ ಅಭಿಪ್ರಾಯ:

ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ (ಇನ್ನು ಮುಂದೆ "ದಿ ಹೋಲ್ಡಿಂಗ್ ಕಂಪೆನಿ" ಎಂದು ಉಲ್ಲೇಖಿಸಲ್ಪಡುವುದು) ಮತ್ತು ಅದರ ಅಂಗಸಂಸ್ಥೆಗಳ (ಹೋಲ್ಡಿಂಗ್ ಕಂಪೆನಿ ಮತ್ತು ಅದರ ಅಂಗಸಂಸ್ಥೆಗಳನ್ನು ಸೇರಿಸಿ "ದಿ ಗ್ರೂಪ್" ಎಂದು ಉಲ್ಲೇಖಿಸಲ್ಪಡುವುದು), ಅದರ ಸಹಸಂಸ್ಥೆಗಳ ಮತ್ತು ಜಂಟೀ ಸಹಯೋಗ ಉದ್ಯಮಗಳನ್ನು ಒಳಗೊಂಡ 31ನೇ ಮಾರ್ಚಿ 2020ರಲ್ಲಿ ಇರುವಂತೆ ಕ್ರೋಢೀಕೃತ ಆಸ್ತಿಹೊಣೆ ತಃಖ್ತೆ, ಕ್ರೋಢೀಕೃತ ಲಾಭ ಮತ್ತು ನಷ್ಟ ಕೋಷ್ಟಕ (ಇತರೆ ಸಮಗ್ರ ಆದಾಯಗಳನ್ನೂ ಸೇರಿಸಿ), ಕ್ರೋಢೀಕೃತ ಈಕ್ವಿಟಿಯಲ್ಲಿ ಬದಲಾವಣೆಯ ಕೋಷ್ಟಕ ಮತ್ತು ಆ ದಿನಾಂಕಕ್ಕೆ ಕೊನೆಗೊಳ್ಳುವ ವರ್ಷದ ಕ್ರೋಢೀಕೃತ ನಗದು ಹರಿವಿನ ಕೋಷ್ಟಕ ಮತ್ತು ಪ್ರಮುಖ ಲೆಕ್ಕಪತ್ರ ನೀತಿಗಳ ಸಾರಾಂಶ ಮತ್ತಿತರ ವಿವರಣಾತ್ಮಕ ಮಾಹಿತಿಗಳ (ಇನ್ನು ಮುಂದೆ "ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳು" ಎಂದು ಕರೆಯಲ್ಪಡುವುದು) ಲೆಕ್ಕಪರಿಶೋಧನೆಯನ್ನು ನಾವು ನಡೆಸಿರುತ್ತೇವೆ.

ಅಂಗಸಂಸ್ಥೆಗಳು, ಸಹಸಂಸ್ಥೆಗಳು ಮತ್ತು ಜಂಟೀ ಸಹಯೋಗ ಉದ್ಯಮಗಳ ಪ್ರತ್ಯೇಕ ಹಣಕಾಸಿನ ಕೋಷ್ಟಕಗಳನ್ನು ಬೇರೆ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ನಡೆಸಿ ನೀಡಿರುವ ವರದಿಗಳ ಪರಿಗಣನೆಯ ಆಧಾರದ ಮೇಲೆ ನಮ್ಮ ಸಂಪೂರ್ಣ ತಿಳುವಳಿಕೆಯಂತೆ ಹಾಗೂ ನಮಗೆ ನೀಡಲ್ಪಟ್ಟ ವಿವರಣೆಗಳಂತೆ, ನಮ್ಮ ವರದಿಯ ಪ್ರತ್ಯೇಕ ಹಣಕಾಸಿನ ಕೋಷ್ಟಕಗಳ ಮೇಲೆ ಪರಿಣಿತ ಅಭಿಪ್ರಾಯದ ಕಂಡಿಕೆಗಳಲ್ಲಿ ವಿವರಿಸಿರುವ ಅಂಶಗಳ ಪರಿಣಾಮವನ್ನು ಹೊರತುಪಡಿಸಿ, ಮೇಲೆ ತಿಳಿಸಿರುವ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳು ಕಂಪೆನಿಗಳ ಕಾಯಿದೆ, 2013ರ ("ಕಾಯಿದೆ") ಇಂಡಿಯನ್ ಅಕೌಂಟಿಂಗ್ ಸ್ಟಾಂಡರ್ಡ್ಸ್‌ನಲ್ಲಿ ನಿಗಧಿಪಡಿಸಿರುವ ಕಂಡಿಕೆ 133ರ ಜೊತೆಗೆ ದಿ ಕಂಪೆನೀಸ್ (ಇಂಡಿಯನ್ ಅಕೌಂಟಿಂಗ್ ಸ್ಟಾಂಡರ್ಡ್ಸ್) ರೂಲ್ಸ್, 2015ನ್ನೂ ಓದಿಕೊಂಡಂತೆ, ಹಾಗೂ ತಿದ್ದುಪಡಿ ("ಐಎನ್‌ಡಿ ಎಎಸ್") ಮಾಡಿದಂತೆ ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಲ್ಪಟ್ಟ ಲೆಕ್ಕಪತ್ರ ನೀತಿಗಳ ಅನುಸಾರವಾಗಿ ಗ್ರೂಪಿನ ಮತ್ತು ಅದರ ಸಹಸಂಸ್ಥೆಗಳು ಮತ್ತು ಜಂಟೀ ಸಹಯೋಗ ಸಂಸ್ಥೆಗಳಿಗೆ ಸಂಬಂಧಿಸಿದಂತೆ 31ನೇ ಮಾರ್ಚಿ 2020ರಲ್ಲಿ ಇರುವಂತೆ ಕ್ರೋಢೀಕೃತ ವ್ಯವಹಾರದ ಸ್ಥಿತಿಗತಿ, ಕ್ರೋಢೀಕೃತ ಲಾಭ ಮತ್ತು ಇತರ ಸಮಗ್ರ ಆದಾಯ, ಕ್ರೋಢೀಕೃತ ಈಕ್ವಿಟಿಯಲ್ಲಿ ಬದಲಾವಣೆ ಮತ್ತು ಆ ದಿನಾಂಕದ ಅಂತ್ಯಕ್ಕೆ ಅದರ ಕ್ರೋಢೀಕೃತ ನಗದು ಹರಿವುಗಳ ನೈಜ ಮತ್ತು ಸಮರ್ಪಕವಾದ ಚಿತ್ರಣವನ್ನು ನೀಡುತ್ತದೆ.

ಹೋಲ್ಡಿಂಗ್ ಕಂಪೆನಿ – ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ ಮೇಲೆ ಪರಿಣಿತ ವರದಿಗೆ ಆಧಾರ

1) ಎನ್‌ಬಿಎಫ್‌ಸಿಯಾಗಿ ನೋಂದಾಯಿಸಲ್ಪಟ್ಟಿರುವ ಕಂಪೆನಿಯಾಗಿರುವ ಕಾರಣದಿಂದಾಗಿ ವರ್ಷದಿಂದ ವರ್ಷಕ್ಕೆ ಈ ಕೆಳಕಂಡ ಪ್ರಮುಖ ವ್ಯಾವಹಾರಿಕ ಚಟುವಟಿಕೆಗಳ ಮಾನದಂಡವನ್ನು ಅನುಸರಣೆ ಮಾಡಬೇಕಾಗಿರುತ್ತದೆ:

ಕಂಪೆನಿಯು ಎರಡೂ ಮಾನದಂಡಗಳನ್ನು ತೃಪ್ತಿಪಡಿಸಿದಲ್ಲಿ ಪ್ರಮುಖ ವ್ಯಾವಹಾರಿಕ ಚಟುವಟಿಕೆಯು ಹಣಕಾಸಿನ ಚಟುವಟಿಕೆಯೆಂದು ತಿಳಿಯಲ್ಪಡುತ್ತದೆ.:

a) ಅದರ ಹಣಕಾಸಿನ ಆಸ್ತಿಗಳು ಅದರ ಒಟ್ಟು ಆಸ್ತಿಗಳ 50%ಷ್ಟು ಜಾಸ್ತಿಯಾಗಿರತಕ್ಕದ್ದು; ಮತ್ತು

b) ಹಣಕಾಸಿನ ಆಸ್ತಿಗಳಿಂದ ಬರುವ ಆದಾಯವು ಒಟ್ಟು ಆದಾಯದ 50%ಗಿಂತಲೂ ಹೆಚ್ಚಾಗಿರತಕ್ಕದ್ದು.

ಹೋಲ್ಡಿಂಗ್ ಕಂಪೆನಿಯು ಎನ್‌ಬಿಎಫ್‌ಸಿಯಾಗಿ ಅಧಿಕೃತ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರುತ್ತದೆ, ಆದರೆ, 31ನೇ ಮಾರ್ಚಿ, 2020ರಲ್ಲಿ ಇರುವಂತೆ ಪ್ರಮುಖ ವ್ಯಾವಹಾರಿಕ ಮಾನದಂಡಕ್ಕೆ ಸಂಬಂಧಿಸಿದಂತೆ ಕಂಪೆನಿಯು ಎರಡೂ ಶರತ್ತುಗಳನ್ನು ತೃಪ್ತಿಪಡಿಸುವುದಿಲ್ಲ. ಮುಂದುವರಿದಂತೆ, ವರ್ಷಾವಧಿಯಲ್ಲಿ ಹೋಲ್ಡಿಂಗ್ ಕಂಪೆನಿಯು ನೋಂದಣಿ ಪ್ರಮಾಣ ಪತ್ರದ ರದ್ಧತಿಗಾಗಿ ಆರ್‌ಬಿಐಗೆ ಅರ್ಜಿಯನ್ನು ಸಲ್ಲಿಸಿದ್ದು, ಅದಕ್ಕೆ ಇನ್ನೂ ಅನುಮೋದನೆ ದೊರೆತಿರುವುದಿಲ್ಲ.

2) ಆರ್‌ಬಿಐ ಕಾಯಿದೆ, 1934ರಂತೆ ಮತ್ತು ನಂತರದಲ್ಲಿನ ತಿದ್ದುಪಡಿಗಳಂತೆ ಹಾಗೂ ಆರ್‌ಬಿಐ ಕಾಯಿದೆ, 1934ರ ಕಂಡಿಕೆ 45(1c)ಯ ಅಡಿಯಲ್ಲಿ ಹೊರಡಿಸಿರುವ ಸೂಚನೆಗಳಂತೆ ಪ್ರತೀ ಎನ್‌ಬಿಎಫ್‌ಸಿಗಳು ತಮ್ಮ ನಿವ್ವಳ ಲಾಭದ 20%ನ್ನು ಪ್ರತ್ಯೇಕ ಮೀಸಲಿಗೆ ವರ್ಗಾಯಿಸಲು ಬಾಧ್ಯರಾಗಿರುತ್ತಾರೆ. ಹೋಲ್ಡಿಂಗ್ ಕಂಪೆನಿಯು ವರ್ಷಾವಧಿಯಲ್ಲಿ ಎನ್‌ಬಿಎಫ್‌ಸಿ ನೋಂದಣಿ ಪ್ರಮಾಣಪತ್ರವನ್ನು ಹೊಂದಿರುವುದನ್ನು ಮುಂದುವರಿಸಿರುವುದರಿಂದ ಹಾಗೂ 31ನೇ ಮಾರ್ಚಿ, 2020ರಲ್ಲಿ ಇರುವಂತೆ 20%ರಷ್ಟು ಲಾಭವನ್ನು ಮೀಸಲಿಗೆ ವರ್ಗಾಯಿಸದೇ ಇರುವುದು ಕಂಡಿಕೆ 45(1) (c)ಯ ಅನುಸರಣೆ ಮಾಡದೇ ಇರುವುದಕ್ಕೆ ಕಾರಣವಾಗುತ್ತದೆ.

3) ಹೋಲ್ಡಿಂಗ್ ಕಂಪೆನಿಯು ಈಕ್ವಿಟಿ ಪತ್ರಗಳಲ್ಲಿ ಹೂಡಿಕೆಯನ್ನು ಹೊಂದಿದ್ದು, ಇದರಲ್ಲಿ ಲಿಸ್ಟ್ ಆಗಿರುವ ಮತ್ತು ಲಿಸ್ಟ್

ಆಗದೇ ಇರುವ ಪತ್ರಗಳೂ ಸೇರಿರುತ್ತವೆ. ಐಎನ್‌ಡಿ ಎಎಸ್ 109ರಂತೆ, ಹೊಂದಿರುವ ಹೂಡಿಕೆಗಳನ್ನು ಐಎನ್‌ಡಿ ಎಎಸ್ 113ಕ್ಕೆ ಅನುಸಾರವಾಗಿ ನ್ಯಾಯಯುತ ದರದಲ್ಲಿ ಮೌಲ್ಯೀಕರಿಸಿ ಪ್ರಸ್ತುತಪಡಿಸಬೇಕಾಗಿರುತ್ತದೆ. ಹೋಲ್ಡಿಂಗ್ ಕಂಪೆನಿಯ ಕೆಲವೊಂದು ಹೂಡಿಕೆಗಳನ್ನು ಅವುಗಳನ್ನು ಲಿಸ್ಟ್‌ನಿಂದ ತೆಗೆದು ಹಾಕಿರುವುದರಿಂದ ಅವುಗಳನ್ನು ನಾಮಕಾವಸ್ಥೆ ದರಕ್ಕೆ ಅಂದರೆ ರೂ. 1/–ಕ್ಕೆ ಮೌಲ್ಯಮಾಪನ ಮಾಡಲಾಗಿರುತ್ತದೆ. ಹೋಲ್ಡಿಂಗ್ ಕಂಪೆನಿಯು 31ನೇ ಮಾರ್ಚಿ 2020ರಲ್ಲಿ ಇರುವಂತೆ ಇದನ್ನು ನಾಮಕಾವಸ್ಥೆ ಮೌಲ್ಯದಲ್ಲಿ ಮತ್ತು ಮಾಹಿತಿಗಳ ಕೊರತೆಯಿಂದಾಗಿ ಅದರ ತುಲನಾತ್ಮಕ ಅವಧಿಯನ್ನು (ಗಳನ್ನು) ತೋರಿಸಿರುವುದನ್ನು ಮುಂದುವರಿಸಿದೆ. ಈ ಬಗ್ಗೆ ಹಣಕಾಸಿನ ಕೋಷ್ಟಕಗಳ ಮೇಲೆ ಅವುಗಳ ಪರಿಣಾಮವನ್ನು ಮೌಲ್ಯೀಕರಿಸಲು ನಾವು ಅಸಮರ್ಥರಾಗಿದ್ದೇವೆ.

4) 31ನೇ ಮಾರ್ಚಿ 2020ರ ವರ್ಷದ ಅಂತ್ಯದಲ್ಲಿ ಹೋಲ್ಡಿಂಗ್ ಕಂಪೆನಿಯು ಲಿಸ್ಟ್ ಆಗದೇ ಇರುವ ಮೂರು ಕಂಪೆನಿಗಳಲ್ಲಿರುವ ಹೂಡಿಕೆಗಳನ್ನು 31ನೇ ಮಾರ್ಚಿ 2020ರ ಮಾಹಿತಿಗಳು ಲಭ್ಯವಿಲ್ಲವಾದ್ದರಿಂದ 31ನೇ ಮಾರ್ಚಿ 2019ರಲ್ಲಿ ಲಭ್ಯವಿರುವ ಮಾಹಿತಿಗಳ ಆಧಾರದ ಮೇಲೆ ಸಮರ್ಪಕ ಬೆಲೆಯಲ್ಲಿ ಮೌಲ್ಯೀಕರಿಸಲಾಗಿರುತ್ತದೆ. ಹಣಕಾಸಿನ ಕೋಷ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ನಾವು ಪ್ರಮಾಣೀಕರಿಸಲು ಸಾಧ್ಯವಾಗಿರುವುದಿಲ್ಲ.

5) 31ನೇ ಮಾರ್ಚಿ, 2020ರಲ್ಲಿ ಇರುವಂತೆ ಹೋಲ್ಡಿಂಗ್ ಕಂಪೆನಿಯು ರೂ. 45.70 ಲಕ್ಷವನ್ನು ಸ್ವೀಪ್ ಠೇವಣಿಯಲ್ಲಿ ಹೂಡಿರುತ್ತದೆ. ಐಎನ್‌ಡಿ ಎಎಸ್‌ನಂತೆ ಠೇವಣಿಗಳ ಮೇಲೆ ಗಳಿಸಲಾಗಿರುವ ಬಡ್ಡಿಯನ್ನು ಸೇರಿಕೆಯ ಆಧಾರದ ಮೇಲೆ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಾಗಿದೆ. ಆದಾಗ್ಯೂ ಕಂಪೆನಿಯು ಬಡ್ಡಿಯನ್ನು ಸ್ವೀಕೃತಿ ಆಧಾರದ ಮೇಲೆ ಲೆಕ್ಕಕ್ಕೆ ತೆಗೆದುಕೊಂಡಿರುತ್ತದೆ ಹಾಗೂ 31ನೇ ಮಾರ್ಚಿ, 2020ರಲ್ಲಿ ಇರುವಂತೆ ಬಡ್ಡಿಯನ್ನು ಸೇರಿಕೆ ಮಾಡಿರುವುದಿಲ್ಲ. ಹಣಕಾಸಿನ ಕೋಷ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ನಾವು ಪ್ರಮಾಣೀಕರಿಸಲು ಸಾಧ್ಯವಾಗಿರುವುದಿಲ್ಲ.

6) ಕಂಪೆನಿಯು ತನ್ನ ಸಹಸಂಸ್ಥೆಯಾಗಿರುವ ಆದ ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತಕ್ಕೆ (ಬಿಐಎಎಲ್) ಸಾಲ ಸೌಲಭ್ಯದ ವಿಸ್ತರಣೆಗಾಗಿ ಈ ಹಿಂದೆ ಒಪ್ಪಿರುವ ಶರತ್ತನ್ನು ನೆರವೇರಿಸುವ ಸಲುವಾಗಿ ಬಿಐಎಎಲ್‌ನಲ್ಲಿ ಹೊಂದಿರುವ 2,80,48,878 ಶೇರುಗಳನ್ನು ಎಸ್‌ಬಿಐ ಕ್ಯಾಪ್ಸ್ ಟ್ರಸ್ಟೀ ಕಂಪೆನಿ ಇವರಿಗೆ ಅಡಮಾನ ಮಾಡಿರುತ್ತದೆ. ಇಂಡ್ ಎಎಸ್–109ರಂತೆ ಶೇರುಗಳ ಅಡಮಾನವು ಹಣಕಾಸಿನ ಖಾತರಿ ಒಪ್ಪಂದವನ್ನು ಉಂಟುಮಾಡುತ್ತಿದ್ದು, ನೀಡಲಾಗಿರುವ ಅಡಮಾನಕ್ಕೆ ಕಂಪೆನಿಯು ಹಣಕಾಸಿನ ಹೊಣೆಗಾರಿಕೆಯನ್ನು ಗುರುತಿಸತಕ್ಕದ್ದು ಹಾಗೂ ನಂತರದಲ್ಲಿ ಐಎನ್‌ಡಿ ಎಎಸ್–115ರಂತೆ ಆದಾಯವನ್ನು ಗುರುತಿಸಬೇಕಾಗಿರುತ್ತದೆ. ಆದಾಗ್ಯೂ, ಕಂಪೆನಿಯು ಅಡಮಾನಕ್ಕಾಗಿ ಹಣಕಾಸಿನ ಹೊಣೆಗಾರಿಕೆಯನ್ನು ಗುರುತಿಸದೇ ಇರುವುದನ್ನು ಹಾಗೂ ಐಎನ್‌ಡಿ ಎಎಸ್–115ರಂತೆ 31ನೇ ಮಾರ್ಚಿ, 2020ರಲ್ಲಿ ಇರುವಂತೆ ಆದಾಯವನ್ನು ದಾಖಲಿಸದೇ ಇರುವುದನ್ನು ನಾವು ಗಮನಿಸಿರುತ್ತೇವೆ. ಕಂಪೆನಿಯು ಈ ವ್ಯವಹಾರಕ್ಕೆ ನಿಗಧಿತ ಲೆಕ್ಕಪತ್ರ ಮಾನದಂಡವನ್ನು ಅನುಸರಿಸಿರುವುದಿಲ್ಲವಾದ್ದರಿಂದ ಹಣಕಾಸಿನ ಕೋಷ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ಪ್ರಮಾಣೀಕರಿಸಲು ನಮಗೆ ಅಸಾಧ್ಯವಾಗಿರುತ್ತದೆ.

7) ಕಂಪೆನಿಯು ವಿವಿಧ ಮೇಲ್ಮನವಿ ಪ್ರಾಧಿಕಾರಗಳ ಮುಂದೆ ಇರುವ ದಾವೆಗಳಲ್ಲಿ ಪ್ರತಿಭಟನೆಯ ಮೂಲಕ ಪಾವತಿಸಿರುವ ತೆರಿಗೆಗೆ ಸಂಬಂಧಿಸಿದಂತೆ ತಾನು ಯಶಸ್ವಿಯಾಗಲಿಕ್ಕಿಲ್ಲವೆಂದು ಒಪ್ಪದೇ ಇದ್ದರೂ ಕೂಡಾ ಊಹಾತ್ಮಕವಾಗಿ ಆದಾಯ–ತೆರಿಗೆ ಕಾಯಿದೆ, 1961ರ (“ಎಂಎಟಿ ಕ್ರೆಡಿಟ್”) ಕಂಡಿಕೆ 115JBಯಂತೆ ವರ್ಷಾವಧಿಯಲ್ಲಿ ಜಮಾ ಮಾಡುವುದಕ್ಕೆ ಹಕ್ಕು ಸಾಧಿಸಿರುತ್ತಾರೆ. ನಮ್ಮ ಅಭಿಪ್ರಾಯದಂತೆ ಕಂಪೆನಿಯು ಗುರುತಿಸಿರುವ ಭಾರತೀಯ ರೂಪಾಯಿ 7,00,26,599ರ ಎಂಎಟಿ ಜಮಾಕ್ಕೆ ಕಂಪೆನಿಯು ಇದೇ ಮೊಬಲಗಿಗೆ ಆದಾಯ ತೆರಿಗೆಯ ಉಪಬಂಧವನ್ನು ಕಲ್ಪಿಸಬೇಕಾಗಿರುತ್ತದೆ. ಆದಾಗ್ಯೂ, ಕಂಪೆನಿಯು ರೂ. 7,00,26,599ಕ್ಕೆ ಆದಾಯ ತೆರಿಗೆಗೆ ಉಪಬಂಧವನ್ನು ಸೃಷ್ಟಿಸದೇ ಇರುವುದನ್ನು ನಾವು ಗಮನಿಸಿದ್ದು, ಇದರಿಂದಾಗಿ ಲಾಭ ಮತ್ತು ನಷ್ಟ ಖಾತೆಯಲ್ಲಿ ಭಾರತೀಯ ರೂಪಾಯಿ 7,00,26,599ರಿಂದ ಹೆಚ್ಚು ದಾಖಲಿಸಲ್ಪಟ್ಟಿರುತ್ತದೆ.

8) ಕಂಪೆನಿಯು ಈ ಕೆಳಗಿನ ಚಟುವಟಿಕೆಗಳಿಂದ ಆದಾಯವನ್ನು ಗಳಿಸುತ್ತಿದೆ:

a) ಹಣಕಾಸಿನ ಚಟುವಟಿಕೆಗಳು

b) ಗುತ್ತಿಗೆ ಚಟುವಟಿಕೆಗಳು

c) ಇತರೆ ಆದಾಯ (ಬೇರೆ ಸಂಸ್ಥೆಗಳಲ್ಲಿ ಮಾಡಿರುವ ಹೂಡಿಕೆಯ ಮೇಲೆ ಗಳಿಸಲಾಗಿರುವ ಲಾಭಾಂಶದ ಆದಾಯ, ನಿಶ್ಚಿತ ಠೇವಣಿಯಿಂದ ಬಂದಿರುವ ಬಡ್ಡಿ)

ಐಎನ್‌ಡಿ ಎಎಸ್–108ರಂತೆ ತನ್ನ ಹಣಕಾಸಿನ ಕೋಷ್ಟಕಗಳನ್ನು ಉಪಯೋಗಿಸುವವರಿಗೆ ತಾನು ತೊಡಗಿಸಿಕೊಂಡಿರುವ ವ್ಯಾವಹಾರಿಕ ಚಟುವಟಿಕೆಗಳ ಸ್ವಭಾವ ಮತ್ತು ಹಣಕಾಸಿನ ಪರಿಣಾಮಗಳನ್ನು ಮೌಲ್ಯಮಾಪನ ಮಾಡಲು ಅನುವಾಗುವಂತೆ ಪ್ರತೀ ಕಂಪೆನಿಯು ಮಾಹಿತಿಗಳನ್ನು ಘೋಷಿಸುವುದು ಅಗತ್ಯವಾಗಿರುತ್ತದೆ. ಈ ಅಗತ್ಯತೆಯನ್ನು ಪರಿಗಣಿಸಿ, ವಿಭಾಗವಾರು ಆದಾಯಗಳು, ವಿಭಾಗವಾರು ಲಾಭ ಮತ್ತು ನಷ್ಟ, ವಿಭಾಗವಾರು ಆಸ್ತಿ ಮತ್ತು ಹೊಣೆಗಾರಿಕೆಗಳ ಬಗ್ಗೆ ಕಂಪೆನಿಯು ಮೇಲ್ಕಂಡಂತೆ ವಿಭಾಗವಾರು ವರದಿ ನೀಡಬೇಕಾಗಿರುತ್ತದೆ. ಆದರೆ,

ಐಎನ್‌ಡಿ ಎಎಸ್–108ರಂತೆ ವಿಭಾಗವಾರು ವರದಿ ಮಾಡುವಿಕೆಯ ಅಗತ್ಯತೆಯನ್ನು ಕಂಪೆನಿಯು ಪೂರೈಸಿರುವುದಿಲ್ಲವೆಂದು ನಾವು ಗಮನಿಸಿರುತ್ತೇವೆ ಮತ್ತು ಹಣಕಾಸಿನ ಕೋಷ್ಟಕಗಳ ಮೇಲೆ ಇದರ ಪರಿಣಾಮಗಳನ್ನು ಪ್ರಮಾಣೀಕರಿಸಲು ನಾವು ಅಸಮರ್ಥರಾಗಿದ್ದೇವೆ.

ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ ('ಎಂಎಸ್‌ಐಎಲ್')

ಹೋಲ್ಡಿಂಗ್ ಕಂಪೆನಿಯ ಸಹವರ್ತಿ ಕಂಪೆನಿಗಳಲ್ಲಿ ಒಂದಾಗಿರುವ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ಗೆ ಸಂಬಂಧಿಸಿದಂತೆ –ಎಂಎಸ್‌ಐಎಲ್, ಆ ಸಹವರ್ತಿ ಸಂಸ್ಥೆಯ ಹಣಕಾಸಿನ ಕೋಷ್ಟಕಗಳನ್ನು/ ಹಣಕಾಸಿನ ಮಾಹಿತಿಗಳ ಲೆಕ್ಕಪರಿಶೋಧನೆ ಮಾಡಿರುವ ಬೇರೆ ಲೆಕ್ಕಪರಿಶೋಧಕರು ದಿನಾಂಕ 19ನೇ ನವೆಂಬರ್ 2020ರ ವರದಿಯಲ್ಲಿ ಈ ಕೆಳಕಂಡಂತೆ ವರದಿಮಾಡಿರುತ್ತಾರೆ:

a) ವ್ಯಾಪಾರೀ ಸ್ವೀಕಾರಾರ್ಹವಾದವುಗಳು, ಮುಂಗಡಗಳು, ಗ್ರಾಹಕರಿಂದ ಪಾವತಿಸತಕ್ಕವುಗಳು ಮತ್ತು ಮುಂಗಡಗಳನ್ನು ಎದರು ಪಕ್ಷದವರಿಂದ ಆಸ್ತಿಹೊಣೆ ತಃಖ್ತೆಯ ದಿನಾಂಕದಂದು ಪುನರ್ ಪರಿಶೀಲನೆಯನ್ನಾಗಲೀ, ದೃಢೀಕರಣವನ್ನಾಗಲೀ ಮಾಡಿರುವುದಿಲ್ಲ. ಆಸ್ತಿಹೊಣೆ ತಃಖ್ತೆಯ ದಿನಾಂಕದಂದು ಬೇರೆ ಲೆಕ್ಕಪರಿಶೋಧಕರಿಗೆ (ಗಳಿಗೆ) ಈ ಖಾತೆಯು ಕೊಂಡೊಯ್ಯುವ ಮೊಬಲಗಿನ ಬಗ್ಗೆ ಸಾಕಷ್ಟು ಸೂಕ್ತ ಲೆಕ್ಕಪರಿಶೋಧನಾ ಸಾಕ್ಷ್ಯಗಳನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ ಮತ್ತು ಇದರ ಅನುಪಸ್ಥಿತಿಯಲ್ಲಿ ಈ ಖಾತೆಗಳಿಗೆ ಯಾವುದೇ ಹೊಂದಾಣಿಕೆಗಳ ಅಗತ್ಯವಿದೆಯೇ ಎಂಬ ಬಗ್ಗೆ ನಿರ್ಧರಿಸಲು ಸಾಧ್ಯವಾಗಿರುವುದಿಲ್ಲ. ಈ ರೀತಿ ಪುನರ್ ಪರಿಶೀಲಿಸದೇ ಇರುವ, ದೃಢೀಕರಿಸದೇ ಇರುವ ಖಾತೆಗಳ ಶಿಲ್ಕುಗಳ ಹಣಕಾಸಿನ ಪರಿಣಾಗಳು ಏನಾದರೂ ಇದ್ದಲ್ಲಿ ಗುರುತಿಸಲಾಗುವುದಿಲ್ಲ.

b) **ಒಟ್ಟು ಶಿಲ್ಕುಗಳು, ದೃಢೀಕೃತ ಶಿಲ್ಕುಗಳು ಮತ್ತು ದೃಢೀಕರಿಸಿಲ್ಲದ ಶಿಲ್ಕುಗಳ ಶೇಕಡಾವರನ್ನು ಈ ಕೆಳಗೆ ನೀಡಲಾಗಿದೆ:**

ಕ್ರಮ ಸಂಖ್ಯೆ	ವಿವರಗಳು	ಪುಸ್ತಕಗಳಂತೆ ಮೊಬಲಗು (ರೂಪಾಯಿಗಳು ಲಕ್ಷಗಳಲ್ಲಿ)	ದೃಢೀಕರಣವನ್ನು ಸ್ವೀಕರಿಸಿ ಪುನರ್ ಹೊಂದಾಣಿಕೆ ಮಾಡಲಾಗಿರುವ ಮೊಬಲಗು	ಪುನರ್ ಹೊಂದಾಣಿಕೆ ಮಾಡದ/ದೃಢೀಕರಿಸದ ಲೆಕ್ಕದ ಶಿಲ್ಕಿನ ಶೇಕಡಾವಾರು
1	ವ್ಯಾಪಾರೀ ಸ್ವೀಕಾರಾರ್ಹವಾದವು	17,090.75	–	100%
2	ವ್ಯಾಪಾರೀ ಮುಂಗಡಗಳು	1,255.70	–	100%
3	ವ್ಯಾಪಾರೀ ಪಾವತಿಸತಕ್ಕವು	8,968.42	–	100%
4	ಗ್ರಾಹಕರಿಗೆ ಮುಂಗಡ	189.63	–	100%

c) ಸಹಸಂಸ್ಥೆಗಳ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲಿ ರೂ. 710.6 ಲಕ್ಷಗಳ ವ್ಯಾಪಾರೀ ಸ್ವೀಕಾರಾರ್ಹವಾದವುಗಳು ಸೇರಿದ್ದು, ಇವುಗಳನ್ನು ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮೂಲಕ ನೇರವಾಗಿ ಕಂಪೆನಿಯ ಬ್ಯಾಂಕ್ ಖಾತೆಯ ಮೂಲಕ ಸ್ವೀಕರಿಸಲಾಗಿದ್ದು, ಆಸ್ತಿಹೊಣೆ ದಿನಾಂಕದಂದು ಇದರ ಬಗ್ಗೆ ಯಾವುದೇ ಮಾಹಿತಿಗಳೂ ಇರುವುದಿಲ್ಲ. ಬೇರೆ ಲೆಕ್ಕಪರಿಶೋಧಕರಿಗೆ (ಗಳಿಗೆ) ಈ ಖಾತೆಯ ಲೆಕ್ಕಕ್ಕೆ ತೆಗೆದುಕೊಳ್ಳುವ ಮೊಬಲಗಿನ ಬಗ್ಗೆ ಸಾಕಷ್ಟು ಸೂಕ್ತ ಲೆಕ್ಕಪರಿಶೋಧನಾ ಸಾಕ್ಷ್ಯಗಳನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ ಮತ್ತು ಇದರ ಅನುಪಸ್ಥಿತಿಯಲ್ಲಿ ವ್ಯಾಪಾರೀ ಸ್ವೀಕಾರಾರ್ಹವಾದವುಗಳು, ಮುಂಗಡಗಳು ಮತ್ತು ಗ್ರಾಹಕರ ಖಾತೆಗಳಿಂದ ಪಾವತಿಸತಕ್ಕವುಗಳು ಮತ್ತು ಗ್ರಾಹಕರಿಂದ ಮುಂಗಡಗಳ ಬಗ್ಗೆ ಖಾತೆಗಳಿಗೆ ಯಾವುದೇ ಹೊಂದಾಣಿಕೆಗಳ ಅಗತ್ಯವಿದೆಯೇ ಎಂಬ ಬಗ್ಗೆ ನಿರ್ಧರಿಸಲು ಸಾಧ್ಯವಾಗಿರುವುದಿಲ್ಲ. ಇಂತಹ ಲೆಕ್ಕಪತ್ರಗಳ ಶಿಲ್ಕುಗಳ ವಯಸ್ಸಾಗುವ ಸಾಧ್ಯತೆಗಳು ಏನಾದರೂ ಇದ್ದಲ್ಲಿ ಈ ಹೊಂದಾಣಿಕೆಗಳ ಹಣಕಾಸಿನ ಪರಿಣಾಮಗಳನ್ನು ಗುರುತಿಸಲಾಗುವುದಿಲ್ಲ.

d) ವರ್ಷಾವಧಿಯಲ್ಲಿ ಲೆಕ್ಕಪತ್ರಗಳಲ್ಲಿ ದಾಖಲಿಸಲಾಗಿರುವ ಖರೀದಿಗಳು/ಮಾರಾಟಗಳು ಮತ್ತು ವರ್ಷಾವಧಿಯ ಪ್ರತೀ ತಿಂಗಳ ಆಧಾರದ ಮೇಲೆ ಫೈಲ್ ಮಾಡಲಾಗಿರುವ ಜಿಎಸ್‌ಟಿ ರಿಟರ್ನ್‌ಗಳಿಗೂ ನಡುವೆ ವ್ಯತ್ಯಾಸಗಳು ಕಂಡುಬಂದಿರುತ್ತದೆ. ಬೇರೆ ಲೆಕ್ಕಪರಿಶೋಧಕರ (ರುಗಳ) ಸಾಕಷ್ಟು ಮಾಹಿತಿಗಳನ್ನು ಪಡೆಯಲು ಅಥವಾ ವಿವರಗಳನ್ನು ಅಥವಾ ಸೂಕ್ತ ಲೆಕ್ಕಪರಿಶೋಧನಾ ಸಾಕ್ಷ್ಯಗಳನ್ನು ಅಥವಾ ಅಂತಹ ವ್ಯತ್ಯಾಸಗಳ ಪುನರ್ ಪರಿಶೀಲನೆಯ ಅನುಪಸ್ಥಿತಿಯಲ್ಲಿ ಅಂತಹ ಅನುಸರಣೆ ಮಾಡದೇ ಇರುವ ಕಾರಣದ ಹಣಕಾಸಿನ ಪರಿಣಾಗಳನ್ನು ಗುರುತಿಸಲಾಗುವುದಿಲ್ಲ.

e) ಸಹವರ್ತಿ ಸಂಸ್ಥೆಯಾಗಿರುವ ಮಾರ್ಕೆಟಿಂಗ್ ಕಮ್ಯುನಿಕೇಶನ್ ಮತ್ತು ಅಡ್ವೈಸರಿ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಲ್ಲಿ ಒಟ್ಟು 33 ಸಿಬ್ಬಂದಿಗಳು ಇದ್ದು, ಅವರಲ್ಲಿ ವೇತನ ದಾಖಲಾತಿಗಳಲ್ಲಿರುವ 16 ಸಿಬ್ಬಂದಿಗಳನ್ನು ಮಾತ್ರ ಆಸ್ತಿ ಹೊಣೆ ತಃಖ್ತೆಯ ದಿನಾಂಕದಂದು ಇರುವಂತೆ ನಿವೃತ್ತಿ ಉಪದಾನದ ಸೇರಿಕೆ ರೀತಿಯ ಮೌಲ್ಯೀಕರಣಕ್ಕೆ ಮತ್ತು ರಜೆ ನಗದೀಕರಣಕ್ಕೆ ಪರಿಗಣಿಸಲಾಗಿದೆ. ಆಸ್ತಿಹೊಣೆ

ದಿನಾಂಕದಂದು 17 ಸಿಬ್ಬಂದಿಗಳನ್ನು ನೈಜ ಮೌಲ್ಯಮಾಪನಕ್ಕೆ ಪರಿಗಣಿಸದೇ ಇರುವ ಹಣಕಾಸಿನ ಪರಿಣಾಮಗಳೇನಾದರೂ ಇದ್ದಲ್ಲಿ ಅವುಗಳನ್ನು ಗುರುತಿಸಲಾಗಿಲ್ಲ.

f) (i) ವ್ಯಾಪಾರ ಮಾಡಲಾದ ಸಾಮಗ್ರಿಗಳು ಅಂದರೆ, ಆಮದಾದ ನದಿಯ ಮರಳು ಮತ್ತು ಔಷಧೀಯ ಉತ್ಪನ್ನಗಳ ಬಗ್ಗೆ ಸೂಕ್ತ ದಾಖಲೆಗಳನ್ನು ನಿರ್ವಹಿಸದೇ ಇರುವ/ಪರಿಷ್ಕರಣೆ ಮಾಡದೇ ಇರುವುದು (ii) ಆಡಳಿತ ವರ್ಗವು ಕಾಲಕಾಲಕ್ಕೆ ನಿರ್ವಹಿಸಿದ್ದ ಸಾಮಗ್ರಿಗಳ ಪರಿಶೀಲನೆಯ ವ್ಯವಸ್ಥೆ (ರೋಲ್ ಫಾರ್ವರ್ಡ್ ಮತ್ತು ರೋಲ್ ಬ್ಯಾಕ್ ಸೇರಿ); (iii) ಆಸ್ತಿ ಹೊಣೆ ತಃಖ್ತೆಯ ದಿನಾಂಕದಂದು ಆಮದಾದ ನದಿಯ ಮರಳಿನ ದಾಸ್ತಾನು ಇಡಲಾಗಿರುವ ಬಂದರು ಪ್ರಾಧಿಕಾರದಿಂದ ದಾಸ್ತಾನು ದೃಢೀಕರಣದ ಪಡೆಯುವಿಕೆ; (iv) ಅಂತಿಮ ಶಿಲ್ಕುಗಳ ದಾಸ್ತಾನಿನ ಪ್ರಮಾಣದ ಬಗ್ಗೆ ದೃಢೀಕರಣ ಇವುಗಳ ಅಲಭ್ಯತೆಯ ಕಾರಣದಿಂದ 31ನೇ ಮಾರ್ಚಿ 2020ರಲ್ಲಿ ಇರುವಂತೆ ಕ್ರಮವಾಗಿ ರೂ. 1872 ಲಕ್ಷಗಳು ಮತ್ತು ರೂ. 340.13 ಲಕ್ಷಗಳ ಆಮದಾದ ನದಿಯ ಮರಳಿನ ದಾಸ್ತಾನು ಮತ್ತು ಔಷದೀಯ ಉತ್ಪನ್ನಗಳ ದಾಸ್ತಾನಿನ ಅಂತಿಮ ಶಿಲ್ಕಿನ ಪರಿಮಾಣದ ನೈಜತೆಯ ಬಗ್ಗೆ ಮತ್ತು/ಅಥವಾ ಅದರ ಮೌಲ್ಯದ ಬಗ್ಗೆ ಹೇಳಿಕೆ ನೀಡಲು ಬೇರೆ ಲೆಕ್ಕಪರಿಶೋಧಕರು (ಗಳು) ನಾವು ಅಸಮರ್ಥರಾಗಿರುತ್ತಾರೆ.

g) ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಇದರ ಅಂಗಸಂಸ್ಥೆಯಾದ ಎಂಸಿಟಿಎಲ್ (ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪೆನಿ ಲಿಮಿಟೆಡ್) ಪ್ರಕರಣದಲ್ಲಿ, ಇದು 1986ರಿಂದ ಯಾವುದೇ ಉತ್ಪಾದನಾ ಚಟುವಟಿಕೆಯನ್ನು ನಿರ್ವಹಿಸುತ್ತಿಲ್ಲವಾದ ಕಾರಣದಿಂದ ಅದು ಗೋಯಿಂಗ್ ಕನ್‌ಸರ್ನ್ ಆಗಿರುವುದಿಲ್ಲ. ಕಂಪೆನಿಯಲ್ಲಿ ಕೂಡಿಬಂದಿರುವ ನಷ್ಟ ರೂ. 843.72ಲಕ್ಷಗಳು ಇದ್ದು, ಅದರ ನೆಟ್‌ವರ್ಥ್ ನಶಿಸಿಹೋಗಿರುತ್ತದೆ. ಆ ದಿನಾಂಕದಲ್ಲಿ, ಕಂಪೆನಿಯ ನಿವ್ವಳ ಹೊಣೆಗಾರಿಕೆಯು ಅದರ ನಿವ್ವಳ ಆಸ್ತಿಗಿಂತ ರೂ. 767.97 ಲಕ್ಷಗಳಷ್ಟು ಹೆಚ್ಚಾಗಿರುತ್ತದೆ. ಈ ಘಟನೆಗಳು ಅಥವಾ ಪರಿಸ್ಥಿತಿಗಳು ಹಾಗೂ ಕೆಲವೊಂದು ನಿರ್ದಿಷ್ಟ ವಿಷಯಗಳು ಭೌತಿಕ ಅನಿಶ್ಚಿತತೆಯನ್ನು ಸೂಚಿಸುತ್ತಿದ್ದು, ಕಂಪೆನಿಯು ಗೋಯಿಂಗ್ ಕನ್‌ಸರ್ನ್ ಆಗಿ ಮುಂದುವರಿಯುವ ಸಾಮರ್ಥ್ಯದ ಬಗ್ಗೆ ಗಮನಾರ್ಹವಾದ ಅನುಮಾನವನ್ನು ಸೂಚಿಸುತ್ತದೆ.

h) ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಇದರ ಅಂಗಸಂಸ್ಥೆಯಾದ ಎಂಸಿಟಿಎಲ್ (ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪೆನಿ ಲಿಮಿಟೆಡ್) ಪ್ರಕರಣದಲ್ಲಿ, ಸಂಸ್ಥೆಯು ಎಂಎಸ್‌ಐಎಲ್, ಕೆಎಸ್‌ಐಐಡಿಸಿ, ಮತ್ತು ಕರ್ನಾಟಕ ಸರ್ಕಾರದಿಂದ ಪಡೆದಿರುವ ಸಾಲದ ಮೇಲಿನ ಬಡ್ಡಿಯ ಮೊಬಲಗು ಚಾಲ್ತಿ ವರ್ಷಕ್ಕೆ ರೂ. 5.48 ಲಕ್ಷಗಳು ಮತ್ತು 1ನೇ ಏಪ್ರಿಲ್ 1999ರಿಂದ ರೂ. 126.65 ಲಕ್ಷಗಳಿಗೆ ಉಪಬಂಧವನ್ನು ಒದಗಿಸಿರುವುದಿಲ್ಲ. ಈ ಬಡ್ಡಿಗೆ ಉಪಬಂಧವನ್ನು ಕಲ್ಪಿಸಿದ್ದಲ್ಲಿ, 31ನೇ ಮಾರ್ಚಿ, 2020ರ ವರ್ಷಾಂತ್ಯದಲ್ಲಿ ಇರುವಂತೆ ವರ್ಷಾವಧಿಯ ಲಾಭ ರೂ. 4.39 ಲಕ್ಷಗಳಿಗೆ ಎದುರಾಗಿ 31ನೇ ಮಾರ್ಚಿ 2020ರ ವರ್ಷದ ಅಂತ್ಯದಲ್ಲಿ ವರ್ಷದ ನಷ್ಟವು ರೂ. 1.90 ಲಕ್ಷಗಳು ಆಗಿರುತ್ತಿತ್ತು. ಚಾಲ್ತಿ ವರ್ಷದಲ್ಲಿ ಚಾಲ್ತಿ ಹೊಣೆಗಾರಿಕೆಯನ್ನು ರೂ. 5.48 ಲಕ್ಷಗಳ ಮಟ್ಟಿಗೆ ಕಡಿಮೆ ತೋರಿಸಲಾಗಿರುತ್ತದೆ.

i) ಆಸ್ತಿಹೊಣೆ ತಃಖ್ತೆಯ ದಿನಾಂಕದಂದು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಇದರ ಅಂಗಸಂಸ್ಥೆಯಾದ ಮಾರ್ಕೆಟಿಂಗ್ ಕಮ್ಯುನಿಕೇಷನ್ಸ್ & ಅಡ್ವರ್‌ಟೈಸಿಂಗ್ ಲಿಮಿಟೆಡ್ (ಎಂಸಿಎ), ಅವರ ವ್ಯಾಪಾರೀ ಸ್ವೀಕಾರಾರ್ಹವಾದವುಗಳು, ಮುಂಗಡಗಳು, ಗ್ರಾಹಕರಿಂದ ಪಾವತಿಸತಕ್ಕವುಗಳು ಮತ್ತು ಮುಂಗಡಗಳನ್ನು ಎದರು ಪಕ್ಷದವರಿಂದ ಆಸ್ತಿಹೊಣೆ ತಃಖ್ತೆಯ ದಿನಾಂಕದಂದು ಪುನರ್ ಪರಿಶೀಲನೆಯನ್ನಾಗಲೀ, ದೃಢೀಕರಣವನ್ನಾಗಲೀ ಮಾಡಿರುವುದಿಲ್ಲ. ಆಸ್ತಿಹೊಣೆ ತಃಖ್ತೆಯ ದಿನಾಂಕದಂದು ಬೇರೆ ಲೆಕ್ಕಪರಿಶೋಧಕರಿಗೆ (ಗಳಿಗೆ) ಈ ಖಾತೆಯ ಲೆಕ್ಕಕ್ಕೆ ತೆಗೆದುಕೊಳ್ಳುವ ಮೊಬಲಗಿನ ಬಗ್ಗೆ ಸಾಕಷ್ಟು ಸೂಕ್ತ ಲೆಕ್ಕಪರಿಶೋಧನಾ ಸಾಕ್ಷ್ಯಗಳನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ ಮತ್ತು ಇದರ ಅನುಪಸ್ಥಿತಿಯಲ್ಲಿ ಈ ಖಾತೆಗಳಿಗೆ ಯಾವುದೇ ಹೊಂದಾಣಿಕೆಗಳ ಅಗತ್ಯವಿದೆಯೇ ಎಂಬ ಬಗ್ಗೆ ನಿರ್ಧರಿಸಲು ಸಾಧ್ಯವಾಗಿರುವುದಿಲ್ಲ. ಇದರ ಅಲಭ್ಯತೆಯಿಂದಾಗಿ ಲೆಕ್ಕಪತ್ರಗಳಿಗೆ ಯಾವುದಾದರೂ ಹೊಂದಾಣಿಕೆ ಮಾಡುವುದು ಅಗತ್ಯವಿದೆಯೇ ಎಂಬ ಬಗ್ಗೆ ನಿರ್ಧರಿಸಲು ನಾವು ಅಸಮರ್ಥರಾಗಿದೇವೆ. ಈ ರೀತಿ ಪುನರ್‌ಪರಿಶೀಲಿಸದೇ ಇರುವ ಅಥವಾ ದೃಢೀಕರಿಸದೇ ಇರುವ ಖಾತೆಗಳ ಶಿಲ್ಕುಗಳ ಹಣಕಾಸಿನ ಪರಿಣಾಗಳು ಏನಾದರೂ ಇದ್ದಲ್ಲಿ ಗುರುತಿಸಲಾಗುವುದಿಲ್ಲ.

j) ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಇದರ ಅಂಗಸಂಸ್ಥೆಯಾದ ಮಾರ್ಕೆಟಿಂಗ್ ಕಮ್ಯುನಿಕೇಷನ್ & ಅಡ್ವರ್‌ಟೈಸಿಂಗ್ ಲಿಮಿಟೆಡ್‌ನ (ಎಂಸಿಎ) ದಿನಾಂಕ 18ನೇ ಜೂನ್, 2019ರಂದು ನಡೆದ ಮಂಡಳಿಯ ಸಭೆಯಲ್ಲಿ ಸ್ವೀಕಾರಾರ್ಹವಾದವುಗಳು ಖಾತೆಗೆ ಗ್ರಾಹಕರಾದ ಮೆ. ಪಬ್ಲಿಕ್ ವರ್ಕ್ಸ್, ಬಂದರುಗಳು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ವಿಜಯಪುರ ಇವರಿಂದ ವಿಜಯಪುರ ಶಾಖಾ ವ್ಯವಸ್ಥಾಪಕರಾಗಿದ್ದ ಶ್ರೀ ಎಂ.ಎಸ್. ಪಾಟೀಲ ಅವರು ಹಳೆಯ ಬಾಕಿ ಬಾಬ್ತು ವಸೂಲಿ ಮಾಡಿರುವ ಮೊಬಲಗು ರೂ. 39.29ಲಕ್ಷಗಳನ್ನು ಕಂಪೆನಿಯ ಖಾತೆಯಲ್ಲಿ ಸ್ವೀಕರಿಸಲ್ಪಟ್ಟಿಲ್ಲ. ಅದರಂತೆ, ಜಲನಗರ ಪೊಲೀಸ್ ಠಾಣೆ, ಬಿಜಾಪುರ ಇಲ್ಲಿ ದಿನಾಂಕ 30ನೇ ಮೇ, 2019ರಲ್ಲಿ ಎಫ್‌ಐಆರ್‌ನ್ನು ದಾಖಲಿಸಲಾಗಿರುತ್ತದೆ. ವರ್ಷಾವಧಿಯಲ್ಲಿ ರೂ. 39.29 ಲಕ್ಷಗಳನ್ನು ವಸೂಲಿ ಮಾಡಿರುವುದರಿಂದ ಮೇಲ್ಕಂಡ ಎಫ್‌ಐಆರ್‌ನ್ನು ವಾಪಾಸು ಪಡೆಯಲಾಗಿದೆ.

ಆದರೆ, ಬೇರೆ ಲೆಕ್ಕಪರಿಶೋಧಕರಿಗೆ (ಗಳಿಗೆ) ತಿಳಿಸಿರುವಂತೆ ಸಾರ್ವಜನಿಕ ಸೇವಕರಿಂದ (ನಿವೃತ್ತ ನ್ಯಾಯಾಧೀಶರು) ಪ್ರಾರಂಭಿಸಿರುವ ಇಲಾಖಾ ವಿಚಾರಣೆಯು ಇನ್ನೂ ಇತ್ಯರ್ಥವಾಗಬೇಕಾಗಿರುತ್ತದೆ. ಮೇಲೆ ತಿಳಿಸಲಾಗಿರುವ ಮೊಬಲಗು ರೂ. 39.29 ಲಕ್ಷಗಳನ್ನು ವಸೂಲಿ ಮಾಡಲಾಗಿದ್ದು, ಬಡ್ಡಿಯನ್ನು ವಸೂಲಿ ಮಾಡಿರುವುದಿಲ್ಲ.

ಹಟ್ಟಿ ಚಿನ್ನದ ಗಣಿ:

9) ಹಿಡುವಳಿ ಕಂಪೆನಿಯ ಸಹಸಂಸ್ಥೆಗಳಲ್ಲಿ ಒಂದಾಗಿರುವ – ಹಟ್ಟಿ ಗೋಲ್ಡ್ ಮೈನ್ಸ್ ಕಂಪೆನಿ ಲಿಮಿಟೆಡ್ ಇವರಿಗೆ ಸಂಬಂಧಿಸಿದಂತೆ, ಸಹಸಂಸ್ಥೆಯ ಹಣಕಾಸಿನ ಕೋಷ್ಟಕಗಳ/ ಹಣಕಾಸಿನ ಮಾಹಿತಿಗಳ ಲೆಕ್ಕಪರಿಶೋಧನೆ ನಡೆಸಿರುವ ಬೇರೆ ಲೆಕ್ಕಪರಿಶೋಧಕರು ದಿನಾಂಕ 18ನೇ ಸೆಪ್ಟೆಂಬರ್, 2019ರ ವರದಿಯಲ್ಲಿ ಈ ಕೆಳಗೆ ಕಂಡಂತೆ ವರದಿ ಮಾಡಿರುತ್ತಾರೆ:

a) ಬೇರೆ ಲೆಕ್ಕಪರಿಶೋಧಕರಿಂದ ವರದಿ ಮಾಡಲ್ಪಟ್ಟಿರುವುದೇನೆಂದರೆ, ದಿ ಹಟ್ಟಿ ಗೋಲ್ಡ್ ಮೈನ್ಸ್ ಕಂಪೆನಿಯು ನೌಕರರಿಗೆ ರೂ. 3647.45 ಲಕ್ಷ ರೂಪಾಯಿಗಳ ಮುಂಗಡ ಪಾವತಿ ಮಾಡಿರುತ್ತದೆ ಮತ್ತು ಹಣಕಾಸಿನ ವರ್ಷ 2008–09 ಮತ್ತು ಹಣಕಾಸಿನ ವರ್ಷ 2018–19ಕ್ಕೆ ಸಂಬಂಧಿಸಿದಂತೆ ಪುಸ್ತಕಗಳಲ್ಲಿ ಸಿಬ್ಬಂದಿ ಸೌಲಭ್ಯ ವೆಚ್ಚಗಳು (ಪಾವತಿಸಬೇಕಾಗಿದ್ದು) –ಎಕ್ಸ್‌ಗ್ರೇಷಿಯಾ & ಪಿ&ಎಲ್ ಬೋನಸ್‌ಗೆ ಸಂಬಂಧಿಸಿದ ಉಪಬಂಧ ರೂ. 3647.45 ಲಕ್ಷಗಳನ್ನು ಕರ್ನಾಟಕ ಸರ್ಕಾರದಿಂದ ಒಪ್ಪಿಗೆಗೆ ಒಳಪಟ್ಟು ಲೆಕ್ಕದಲ್ಲಿ ಹಿಡಿದಿಟ್ಟುಕೊಳ್ಳಲಾಗಿರುತ್ತದೆ. ಈ ಮೊಬಲಗುಗಳನ್ನು ಸಂಬಂದಪಟ್ಟ ವರ್ಷಗಳಲ್ಲಿ ನೌಕರರಿಗೆ ಈಗಾಗಲೇ ಪಾವತಿಸಿರುವುದರಿಂದ, ಈ ಮೊಬಲಗನ್ನು ಹಣಕಾಸಿನ ಕೋಷ್ಟಕದಲ್ಲಿ ತೋರಿಸುವುದರಿಂದ ಖಾತೆಯಲ್ಲಿ 'ಆಸ್ತಿಗಳು–ಮುಂಗಡಗಳು' ಮೌಲ್ಯವನ್ನು ಅಷ್ಟು ಮೊಬಲಗಿನಿಂದ ಹೆಚ್ಚಿಸಿರುವುದಕ್ಕೆ ಕಾರಣವಾಗಿರುತ್ತದೆ.

b) ಎಎಸ್–8ಕ್ಕೆ ಅನುಸಾರವಾಗಿ ಪ್ರಾರಂಭಿಕ ಅನ್ವಯಿಸುವಿಕೆಯ ಅವಧಿಯಲ್ಲಿ ಹಣಕಾಸಿನ ಕೋಷ್ಟಕಗಳ ಮೇಲೆ ಸಂಭಾವ್ಯ ಪರಿಣಾಮದ ಬಗ್ಗೆ ಐಎನ್‌ಡಿ ಎಎಸ್–8ನ್ನು (ಐಎನ್‌ಡಿ ಎಎಸ್–103, ಐಎನ್‌ಡಿ ಎಎಸ್–107, ಐಎನ್‌ಡಿ ಎಎಸ್–109, ಐಎನ್‌ಡಿ ಎಎಎಸ್ 116, ಐಎನ್‌ಡಿ ಎಎಸ್ –1, ಐಎನ್‌ಡಿ ಎಎಸ್ 8, ಐಎನ್‌ಡಿ ಎಎಸ್–10, ಐಎನ್‌ಡಿ ಎಎಸ್–34 ಮತ್ತು ಐಎನ್‌ಡಿ ಎಎಸ್–337 ತಿದ್ದುಪಡಿಯಾಗಿರುವಂತೆ) ಹೊರಡಿಸಲಾಗಿದೆಯಾದರೂ ಆಸ್ತಿ ಹೊಣೆ ತಃಖ್ತೆಯ ದಿನಾಂಕದಂದು ಜಾರಿಗೊಳಿಸಲಾಗಿರುವುದಿಲ್ಲ ಹಾಗೂ ಲೆಕ್ಕಪತ್ರಗಳ ಭಾಗವಾಗಿರುವ ಲೆಕ್ಕಪತ್ರಗಳಿಗೆ ಟಿಪ್ಪಣಿಯ ರೂಪದಲ್ಲಿ ಘೋಷಿಸಲಾಗಿರುವುದಿಲ್ಲ.

10) 31ನೇ ಮಾರ್ಚ್ 2020ರಲ್ಲಿ ಇರುವಂತೆ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲಿ ರೂ. 3724.89 ಲಕ್ಷಗಳ ಗುಂಪಿನ ನಿವ್ವಳ ಲಾಭದ ಭಾಗವೂ (ಮತ್ತು ಇತರೆ ಸಮಗ್ರ ಆದಾಯ) ಒಳಗೊಂಡಿದ್ದು, ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲಿ ಪರಿಗಣಿಸಲ್ಪಟ್ಟಿರುವಂತೆ, ಸಹಸಂಸ್ಥೆಯಾದ ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತಕ್ಕೆ ಸಂಬಂಧಿಸಿದಂತೆ, ಅವರ ಲೆಕ್ಕಪರಿಶೋಧಿತ ಹಣಕಾಸಿನ ಕೋಷ್ಟಕಗಳನ್ನು/ ಹಣಕಾಸಿನ ಮಾಹಿತಿಗಳನ್ನು ನಮಗೆ ಲಭ್ಯವಾಗುವಂತೆ ಮಾಡಿರುವುದಿಲ್ಲ. ಈ ಲೆಕ್ಕಪರಿಶೋಧಿಸದೇ ಇರುವ ಹಣಕಾಸಿನ ಕೋಷ್ಟಕಗಳನ್ನು/ ಹಣಕಾಸಿನ ಮಾಹಿತಿಗಳನ್ನು ನಮಗೆ ಆಡಳಿತ ಮಂಡಳಿಯು ಒದಗಿಸಿರುತ್ತದೆ. ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳು, ಅವು ಸಹಸಂಸ್ಥೆಗಳಿಗೆ ಸಂಬಂಧಿಸಿದ ಮೊಬಲಗುಗಳು ಮತ್ತು ಘೋಷಣೆಗಳಿಗೆ ಸಂಬಂಧಿಸಿರುವವರೆಗೆ ಮತ್ತು ಕಾಯಿದೆಯ ಕಂಡಿಕೆ 143ರ ಉಪ ಕಂಡಿಕೆ (3) ಶರತ್ತುಗಳ ಅನ್ವಯ ಅವುಗಳು ಮೇಲೆ ತಿಳಿಸಲಾಗಿರುವ ಸಹಸಂಸ್ಥೆಗೆ ಸಂಬಂಧ ಪಟ್ಟಿರುವವರೆಗೆ ಮಾಹಿತಿಗಳು ಲೆಕ್ಕಪರಿಶೋಧಿಸದೇ ಇರುವ ಹಣಕಾಸಿನ ಕೋಷ್ಟಕಗಳ/ಹಣಕಾಸಿನ ಮಾಹಿತಿಗಳ ಆಧಾರದ ಮಾಲೆ ಮಾತ್ರ ಆಗಿರುತ್ತದೆ.

11) ಹೋಲ್ಡಿಂಗ್ ಕಂಪೆನಿಯು ತನ್ನ ಎರಡು ಸಹಸಂಸ್ಥೆಗಳಾಗಿರುವ ಮೆ. ಭದ್ರಾವತಿ ಬಾಲಾಜಿ ಆಯಿಲ್ ಪಾಲ್ಮ್ಸ್ ಲಿಮಿಟೆಡ್ ಮತ್ತು ಸಿದ್ಧಾರ್ಥ ಮೆಟಲ್ಸ್ ಲಿಮಿಟೆಡ್ ಇವರುಗಳ ಹಣಕಾಸಿನ ಕೋಷ್ಟಕಗಳು/ಹಣಕಾಸಿನ ಮಾಹಿತಿಗಳು ಲಭ್ಯವಾಗುವಂತೆ ಮಾಡಿರುವುದಿಲ್ಲವಾದ್ದರಿಂದ ಇವರುಗಳ ನಿವ್ವಳ ಲಾಭಗಳ ಪಾಲನ್ನು ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲಿ ಸೇರಿರುವುದಿಲ್ಲ. ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಮೇಲೆ ಇವುಗಳು ಬೀರಬಹುದಾದ ಹಣಕಾಸಿನ ಪರಿಣಾಮಗಳು ಏನಾದರೂ ಇದ್ದಲ್ಲಿ ಅದನ್ನು ಗುರುತಿಸಲಾಗುವುದಿಲ್ಲ.

ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 143(10) ರಲ್ಲಿ ನಿಗಧಿಪಡಿಸಿರುವ ಲೆಕ್ಕಪರಿಶೋಧನಾ ಮಾನಕ ಗಳಿಗೆ (ಎಸ್‌ಎಗಳು) ಅನುಸಾರವಾಗಿ ನಾವು ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತೇವೆ. ಅಂತಹ ಮಾನಕಗಳ ಅಡಿಯಲ್ಲಿ ನಮ್ಮ ಜವಾಬ್ದಾರಿಗಳನ್ನು ವರದಿಯ ಆಡಿಟರ್ಸ್ ರೆಸ್ಪಾನ್ಸಿಬಿಲಿಟೀಸ್ ಫಾರ್ ದಿ ಆಡಿಟ್ ಆಫ್ ದಿ ಕನ್‌ಸಾಲಿಡೇಟೆಡ್ ಫೈನಾನ್ಶಿಯಲ್ ಸ್ಟೇಟ್‌ಮೆಂಟ್ಸ್ ವಿಭಾಗದಲ್ಲಿ ಮತ್ತಷ್ಟು ವಿವರಿಸಿದೆ. ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಅಸೋಸಿಯೇಶನ್ ಆಫ್ ಇಂಡಿಯಾ ಅವರು ಹೊರಡಿಸಿರುವ ನೀತಿಶಾಸ್ತ್ರದ ಸಂಹಿತೆಗಳ ಜೊತೆಗೆ ಕಂಪೆನಿಗಳ ಕಾಯಿದೆ, 2013ರ ಉಪಬಂಧಗಳಂತೆ ಮತ್ತು ಅದರ ಅಡಿಯಲ್ಲಿರುವ ನಿಯಮಗಳಂತೆ ಹಣಕಾಸಿನ ಕೋಷ್ಟಕಗಳ ಲೆಕ್ಕಪರಿಶೋಧನೆಗೆ ಬೇಕಾಗಿರುವ ನೀತಿಶಾಸ್ತ್ರದ ಅಗತ್ಯತೆಗಳಂತೆ ಮತ್ತು ಈ ಅಗತ್ಯತೆಗಳು ಮತ್ತು ನೀತಿಶಾಸ್ತ್ರದ ಸಂಹಿತೆಗಳೊಂದಿಗೆ ಇತರೆ ನೀತಿಶಾಸ್ತ್ರದ ಜವಾಬ್ದಾರಿಗಳನ್ನು ನಾವು ಪೂರೈಸಿದ್ದು, ನಾವು ಗ್ರೂಪ್‌ನಿಂದ ಮತ್ತು ಅದರ

ಸಹವರ್ತಿಗಳು ಮತ್ತು ಜಂಟೀ ಸಹಯೋಗದ ಸಂಸ್ಥೆಗಳಿಂದ ಸ್ವತಂತ್ರರಾಗಿರುತ್ತೇವೆ. ನಾವು ಪಡೆದಿರುವ ಲೆಕ್ಕಪರಿಶೋಧನಾ ಸಾಕ್ಷ್ಯಗಳು ನಮ್ಮ ಲೆಕ್ಕ ಪರಿಶೋಧನಾ ಅಭಿಪ್ರಾಯ ನೀಡಲು ಸೂಕ್ತ ಹಾಗೂ ಸಮರ್ಪಕ ಆಧಾರವೆಂದು ನಾವು ಭಾವಿಸುತ್ತೇವೆ.

ವಿಷಯಕ್ಕೆ ಪ್ರಾಮುಖ್ಯತೆ ಕೊಡುವಿಕೆ:

ಹಣಕಾಸಿನ ಕೋಷ್ಟಕಗಳ ಮೇಲೆ ನಮ್ಮ ಈ ಕೆಳಕಂಡ ಟಿಪ್ಪಣಿಗಳ ಕಡೆಗೆ ನಾವು ಗಮನ ಸೆಳೆದಿದ್ದು, ಈ ಕೆಳಗೆ ವಿವರಿಸಿರುವ ಹಣಕಾಸಿನ ವಿವರಗಳ ಮೇಲೆ ಪರಿಣಾಮ ಬೀರಿರುತ್ತದೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯಗಳು ಬದಲಾಯಿಸಲ್ಪಟ್ಟಿಲ್ಲ.

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ

1. ಹಣಕಾಸಿನ ಕೋಷ್ಟಕಗಳ ಮೇಲಿನ ಟಿಪ್ಪಣಿ 2.18ಕ್ಕೆ ತಮ್ಮ ಗಮನ ಸೆಳೆದಿದ್ದು, 31ನೇ ಮಾರ್ಚಿ, 2020ರ ವರ್ಷಾಂತ್ಯಕ್ಕೆ ವಿಭಾಗ IIIರ ಅನುಸೂಚಿ IIIರ ಅಡಿಯಲ್ಲಿ ಹಣಕಾಸಿನ ಕೋಷ್ಟಕಗಳನ್ನು ಸಿದ್ದಪಡಿಸಿರುವುದಕ್ಕೆ ಹಾಗೂ ಹೋಲಿಕೆಯ ಅವಧಿಯನ್ನು (ಗಳನ್ನು) ನಿರೂಪಿಸಿರುವುದಕ್ಕೆ ಕಾರಣಗಳನ್ನು ವಿವರಿಸಲಾಗಿರುತ್ತದೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯಗಳು ಬದಲಾಯಿಸಲ್ಪಟ್ಟಿಲ್ಲ.

2. ಆದಾಯ ತೆರಿಗೆ ಇಲಾಖೆಯು ಕಂಪೆನಿಯ ಮೇಲೆ ಹೊರಡಿಸಿರುವ ಹಿಂದಿನ ವರ್ಷಗಳಿಗೆ ಸಂಬಂಧಿಸಿದ ಡಿಮಾಂಡ್ ಮೊಬಲಗು ರೂ. 14,08,94,458ಕ್ಕೆ ಸಂಬಂಧಿಸಿದಂತೆ ಟಿಪ್ಪಣಿ ಸಂಖ್ಯೆ 29ನ್ನು ಗಮನಿಸಿ ಮತ್ತು ಕಂಪೆನಿಯು ಈ ಡಿಮಾಂಡನ್ನು ಸ್ವೀಕರಿಸಿದ್ದು, ವಿವಿಧ ಅಪೀಲುಗಳ ಮೂಲಕ ವ್ಯಾಜ್ಯ ಹೂಡಿರುತ್ತದೆ. ಆದ್ದರಿಂದ ಅನಿಶ್ಚಿತ ಹೊಣೆಗಾರಿಕೆಯಲ್ಲಿ ದಾಖಲಿಸಲಾಗಿದೆ.

3. ಎಂಎಸ್ಎಂಇ ಕಾಯಿದೆ, 2006ರಂತೆ ಪಾವತಿಸಬೇಕಾಗಿರುವ ಬಡ್ಡಿಗೆ ಉಪಬಂಧ ಕಲ್ಪಿಸದೇ ಇರುವ ಬಗ್ಗೆ ಟಿಪ್ಪಣಿ ಸಂಖ್ಯೆ 12ನ್ನು ದಯವಿಟ್ಟು ಗಮನಿಸಿ. ಈ ವಿಚಾರದಲ್ಲಿ ಬಡ್ಡಿ ಹೊಣೆಗಾರಿಕೆಯನ್ನು ಲೆಕ್ಕಹಾಕಲಾಗಿಲ್ಲ.

4. 31ನೇ ಮಾರ್ಚಿ 2020ರಲ್ಲಿ ಇರುವಂತೆ ಕಂಪೆನಿಯು ಹೊಂದಿರುವ ಹೂಡಿಕೆಗಳ ಮೌಲ್ಯದ ಬೀಳುವಿಕೆಯ ಪರಿಣಾಮದ ಬಗ್ಗೆ ಟಿಪ್ಪಣಿ ನಂ.6 (ii)ನ್ನು ಗಮನಿಸಿ.

ಹೋಲ್ಡಿಂಗ್ ಕಂಪೆನಿಯ ಸಹಸಂಸ್ಥೆಗಳ ಲೆಕ್ಕಪರಿಶೋಧಕರು ಹೊರಡಿಸಿರುವ ಲೆಕ್ಕಪರಿಶೋಧನಾ ವರದಿಯ ಪ್ರಮುಖ ವಿಷಯಗಳೆಂದು ಸೇರಿಸಲ್ಪಟ್ಟಿರುವ ಈ ಕೆಳಕಂಡ ವಿಷಯಗಳ ಬಗ್ಗೆ ಮಹತ್ವ ನೀಡಲು ನಾವು ಬಯಸುತ್ತೇವೆ.

ಕರ್ನಾಟಕ ಏಂಟಿ ಬಯೋಟಿಕ್ಸ್ & ಫಾರ್ಮಾಸ್ಯೂಟಿಕಲ್ಸ್ ಲಿಮಿಟೆಡ್ (ಹೋಲ್ಡಿಂಗ್ ಕಂಪೆನಿಯ ಸಹಸಂಸ್ಥೆ)

ಸಹಸಂಸ್ಥೆಯ ಹಣಕಾಸಿನ ದಾಖಲೆಗಳಲ್ಲಿ 'ಇತರೆ ಸ್ವೀಕಾರ್ಹವಾದವುಗಳು' ಅಡಿಯಲ್ಲಿ ರೂ. 177.81 ಲಕ್ಷಗಳ ವಸೂಲಿ ಸಾಧ್ಯತೆಯ ಅನಿಶ್ಚಿತತೆಯ ಬಗ್ಗೆ ಬೇರೆ ಲೆಕ್ಕಪರಿಶೋಧಕರು ಗಮನವನ್ನು ಸೆಳೆದಿರುತ್ತಾರೆ. ಮೇಲ್ಕಂಡ ಮೊಬಲಗಿನ ವಸೂಲಿ ಸಾಧ್ಯತೆಯು ಗೌರವಾನ್ವಿತ ಹೆಚ್ಚುವರಿ ಅಪರ ಸಿಟಿ ಸಿವಿಲ್ & ಸೆಶನ್ಸ್ ಜಡ್ಜ್, ಬೆಂಗಳೂರು ಅವರ ಮುಂದೆ ಕಂಪೆನಿಯು ಹೂಡಿರುವ ದಾವೆ ಎ.ಎಸ್./2017ರ ಮೇಲೆ ನೀಡಲಾಗುವ ತೀರ್ಮಾನವನ್ನು ಅವಲಂಭಿಸಿರುತ್ತದೆ.

A. ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ (ಹೋಲ್ಡಿಂಗ್ ಕಂಪೆನಿಯ ಸಹಸಂಸ್ಥೆ)

ಕೋವಿಡ್–19 ಪಿಡುಗಿನ ಪರಿಣಾಮಗಳ ಕಾರಣದಿಂದ ಆಸ್ತಿ ಸ್ಥಾವರ ಮತ್ತು ಸಾಮಗ್ರಿಗಳು, ಸ್ವೀಕಾರಾರ್ಹವಾದವುಗಳು ಮತ್ತು ಇತರ ಆಸ್ತಿಗಳಿಗೆ ಸಂಬಂಧಿಸಿದಂತೆ ಬಗ್ಗೆ ಆಡಳಿತ ವರ್ಗದ ಊಹೆಯ ಬಗ್ಗೆ ಬೇರೆ ಲೆಕ್ಕಪರಿಶೋಧಕರು ಗಮನವನ್ನು ಸೆಳೆದಿರುತ್ತಾರೆ. ಪಿಡುಗಿನ ಕಾರಣದಿಂದಾಗಿ ಒದಗಬಹುದಾದ ಭವಿಷ್ಯದ ಅನಿಶ್ಚಿತತೆಯ ಬಗ್ಗೆ ಊಹೆಯನ್ನು ಮಾಡುವಾಗ, ಹಣಕಾಸಿನ ಕೋಷ್ಟಕಗಳ ಮೇಲೆ ಅನುಮೋದನೆಯನ್ನು ನೀಡಿದ ದಿನಾಂಕದಂದು, ಮುಂದಿನ ಒಂದು ವರ್ಷದವರೆಗೆ ಅದರ ಲಿಕ್ವಿಡಿಟಿ ಪರಿಸ್ಥಿತಿ, ಮತ್ತು ಆಂತರಿಕ ಮತ್ತು ಬಾಹ್ಯ ಮೂಲಗಳಿಂದ ಪಡೆದ ಮಾಹಿತಿಗಳ ಆಧಾರದ ಮೇಲೆ ಆಸ್ತಿಹೊಣೆ ದಿನಾಂಕದಂದು ಸಹಸಂಸ್ಥೆಯ ಕ್ರೋಢೀಕೃತ ಹಣಕಾಸಿನ ಕೋಷ್ಟಕದಲ್ಲಿ ಯಾವುದೇ ಭೌತಿಕ ಹೊಂದಾಣಿಕೆ ಅಗತ್ಯವಿಲ್ಲದಂತೆ ಆಸ್ತಿ ಸ್ಥಾವರ ಮತ್ತು ಸಾಮಗ್ರಿಗಳು, ಸ್ವೀಕಾರಾರ್ಹವಾದವುಗಳು ಮತ್ತು ಇತರ ಆಸ್ತಿಗಳ ಲೆಕ್ಕಹಾಕುವ ಮೌಲ್ಯ ಮತ್ತು ವಸೂಲಾಗುವ ಸಾಧ್ಯತೆಯ ಬಗ್ಗೆ ಮುಂದಿನ ಒಂದು ವರ್ಷದ ಆರ್ಥಿಕ ಮುನ್ನೋಟದ ಬಗ್ಗೆ ವಿವರವಾದ ಮೌಲ್ಯಮಾಪನವನ್ನು 'ಗುಂಪು' ಮಾಡಿರುತ್ತದೆ. ಅತ್ಯಂತ ಹೆಚ್ಚಿನ ಆರ್ಥಿಕ ಅನಿಶ್ಚಿತತೆಯ ಆರ್ಥಿಕ ಪರಿಸ್ಥಿತಿಯ ಕಾರಣದಿಂದಾಗಿ ಮೇಲ್ಕಂಡ ಪ್ರಮಾಣಗಳ ಬಗ್ಗೆ ನಿರ್ಣಾಯಕ ಮೌಲ್ಯಮಾಪನದಂತೆ ನಂತರದ ಅವಧಿಯಲ್ಲಿ ವಿಕಸನ ಹೊಂದುವ ಸನ್ನಿವೇಶಗಳನ್ನು ಅವಲಂಭಿಸಿರುತ್ತದೆ ಎಂದು ಬೇರೆ ಲೆಕ್ಕಪರಿಶೋಧಕರು ಅಭಿಪ್ರಾಯಪಡುತ್ತಾರೆ.

B. ದಿ ಹಟ್ಟಿ ಚಿನ್ನದ ಗಣಿ ಕಂಪೆನಿ ಲಿಮಿಟೆಡ್ (ಹೋಲ್ಡಿಂಗ್ ಕಂಪೆನಿಯ ಸಹಸಂಸ್ಥೆ)

ಸಹಸಂಸ್ಥೆಗಳ ಲೆಕ್ಕಪರಿಶೋಧನೆಯ 'ವಿಚಾರಕ್ಕೆ ಪ್ರಾಮುಖ್ಯತೆ' ಕಂಡಿಕೆಯಲ್ಲಿ ಬೇರೆ ಲೆಕ್ಕಪರಿಶೋಧಕರು ಈ ಕೆಳಕಂಡ ಅಂಶಗಳ ಬಗ್ಗೆ ಗಮನ ಸೆಳೆದಿರುತ್ತಾರೆ:

i) **ನೌಕರರ ವೇತನ ಪರಿಷ್ಕರಣೆ:** ಸಹಸಂಸ್ಥೆಯ ಆಡಳಿತ ವರ್ಗ ಮತ್ತು ನೌಕರರ ಸಂಘದ ಸದಸ್ಯರ ನಡುವೆ ನಡೆದ ಇತ್ಯರ್ಥ ಜ್ಞಾಪನ ಪತ್ರದಂತೆ ಸಿಬ್ಬಂದಿ ಮತ್ತು ನೌಕರರಿಗೆ ಹೊಸ ವೇತನ ಒಪ್ಪಂದ ಪತ್ರವನ್ನು ನಿರ್ವಹಿಸಲಾಗಿರುತ್ತದೆ ಹಾಗೂ ಅಧಿಕಾರಿಗಳ ವೇತನ ಪರಿಷ್ಕರಣೆಯನ್ನು ಜಾರಿಗೆ ತರಲಾಗಿರುತ್ತದೆ. ಈಗಾಗಲೇ ಪಾವತಿಸಿರುವ ಮಧ್ಯಂತರ ಪರಿಹಾರವನ್ನು ಹೊಂದಾಣಿಕೆ ಮಾಡಿದ ನಂತರ ಹಾಗೂ ಹಿಂದಿನ ವರ್ಷಗಳಲ್ಲಿ ಮಾಡಿರುವ ಉಪಬಂಧಗಳ ನಂತರ ವೇತನ ಮತ್ತು ಭತ್ಯೆಗಳಿಗಾಗಿ ಮತ್ತು ಅಧಿಕಾರಿಗಳ ವೇತನ ಪರಿಷ್ಕರಣೆಗೆ ರೂ. 3791.62 ಲಕ್ಷಗಳ ಮತ್ತಷ್ಟು ಉಪಬಂಧಗಳನ್ನು ವರ್ಷಾವಧಿಯಲ್ಲಿ ಮಾಡಲಾಗಿದ್ದು, ಇದನ್ನು ನೌಕರರ ಅಭಿವೃದ್ಧಿ ವೆಚ್ಚಗಳ ಅಡಿಯಲ್ಲಿ ಸೇರಿಸಲಾಗಿದೆ.

ii) ಸಹಸಂಸ್ಥೆಯ ಹಣಕಾಸಿನ ಕೋಷ್ಟಕದಲ್ಲಿ ಬೇರೆ ಲೆಕ್ಕ ಪರಿಶೋಧಕರು ಅನಿಶ್ಚಿತ ಹೊಣೆಗಾರಿಕೆಗಳು ಕಡೆಗೆ ಗಮನ ಸೆಳೆದಿದ್ದು, ಇದರಲ್ಲಿ ಹಿಂದಿನ ವರ್ಷಗಳ ಬೇಡಿಕೆಯ ಆದಾಯ ತೆರಿಗೆ, ಅಬಕಾರಿ ಮತ್ತು ಸೇವಾ ತೆರಿಗೆಗೆ ಸಂಬಂಧಿಸಿದ ಮೊಬಲಗು ರೂ. 38,271.52 ಲಕ್ಷಗಳು ಸೇರಿದ್ದು, ಇದಕ್ಕೆ ಸಹಸಂಸ್ಥೆಯು ವ್ಯಾಜ್ಯ ಹೂಡಿದೆ.

iii) ಕಂಪೆನಿಯು ಕ್ಯಾಪ್ಟಿವ್ ಚಿನ್ನ ಶುದ್ಧೀಕರಣ ಘಟಕದ ಸ್ಥಾಪನೆಯ ಬಾಬ್ತು ರೂ. 65.49 ಲಕ್ಷಗಳನ್ನು ವೆಚ್ಚಮಾಡಿದ್ದು, 2018–19 ರಲ್ಲಿ ಪರೀಕ್ಷಾರ್ಥ ಶುದ್ಧೀಕರಣ ಘಟಕ ನಡೆಸಿರುತ್ತದೆ ಮತ್ತು ನಂತರದಲ್ಲಿ ಶುದ್ಧೀಕರಣ ಪ್ರಕ್ರಿಯೆಯನ್ನು ನಿಲ್ಲಿಸಿರುತ್ತದೆ. ಘಟಕವನ್ನು ಬಂಡವಾಳೀಕರಣ ಮಾಡಿಲ್ಲ ಅಥವಾ ಸವಕಳಿಗೆ ಒಳಪಡಿಸಿಲ್ಲ ಹಾಗೂ ಆಸ್ತಿಹೊಣೆ ತಃಖ್ತೆ ದಿನಾಂಕದಂದು ಮೊಬಲಗನ್ನು ಸಿಡಬ್ಲ್ಯೂಐಪಿ ಖಾತೆಯಲ್ಲಿ ಇಡಲಾಗಿದೆ.

iv) ಜಿಎಂಎಸ್ ಯೋಜನೆಯ ಅಡಿಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಠೇವಣಿ ಇಡಲಾಗಿರುವ ಚಿನ್ನದ ಪ್ರಮಾಣದಲ್ಲಿರುವ ವ್ಯತ್ಯಾಸದ ಕಡೆಗೆ ಗಮನವನ್ನು ಸೆಳೆಯಲಾಗಿದೆ. ಠೇವಣಿಯಲ್ಲಿ ಇರಿಸಿರುವ ಚಿನ್ನದ ಪ್ರಮಾಣದ (249126.16 ಗ್ರಾಂಗಳ 999 ಅಪ್ಪಟ) ಘೋಷಣೆ ಹಾಗೂ ಠೇವಣಿ ಇರಿಸಲಾಗಿರುವ ಚಿನ್ನದ ಪ್ರಮಾಣದ (250378.05 ಗ್ರಾಂಗಳ 999 ಅಪ್ಪಟ) ನಡುವೆ ವ್ಯತ್ಯಾಸವಿದೆಯೆಂದು ಬೇರೆ ಲೆಕ್ಕಪರಿಶೋಧಕರು ಟಿಪ್ಪಣಿ ಮಾಡಿರುತ್ತಾರೆ. ಮುಂದುವರಿದಂತೆ, ಉದ್ಭವಿಸಿರುವ ವ್ಯತ್ಯಾಸದ ಬಗ್ಗೆ ನಿರ್ದಿಷ್ಟವಾಗಿ ಘೋಷಿಸಿರುವುದಿಲ್ಲ.

v) ಆರಂಭದಲ್ಲಿ ಪ್ರಗತಿಯಲ್ಲಿರುವ ಕಾಮಗಾರಿ ಮತ್ತು ಅಂತಿಮ ಪ್ರಗತಿಯಲ್ಲಿರುವ ಕಾಮಗಾರಿಯ ವ್ಯತ್ಯಾಸ 73.72 ಗ್ರಾಂಗಳ ಚಿನ್ನದ ಬಗ್ಗೆ ಸೂಕ್ತವಾಗಿ ಘೋಷಿಸಿರುವುದಿಲ್ಲ.

vi) ಗರಿಷ್ಟ ಹೊರೆಯಾಗಿರುವ ಹಾಗೂ ನಿಕೃಷ್ಟವೆಂದು ಪ್ರಮಾಣೀಕರಿಸಿದ ಅದಿರನ್ನು ಗಣಿಯ ಪ್ರದೇಶದಲ್ಲಿ ರಾಶಿಹಾಕಲಾಗಿದ್ದು, ಅದನ್ನು ಪುನರ್ ಮೌಲ್ಯಮಾಪನ ಮಾಡಲಾಗಿದ್ದು, (ಜುಲೈ 2020) 125780 ಮೆ.ಟನ್ ಎಂದು ಅಂದಾಜು ಮಾಡಲಾಗಿದ್ದು, ಇದರಲ್ಲಿ 43,109 ಮೆ. ಟನ್ ಅದಿರನ್ನು ಹಟ್ಟಿಗೆ ಸಾಗಣೆ ಮಾಡಲಾಗಿದೆ ಮತ್ತು ಬಾಕಿ 82,671 ಮೆ. ಟನ್ ಅದಿರಿನಲ್ಲಿ ಕಂಪೆನಿಯು 60000 ಮೆ.ಟನ್ ಅದಿರನ್ನು ಮಾತ್ರ ಹೊಸ ಮೌಲ್ಯಮಾಪನದಂತೆ ದಾಸ್ತಾನು ಎಂದು ಲೆಕ್ಕಹಾಕಿರುತ್ತದೆ.

C. **ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಹೋಲ್ಡಿಂಗ್ ಕಂಪೆನಿಯ ಸಹಸಂಸ್ಥೆ)**

ಕ್ರೋಢೀಕೃತ ಲೆಕ್ಕಪರಿಶೋಧನಾ ವರದಿಯಲ್ಲಿ ಬೇರೆ ಲೆಕ್ಕಪರಿಶೋಧಕರು ಕೋವಿಡ್–19 ಸಾಂಕ್ರಾಮಿಕ ರೋಗಗಳ ಪರಿಣಾಮಗಳ ಸಾಧ್ಯತೆಯ ಬಗ್ಗೆ ಆಡಳಿತ ವರ್ಗದ ಮೌಲ್ಯಮಾಪನದ ಬೇರೆ ಲೆಕ್ಕಪರಿಶೋಧಕರು ಗಮನ ಸೆಳೆದಿದ್ದು, ಆಸ್ತಿಗಳ ಲೆಕ್ಕಕ್ಕೆ ತೆಗೆದುಕೊಳ್ಳುವ ಮೌಲ್ಯವನ್ನು ಸಿದ್ದಪಡಿಸುವಾಗ ಈ ಹಣಕಾಸಿನ ಕೋಷ್ಟಕಗಳಿಗೆ ಅನುಮೋದನೆಯ ದಿನಾಂಕದವರೆಗೂ ಕಂಪೆನಿಯು ಆಂತರಿಕ ಮತ್ತು ಬಾಹ್ಯ ಮೂಲಗಳ ಮಾಹಿತಿಗಳನ್ನು ಉಪಯೋಗಿಸಿಕೊಂಡಿರುತ್ತದೆ. 31ನೇ ಮಾರ್ಚಿ 2020ರಲ್ಲಿ ಇರುವಂತೆ ಆಸ್ತಿ ಹೊಣೆ ತಃಖ್ತೆಯಲ್ಲಿ ಆಸ್ತಿಗಳ ಲೆಕ್ಕ ಹಾಕುವ ಮೊಬಲಗು ಸಂಪೂರ್ಣವಾಗಿ ವಸೂಲಾಗತಕ್ಕದ್ದೆಂದು ಗ್ರೂಪ್ ನಿರೀಕ್ಷಿಸುತ್ತದೆ. ಸಹಸಂಸ್ಥೆಯ ಆಡಳಿತ ವರ್ಗವು ಕೂಡಾ ನಗದುಗಳ ಹರಿವಿನ ಭವಿಷ್ಯದ ಮೌಲ್ಯವನ್ನು ಕೋವಿಡ್–19ರ ಪಿಡುಗಿನ ಸಂಭಾವ್ಯ ಪರಿಣಾಮಗಳ ಫಲಿತಾಂಶವನ್ನು ಅಂದಾಜು ಮಾಡಿರುತ್ತದೆ ಹಾಗೂ ಅದರ ಆಸ್ತಿಗಳನ್ನು ನಗದಾಗಿಸುವಲ್ಲಿ ಅಥವಾ ಹೊಣೆಗಾರಿಕೆಗಳ ಪಾವತಿಗೆ ಬಾಧ್ಯತೆಯ ದಿನದಂದು ಇದನ್ನು ಭರಿಸಲು ಯಾವುದೇ ರೀತಿಯ ಪ್ರತಿಕೂಲ ಪರಿಣಾಮಗಳ ಮುನ್ನೋಟವನ್ನು ನೋಡಿರಿವುದಿಲ್ಲ. ಆದ್ದರಿಂದ ಗೋಯಿಂಗ್ ಕನ್‌ಸರ್ನ್ ಮೇಲೆ ಯಾವುದೇ ಪರಿಣಾಮವೂ ಇರುವುದಿಲ್ಲ.

a) ನಂತರದಲ್ಲಿ, ಸಹಸಂಸ್ಥೆಯ ಲೆಕ್ಕಪರಿಶೋಧನೆ ನಡೆಸಿದ ಬೇರೆ ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪೆನಿಯು (ಎಂಸಿಟಿಎಲ್ – ಸಹಸಂಸ್ಥೆ ಕಂಪೆನಿಯ ಅಂಗಸಂಸ್ಥೆ) ರಸ್ತೆ ನಿರ್ಮಾಣದ ಉದ್ದೇಶಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪಡೆದ 5777 ಚದರ ಗಜ ವಿಸ್ತೀರ್ಣದ ಜಮೀನಿಗಾಗಿ ನೀಡಿದ ಪರಿಹಾರಧನದ ವಸೂಲಾತಿಯನ್ನು ಖಚಿತಪಡಿಸುವ ಅನಿಶ್ಚಿತತೆಯ ಬಗ್ಗೆ ಗಮನ ಸೆಳೆದಿರುತ್ತಾರೆ.

b) 1985–1986ರಲ್ಲಿ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಪಡೆಯಲಾಗಿರುವ ರೂ. 10.00 ಲಕ್ಷ ಮುಂಗಡಗಳಿಗೆ ಬಡ್ಡಿಗೆ ಉಪಬಂಧ ಕಲ್ಪಿಸದೇ ಇರುವ ಪರಿಣಾಮಗಳ ಬಗ್ಗೆ ಮೌಲ್ಯಮಾಪನ ಮಾಡಲು ಅಸಮರ್ಥರಾಗಿದ್ದಾರೆ ಮತ್ತು

c) ಸಾಲಗಳು ಮತ್ತು ಮುಂಗಡಗಳ ಶಿಲ್ಕುಗಳಿಗೆ ದೃಢೀಕರಣವನ್ನು ಪಡೆಯದೇ ಇರುವುದು ಹಾಗೂ ಇದರ ತತ್ಪರಿಣಾಮದ ಪ್ರಭಾವವನ್ನು ಕಂಡುಹಿಡಿಯಲು ಸಾಧ್ಯವಾಗಿರುವುದಲ್ಲದೇ, ಕಂಪೆನಿಯ ವಿರುದ್ಧ ಹೂಡಲಾಗಿರುವ ಕಾನೂನಾತ್ಮಕ ದಾವೆಗಳ ಫಲಿತಾಂಶಗಳ ಬಗ್ಗೆಯೂ ಬೇರೆ ಲೆಕ್ಕಪರಿಶೋಧಕರು ಗಮನವನ್ನು ಸೆಳೆದಿರುತ್ತಾರೆ.

ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲದ ಮಾಹಿತಿಗಳು ಮತ್ತು ಅದರ ಮೇಲೆ ಲೆಕ್ಕಪರಿಶೋಧಕರ ವರದಿ

ಇತರೆ ಮಾಹಿತಿಗಳಿಗೆ ಕಂಪೆನಿಯ ಆಡಳಿತ ವರ್ಗ ಮತ್ತು ನಿರ್ದೇಶಕರ ಮಂಡಳಿಯು ಜವಾಬ್ದಾರನಾಗಿರುತ್ತದೆ. ಲೆಕ್ಕಪರಿಶೋಧಕರ ವರದಿಯ ದಿನಾಂಕದಂದು ಪಡೆಯಲಾಗಿರುವ ಇತರೆ ಮಾಹಿತಿಗಳು ನಿರ್ದೇಶಕರ ವರದಿಯಲ್ಲಿ ಸೇರಿಸಲಾಗಿರುವ ಮಾಹಿತಿಗಳಾಗಿದ್ದರೂ, ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲಿ ಒಳಗೊಳ್ಳದೇ ಇರುವುದನ್ನು ಮತ್ತು ಅದರ ಮೇಲಿನ ಲೆಕ್ಕಪರಿಶೋಧಕರ' ವರದಿಯು ಲೆಕ್ಕ ಪರಿಶೋಧನಾ ವರದಿಯ ದಿನಾಂಕದ ನಂತರ ಸ್ವೀಕರಿಸಲ್ಪಡುವ ನಿರೀಕ್ಷೆ ಇದೆ.

ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಮೇಲೆ ನಮ್ಮ ಅಭಿಪ್ರಾಯವು ಇತರೆ ಮಾಹಿತಿಗಳನ್ನು ಒಳಗೊಂಡಿರುವುದಿಲ್ಲ ಮತ್ತು ಇದನ್ನು ಮುಕ್ತಾಯಗೊಳಿಸಿರುವ ಬಗ್ಗೆ ಯಾವುದೇ ರೀತಿಯ ಭರವಸೆಯನ್ನೂ ನೀಡುವುದಿಲ್ಲ.

ಹಣಕಾಸಿನ ಕೋಷ್ಟಕಗಳ ಮೇಲೆ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಮೇಲೆ ಗುರುತಿಸಲಾಗಿರುವ ಇತರೆ ಮಾಹತಿಗಳು ನಮ್ಮ ಜವಾಬ್ದಾರಿಯಾಗಿದ್ದು, ಹಾಗೆ ಮಾಡುವುದರಿಂದ, ಇತರೆ ಮಾಹಿತಿಗಳು ಹಣಕಾಸಿನ ಕೋಷ್ಟಕಗಳೊಂದಿಗೆ ಭೌತಿಕವಾಗಿ ಅಸ್ಥಿರವಾಗಿದ್ದು, ಅಥವಾ ಲೆಕ್ಕಪರಿಶೋಧನೆಯಲ್ಲಿ ನಾವು ಪಡೆದಿರುವ ಜ್ಞಾನವು ಅಥವಾ ಇಲ್ಲದಿರುವಿಕೆಯು ಭೌತಿಕವಾಗಿ ತಪ್ಪು ಹೇಳಿಕೆಯಾಗಿರುತ್ತದೆ.

ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಮೇಲೆ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಮೇಲೆ ಗುರುತಿಸಲಾಗಿರುವ ಇತರೆ ಮಾಹತಿಗಳನ್ನು ಓದುವುದು ನಮ್ಮ ಜವಾಬ್ದಾರಿಯಾಗಿದ್ದು, ಹಾಗೆ ಮಾಡುವುದರಿಂದ, ಇತರೆ ಮಾಹಿತಿಗಳು ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳೊಂದಿಗೆ ಭೌತಿಕವಾಗಿ ಅಸ್ಥಿರವಾಗಿದ್ದು, ಅಥವಾ ಲೆಕ್ಕಪರಿಶೋಧನೆಯಲ್ಲಿ ನಾವು ಪಡೆದಿರುವ ಜ್ಞಾನವು ಅಥವಾ ಇಲ್ಲದಿರುವಿಕೆಯು ಭೌತಿಕವಾಗಿ ತಪ್ಪು ಹೇಳಿಕೆಯಾಗಿರುತ್ತದೆ.

ಒಂದು ವೇಳೆ, ನಾವು ನಿರ್ವಹಿಸಿರುವ ಕೆಲಸದ ಆಧಾರದ ಮೇಲೆ ಈ ಇತರೆ ಮಾಹಿತಿಗಳು ತಪ್ಪಾಗಿ ದಾಖಲಿಸಲ್ಪಟ್ಟಿವೆಯೆಂದು ನಾವು ತೀರ್ಮಾನಿಸಿದಲ್ಲಿ, ಆ ಅಂಶವನ್ನು ನಾವು ವರದಿ ಮಾಡುವ ಅಗತ್ಯ ಇರುತ್ತದೆ. ನಾವು ಇತರೆ ಮಾಹಿತಿಗಳನ್ನು ಓದುವಾಗ, ಅದರಲ್ಲಿ ಒಂದು ಭೌತಿಕ ತಪ್ಪು ಹೇಳಿಕೆ ಇದೆಯೆಂದು ನಾವು ತೀರ್ಮಾನಕ್ಕೆ ಬಂದಲ್ಲಿ, ಆಡಳಿತದೊಂದಿಗೆ ಗುರುತಿಸಿಕೊಂಡಿರುವವರಿಗೆ ನಾವು ವಿಷಯವನ್ನು ತಿಳಿಸಬೇಕಾಗಿರುತ್ತದೆ.

ಕ್ರೋಢೀಕೃತ ಹಣಕಾಸಿನ ಕೋಷ್ಟಕಕ್ಕೆ ಆಡಳಿತ ವರ್ಗದ ಮತ್ತು ಅಧಿಕಾರಕ್ಕೆ ಸಂಬಂಧಿಸಿರುವವರ ಜವಾಬ್ದಾರಿಗಳು

ಕಾಯಿದೆಯ ಕಂಡಿಕೆ 134(5)ರಲ್ಲಿ ಉಲ್ಲೇಖಿಸಿರುವಂತೆ ಸಹಸಂಸ್ಥೆಗಳು ಮತ್ತು ಜಂಟೀ ಸಹಯೋಗ ಸಂಸ್ಥೆಗಳೂ ಸೇರಿದಂತೆ ಗ್ರೂಪಿನ ಕ್ರೋಢೀಕೃತ ಹಣಕಾಸಿನ ಸ್ಥಿತಿಯ, ಕ್ರೋಢೀಕೃತ ಹಣಕಾಸಿನ ಕಾರ್ಯಕ್ಷಮತೆ, ಕ್ರೋಢೀಕೃತ ಈಕ್ವಿಟಿಯಲ್ಲಿ ಬದಲಾವಣೆ ಹಾಗೂ ಕ್ರೋಢೀಕೃತ ನಗದು ಹರಿವಿನ ನೈಜ ಮತ್ತು ಸಮರ್ಪಕ ಚಿತ್ರಣವನ್ನು ನೀಡುವ ಕಂಪೆನಿಯ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಸಿದ್ದಪಡಿಸುವಿಕೆಗೆ ಐಎನ್‌ಡಿ ಎಎಸ್ ಮತ್ತಿತರ ಲೆಕ್ಕಪತ್ರ ಮಾನಕವನ್ನೊಳಗೊಂಡಂತೆ ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿರತಕ್ಕ ಲೆಕ್ಕಪತ್ರ ನೀತಿಗಳಿಗೆ ಅನುಗುಣವಾಗಿ ಕಂಪೆನಿಯ ಕ್ರೋಢೀಕೃತ ಹಣಕಾಸಿನ ನಿರ್ವಹಣೆಯು ಹೋಲ್ಡಿಂಗ್ ಕಂಪೆನಿಯ ಆಡಳಿತ ವರ್ಗ ಮತ್ತು ನಿರ್ದೇಶಕರ ಮಂಡಳಿಯವರ ಜವಾಬ್ದಾರಿಯಾಗಿರುತ್ತದೆ. ಕಾಯಿದೆಯ ಉಪಬಂಧಗಳಂತೆ ಕಂಪೆನಿಯ ಆಸ್ತಿಗಳ ರಕ್ಷಣೆಗಾಗಿ ಸೂಕ್ತವಾದ ಲೆಕ್ಕಪತ್ರ ದಾಖಲೆಗಳನ್ನು ನಿರ್ವಹಿಸುವುದು, ಹಾಗೂ ವಂಚನೆ ಮತ್ತು ಇತರ ಅಕ್ರಮಗಳನ್ನು ಕಂಡುಹಿಡಿಯಲು ಮತ್ತು ತಡೆಗಟ್ಟಲು ಅನುವಾಗುಂತೆ ಲೆಕ್ಕಪತ್ರ ದಾಖಲಾತಿಗಳನ್ನು ಸಮರ್ಪಕವಾಗಿ ಕಾಪಾಡುವುದು; ಸೂಕ್ತವಾದ ಲೆಕ್ಕಪತ್ರ ನೀತಿಗಳನ್ನು ಆಯ್ಕೆ ಮಾಡಿಕೊಂಡು ಅನ್ವಯಿಸುವುದು; ಜವಾಬ್ದಾರಿಯುತ ಮತ್ತು ವಿವೇಕಯುತ ತೀರ್ಮಾನ ಮತ್ತು ಅಂದಾಜನ್ನು ಮಾಡುವುದು; ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯನ್ನು ವಿನ್ಯಾಸಗೊಳಿಸಿ, ಕಾರ್ಯರೂಪಕ್ಕೆ ತಂದು, ನಿರ್ವಹಿಸಿಕೊಂಡು ಹೋಗುವ ಮೂಲಕ ಲೆಕ್ಕಪತ್ರಗಳ ದಾಖಲಾತಿಗಳು ನಿಖರವಾಗಿ ಹಾಗೂ ಪರಿಪೂರ್ಣವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು; ಹಣಕಾಸಿನ ಕೋಷ್ಟಕಗಳನ್ನು ಸಿದ್ದಪಡಿಸುವಿಕೆ ಮತ್ತು ಪ್ರಸ್ತುತಪಡಿಸುವಿಕೆಗೆ ಸಂಬಂಧಿಸಿದಂತೆ ವಂಚನೆ ಅಥವಾ ತಪ್ಪಿನ ಕಾರಣದಿಂದ ಭೌತಿಕ ತಪ್ಪು ಹೇಳಿಕೆಗಳಿಂದ ಮುಕ್ತವಾದ ನೈಜ ಮತ್ತು ಸಮರ್ಪಕ ಚಿತ್ರಣವನ್ನು ನೀಡಿರುವುದನ್ನು ಉಪಯೋಗಿಸಿಕೊಂಡು ಮೇಲೆ ಹೇಳಿರುವಂತೆ ಸ್ಟಾಂಡ್‌ಅಲೋನ್ ಹಣಕಾಸಿನ ಕೋಷ್ಟಕಗಳನ್ನು ಸಿದ್ದಪಡಿಸಿರುವುದೂ ಕೂಡಾ ಸಂಬಂದಪಟ್ಟ ಸಹಸಂಸ್ಥೆಗಳು ಮತ್ತು ಜಂಟೀ ಸಹಯೋಗ ಕಂಪೆನಿಗಳನ್ನೂ ಒಳಗೊಂಡಂತೆ ಗ್ರೂಪಿನ ಕಂಪೆನಿಗಳ ನಿರ್ದೇಶಕರುಗಳ ಮಂಡಳಿ ಜವಾಬ್ದಾರಿಯಲ್ಲಿ ಸೇರಿರುತ್ತದೆ.

ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳನ್ನು ಸಿದ್ದಪಡಿಸುವಲ್ಲಿ, ಕಂಪೆನಿಯು ಗೋಯಿಂಗ್ ಕನ್‌ಸರ್ನ್ ಆಗಿ ಮುಂದುವರಿಯಲು, ಕಂಪೆನಿಯ ಸಾಮರ್ಥ್ಯದ ಮೌಲ್ಯಮಾಪನ ಮಾಡಲು, ಆಡಳಿತ ವರ್ಗವು ಕಂಪೆನಿಯನ್ನು ಸಮಾಪನಗೊಳಿಸಲು ಅಥವಾ ತನ್ನ ಚಟುವಟಿಕೆಗಳನ್ನು ಸ್ಥಗಿತಗೊಳಿಸಲು ತೀರ್ಮಾನಿಸದೇ ಇದ್ದಲ್ಲಿ, ಅಥವಾ ಹಾಗೆ ಮಾಡಲು ನೈಜ ಬದಲೀ ವ್ಯವಸ್ಥೆ ಇಲ್ಲದಿದ್ದಲ್ಲಿ ಹಾಗೆ ಮಾಡಬೇಕಾಗಿದ್ದಲ್ಲಿ ಲೆಕ್ಕಪತ್ರಗಳನ್ನು ಗೋಯಿಂಗ್ ಕನ್‌ಸರ್ನ್ ಆಗಿ ಅನ್ವಯಿಸಲು, ಘೋಷಿಸಲು ಸಹಸಂಸ್ಥೆಗಳು ಮತ್ತು ಜಂಟೀ ಸಹಯೋಗ ಸಂಸ್ಥೆಗಳೂ ಸೇರಿದಂತೆ ಗ್ರೂಪಿನಲ್ಲಿರುವ ಸಂಬಂದಪಟ್ಟ ಕಂಪೆನಿಯ ನಿರ್ದೇಶಕರ ಮಂಡಳಿಯ ಆಡಳಿತ ವರ್ಗವು ಜವಾಬ್ದಾರನಾಗಿರುತ್ತದೆ.

ಪ್ರತೀ ಕಂಪೆನಿಯ ಹಣಕಾಸಿನ ವರದಿ ಮಾಡುವಿಕೆಯ ಪ್ರಕ್ರಿಯೆಯ ಮೇಲುಸ್ತುವಾರಿಯನ್ನು ನೋಡಿಕೊಳ್ಳುವುದೂ ಕೂಡಾ ಸಹಸಂಸ್ಥೆಗಳು ಮತ್ತು ಜಂಟೀ ಸಹಯೋಗ ಸಂಸ್ಥೆಗಳೂ ಸೇರಿದಂತೆ ಗ್ರೂಪಿನಲ್ಲಿರುವ ಸಂಬಂದಪಟ್ಟ ಕಂಪೆನಿಯ ನಿರ್ದೇಶಕರ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು

ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳು ಒಟ್ಟಾರೆಯಾಗಿ ಮೋಸದ ಅಥವಾ ತಪ್ಪಿನ ಕಾರಣಗಳಿಂದ ಭೌತಿಕ ತಪ್ಪು ಹೇಳಿಕೆಗಳಿಂದ ಹೊರತಾಗಿದೆಯೆಂಬ ಬಗ್ಗೆ ಸಮರ್ಪಕವಾದ ಭರವಸೆಯನ್ನು ನೀಡುವುದು ಮತ್ತು ನಮ್ಮ ಅಭಿಪ್ರಾಯವು ಸೇರಿರುವ ಲೆಕ್ಕಪರಿಶೋಧಕರ ವರದಿಯನ್ನು ಹೊರಡಿಸುವುದು ನಮ್ಮ ಧ್ಯೇಯವಾಗಿರುತ್ತದೆ. ಸಮರ್ಪಕವಾದ ಭರವಸೆಯು ಉನ್ನತ ಮಟ್ಟದ ಭರವಸೆಯಾಗಿದ್ದರೂ ಕೂಡಾ, ಎಸ್‌ಎಗಳಿಗೆ ಅನುಸಾರವಾಗಿ ನಿರ್ವಹಿಸಲಾಗಿರುವ ಲೆಕ್ಕಪರಿಶೋಧನೆಯು ಭೌತಿಕ ತಪ್ಪು ಹೇಳಿಕೆಗಳು ಇದ್ದಲ್ಲಿ ಯಾವಾಗಲೂ ಅದನ್ನು ಕಂಡುಹಿಡಿಯುತ್ತದೆ. ತಪ್ಪು ಹೇಳಿಕೆಗಳು ಮೋಸದ ಅಥವಾ ತಪ್ಪಿನಿಂದ ಬರಬಹುದಾಗಿದ್ದು, ವೈಯಕ್ತಿಕವಾಗಿ ಅಥವಾ ಒಟ್ಟಾರೆಯಾಗಿ ಅವುಗಳು ಸಮಂಜಸವಾಗಿ ಉಪಯೋಗಿಸುವವರ ಆರ್ಥಿಕ ತೀರ್ಮಾನಗಳ ಮೇಲೆ ಪ್ರಭಾವ ಬೀರುವ ನಿರೀಕ್ಷೆ ಇದ್ದರೆ, ಅವುಗಳನ್ನು ಭೌತಿಕವೆಂದು ಪರಿಗಣಿಸಿ ಈ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲಿ ಪರಿಗಣಿಸಲಾಗಿರುತ್ತದೆ.

ಲೆಕ್ಕಪರಿಶೋಧನೆಯ ಭಾಗವಾಗಿ ಎಸ್‌ಎಗಳಿಗೆ ಅನುಸಾರವಾಗಿ ನಾವು ಲೆಕ್ಕಪರಿಶೋಧನೆಯ ಉದ್ದಕ್ಕೂ ವೃತ್ತಿಪರ ತೀರ್ಮಾನವನ್ನು ಚಲಾಯಿಸಿರುತ್ತೇವೆ ಮತ್ತು ವೃತ್ತಿಪರ ಸಂದೇಹವನ್ನು ಕಾಪಾಡಿಕೊಂಡು ಬಂದಿರುತ್ತೇವೆ. ಅಲ್ಲದೇ ನಾವುಗಳು:

- ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲಿ ಮೋಸದ ಅಥವಾ ತಪ್ಪಿನ ಕಾರಣಗಳಿಂದಾಗಿ ಭೌತಿಕ ತಪ್ಪು ಹೇಳಿಕೆಗಳನ್ನು ಗುರುತಿಸಿ ಮೌಲ್ಯಮಾಪನ ಮಾಡುವುದು ಮತ್ತು ಅಂತಹ ಅಪಾಯಗಳಿಗೆ ಪ್ರತಿಕ್ರಿಯಿಸುವಂತಹ ಲೆಕ್ಕಪರಿಶೋಧನಾ ಪದ್ಧತಿಗಳನ್ನು ವಿನ್ಯಾಸಗೊಳಿಸಿ ನಿರ್ವಹಿಸುವುದು, ಮತ್ತು ನಮ್ಮ ಅಭಿಪ್ರಾಯಕ್ಕೆ ಆಧಾರವಾಗಿ ಸಾಕಷ್ಟು ಮತ್ತು ಸಮರ್ಪಕವಾದ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರವನ್ನು ಪಡೆದುಕೊಳ್ಳುವುದು. ಮೋಸದ ಕಾರಣದ ಫಲಿತಾಂಶವಾಗಿ ಬರಬಹುದಾದ ಭೌತಿಕ ತಪ್ಪು ಹೇಳಿಕೆಗಳು ತಪ್ಪುಗಳ ಕಾರಣದ ಫಲಿತಾಂಶವಾಗಿ ಉಂಟಾಗಬಹುದಾದ ತಪ್ಪು ಹೇಳಿಕೆಗಳಿಗಿಂತ ದೊಡ್ಡದಾಗಿದ್ದು, ಮೋಸಗಳು ಒಳಸಂಚು, ಸುಳ್ಳು ಸ್ಪಷ್ಟನೆ, ಉದ್ದೇಶಪೂರ್ವಕ ಕಡೆಗಣಿಸುವುದು ತಪ್ಪು ನಿರೂಪಣೆಗಳು ಆಂತರಿಕ ನಿಯಂತ್ರಣಗಳನ್ನು ತುಳಿದು ಹಾಕುವುದು ಒಳಗೊಂಡಿರುತ್ತದೆ.
- ಲೆಕ್ಕಪರಿಶೋಧನೆಗೆ ಸಂಗತವಾದ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ಅರ್ಥಮಾಡಿಕೊಂಡು ಸನ್ನಿವೇಶಗಳಲ್ಲಿ ಸೂಕ್ತವಾದ ಲೆಕ್ಕಪರಿಶೋಧನಾ ಪದ್ಧತಿಯನ್ನು ವಿನ್ಯಾಸಮಾಡುವುದು. ಕಾಯಿದೆಯ ಕಂಡಿಕೆ 143(3)(i) ಯಂತೆ ಕಂಪೆನಿಯು ಮತ್ತು ಅದರ ಅಂಗಸಂಸ್ಥೆಯ ಕಂಪೆನಿಗಳು ಭಾರತದಲ್ಲಿ ಸಂಘಟಿಸಲ್ಪಟ್ಟಿವೆಯೋ ಎಂಬ ಬಗ್ಗೆ ಹಾಗೂ ಅಂತಹ ಕಂಪೆನಿಗಳಲ್ಲಿ ಸಾಕಷ್ಟು ಹಣಕಾಸಿನ ಆಂತರಿಕ ನಿಯಂತ್ರಣ ವ್ಯವಸ್ಥೆಯು ಜಾರಿಯಲ್ಲಿರುತ್ತದೆ ಮತ್ತು ಅಂತಹ ನಿಯಂತ್ರಣಗಳ ನಿರ್ವಹಣಾ ಪರಿಣಾಮಕಾರಿತ್ವದ ಮೇಲೆ ನಮ್ಮ ಅಭಿಪ್ರಾಯವನ್ನು ಒತ್ತಿಹೇಳಲು ಕೂಡಾ ನಾವು ಜವಾಬ್ದಾರರಾಗಿರುತ್ತೇವೆ.
- ಉಪಯೋಗಿಸಲ್ಪಟ್ಟಿರುವ ಲೆಕ್ಕಪತ್ರಗಳ ನೀತಿಯ ಸಮಂಜಸತೆಯ ಬಗ್ಗೆ ಮತ್ತು ಲೆಕ್ಕಹಾಕುವಿಕೆಯ ಅಂದಾಜುಗಳ ಸಮರ್ಪಕತೆಯ ಬಗ್ಗೆ ಮತ್ತು ಆಡಳಿತ ಮಂಡಳಿಯು ಮಾಡಿರುವ ಸಂಬಂಧಪಟ್ಟ ಘೋಷಣೆಗಳ ಮೌಲ್ಯಮಾಪನ ಮಾಡುವುದು.
- ಲೆಕ್ಕಹಾಕುವಿಕೆಯ ಬಗ್ಗೆ ಆಡಳಿತ ವರ್ಗವು ಉಪಯೋಗಿಸುತ್ತಿರುವ ಗೋಯಿಂಗ್ ಕನ್‌ಸರ್ನ್ ವಿಧಾನದ ಸಮರ್ಪಕತೆಯ ಬಗ್ಗೆ ಮತ್ತು ಪಡೆಯಲಾಗಿರುವ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳ ಆಧಾರದ ಮೇಲೆ, ಯಾವುದೇ ಘಟನೆಗೆ ಸಂಬಂಧಿಸಿದಂತೆ ಭೌತಿಕ ಅನಿಶ್ಚಿತತೆ ಅಸ್ತಿತ್ವದಲ್ಲಿದೆಯೇ ಅಥವಾ ಗೋಯಿಂಗ್ ಕನ್‌ಸರ್ನ್ ವಿಧಾನದಲ್ಲಿ ಮುಂದುವರಿಯಲು ಗ್ರೂಪಿನ ಸಾಮರ್ಥ್ಯದ ಬಗ್ಗೆ ಸಾಕಷ್ಟು ಸಂದೇಹಕ್ಕೆ ಅವಕಾಶ ಮಾಡಿಕೊಡುವ ಪರಿಸ್ಥಿತಿ ಇದೆಯೇ ಎಂಬ ಬಗ್ಗೆ ತೀರ್ಮಾನ ಕೈಗೊಳ್ಳುವುದು. ಅಂತಹ ಭೌತಿಕ ಅನಿಶ್ಚಿತತೆ ಅಸ್ತಿತ್ವದಲ್ಲಿರುವ ಬಗ್ಗೆ ನಾವು ತೀರ್ಮಾನ ಕೈಗೊಂಡಲ್ಲಿ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಸಂಬಂದಪಟ್ಟ ಭಾಗದ ಘೋಷಣೆಯ ಬಗ್ಗೆ ನಾವು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ

ಗಮನ ಸೆಳೆಯುವ ಅಗತ್ಯತೆ ಇರುತ್ತದೆ ಅಥವಾ ಅಂತಹ ಘೋಷಣೆಗಳು ಸಾಕಾಗದಿದ್ದರೆ, ನಮ್ಮ ಅಭಿಪ್ರಾಯವನ್ನು ಬದಲಿಸಬೇಕಾಗಿರುತ್ತದೆ. ನಮ್ಮ ತೀರ್ಮಾನಗಳು ಲೆಕ್ಕಪರಿಶೋಧನೆಯ ವರದಿಯ ದಿನಾಂಕದವರೆಗೆ ನಾವು ಪಡೆದಿರುವ ಲೆಕ್ಕಪರಿಶೋಧನಾ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಇರುತ್ತವೆ. ಆದಾಗ್ಯೂ, ಭವಿಷ್ಯದ ಘಟನೆಗಳು ಮತ್ತು ಸ್ಥಿತಿಗಳು ಕಂಪೆನಿಯ ಗೋಯಿಂಗ್ ಕನ್ಸರ್ನ್‌ನ್ನು ಮುಂದುವರಿಯುವಿಕೆಯನ್ನು ಸ್ಥಗಿತಗೊಳಿಸುವ ಸಾಧ್ಯತೆಗಳು ಇರಬಹುದು.

- ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳು, ಅದರಲ್ಲಿರುವ ವ್ಯವಹಾರಗಳು ಮತ್ತು ಘಟನೆಗಳನ್ನು ಸಮರ್ಪಕವಾಗಿ ಪ್ರಸ್ತುತಪಡಿಸುವಿಕೆಯ ಉದ್ದೇಶವನ್ನು ಸಾಧಿಸಿದೆಯೇ ಎಂಬುದನ್ನೂ ಒಳಗೊಂಡಂತೆ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಒಟ್ಟಾರೆ ಪ್ರಸ್ತುತಪಡಿಸುವಿಕೆ, ಚೌಕಟ್ಟು ಮತ್ತು ಅದರಲ್ಲಿ ಒಳಗೊಂಡಿರುವ ಅಂಶಗಳ ಮೌಲ್ಯಮಾಪನ ಮಾಡುವುದು.

- ಸಂಸ್ಥೆಗಳ ಹಣಕಾಸಿನ ಮಾಹಿತಿಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಸಮಂಜಸವಾದ ಲೆಕ್ಕಪರಿಶೋಧನಾ ಸಾಕ್ಷಿಗಳನ್ನು ಪಡೆಯುವುದು ಅಥವಾ ಗುಂಪಿನ ಮತ್ತು ಅದರ ಸಹಭಾಗೀ ಮತ್ತು ಜಂಟೀ ಸಹಯೋಗದ ಸಂಸ್ಥೆಗಳ ಒಳಗಿನ ವ್ಯಾವಹಾರಿಕ ಚಟುವಟಿಕೆಗಳನ್ನು ಒಳಗೊಂಡ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಮೇಲೆ ಅಭಿಪ್ರಾಯ ವ್ಯಕ್ತಪಡಿಸಲು ನಾವು ಸ್ವತಂತ್ರ ಲೆಕ್ಕಪರಿಶೋಧಕರಾಗಿರುತ್ತೇವೆ. ಅಂತಹ ಸಂಸ್ಥೆಗಳ ಹಣಕಾಸಿನ ಮಾಹಿತಿಗಳ ನಿರ್ದೇಶನಗಳು, ಮೇಲ್ವಿಚಾರಣೆ ಮತ್ತು ಲೆಕ್ಕಪರಿಶೋಧನೆಯ ನಿರ್ವಹಣೆಗೆ ನಾವು ಜವಾಬ್ದಾರರಾಗಿರುತ್ತೇವೆ. ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲಿ ಸೇರಿರುವ ಇತರ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ನಿರ್ದೇಶನ, ಮೇಲ್ವಿಚಾರಣೆ ಮತ್ತು ಲೆಕ್ಕಪರಿಶೋಧನೆಯ ನಿರ್ವಹಣೆಯು ಉಸ್ತುವಾರಿ ಹಣಕಾಸಿನ ಮಾಹಿತಿಗಳ ನಿರ್ದೇಶನಗಳು, ಮೇಲ್ವಿಚಾರಣೆ ಮತ್ತು ಲೆಕ್ಕಪರಿಶೋಧನೆಯ ನಿರ್ವಹಣೆಯು ಅಂತಹ ಬೇರೆ ಲೆಕ್ಕಪರಿಶೋಧಕರುಗಳ ಜವಾಬ್ದಾರಿಯಾಗಿರುತ್ತದೆ. ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಕ್ಕೆ ನಾವು ಮಾತ್ರ ಜವಾಬ್ದಾರರಾಗಿರುತ್ತೇವೆ. ಇದಕ್ಕೆ ಸಂಬಂಧಿಸಿದಂತೆ ನಮ್ಮ ಜವಾಬ್ದಾರಿಗಳನ್ನು ಈ ಲೆಕ್ಕಪರಿಶೋಧನಾ ವರದಿಯ 'ಇತರ ವಿಚಾರಗಳು' ಹೆಸರಿನ ವಿಭಾಗದ ಕಂಡಿಕೆ (a) ಯಲ್ಲಿ ಮತ್ತಷ್ಟು ವಿವರಿಸಲಾಗಿದೆ.

ಬೇರೆ ವಿಚಾರಗಳ ಜೊತೆಗೆ, ಲೆಕ್ಕಪರಿಶೋಧನೆಯ ಯೋಜಿತ ಸಮಯ ಮತ್ತು ಸಾಧ್ಯತೆ ಮತ್ತು ಲೆಕ್ಕಪರಿಶೋಧನೆಯ ಸಮಯದಲ್ಲಿ ನಾವು ಕಂಡುಹಿಡಿದಿರುವ ಆಂತರಿಕ ನಿಯಂತ್ರಣ ವ್ಯವಸ್ಥೆಯಲ್ಲಿರುವ ಕೊರತೆಗಳೂ ಸೇರಿದಂತೆ ಹೋಲ್ಡಿಂಗ್ ಕಂಪೆನಿಯ ಆಡಳಿತಕ್ಕೆ ಸಂಬಂಧಿಸಿದವರಿಗೆ ನಾವು ತಿಳಿಸಿ ಹೇಳುತ್ತೇವೆ.

ಆಡಳಿತಕ್ಕೆ ಸಂಬಂಧಿಸಿದಂತೆ ಹೇಳಿಕೆಗಳನ್ನು ನೀಡುವ ಸಲುವಾಗಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ನಾವು ಅನುಸರಣೆ ಮಾಡಿರುವ ನೈತಿಕ ಅಗತ್ಯತೆಗಳು, ಮತ್ತು ನಮ್ಮ ಸ್ವಾತಂತ್ರ್ಯದ ಮೇಲೆ ಸಮರ್ಪಕವಾಗಿ ಪರಿಣಾಮ ಬೀರಬಲ್ಲಂತಹ ಎಲ್ಲಾ ಸಂಬಂಧಗಳ ಹಾಗೂ ವಿಷಯಗಳ ಬಗ್ಗೆ ಮಾಹಿತಿ ನೀಡಲು ಮತ್ತು ಅನ್ವಯಿಸಬಹುದಾದಲ್ಲಿ ಸಂಬಂದಪಟ್ಟ ಸಂರಕ್ಷಣೆಯನ್ನು ನೀಡಲು ನಾವು ಅವಕಾಶ ಮಾಡಿಕೊಟ್ಟಿರುತ್ತೇವೆ.

ಇತರೆ ವಿಚಾರಗಳು

1) 31ನೇ ಮಾರ್ಚಿ 2020ರಲ್ಲಿ ಇರುವಂತೆ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲಿ ಪರಿಗಣಿಸಲಾಗಿರುವ ರೂ. 2,93,761ರ ಒಟ್ಟು ಆಸ್ತಿಗಳು ಮತ್ತು ರೂ. 2,39,756ರ ನಿವ್ವಳ ಆಸ್ತಿ ಮತ್ತು ಆ ದಿನಾಂಕದಲ್ಲಿ ಕೊನೆಯಾದ ವರ್ಷದ ಅಂತ್ಯಕ್ಕೆ ಒಟ್ಟು ರೂ. 16,102 ವರಮಾನದ ಒಂದು ಅಂಗಸಂಸ್ಥೆಗೆ ಸಂಬಂಧಿಸಿದಂತೆ ಹಣಕಾಸಿನ ಕೋಷ್ಟಕಗಳು ಮತ್ತು ಇತರ ಹಣಕಾಸಿನ ಮಾಹಿತಿಗಳ ಲೆಕ್ಕಪರಿಶೀಧನೆಯನ್ನು ನಾವು ನಡೆಸಿರುವುದಿಲ್ಲ. 31ನೇ ಮಾರ್ಚಿ 2020ರಲ್ಲಿ ಇರುವಂತೆ ಕ್ರೋಢೀಕೃತ ಹಣಕಾಸಿನ ಕೋಷ್ಟಕದಲ್ಲಿ ಸೇರಿಸಿ ಪರಿಗಣಿಸಲಾಗಿರುವ ಒಟ್ಟು ಸಮಗ್ರ ಆದಾಯದ ಗ್ರೂಪಿನ ಭಾಗವಾದ ರೂ. 9,322.06 ಲಕ್ಷಗಳಲ್ಲಿ ಸಹಸಂಸ್ಥೆಗಳು ಮತ್ತು ಜಂಟೀ ಸಹಯೋಗ ಉದ್ಯಮಗಳ ಆದಾಯ ಸೇರಿದ್ದು, ಅವುಗಳ ಹಣಕಾಸಿನ ಕೋಷ್ಟಕಗಳನ್ನು/ಹಣಕಾಸಿನ ಮಾಹಿತಿಗಳನ್ನು ನಾವು ಲೆಕ್ಕಪರಿಶೋಧನೆ ನಡೆಸಿರುವುದಿಲ್ಲ. ಈ ಹಣಕಾಸಿನ ಕೋಷ್ಟಕಗಳನ್ನು ಬೇರೆ ಲೆಕ್ಕಪರಿಶೋಧಕರು ನಡೆಸಿದ್ದು, ಅವರ ವರದಿಗಳನ್ನು ಆಡಳಿತವರ್ಗವು ನಮಗೆ ಒಪ್ಪಿಸಿದ್ದು, ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳು, ಅವು ಸಹಸಂಸ್ಥೆಗಳಿಗೆ ಸಂಬಂಧಿಸಿದ ಮೊಬಲಗುಗಳು ಮತ್ತು ಘೋಷಣೆಗಳಿಗೆ ಸಂಬಂಧಿಸಿರುವವರೆಗೆ ಮತ್ತು ಕಾಯಿದೆಯ ಕಂಡಿಕೆ 143ರ ಉಪ ಕಂಡಿಕೆ (3) ಮತ್ತು (11)ರ ಶರತ್ತುಗಳ ಅನ್ವಯ ಅವುಗಳು ಮೇಲೆ ತಿಳಿಸಲಾಗಿರುವ ಸಹಸಂಸ್ಥೆಗೆ ಸಂದಪಟ್ಟಿರುವವರೆಗೆ ಮಾಹಿತಿಗಳು ಲೆಕ್ಕಪರಿಶೋಧಿಸದೇ ಇರುವ ಹಣಕಾಸಿನ ಕೋಷ್ಟಕಗಳ/ಹಣಕಾಸಿನ ಮಾಹಿತಿಗಳ ಆಧಾರದ ಮಾಲೆ ಮಾತ್ರ ಆಗಿರುತ್ತದೆ.

2) 31ನೇ ಮಾರ್ಚಿ 2020ರಲ್ಲಿ ಇರುವಂತೆ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲಿ ರೂ. (6,50,316) ಗುಂಪಿನ ನಿವ್ವಳ ಲಾಭದ ಭಾಗವೂ (ಮತ್ತು ಇತರೆ ಸಮಗ್ರ ಆದಾಯ) ಒಳಗೊಂಡಿದ್ದು, ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲಿ ಪರಿಗಣಿಸಲ್ಪಟ್ಟಿರುವಂತೆ, ಜಂಟೀ ಸಹಯೋಗ ಉದ್ಯಮಕ್ಕೆ ಸಂಬಂಧಿಸಿದಂತೆ, ಅವರ ಲೆಕ್ಕಪರಿಶೋಧಿತ ಹಣಕಾಸಿನ ಕೋಷ್ಟಕಗಳನ್ನು/ ಹಣಕಾಸಿನ ಮಾಹಿತಿಗಳನ್ನು ನಮಗೆ ಲಭ್ಯವಾಗುವಂತೆ ಮಾಡಿರುವುದಿಲ್ಲ. ಈ ಲೆಕ್ಕಪರಿಶೋಧಿಸದೇ ಇರುವ ಹಣಕಾಸಿನ ಕೋಷ್ಟಕಗಳನ್ನು/ಹಣಕಾಸಿನ ಮಾಹಿತಿಗಳನ್ನು ನಮಗೆ ಆಡಳಿತ ಮಂಡಳಿಯು

ಒದಗಿಸಿರುತ್ತದೆ. ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳು, ಅವು ಸಹಸಂಸ್ಥೆಗಳಿಗೆ ಸಂಬಂಧಿಸಿದ ಮೊಬಲಗುಗಳು ಮತ್ತು ಘೋಷಣೆಗಳಿಗೆ ಸಂಬಂಧಿಸಿರುವವರೆಗೆ ಮತ್ತು ಕಾಯಿದೆಯ ಕಂಡಿಕೆ 143ರ ಉಪ ಕಂಡಿಕೆ (3) ಶರತ್ತುಗಳ ಅನ್ವಯ ಅವುಗಳು ಮೇಲೆ ತಿಳಿಸಲಾಗಿರುವ ಸಹಸಂಸ್ಥೆಗೆ ಸಂದಪಟ್ಟಿರುವವರೆಗೆ ಮಾಹಿತಿಗಳು ಲೆಕ್ಕಪರಿಶೋಧಿಸದೇ ಇರುವ ಹಣಕಾಸಿನ ಕೋಷ್ಟಕಗಳ/ಹಣಕಾಸಿನ ಮಾಹಿತಿಗಳ ಆಧಾರದ ಮೇಲೆ ಮಾತ್ರ ಆಗಿರುತ್ತದೆ.

ಕ್ರೋಢೀಕೃತ ಹಣಕಾಸಿನ ಕೋಷ್ಟಕದ ಮೇಲೆ ನಮ್ಮ ಅಭಿಪ್ರಾಯ ಹಾಗೂ ಇತರೆ ಕಾನೂನಾತ್ಮಕ ಮತ್ತು ಶಾಸನಾತ್ಮಕ ಅಗತ್ಯತೆಗಳ ಮೇಲೆ ಬೇರೆ ಲೆಕ್ಕಪರಿಶೋಧಕರು ಕೆಲಸ ನಿರ್ವಹಿಸಿ ನೀಡಿರುವ ವರದಿ ಮತ್ತು ಆಡಳಿತ ವರ್ಗವು ದೃಢೀಕರಿಸಿರುವ ಹಣಕಾಸಿನ ಕೋಷ್ಟಕಗಳು/ಹಣಕಾಸಿನ ಮಾಹಿತಿಗಳನ್ನು ಅವಲಂಭಿಸಿರುತ್ತದೆ ಮತ್ತು ಮೇಲ್ಕಂಡ ವಿಚಾರಗಳಿಗೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯಗಳು ಬದಲಾಗಿರುವುದಿಲ್ಲ.

ಇತರೆ ಕಾನೂನು ಮತ್ತು ಶಾಸನಬದ್ಧ ಅಗತ್ಯತೆಗಳ ಬಗ್ಗೆ ವರದಿ

ಕಾಯಿದೆಯ ಕಂಡಿಕೆ 143(3)ರ ಅಗತ್ಯತೆಯಂತೆ, ನಮ್ಮ ವರದಿಯ ಆಧಾರದ ಮೇಲೆ ಹಾಗೂ ಅಂತಹ ಅಂಗಸಂಸ್ಥೆಗಳು ಮತ್ತು ಜಂಟೀ ಸಹಯೋಗದ ಮತ್ತು ಸಹಭಾಗೀ ಸಂಸ್ಥೆಗಳ ಪ್ರತ್ಯೇಕ ಹಣಕಾಸಿನ ಕೋಷ್ಟಕಗಳನ್ನು ಬೇರೆ ಲೆಕ್ಕಪರಿಶೋಧಕರು ಲೆಕ್ಕಪರಿಶೋಧಿಸಿ ನೀಡಿರುವ ವರದಿಯನ್ನು ಪರಿಗಣಿಸಿ ನಮ್ಮ ವರದಿಯ 'ಇತರೆ ವಿಚಾರಗಳು' ಕಂಡಿಕೆಯಲ್ಲಿ ಟಿಪ್ಪಣಿ ಮಾಡಿದ್ದು, ಅನ್ವಯವಾಗುವಷ್ಟರ ಮಟ್ಟಿಗೆ ನಾವು ವರದಿ ಮಾಡುವುದೇನೆಂದರೆ:

a) ಮೇಲ್ಕಂಡ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ನಮ್ಮ ಸಂಪೂರ್ಣ ತಿಳುವಳಿಕೆ ಹಾಗೂ ನಂಬಿಕೆಯಂತೆ ಲೆಕ್ಕ ಪರಿಶೋಧನಾ ಪ್ರಕ್ರಿಯೆಗೆ ಅವಶ್ಯಕವಾದ ಎಲ್ಲಾ ಮಾಹಿತಿಗಳನ್ನು ಹಾಗೂ ವಿವರಣೆಗಳನ್ನು ಪಡೆದಿರುತ್ತೇವೆ.

b) ನಮ್ಮ ಅಭಿಪ್ರಾಯದಲ್ಲಿ, ಪರಿಣಿತ ಅಭಿಪ್ರಾಯದ ಕಂಡಿಕೆಯಲ್ಲಿ ವಿವರಿಸಿರುವ ಅಭಿಪ್ರಾಯಗಳ ವಿಷಯಗಳನ್ನು ಹೊರತುಪಡಿಸಿ, ಮೇಲ್ಕಂಡ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಸಿದ್ಧಪಡಿಸುವಿಕೆಗೆ ಸಂಬಂಧಿಸಿದಂತೆ ಅಂತಹ ಲೆಕ್ಕಪತ್ರ ಪುಸ್ತಕಗಳ ಮತ್ತು ಬೇರೆ ಲೆಕ್ಕಪರಿಶೋಧಕರ ವರದಿಯ ಪರಿಶೋಧನೆಯ ಸಮಯದಲ್ಲಿ ನಾವು ಗಮನಿಸಿರುವಂತೆ ಕಂಪೆನಿಯು ನಿಯಮಾನುಸಾರ ಅಗತ್ಯವಿರುವ ಸಮರ್ಪಕ ಲೆಕ್ಕಪತ್ರ ದಾಖಲೆಗಳನ್ನು ಇಟ್ಟಿರುತ್ತದೆ.

c) ಈ ವರದಿಯಲ್ಲಿ ನಿರ್ವಹಿಸಲಾಗಿರುವ ಕ್ರೋಢೀಕೃತ ಆಸ್ತಿ ಹೊಣೆ ತಃಖ್ತೆಗಳು, ಕ್ರೋಢೀಕೃತ ಲಾಭ ಮತ್ತು ನಷ್ಟದ ತಃಖ್ತೆಗಳು (ಇತರೆ ಸಮಗ್ರ ಆದಾಯವೂ ಸೇರಿ), ಕ್ರೋಢೀಕೃತ ಈಕ್ವಿಟಿಯಲ್ಲಿ ಬದಲಾವಣೆ ಕೋಷ್ಟಕ ಮತ್ತು ಕ್ರೋಢೀಕೃತ ನಗದು ಹರಿವುಗಳ ಕೋಷ್ಟಕಗಳು ಸಂಬಂದಪಟ್ಟ ಲೆಕ್ಕಪತ್ರ ಪುಸ್ತಕಗಳೊಂದಿಗೆ ಹೊಂದಾಣಿಕೆಯಾಗುತ್ತದೆ.

d) ನಮ್ಮ ಅಭಿಪ್ರಾಯದಲ್ಲಿ, ಪರಿಣಿತ ಅಭಿಪ್ರಾಯದ ಕಂಡಿಕೆಯಲ್ಲಿ ವಿವರಿಸಿರುವ ಅಭಿಪ್ರಾಯಗಳ ವಿಷಯಗಳನ್ನು ಹೊರತುಪಡಿಸಿ, ಮೇಲೆ ಹೇಳಿದ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳು ಕಾಯಿದೆಯ ಕಂಡಿಕೆ 133 ಹಾಗೂ ಕಂಪೆನಿಗಳ (ಲೆಕ್ಕಪತ್ರಗಳು) ನಿಯಮ, 2014ರ ನಿಯಮ 7ನ್ನೂ ಓದಿಕೊಂಡಂತೆ ಅದರಲ್ಲಿ ಉಲ್ಲೇಖಿಸಿರುವ ಲೆಕ್ಕಪತ್ರ ಮಾನಕಗಳ ಅನುಸರಣೆ ಮಾಡುತ್ತದೆ.

e) ನಿರ್ದೇಶಕರಿಂದ ಬಂದಿರುವ ಲಿಖಿತ ನಿರೂಪಣೆಯ ಆಧಾರದ ಮೇಲೆ ನಿರ್ದೇಶಕರ ಮಂಡಳಿಯು 31ನೇ ಮಾರ್ಚಿ 2020ರಲ್ಲಿರುವಂತೆ ಹೋಲ್ಡಿಂಗ್ ಕಂಪೆನಿಯ ನಿರ್ದೇಶಕರ ಮಂಡಳಿಯು ದಾಖಲಿಸಿರುವಂತೆ ಹಾಗೂ ಭಾರತದಲ್ಲಿ ಸ್ಥಾಪಿಸಲ್ಪಟ್ಟಿರುವ ಅದರ ಅಂಗಸಂಸ್ಥೆಗಳ, ಜಂಟೀ ಸಹಯೋಗ ಸಂಸ್ಥೆಯ ಮತ್ತು ಸಹಸಂಸ್ಥೆಗಳ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯಂತೆ ಕಾಯಿದೆಯ ಕಂಡಿಕೆ 164(2)ರಂತೆ ದಿನಾಂಕ 31ನೇ ಮಾರ್ಚಿ 2020ರಲ್ಲಿ ಇರುವಂತೆ ನಿರ್ದೇಶಕರಾಗಿ ನೇಮಕಗೊಳ್ಳಲು ಗ್ರೂಪ್ ಕಂಪೆನಿಯ ಯಾವುದೇ ನಿರ್ದೇಶಕರುಗಳೂ ಅನರ್ಹರಾಗಿರುವುದಿಲ್ಲ.

f) ಹಣಕಾಸಿನ ವರದಿ ಮಾಡುವಿಕೆಯ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯ ಸಮರ್ಪಕತೆಗೆ ಸಂಬಂದಿಸಿದಂತೆ ಮತ್ತು ಅಂತಹ ನಿಯಂತ್ರಣಗಳ ಕಾರ್ಯನಿರ್ವಹಣಾ ಪರಿಣಾಮದ ವಿವರಗಳನ್ನೊಳಗೊಂಡಂತೆ ಕಂಪೆನಿಯ ಹಣಕಾಸಿನ ಬಗ್ಗೆ ನಮ್ಮ ಪ್ರತ್ಯೇಕ ವರದಿ **"ಅನುಬಂಧ– A"** ಯನ್ನು ಗಮನಿಸಿ. ಇದು ಕಂಪೆನಿಯ ಹಾಗೂ ಭಾರತದಲ್ಲಿ ಸ್ಥಾಪಿಸಲ್ಪಟ್ಟಿರುವ ಅದರ ಅಂಗಸಂಸ್ಥೆಗಳ, ಜಂಟೀ ಸಹಯೋಗ ಸಂಸ್ಥೆಯ ಮತ್ತು ಸಹಸಂಸ್ಥೆಗಳ ಲೆಕ್ಕಪರಿಶೋಧಕರ' ವರದಿಯನ್ನು ಆಧರಿಸಿದೆ.

g) ತಿದ್ದುಪಡಿ ಮಾಡಲ್ಪಟ್ಟ ಕಾಯಿದೆಯ ಕಂಡಿಕೆ 197(16) ರಂತೆ ಅಗತ್ಯವಿರುವಂತೆ ಲೆಕ್ಕಪರಿಶೋಧಕರ' ವರದಿಯಲ್ಲಿ ಸೇರಿಸಬೇಕಾಗಿರುವ ಇತರ ವಿಚಾರಗಳಿಗೆ ಸಂಬಂಧಿಸಿದಂತೆ:

ಕಾಯಿದೆಯ ಕಂಡಿಕೆ 2(45)ರ ಅಡಿಯಲ್ಲಿ ಸ್ಪಷ್ಟಪಡಿಸಿರುವಂತೆ ಕಂಪೆನಿಯು ಸರ್ಕಾರೀ ಕಂಪೆನಿಯಾಗಿರುವುದರಿಂದ ಕೇಂದ್ರ ಸರ್ಕಾರವು ಹೊರಡಿಸಿರುವ ದಿನಾಂಕ 5ನೇ ಜೂನ್, 2016ರ ಅಧಿಸೂಚನೆ ಸಂಖ್ಯೆ ಜಿಎಸ್ಆರ್ 463(ಇ) ಯಂತೆ ಸರ್ಕಾರೀ ಕಂಪೆನಿಗಳನ್ನು ಕಾಯಿದೆಯ ಕಂಡಿಕೆಯ ಉಪಬಂಧ 197ರ ಅನ್ವಯಿಸುವಿಕೆಯಿಂದ ವಿನಾಯತಿ ನೀಡಿದ್ದು, ಈ ಕಾರಣದಿಂದ ಆದೇಶದ ನಿಯಮಗಳಂತೆ ವರದಿಮಾಡುವಿಕೆಯು ಅನ್ವಯಿಸಲ್ಪಡುವುದಿಲ್ಲ.

h) ಲೆಕ್ಕಪರಿಶೋಧಕರ' ವರದಿಯಲ್ಲಿ ಸೇರಿರುವ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಕಂಪೆನೀಸ್ (ಆಡಿಟ್ ಮತ್ತು ಆಡಿಟರ್ಸ್') ನಿಯಮಗಳು, 2014ರ ನಿಯಮ 11ರಂತೆ ಹಾಗೂ ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಗರಿಷ್ಠ ಮಾಹಿತಿಯಂತೆ ಮತ್ತು ನಮಗೆ ನೀಡಲಾಗಿರುವ ವಿವರಣೆಗಳಂತೆ ವರದಿ ಮಾಡುವುದೇನೆಂದರೆ:

- ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳು ಹಣಕಾಸಿನ ಸ್ಥಿತಿಯ ಮೇಲೆ ಪರಿಣಾಮ ಬೀರುವ ಬಾಕಿ ನಿಂತಿರುವ ವ್ಯಾಜ್ಯಗಳ ವಿವರಗಳನ್ನು ಹೋಲ್ಡಿಂಗ್ ಕಂಪೆನಿಯ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಟಿಪ್ಪಣಿ 29ರಲ್ಲಿ ಘೋಷಿಸಲ್ಪಟ್ಟಿರುತ್ತದೆ.

- ಡಿರೈವೇಟಿವ್ ಒಪ್ಪಂದಗಳೂ ಸೇರಿದಂತೆ ನೈಜ ಮನ್ನೋಟದ ನಷ್ಟಗಳಿಗೆ ಕಾರಣವಾಗುವಂತಹ ಯಾವುದೇ ರೀತಿಯ ದೀರ್ಘಾವಧಿ ಒಪ್ಪಂದಗಳನ್ನೂ ಗ್ರೂಪ್, ಅದರ ಸಹಸಂಸ್ಥೆಗಳು ಮತ್ತು ಜಂಟೀ ನಿಯಂತ್ರಣದ ಕಂಪೆನಿಗಳು/ ಜಂಟೀ ಸಹಯೋಗ ಸಂಸ್ಥೆಗಳು ಮಾಡಿಕೊಂಡಿರುವುದಿಲ್ಲ.

- ವರದಿಯ ವರ್ಷಾವಧಿಯಲ್ಲಿ ಹೋಲ್ಡಿಂಗ್ ಕಂಪೆನಿ ಮತ್ತು ಅದರ ಅಂಗಸಂಸ್ಥೆಗಳು ಮತ್ತು ಜಂಟೀ ಸಹಯೋಗ ಸಹಸಂಸ್ಥೆಯ ಕಂಪೆನಿಗಳು ಮತ್ತು ಜಂಟೀ ನಿಯಂತ್ರಣದ ಸಂಸ್ಥೆಗಳು/ಜಂಟೀ ಸಹಯೋಗ ಕಂಪೆನಿಗಳು ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣಾ ನಿಧಿಗೆ ಯಾವುದೇ ಮೊಬಲಗನ್ನು ವರ್ಗಾವಣೆ ಮಾಡಿರುವ ಸಂದರ್ಭ ಕಂಡುಬಂದಿಲ್ಲ.

ಎನ್ಎಸ್ವಿಎಂ & ಅಸೋಸಿಯೇಟ್ಸ್
ಚಾರ್ಟರ್ಡ್ ಎಕೌಂಟೆಂಟ್ಸ್ ಪರವಾಗಿ,
ಸಂಸ್ಥೆ ನೋಂದಣಿ ಸಂಖ್ಯೆ: 010072S
ಸಹಿ/–
(ಸಿಎ. ವಿ.ಎಸ್. ರಂಗನಾಥನ್)
ಪಾಲುದಾರ
ಸದಸ್ಯತ್ವ ನಂ. 0201872
ಯುಡಿಐಎನ್: 20201872AAAEK**6126**

ಸ್ಥಳ : ಬೆಂಗಳೂರು
ದಿನಾಂಕ: 09.12.2020

ಹಣಕಾಸಿನ ವರದಿ ಮಾಡುವಿಕೆಯ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ವರದಿ

ಸ್ವತಂತ್ರ ಲೆಕ್ಕ ಪರಿಶೋಧಕರ' ವರದಿಗೆ ಅನುಬಂಧ "A"

(ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ ಸದಸ್ಯರುಗಳಿಗೆ ಇದೇ ದಿನಾಂಕದ ನಮ್ಮ ಪರಿಷ್ಕೃತ ವರದಿಯ ಕಂಡಿಕೆ 1 (f) ರ 'ಇತರೆ ಕಾನೂನಾತ್ಮಕ ಮತ್ತು ಶಾಸನಾತ್ಮಕ ಅಗತ್ಯತೆಗಳು' ಅಡಿಯಲ್ಲಿ ಉಲ್ಲೇಖಿಸಿರುವಂತೆ)

ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 143ರ ಉಪ ಕಂಡಿಕೆ 3ರ ಕಲಮು (i)ರ ("ದಿ ಆಕ್ಟ್") ಅಡಿಯಲ್ಲಿ ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲೆ ಹಣಕಾಸಿನ ವರದಿ ಮಾಡುವಿಕೆ ಮೇಲೆ ವರದಿ

31ನೇ ಮಾರ್ಚಿ 2020ರಲ್ಲಿ ಇರುವಂತೆ ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತದ (ಇನ್ನು ಮುಂದೆ "ಹೋಲ್ಡಿಂಗ್ ಕಂಪೆನಿ" ಎಂದು ಉಲ್ಲೇಖಿಸಲ್ಪಡುವುದು) ಮತ್ತು ಭಾರತದಲ್ಲಿ ಸ್ಥಾಪಿಸಲ್ಪಟ್ಟಿರುವ ಅದರ ಅಂಗಸಂಸ್ಥೆಗಳು ಮತ್ತು ಅದರ ಸಹಸಂಸ್ಥೆಗಳು ಮತ್ತು ಜಂಟೀ ಸಹಯೋಗದ ಕಂಪೆನಿಗಳ (ಇನ್ನು ಮುಂದೆ "ದಿ ಗ್ರೂಪ್" ಎಂದು ಉಲ್ಲೇಖಿಸಲ್ಪಡುವುದು) ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಲೆಕ್ಕಪರಿಶೋಧನೆಯ ಸಂಯೋಗದ ಜೊತೆಗೆ ಆ ದಿನಕ್ಕೆ ಕೊನೆಯಾಗುವ ದಿನಾಂಕದಲ್ಲಿ ಕಂಪೆನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲೆ ಹಣಕಾಸಿನ ವರದಿಮಾಡುವಿಕೆಯ ಲೆಕ್ಕಪರಿಶೋಧನೆಯನ್ನು ನಾವು ನಡೆಸಿರುತ್ತೇವೆ.

ಆಂತರಿಕ ಹಣಕಾಸಿನ ನಿಯಂತ್ರಣಗಳಿಗೆ ಆಡಳಿತ ವರ್ಗದ' ಜವಾಬ್ದಾರಿ

ಹೋಲ್ಡಿಂಗ್ ಕಂಪೆನಿ, ಹಾಗೂ ಭಾರತದಲ್ಲಿ ಸ್ಥಾಪಿಸಲ್ಪಟ್ಟಿರುವ ಅದರ ಅಂಗ ಸಂಸ್ಥೆಗಳು, ಸಹಯೋಗದ ಮತ್ತು ಜಂಟೀ ಉದ್ಯಮಗಳ ಆಡಳಿತ ಮಂಡಳಿಯು ಆಂತರಿಕ ಹಣಕಾಸಿನ ನಿಯಂತ್ರಣದ ಮೇಲೆ ಹಣಕಾಸಿನ ವರದಿಗಳಿಗೆ ಸಂಬಂಧಿಸಿದಂತೆ ಇನ್‌ಸ್ಟಿಟ್ಯೂಟ್ ಆಫ್ ಚಾಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ಇವರು ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿಯಂತೆ ಕಂಪೆನಿಯ ಹಣಕಾಸಿನ ವರದಿ ಮಾಡುವಿಕೆ ನೀತಿ, ದಿ ಗೈಡೆನ್ಸ್ ನೋಟ್ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯನ್ನು ಸ್ಥಾಪಿಸಿ ಕಂಪೆನಿಯ ಆಂತರಿಕ ಹಣಕಾಸು ನಿಯಂತ್ರಣವನ್ನು ಕಾಪಾಡಿಕೊಂಡು ಬರುವುದು ಕಂಪೆನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ. ಕಾಯಿದೆಯ ಅಡಿಯಲ್ಲಿ ಅಗತ್ಯವಾಗಿರುವಂತೆ ಕಂಪೆನಿಯ ಕಾರ್ಯನೀತಿಯನ್ನು ವಿನ್ಯಾಸ ಮಾಡಿ ಪಾಲಿಸಿಕೊಂಡು ಹೋಗುವುದು, ಆಸ್ತಿಗಳನ್ನು ಕಾಪಾಡುವುದು, ವಂಚನೆಗಳು ಮತ್ತು ಲೋಪಗಳನ್ನು ತಡೆಗಟ್ಟುವುದು ಮತ್ತು ಕಂಡುಹಿಡಿಯುವುದು, ಲೆಕ್ಕಪತ್ರಗಳ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ ಮತ್ತು ಕಂಪೆನಿಗಳ ಕಾಯಿದೆಯ ಪ್ರಕಾರ ಕೇಳಿರುವಂತೆ ಕ್ಷಿಪ್ರ ಸಮಯದಲ್ಲಿ ನಂಬಲರ್ಹ ಹಣಕಾಸಿನ ಕೋಷ್ಟಕಗಳನ್ನು ಸಿದ್ಧಪಡಿಸುವುದು ಈ ಜವಾಬ್ದಾರಿಗಳಲ್ಲಿ ಸೇರಿರುತ್ತದೆ.

ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಕಂಪೆನಿಯ ಕ್ರೋಢೀಕೃತ ಹಣಕಾಸಿನ ಪಟ್ಟಿಯ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಇನ್‌ಸ್ಟಿಟ್ಯೂಟ್ ಆಫ್ ಚಾಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರು ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿ "ಆಡಿಟ್ ಆಫ್ ಇಂಟರ್ನಲ್ ಫೈನಾನ್ಶಿಯಲ್ ಕಂಟ್ರೋಲ್ಸ್ ಓವರ್ ಫೈನಾನ್ಶಿಯಲ್ ರಿಪೋರ್ಟಿಂಗ್ ("ದಿ ಗೈಡೆನ್ಸ್ ನೋಟ್") ಮತ್ತು ಐಸಿಎಐ ಅವರು ಹೊರಡಿಸಿರುವ ಲೆಕ್ಕಪರಿಶೋಧನಾ ಮಾನಕಗಳು ಎರಡನ್ನೂ ಸೇರಿಸಿ ಮತ್ತು ಕಂಪೆನಿಗಳ ಕಾಯಿದೆ, 2013ರ ಕಂಡಿಕೆ 143(10)ನ್ನು ಆಂತರಿಕ ಹಣಕಾಸಿನ ನಿಯಂತ್ರಣ ಲೆಕ್ಕಪರಿಶೋಧನೆಗೆ ಅನ್ವಯಿಸುವಷ್ಟು ಪರಿಗಣಿಸಿ ನಿರ್ದಿಷ್ಟವಾಗಿ ನಿಗಧಿಪಡಿಸಿರುವಂತೆ ಮತ್ತು ಲೆಕ್ಕಪರಿಶೋಧನಾ ಮಾನಕಗಳಿಗೆ ಅನುಸಾರವಾಗಿ ನಾವು ಲೆಕ್ಕಪರಿಶೋಧನೆಯನ್ನು ನಿರ್ವಹಿಸಿರುತ್ತೇವೆ. ಅಂತಹ ಮಾನಕಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳ ಅನ್ವಯ ನೈತಿಕ ಅಗತ್ಯತೆಗಳು ಮತ್ತು ಯೋಜನೆ ಮತ್ತು ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಧಿಸಲ್ಪಟ್ಟಿವೆಯೇ ಮತ್ತು ಮುಂದುವರಿಸಿಕೊಂಡು ಹೋಗಲಾಗಿದೆಯೇ ಎಂಬ ಬಗ್ಗೆ ಸಮಂಜಸವಾದ ಭರವಸೆಯನ್ನು ಹೊಂದುವುದರ ಜೊತೆಗೆ ಎಲ್ಲಾ ಭೌತಿಕ ಅಂಶಗಳಲ್ಲೂ ಅಂತಹ ಆಂತರಿಕ ನಿಯಂತ್ರಣ ವ್ಯವಸ್ಥೆಯು ಕಾರ್ಯನಿರ್ವಹಿಸಲ್ಪಡುತ್ತದೆಯೋ ಎಂಬ ಬಗ್ಗೆ ಕೂಡಾ ಖಚಿತಪಡಿಸಿಕೊಳ್ಳುವುದು ಅಗತ್ಯವಾಗಿರುತ್ತದೆ.

ಕ್ರೋಢೀಕೃತ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಯ ಸಮರ್ಪಕತೆ ಬಗ್ಗೆ ಲೆಕ್ಕಪರಿಶೋಧನಾ ಸಾಕ್ಷ್ಯಗಳನ್ನು ಪಡೆಯುವುದು ಮತ್ತು ಅವುಗಳ ಪರಿಣಾಮಕಾರೀ ಕಾರ್ಯನಿರ್ವಹಣೆಯನ್ನು ದೃಢೀಕರಿಸುವುದು ನಮ್ಮ ಲೆಕ್ಕಪರಿಶೋಧನೆಯಲ್ಲಿ ಸೇರಿದೆ. ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಿಗೆ ಸಂಬಂಧಿಸಿದಂತೆ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಲೆಕ್ಕಪರಿಶೋಧನೆಯಲ್ಲಿ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವನ್ನು ಸಾಧಿಸುವುದು ಮತ್ತು ಅರ್ಥಮಾಡಿಕೊಳ್ಳುವುದು, ಇರಬಹುದಾದ ಭೌತಿಕ ದೌರ್ಬಲ್ಯಗಳ ಅಪಾಯಗಳನ್ನು ನಿರ್ಣಯಿಸುವುದು, ನಿರ್ಣಯಿಸಲ್ಪಟ್ಟ ದೌರ್ಬಲ್ಯಗಳನ್ನು ಪರೀಕ್ಷಿಸಿ ವಿನ್ಯಾಸದ ಮೌಲ್ಯಮಾಪನ ಮಾಡಿ ಪರಿಣಾಮಕಾರೀ ಕಾರ್ಯನಿರ್ವಹಣೆಯ ಆಂತರಿಕ ನಿಯಂತ್ರಣ ವ್ಯವಸ್ಥೆಯು ನಮ್ಮ ಲೆಕ್ಕಪರಿಶೋಧನೆಯಲ್ಲಿ ಸೇರಿದೆ. ಆಯ್ಕೆ ಮಾಡಲ್ಪಟ್ಟ

ಈ ಪದ್ಧತಿಯು ವಂಚನೆಯ ಅಥವಾ ತಪ್ಪಿನ ಕಾರಣದಿಂದ ಹಣಕಾಸಿನ ತಪ್ಪು ಹೇಳಿಕೆಗಳ ಮೌಲ್ಯಮಾಪನದ ಅಪಾಯವನ್ನು ಅಂದಾಜಿಸುವುದೂ ಸೇರಿದಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಬಿಸಿರುತ್ತದೆ.

ನಾವು ಪಡೆದಿರುವ ಲೆಕ್ಕಪರಿಶೋಧನಾ ಸಾಕ್ಷ್ಯಗಳು ಮತ್ತು ಈ ಕೆಳಗೆ ಇತರೆ ವಿಚಾರಗಳು ಕಂಡಿಕೆಯಲ್ಲಿ ಉಲ್ಲೇಖಿಸಿರುವಂತೆ, ಬೇರೆ ಲೆಕ್ಕಪರಿಶೋಧಕರು ತಮ್ಮ ವರದಿಯ ಶರತ್ತುಗಳಂತೆ ಪಡೆದಿರುವ ಲೆಕ್ಕಪರಿಶೋಧನಾ ಸಾಕ್ಷ್ಯಗಳು ಕಂಪೆನಿಯ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಬಗ್ಗೆ ಲೆಕ್ಕಪರಿಶೋಧನಾ ಅಭಿಪ್ರಾಯ ನೀಡಲು ಸಾಕಷ್ಟು ಸೂಕ್ತ ಆಧಾರ ನೀಡುತ್ತದೆ ಎಂದು ನಾವು ನಂಬುತ್ತೇವೆ.

ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಅರ್ಥ

ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಿಗೆ ಸಂಬಂಧಿಸಿದಂತೆ, ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವು ಕಂಪೆನಿಯ ಹಣಕಾಸಿನ ಸ್ಥಿತಿಯ ಬಗ್ಗೆ ವಿಶ್ವಾಸಾರ್ಹ ವರದಿ ಮಾಡುವಿಕೆಯ ಬಗ್ಗೆ ಯೋಗ್ಯವಾದ ಭರವಸೆಯನ್ನು ಒದಗಿಸುವುದು ಮತ್ತು ಸಾಮಾನ್ಯವಾಗಿ ಒಪ್ಪಲ್ಪಟ್ಟ ಲೆಕ್ಕಪತ್ರ ಸಿದ್ಧಾಂತಗಳಂತೆ ಬಾಹ್ಯ ಉದ್ದೇಶಗಳಿಗಾಗಿ ಹಾಣಕಾಸಿನ ಕೋಷ್ಟಕಗಳನ್ನು ಸಿದ್ಧಪಡಿಸಲು ವಿನ್ಯಾಸಗೊಳಿಸಲಾಗಿರುವ ಕಾರ್ಯವಿಧಾನವಾಗಿರುತ್ತದೆ. ಕಂಪೆನಿಯ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿ ಈ ಕೆಳಕಂಡ ನೀತಿ ಮತ್ತು ವಿಧಾನಗಳನ್ನು ಒಳಗೊಂಡಿದ್ದು, ಅವುಗಳೆಂದರೆ:

(1) ಕಂಪೆನಿಯ ಆಸ್ತಿಗಳ ವ್ಯವಹಾರ ಮತ್ತು ವಿಲೇವಾರಿಯನ್ನು ನಿಖರವಾಗಿ ಮತ್ತು ನ್ಯಾಯಯುತವಾಗಿ ಪ್ರತಿಬಿಂಬಿಸಲು ಪೂರಕವಾದ ಸಾಕಷ್ಟು ವಿವರವಾದ ದಾಖಲೆ ಪತ್ರಗಳನ್ನು ನಿರ್ವಹಿಸುವುದು;

(2) ಸಾಮಾನ್ಯವಾಗಿ ಒಪ್ಪಲ್ಪಟ್ಟ ಲೆಕ್ಕಪತ್ರ ಮಾನಕಗಳಿಗೆ ಅನುಸಾರವಾಗಿ ಹಣಕಾಸಿನ ಕೋಷ್ಟಕಗಳನ್ನು ಸಿದ್ಧಪಡಿಸಲು ಅನುವಾಗುವಂತೆ ವ್ಯವಹಾರಗಳನ್ನು ದಾಖಲಿಸುವ ಸೂಕ್ತ ಭರವಸೆ ನೀಡುವುದೂ ಅಲ್ಲದೇ, ಕಂಪೆನಿಯ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ಕಂಪೆನಿಯ ಆಡಳಿತ ಮತ್ತು ನಿರ್ದೇಶಕರ ಒಪ್ಪಿಗೆಯ ಅನುಸಾರ ಮಾತ್ರ ಮಾಡುವ ವ್ಯವಸ್ಥೆ ಹೊಂದುವುದು; ಮತ್ತು

(3) ಕಂಪೆನಿಯ ಹಣಕಾಸಿನ ಕೋಷ್ಟಕಗಳ ಮೇಲೆ ಪರಿಣಾಮ ಬೀರುವಂತಹ ಕಂಪೆನಿಗಳ ಆಸ್ತಿಗಳನ್ನು ಅನಧಿಕೃತವಾಗಿ ಸ್ವಾಧೀನಪಡಿಸಿಕೊಳ್ಳುವಿಕೆ, ಉಪಯೋಗಿಸಿಕೊಳ್ಳುವಿಕೆ, ಅಥವಾ ವಿಲೇವಾರಿಯನ್ನು ತಡೆಯುವುದು ಮತ್ತು ಸಕಾಲದಲ್ಲಿ ಕಂಡುಹಿಡಿಯುವ ಬಗ್ಗೆ ವಿವೇಚನಾಯುಕ್ತ ಭರವಸೆಯನ್ನು ನೀಡುವುದು.

ಆಂತರಿಕ ಹಣಕಾಸಿನ ನಿಯಂತ್ರಣದ ಮೇಲೆ ಹಣಕಾಸಿನ ವರದಿ ಮಾಡಿವಿಕೆಯ ಅಂತರ್ಗತ ಮಿತಿಗಳು

ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಿಗೆ ಸಂಬಂಧಿಸಿದಂತೆ, ಒಳಸಂಚೂ ಸೇರಿದಂತೆ ಅಥವಾ ನಿಯಂತ್ರಣಗಳ ಮೇಲೆ ಅಸಮರ್ಪಕ ಆಡಳಿತ ವ್ಯವಸ್ಥೆಯು ಸವಾರಿ ಮಾಡುವುದು, ದೋಷಗಳಿಂದಾಗಿ ಅಥವಾ ವಂಚನೆಗಳಿಂದಾಗಿ ಭೌತಿಕ ತಪ್ಪು ಹೇಳಿಕೆಗಳು ಕಾಣಿಸಿಕೊಂಡು ಪತ್ತೆಮಾಡಲಾಗದೇ ಇರುವುದು, ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಅಂತರ್ಗತ ಮಿತಿಗಳಾಗಿರುತ್ತವೆ. ಅಲ್ಲದೇ, ಭವಿಷ್ಯದ ಅವಧಿಗಳಿಗೆ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ಭವಿಷ್ಯದ ಅಂದಾಜು ಮೌಲ್ಯಮಾಪನವು ಅಪಾಯಕ್ಕೆ ಸಿಲುಕುವ ಸಾಧ್ಯತೆ ಇರುತ್ತದೆ ಏಕೆಂದರೆ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣವು ಪರಿಸ್ಥಿತಿಯ ಬದಲಾವಣೆಗಳಿಂದಾಗಿ ಅಸಮರ್ಪಕವಾಗಬಹುದು ಅಥವಾ ನೀತಿಗಳು ಅಥವಾ ಪದ್ಧತಿಗಳ ಅನುಸರಿಸುವಿಕೆಯ ಮಟ್ಟವು ಕ್ಷೀಣಿಸುವ ಸಾಧ್ಯತೆಯೂ ಇರುತ್ತದೆ.

ಅರ್ಹ ಅಭಿಪ್ರಾಯಕ್ಕೆ ಆಧಾರ

1. ನಮ್ಮ ಅಭಿಪ್ರಾಯದಲ್ಲಿ, ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಂತೆ ಮತ್ತು ನಾವು ನಿರ್ವಹಿಸಿರುವ ಲೆಕ್ಕಪರಿಶೋಧನಾ ಪದ್ಧತಿಯಂತೆ 31ನೇ ಮಾರ್ಚಿ 2020ರಲ್ಲಿ ಇರುವಂತೆ, ಹೋಲ್ಡಿಂಗ್ ಕಂಪೆನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲೆ ಅದರ ವರದಿ ಮಾಡುವಿಕೆಯನ್ನು ಕಾರ್ಯ ನಿರ್ವಹಣಾ ಪರಿಣಾಮಕಾರಿತ್ವದಲ್ಲಿ ಈ ಕೆಳಕಂಡ ಭೌತಿಕ ದೌರ್ಬಲ್ಯಗಳನ್ನು ಗುರುತಿಸಲಾಗಿರುತ್ತದೆ.

ಈ ಕೆಳಕಂಡ ಪ್ರದೇಶಗಳಲ್ಲಿ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸುವುದು ಅಗತ್ಯವಾಗಿರುತ್ತದೆ:

- ಸಂಬಂದಪಟ್ಟ ವಿಭಾಗಗಳಿಂದ ಸಾಲಗಳು, ಮುಂಗಡಗಳು ಮತ್ತು ಕ್ಲೈಮುಗಳಲ್ಲಿ ಚುರುಕಾದ ಮತ್ತು ವಿಳಂಭವಿಲ್ಲದ ಅನುಸರಣೆ.
- ಕಾಲಕಾಲಕ್ಕೆ ಬಾಕಿ ಉಳಿದಿರುವ ಶಿಲ್ಕುಗಳು, ಸಾಲಗಾರರ, ಸಾಲ ನೀಡುವವರ, ವ್ಯವಹಾರೀ ಸಹಸಂಸ್ಥೆಗಳು ಮತ್ತು ಇತರೆ ಸೂಕ್ಷ್ಮ ಲೆಕ್ಕಗಳ ಶಿರೋನಾಮೆಗಳ ಖಾತೆಯ ಪುನರ್‌ಪರಿಶೀಲನೆ.
- ನ್ಯಾಯಾಲಯದಲ್ಲಿ ಕಂಪೆನಿಯ ಪರವಾಗಿ ನೀಡಲಾದ ನ್ಯಾಯಾಲಯದ ಆದೇಶಗಳ ಜಾರಿಗೊಳಿಸುವಿಕೆ/ ಘೋಶಿಸಲಾಗಿರುವ ಆದೇಶಗಳಂತೆ ವಸೂಲಿಗಳ ಅನುಸರಣೆ ಮಾಡುವುದು.
- ಒಪ್ಪಂದಗಳ ಶರತ್ತು ಮತ್ತು ನಿಬಂಧನೆಗಳಲ್ಲಿ ತಪ್ಪುಗಳನ್ನು ಮತ್ತು ತತ್ಸಂಬಂಧದ ನಷ್ಟಗಳೇನಾದರೂ ಇದ್ದಲ್ಲಿ

ತೊಡೆದುಹಾಕುವ ಸಲುವಾಗಿ ಯೋಜನೆಗಳ ವಿಭಾಗದಲ್ಲಿ ಆಸ್ತಿ ನಿರ್ವಹಣೆಯ ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸಬೇಕಾಗಿರುತ್ತದೆ.

- **ಬಾಡಿಗೆ ಒಪ್ಪಂದಗಳು ಮತ್ತು ಸ್ವೀಕೃತಿಗಳಲ್ಲಿ:**

a) ನವೀಕರಣಕ್ಕೆ ಬಾಕಿ ಇರುವ ಸಹಿಮಾಡದೇ ಇರುವ ಒಪ್ಪಂದಗಳನ್ನು ಗುರುತಿಸುವಂತಹ ಗುತ್ತಿಗೆ ಒಪ್ಪಂದ ಪತ್ರಗಳ ಪುನರ್‌ಪರಿಶೀಲನೆಯಲ್ಲಿ ಕೊರತೆ;

b) 'ಬಾಡಿಗೆ/ನಿರ್ವಹಣಾ ಸ್ವೀಕಾರಾರ್ಹವಾದವುಗಳ' ಮತ್ತು ತದನಂತರದ ಸ್ವೀಕೃತಿಗಳ ಪುನರ್ ಪರಿಶೀಲನೆಯು ಸ್ಥಿರವಾಗಿಲ್ಲ;

c) ಬಾಡಿಗೆಗಳ ಸ್ವೀಕೃತಿಯಲ್ಲಿ ತಡವಾಗಿರುವುದಕ್ಕೆ ಬಡ್ಡಿಯನ್ನು ವಿಧಿಸದೇ ಇರುವುದು. ತಡವಾಗಿರುವುದು.

- ಕರ್ನಾಟಕ ಸರ್ಕಾರಕ್ಕೆ ಪಾವತಿಸಬೇಕಾಗಿರುವ ಬಡ್ಡಿಯನ್ನೂ ಸೇರಿದಂತೆ, ಅದರ ಪರಿಣಾಮವು ವರಮಾನ ಮತ್ತು ಹೊಣೆಗಾರಿಕೆಯ ಮೇಲೆ ಆಗುವುದರಿಂದ ನಿಶ್ಚಿತ ತೇವಣಿಗಳಲ್ಲಿ ಹೂಡಿಕೆಯಲ್ಲಿ ವಿವರವಾದ ಕಾರ್ಯಯೋಜನೆಯ ಅಗತ್ಯತೆ ಇರುತ್ತದೆ.

1. ಹೋಲ್ಡಿಂಗ್ ಕಂಪೆನಿಯ ಸಹಯೋಗೀ ಕಂಪೆನಿಗಳಲ್ಲಿ ಒಂದಾಗಿರುವ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ಗೆ ಸಂಬಂಧಿಸಿದಂತೆ, ಸಂಸ್ಥೆಯ ಹಣಕಾಸಿನ ಕೋಷ್ಟಕಗಳನ್ನು/ಹಣಕಾಸಿನ ಮಾಹಿತಿಗಳನ್ನು ಲೆಕ್ಕಪರಿಶೋಧನೆ ಮಾಡಿರುವ ಬೇರೆ ಲೆಕ್ಕಪರಿಶೋಧಕರು ದಿನಾಂಕ 19ನೇ ನವೆಂಬರ್2020ರಲ್ಲಿ ಈ ಕೆಳಕಂಡಂತೆ ವರದಿ ಮಾಡಿರುತ್ತಾರೆ:

- ಕಾಲಕಾಲಕ್ಕೆ ಖಾತೆಯಲ್ಲಿರುವ ಶಿಲ್ಕುಗಳ ಬಗ್ಗೆ ಹೊರಗಿನಿಂದ ದೃಢೀಕರಣ ಪಡೆಯಲು ಕಂಪೆನಿಯಲ್ಲಿ ಸಮರ್ಪಕವಾದ ಆಂತರಿಕ ನಿಯಂತ್ರಣ ವ್ಯವಸ್ಥೆ ಇರುವುದಿಲ್ಲ. ಇದು ಲೆಕ್ಕಪತ್ರಗಳಲ್ಲಿ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಅಸಮರ್ಪಕ ಘೋಷಣೆಗೆ ಸಾಕಷ್ಟು ಅವಕಾಶ ಮಾಡಿಕೊಡುತ್ತದೆ.

- ಕೆಲವೊಂದು ನಿರ್ದಿಷ್ಟ ಆಸ್ತಿಗಳ ಹಕ್ಕು ಪತ್ರಗಳು ಕಂಪೆನಿಯಲ್ಲಿ ಇರುವುದಿಲ್ಲ.

- ಟೂರ್ಸ್ ಮತ್ತು ಟ್ರಾವಲ್ ವಿಭಾಗದಲ್ಲಿ ಮುಕ್ತಾಯಗೊಂಡ ಪ್ರವಾಸಗಳ ಬಗ್ಗೆ ವರಮಾನವನ್ನು ಪ್ರವಾಸ ಮುಗಿದ ಕೂಡಲೇ ಗುರುತಿಸಿರುವುದಿಲ್ಲ. ಇದು ಲೆಕ್ಕದ ಪುಸ್ತಕಗಳಲ್ಲಿ ಆದಾಯವನ್ನು ಕಡಿಮೆ ತೋರಿಸಲು ಸಾಕಷ್ಟು ಅವಕಾಶ ಮಾಡಿಕೊಡುತ್ತದೆ.

- ವಿವಿಧ ಆಸ್ತಿ ಸ್ಥಾವರ ಮತ್ತು ಸಾಮಗ್ರಿಗಳ ಖರೀದಿಗೆ ಅನುಸರಿಸುತ್ತಿರುವ ಪದ್ದತಿಯು ರೂ. 1.00 ಲಕ್ಷಕ್ಕಿಂತ ಜಾಸ್ತಿ ಮೊಬಲಗಿನ ಆಸ್ತಿಗಳ ಖರೀದಿಗೆ ಸಾಮಾನ್ಯವಾಗಿ ಒಪ್ಪಲ್ಪಟ್ಟ ಪದ್ದತಿಗೆ ಅನುಸಾರವಾಗಿರುವುದಿಲ್ಲ. ಇದು ಆಸ್ತಿ ಸ್ಥಾವರ ಮತ್ತು ಸಾಮಗ್ರಿಗಳ ಖರೀದಿಯಲ್ಲಿ ಸಾಕಷ್ಟು ಅಕ್ರಮಗಳಿಗೆ ಅವಕಾಶ ಮಾಡಿಕೊಡುತ್ತದೆ.

- ಹೊಸ ಮಾರಾಟ ಕೇಂದ್ರವನ್ನು ತೆರೆಯುವುದಕ್ಕಾಗಿ ಸರ್ಕಾರೀ ಏಜೆನ್ಸಿಗಳಿಂದ ಪಡೆಯುವ ಅನುದಾನಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಪುನರ್ ಪರಿಶೀಲಿಸಲು ಸೂಕ್ತವಾದ ಆಂತರಿಕ ನಿಯಂತ್ರಣ ವ್ಯವಸ್ಥೆಯು ಕಂಪೆನಿಯಲ್ಲಿ ಇರುವುದಿಲ್ಲ. ಇದು ಲೆಕ್ಕದ ಪುಸ್ತಕಗಳಲ್ಲಿ ಸ್ವೀಕರಿಸಬಹುದಾದ ಅನುದಾನಗಳನ್ನು ಅಸಮರ್ಪಕವಾಗಿ ಘೋಷಿಸಲು ಸಾಕಷ್ಟು ಅವಕಾಶ ಮಾಡಿಕೊಡುತ್ತದೆ.

- ಭೌತಿಕ ತಪಾಸಣೆ, ದಾಸ್ತಾನಿನ ಮೌಲ್ಯಮಾಪನ, ಮಾರಾಟವಾಗುವ ಮತ್ತು ಮಾರಾಟವಾಗದೇ ಇರುವ ಸಾಮಗ್ರಿಗಳನ್ನು ಗುರುತಿಸದೇ ಇರುವುದು ಮತ್ತು ಮೌಲ್ಯದಲ್ಲಿ ಕಡಿತವಾಗಿರುವುದನ್ನು ಸೂಕ್ತವಾಗಿ ಲೆಕ್ಕಹಾಕದೇ ಇರುವುದು ಮುಂತಾದವುಗಳನ್ನು ಗುರುತಿಸಲು ಕಂಪೆನಿಯಲ್ಲಿ ಸಮರ್ಪಕವಾದ ವ್ಯವಸ್ಥೆ ಇರುವುದಿಲ್ಲ. ಇದು ಲೆಕ್ಕದ ಪುಸ್ತಕಗಳಲ್ಲಿ ಸಾಮಗ್ರಿಗಳ ಮೌಲ್ಯವನ್ನು ಹೆಚ್ಚಾಗಿ ದಾಖಲಿಸಲು ಸಾಕಷ್ಟು ಅವಕಾಶ ಮಾಡಿಕೊಡುತ್ತದೆ.

ಅರ್ಹ ಅಭಿಪ್ರಾಯ

ನಮ್ಮ ಅಭಿಪ್ರಾಯದಂತೆ ಹಾಗೂ ಕಂಪೆನಿಗಳ ಆಂತರಿಕ ಹಣಕಾಸಿನ ನಿಯಂತ್ರಣದ ಮೇಲೆ ಹಣಕಾಸಿನ ವರದಿ ಮಾಡುವಿಕೆಗೆ ಸಂಬಂಧಿಸಿದಂತೆ ಅರ್ಹ ಅಭಿಪ್ರಾಯಕ್ಕೆ ಆಧಾರ ಕಂಡಿಕೆಯಲ್ಲಿ ವಿವರಿಸಲಾಗಿರುವ ಭೌತಿಕ ದೌರ್ಬಲ್ಯಗಳ ಸಂಭಾವ್ಯ ಪರಿಣಾಮಗಳನ್ನು ಹೊರತುಪಡಿಸಿ, ಹೋಲ್ಡಿಂಗ್ ಕಂಪೆನಿ ಹಾಗೂ ಭಾರತದಲ್ಲಿ ಸ್ಥಾಪಿಸಲ್ಪಟ್ಟಿರುವ ಅದರ ಅಂಗಸಂಸ್ಥೆಗಳು ಮತ್ತು ಅದರ ಸಹಸಂಸ್ಥೆಗಳು ಮತ್ತು ಜಂಟೀ ಉದ್ಯಮಗಳ ಎಲ್ಲಾ ಭೌತಿಕ ವಿಚಾರಗಳಲ್ಲಿ ಸಮರ್ಪಕವಾದ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ವ್ಯವಸ್ಥೆಯು ಇದ್ದು, ಅಂತಹ ವ್ಯವಸ್ಥೆಯು 31ನೇ ಮಾರ್ಚಿ 2020ರಲ್ಲಿ ಇರುವಂತೆ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬಂದಿದ್ದು ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರು ಹೊರಡಿಸಿರುವ ಮಾರ್ಗದರ್ಶಿ ಟಿಪ್ಪಣಿ ಆಡಿಟ್ ಆಫ್ ಇಂಟರ್ನಲ್ ಫೈನಾನ್ಶಿಯಲ್ ಕಂಟ್ರೋಲ್ಸ್ ಓವರ್ ಫೈನಾನ್ಶಿಯಲ್ ರಿಪೋರ್ಟಿಂಗ್‌ನಲ್ಲಿ ವಿವರಿಸಿರುವ ಆಂತರಿಕ ನಿಯಂತ್ರಣ ವಿಷಯಕ್ಕೆ ಸಂಬಂಧಿಸಿದ ಅತ್ಯವಶ್ಯಕ ಅಂಶಗಳನ್ನು ಒಳಗೊಂಡ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣದ ವ್ಯವಸ್ಥೆಯನ್ನು ಕಂಪೆನಿಯು ಸ್ಥಾಪಿಸಿದೆ.

31ನೇ ಮಾರ್ಚಿ 200ರ ವರ್ಷದ ಅಂತ್ಯಕ್ಕೆ ನಾವು ಗ್ರೂಪ್ ಮತ್ತು ಅದರ ಸಹಸಂಸ್ಥೆಗಳ ಹಾಗೂ ಜಂಟೀ ಸಹಯೋಗ

ಉದ್ಯಮಗಳ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಲ್ಲಿ ಗುರುತಿಸಲಾಗಿರುವ ಭೌತಿಕ ದೌರ್ಬಲ್ಯಗಳನ್ನು ನಾವು ಪರಿಗಣಿಸಿರುತ್ತೇವೆ ಹಾಗೂ ಅದರ ರೀತಿ, ಸಮಯ ಹಾಗೂ ಈ ದೌರ್ಬಲ್ಯಗಳು ಲೆಕ್ಕಪರಿಶೋಧನಾ ತಪಾಸಣೆಗಳ ಪ್ರಮಾಣವನ್ನು ನಮ್ಮ ಲೆಕ್ಕಪರಿಶೋಧನೆಯಲ್ಲಿ ಅಳವಡಿಸಿರುವುದು ಹಾಗೂ ಅಂತಹ ದೌರ್ಬಲ್ಯಗಳು ಗ್ರೂಪಿನ ಮತ್ತು ಅದರ ಸಹಯೋಗೀ ಮತ್ತು ಜಂಟೀ ಉದ್ಯಮದ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಮೇಲೆ ನಮ್ಮ ಅಭಿಪ್ರಾಯಗಳ ಮೇಲೆ ಪರಿಣಾಮ ಬೀರಿದೆ ಎಂಬುದನ್ನೂ ಪರಿಗಣಿಸಿ ನಾವು ಕ್ರೋಢೀಕೃತ ಹಣಕಾಸಿನ ಕೋಷ್ಟಕದ ಮೇಲೆ ನಮ್ಮ ಅರ್ಹ ಅಭಿಪ್ರಾಯವನ್ನು ಹೊರಡಿಸಿರುತ್ತೇವೆ.

ಇತರೆ ವಿಚಾರ

ಭಾರತದಲ್ಲಿ ಸ್ಥಾಪನೆಯಾಗಿರುವ ಅದರ ಅಂಗಸಂಸ್ಥೆಗಳು, ಸಹಸಂಸ್ಥೆಗಳು ಮತ್ತು ಜಂಟೀ ಉದ್ಯಮಗಳ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳಿಗೆ ಸಂಬಂಧಿಸಿದಂತೆ ಆಂತರಿಕ ಹಣಕಾಸಿನ ನಿಯಂತ್ರಣಗಳ ಸಮಷ್ಟಿ ಹಾಗೂ ನಿರ್ವಹಣಾ ಪರಿಣಾಮದ ಬಗ್ಗೆ ನಮ್ಮ ಮೇಲ್ಮಂಡ ವರದಿಯು ಕಾಯಿದೆಯ ಕಂಡಿಕೆ 143(3)(i)ರ ಅಡಿಯಲ್ಲಿ ಭಾರತದಲ್ಲಿ ಸ್ಥಾಪನೆಯಾಗಿರುವ ಅಂತಹ ಕಂಪೆನಿಗಳ ಲೆಕ್ಕಪರಿಶೋಧಕರ ವರದಿಯ ಆಧಾರದ ಮೇಲೆ ಇರುತ್ತದೆ.

ಎನ್‌ಎಸ್‌ವಿಎಂ & ಅಸೋಸಿಯೇಟ್ಸ್
ಚಾರ್ಟರ್ಡ್ ಎಕೌಂಟೆಂಟ್ಸ್ ಪರವಾಗಿ,
ಸಂಸ್ಥೆ ನೋಂದಣಿ ಸಂಖ್ಯೆ: 010072S
ಸಹಿ/–
(ಸಿಎ. ವಿ.ಎಸ್. ರಂಗನಾಥನ್)
ಪಾಲುದಾರ
ಸದಸ್ಯತ್ವ ನಂ. 0201872
ಯುಡಿಐಎನ್: 20201872AAAEK**6126**

ಸ್ಥಳ : ಬೆಂಗಳೂರು
ದಿನಾಂಕ: 09.12.2020

2019–20ರ ಹಣಕಾಸಿನ ವರ್ಷದ ಕ್ರೋಢೀಕೃತ ಹಣಕಾಸಿನ ಕೋಷ್ಟಕಗಳ ಮೇಲೆ ಶಾಸನಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳಿಗೆ ಉತ್ತರಗಳು

ಕ್ರಮ ಸಂಖ್ಯೆ	ಲೆಕ್ಕಪರಿಶೋಧಕರ ಆಕ್ಷೇಪಣೆಗಳು	ನಿಗಮದ ಉತ್ತರಗಳು
1	ಎನ್‌ಬಿಎಫ್‌ಸಿಯಾಗಿ ನೋಂದಾಯಿಸಲ್ಪಟ್ಟಿರುವ ಕಂಪೆನಿಯಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ಆಧಾರದ ಮೇಲೆ ಈ ಕೆಳಕಂಡ ಪ್ರಮುಖ ವ್ಯಾವಹಾರಿಕ ಚಟುವಟಿಕೆಗಳ ಮಾನದಂಡವನ್ನು ಅನುಸರಣೆ ಮಾಡಬೇಕಾಗಿರುತ್ತದೆ: ಕಂಪೆನಿಯು ಎರಡೂ ಮಾನದಂಡಗಳನ್ನು ತೃಪ್ತಿಪಡಿಸಿದಲ್ಲಿ ಪ್ರಮುಖ ವ್ಯಾವಹಾರಿಕ ಚಟುವಟಿಕೆಯು ಹಣಕಾಸಿನ ಚಟುವಟಿಕೆಯೆಂದು ತಿಳಿಯಲ್ಪಡುತ್ತದೆ: a) ಅದರ ಹಣಕಾಸಿನ ಆಸ್ತಿಗಳು ಅದರ ಒಟ್ಟು ಆಸ್ತಿಗಳಿಗಿಂತ 50% ಗಿಂತ ಜಾಸ್ತಿಯಾಗಿದ್ದಲ್ಲಿ; b) ಹಣಕಾಸಿನ ಆಸ್ತಿಗಳಿಂದ ಬರುವ ಆದಾಯವು ಒಟ್ಟು ಆದಾಯದ 50%ಗಿಂತಲೂ ಹೆಚ್ಚಾಗಿದ್ದಲ್ಲಿ. 31ನೇ ಮಾರ್ಚಿ 2020ರಲ್ಲಿ ಇರುವಂತೆ ಪ್ರಮುಖ ವ್ಯಾವಹಾರಿಕ ಮಾನದಂಡಕ್ಕೆ ಸಂಬಂಧಿಸಿದಂತೆ ಹೋಲ್ಡಿಂಗ್ ಕಂಪೆನಿಯು ಎರಡೂ ಶರತ್ತುಗಳನ್ನು ತೃಪ್ತಿಪಡಿಸುವುದಿಲ್ಲವಾದರೂ ಕೂಡಾ, ಆ ದಿನಾಂಕದಂದು ಕಂಪೆನಿಯು ಎನ್‌ಬಿಎಫ್‌ಸಿಯಾಗಿ ಅಧಿಕೃತ ನೋಂದಣಿ ಪ್ರಮಾಣ ಪತ್ರವನ್ನು ಹೊಂದಿರುವುದು ಮುಂದುವರಿದಿರುತ್ತದೆ. ಮುಂದುವರಿದಂತೆ, ವರ್ಷಾವಧಿಯಲ್ಲಿ ಹೋಲ್ಡಿಂಗ್ ಕಂಪೆನಿಯು ಎನ್‌ಬಿಎಫ್‌ಸಿ ನೋಂದಣಿಯನ್ನು ರದ್ದುಪಡಿಸಲು ಆರ್‌ಬಿಐಗೆ ಅರ್ಜಿ ಹಾಕಿದ್ದು, ಇದಕ್ಕೆ ಇನ್ನೂ ಅನುಮೋದನೆ ದೊರಕಿರುವುದಿಲ್ಲ.	ಕೆಎಸ್‌ಐಐಡಿಸಿಯು 2002ರ ನಂತರದಿಂದ ಸಾಲ ನೀಡಿಕೆ ಚಟುವಟಿಕೆಗಳನ್ನು ನಿಲ್ಲಿಸಿರುತ್ತದೆ. ಆದಾಗ್ಯೂ ಅದಕ್ಕೂ ಮುಂಚೆ ನೀಡಲಾಗಿರುವ ಸಾಲದ ವಸೂಲಾತಿಯು ಮುಂದುವರಿದಿರುತ್ತದೆ. ಈ ಆಸ್ತಿಗಳಿಂದ ವಸೂಲಾತಿಯು ಪ್ರತೀ ವರ್ಷ ಮುಂದುವರಿದಿರುವುದರಿಂದ ವಸೂಲಾತಿ ಖಾತೆಯು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಬಾಕಿ ಉಳಿದಿರುವ ಸಾಲದ ವಸೂಲಾತಿ ಖಾತೆಗೆ ಲೆಕ್ಕದ ಪುಸ್ತಕಗಳಲ್ಲಿ ಸಂಪೂರ್ಣವಾಗಿ ಉಪಬಂಧವನ್ನು ಕಲ್ಪಿಸಲಾಗಿರುತ್ತದೆ. ಆದಾಗ್ಯೂ, ಕೆಎಸ್‌ಐಐಡಿಸಿಯು ದಿನಾಂಕ 31.03.2020ರಲ್ಲಿ ಇರುವಂತೆ ಎನ್‌ಬಿಎಫ್‌ಸಿ ಪ್ರಮಾಣಪತ್ರವನ್ನು ಹೊಂದಿರುತ್ತದೆ. ಸಾಲದ ಖಾತೆಯಲ್ಲಿ ಸವಕಳಿಯಾಗುತ್ತಿರುವುದರಿಂದ ಮತ್ತು ಈ ಖಾತೆಗಳಿಂದ ಬಡ್ಡಿಯ ನಗದಾಗುವಿಕೆಯು ವಿಳಂಭ ಆಗುತ್ತಿರುವುದರಿಂದ ಭಾರತೀಯ ರಿಸರ್ವ್ ಬ್ಯಾಂಕ್ ನಿಗಧಿಪಡಿಸಿರುವ ಪ್ರಮುಖ ವ್ಯಾವಹಾರಿಕ ಮಾನದಂಡವನ್ನು ತಲುಪಲು ಸಾಧ್ಯವಾಗುತ್ತಿಲ್ಲ. ಮೇಲ್ಕಂಡ ಕಾರಣದಿಂದ ಕೆಎಸ್‌ಐಐಡಿಸಿಯು ಎನ್‌ಬಿಎಫ್‌ಸಿಯಾಗಿ ಹೊಂದಿರುವ ನೋಂದಣಿ ಪ್ರಮಾಣ ಪತ್ರವನ್ನು (ಸಿಒಆರ್) ರದ್ದುಪಡಿಸಲು ಮನವಿ ಮಾಡಲು ದಿನಾಂಕ 27.09.2019ರಂದು ನಡೆದ ಮಂಡಳಿಯ ಸಭೆಯಲ್ಲಿ ಠರಾವನ್ನು ಅಂಗೀಕರಿಸಲಾಯಿತು. ಆದಾಗ್ಯೂ, ಕಂಪೆನಿಯು ಈ ದಿನಾಂಕದವರೆಗೂ ಸಿಒಆರ್‌ನ್ನು ಹೊಂದಿರುವಿಕೆಯನ್ನು ಮುಂದುವರಿಸಿರುತ್ತದೆ.
2	ಆರ್‌ಬಿಐ ಕಾಯಿದೆ 1934ರ ಉಪಬಂಧಗಳಂತೆ ಮತ್ತು ನಂತರದಲ್ಲಿ ಅದಕ್ಕೆ ಮಾಡಲಾಗಿರುವ ತಿದ್ದುಪಡಿಗಳಂತೆ ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆ 1934ರ ಕಂಡಿಕೆ 45 (1C)ಯಂತೆ ಎನ್‌ಬಿಎಫ್‌ಸಿಗಳು ತಮ್ಮ ಲಾಭದ 20%ನ್ನು ಮೀಸಲಿಗೆ ವರ್ಗಾಯಿಸುವುದನ್ನು ಜಾರಿಗೊಳಿಸ ಬೇಕಾಗಿರುತ್ತದೆ. ವರ್ಷಾವಧಿಯಲ್ಲಿ ಹೋಲ್ಡಿಂಗ್ ಕಂಪೆನಿಯು ಎನ್‌ಬಿಎಫ್‌ಸಿ ಪ್ರಮಾಣ ಪತ್ರವನ್ನು ಹೊಂದಿರುವುದು ಮುಂದುವರಿದಿರುವುದರಿಂದ ಹಾಗೂ 31ನೇ ಮಾರ್ಚಿ 2020ರಲ್ಲಿರುವಂತೆ ಅದರ ರದ್ಧತಿಗೆ ಆರ್‌ಬಿಐಯವರ ಅನುಮೋದನೆ ಇನ್ನೂ ದೊರೆತಿಲ್ಲವಾದ್ದರಿಂದ ಕಂಡಿಕೆ 45 (1) (C)ಯಂತೆ ಲಾಭದ 20%ನ್ನು ಮೀಸಲು ಖಾತೆಗೆ ವರ್ಗಾಯಿಸದೇ ಇರುವುದು ಕಂಡಿಕೆಯ ಉಲ್ಲಂಘನೆಯಾಗುತ್ತದೆ.	ಕಂಪೆನಿಯು ಠೇವಣಿ ಪಡೆಯದ ಬ್ಯಾಂಕಿಂಗೇತರ ಹಣಕಾಸು ಕಂಪೆನಿಯಾಗಿ (ಎನ್‌ಬಿಎಫ್‌ಸಿ) ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ನೋಂದಣಿ ಹೊಂದಿರುತ್ತದೆ. ಆರ್‌ಬಿಐ ಕಾಯಿದೆ, 1934ರ ಕಂಡಿಕೆ 45IC(1)ರ ಅಡಿಯಲ್ಲಿ ಆರ್‌ಬಿಐನವರು ಹೊರಡಿಸಿರುವ ಸೂಚನೆಗಳಂತೆ ಎನ್‌ಬಿಎಫ್‌ಸಿಗಳು ತಮ್ಮ ನಿವ್ವಳ ಲಾಭದ 20%ನ್ನು ಪ್ರತ್ಯೇಕವಾದ ಮೀಸಲು ಖಾತೆಗೆ ವರ್ಗಾಯಿಸಲು ಭಾದ್ಯಸ್ಥರಾಗಿರುತ್ತಾರೆ. ಕಂಪೆನಿಯು ಹಿಂದಿನ ವರ್ಷ(ಗಳಲ್ಲಿ) ಲಾಭವನ್ನು ಗಳಿಸಿರುತ್ತದೆ. ಕಂಪೆನಿಗೆ ವರ್ಷಾವಧಿಯಲ್ಲಿ ಎಲ್ಲಾ ಸಾಲಗಳನ್ನು ತೊಡೆದುಹಾಕಲು ಸಾಧ್ಯವಾಗಿದೆಯಾದರೂ, ಇದರ ಫಲಿತಾಂಶದ ಹೆಚ್ಚುವರಿ ಶಿಲ್ಕನ್ನು ಲಾಭಾಂಶ ಘೋಷಿಸಲು ಅಥವಾ ಮೊಬಲಗನ್ನು ಸರಿಹೊಂದಿಸಲು ಉಪಯೋಗಿಸಿರುವುದಿಲ್ಲ. ಆಕ್ಷೇಪಣೆ ನಂ. 1ರಲ್ಲಿ ತಿಳಿಸಿರುವಂತೆ ನೋಂದಣಿಯನ್ನು ರದ್ದುಪಡಿಸಲು ಮನವಿಮಾಡಿ ಕಂಪೆನಿಯು ಆರ್‌ಬಿಐಗೆ ಸಲ್ಲಿಸಿರುವ ಅರ್ಜಿಯು ಕೂಡಾ ಬಾಕಿ ಇರುತ್ತದೆ. ಮೇಲ್ಕಂಡ ಕಾರಣದಿಂದ ಆರ್‌ಬಿಐನಿಂದ ಮಾಹಿತಿ ಬಂದ ನಂತರ ಕಂಪೆನಿಯು ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ.

3	ಹೋಲ್ಡಿಂಗ್ ಕಂಪೆನಿಯು ಈಕ್ವಿಟಿ ಪತ್ರಗಳಲ್ಲಿ ಹೂಡಿಕೆಯನ್ನು ಹೊಂದಿದ್ದು, ಇದರಲ್ಲಿ ಲಿಸ್ಟ್ ಆಗಿರುವ ಮತ್ತು ಲಿಸ್ಟ್ ಆಗದೇ ಇರುವ ಸಂಸ್ಥೆಗಳ ಪತ್ರಗಳೂ ಸೇರಿರುತ್ತವೆ. ಐಎನ್‌ಡಿ ಎಎಸ್ 109 ರಂತೆ ಹೂಡಿಕೆಗಳನ್ನು ಮೌಲ್ಯೀಕರಿಸಬೇಕಾಗಿರುತ್ತದೆ ಹಾಗೂ ಐಎನ್‌ಡಿ ಎಎಸ್ 113ರಂತೆ ನ್ಯಾಯಯುತ ದರದಲ್ಲಿ ಪ್ರಸ್ತುತಪಡಿಸಬೇಕಾಗಿರುತ್ತದೆ. ಹೋಲ್ಡಿಂಗ್ ಕಂಪೆನಿಯ ಕೆಲವೊಂದು ಹೂಡಿಕೆಗಳನ್ನು ಮುಂಚೆಯೇ ಲಿಸ್ಟ್‌ನಿಂದ ತೆಗೆದುಹಾಕಿರುವುದರಿಂದ ಅವುಗಳನ್ನು ನಾಮಕಾವಸ್ಥೆ ದರಕ್ಕೆ ಅಂದರೆ ರೂ. 1/–ಕ್ಕೆ ಮೌಲ್ಯಮಾಪನ ಮಾಡಲಾಗಿರುತ್ತದೆ. ಅಸಮರ್ಪಕ ಮಾಹಿತಿಗಳಿಂದಾಗಿ ಹೋಲ್ಡಿಂಗ್ ಕಂಪೆನಿಯು 31ನೇ ಮಾರ್ಚಿ 2020ರಲ್ಲಿ ಇರುವಂತೆ ಇದನ್ನು ಮತ್ತು ಅದರ ತುಲನಾತ್ಮಕ ಅವಧಿಯನ್ನು (ಗಳನ್ನು) ನಾಮಕಾವಸ್ಥೆ ಮೌಲ್ಯದಲ್ಲಿಯೇ ತೋರಿಸಿರುವುದನ್ನು ಮುಂದುವರಿಸಿದೆ. ಹೋಲ್ಡಿಂಗ್ ಕಂಪೆನಿಯ ಹಣಕಾಸಿನ ಕೋಷ್ಟಕಗಳ ಮೇಲೆ ಅವುಗಳ ಪರಿಣಾಮವನ್ನು ಮೌಲ್ಯೀಕರಿಸಲು ನಾವು ಅಸಮರ್ಥರಾಗಿದ್ದೇವೆ.	ವ್ಯವಹಾರ ಮತ್ತು/ಅಥವಾ ಹಣಕಾಸಿನ ಸ್ಥಿತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದ ಕೆಲವು ಕಂಪೆನಿಗಳಿಗೆ ಸಂಬಂಧಿಸಿದಂತೆ ಹೂಡಿಕೆಗಳನ್ನು ರೂ. 1ರ (ನಾಮಕಾವಸ್ಥೆ ಮೌಲ್ಯ) ಕನಿಷ್ಟ ಮೌಲ್ಯಕ್ಕೆ ನಿಗಧಿಪಡಿಸಲಾಗಿದೆ ಹಾಗೂ ಈ ಶೇರುಗಳನ್ನು ಶೇರು ವಿನಿಮಯ ಕೇಂದ್ರದ ಲಿಸ್ಟ್‌ನಿಂದ ತೆಗೆದುಹಾಕಲ್ಪಟ್ಟಿರುತ್ತದೆ. ಐಎನ್‌ಡಿ ಎಎಸ್ 109ರ ಉಪಬಂಧಗಳಿಗೆ ಅನುಸಾರವಾಗಿ ಇವುಗಳನ್ನು ಸಮರ್ಪಕವಾಗಿ ಮೌಲ್ಯೀಕರಿಸಲಾಗಿರುವುದರಿಂದ ಇದನ್ನು ನಾಮಕಾವಸ್ಥೆ ಮೌಲ್ಯದಲ್ಲಿಯೇ ಗುರುತಿಸಲಾಗಿರುತ್ತದೆ.
4	31ನೇ ಮಾರ್ಚಿ 2020ರ ವರ್ಷದ ಅಂತ್ಯದಲ್ಲಿ ಹೋಲ್ಡಿಂಗ್ ಕಂಪೆನಿಯ ಲಿಸ್ಟ್ ಆಗದೇ ಇರುವ ಮೂರು ಕಂಪೆನಿಗಳಲ್ಲಿರುವ ಹೂಡಿಕೆಗಳನ್ನು 31ನೇ ಮಾರ್ಚಿ 2020ರ ಮಾಹಿತಿಗಳು ಲಭ್ಯವಿಲ್ಲವಾದ್ದರಿಂದ 31ನೇ ಮಾರ್ಚಿ 2019ರಲ್ಲಿ ಲಭ್ಯವಿರುವ ಮಾಹಿತಿಗಳ ಆಧಾರದ ಮೇಲೆ ಸಮರ್ಪಕ ಬೆಲೆಯಲ್ಲಿ ಮೌಲ್ಯೀಕರಿಸಲಾಗಿರುತ್ತದೆ. ಹಣಕಾಸಿನ ಕೋಷ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ಪ್ರಮಾಣೀಕರಿಸಲು ನಾವು ಅಸಮರ್ಥರಾಗಿರುತ್ತೇವೆ.	ಈಗ ಚಾಲ್ತಿಯಲ್ಲಿರುವ ಕೋವಿಡ್–19ರ ಪಿಡುಗಿನ ಕಾರಣದಿಂದಾಗಿ ಈ ಕಂಪೆನಿಗಳಿಗೆ ತಮ್ಮ ಹಣಕಾಸಿನ ಕೋಷ್ಟಕಗಳನ್ನು ಸಕಾಲದಲ್ಲಿ ಅಂತಿಮಗೊಳಿಸಲು ಸಾಧ್ಯವಾಗಿರುವುದಿಲ್ಲ. ಎಲ್ಲಾ ಕಂಪೆನಿಗಳೂ ಕಾರ್ಯ ನಿರ್ವಹಿಸುತ್ತಿರುವುದರಿಂದ ಕಂಪೆನಿಯು ಈ ಹೂಡಿಕೆಗಳನ್ನು 31ನೇ ಮಾರ್ಚಿ 2019ರಲ್ಲಿ ಗುರುತಿಸಲಾಗಿರುವ ಮೌಲ್ಯದಲ್ಲಿ ಲೆಕ್ಕಹಾಕಿರುತ್ತದೆ. ಕಂಪೆನಿಯ ಅಭಿಪ್ರಾಯದಲ್ಲಿ, 31.03.2020ರಲ್ಲಿ ಇರುವಂತಹ ಸಮರ್ಪಕ ಮೌಲ್ಯವು 31.03.2019ರಲ್ಲಿ ಗುರುತಿಸಿರುವಂತಹ ಸಮರ್ಪಕ ಮೌಲ್ಯಕ್ಕಿಂತ ಕಡಿಮೆಯಾಗಲಿಕ್ಕಿಲ್ಲ.
5	31ನೇ ಮಾರ್ಚಿ 2020ರಲ್ಲಿ ಇರುವಂತೆ ಹೋಲ್ಡಿಂಗ್ ಕಂಪೆನಿಯು ರೂ. 45.70 ಲಕ್ಷಗಳ ಮೊಬಲಗನ್ನು ಸ್ವೀಪ್ ಠೇವಣಿಯಲ್ಲಿ ಇಟ್ಟಿರುತ್ತದೆ. ಐಎನ್‌ಡಿ ಎಎಸ್‌ನಂತೆ ಠೇವಣಿಗಳ ಮೇಲೆ ಗಳಿಸಲಾಗಿರುವ ಬಡ್ಡಿಯನ್ನು ಸೇರಿಕೆ ಆಧಾರದ ಮೇಲೆ ಲೆಕ್ಕ ಹಾಕಬೇಕಾಗಿರುತ್ತದೆ. ಆದಾಗ್ಯೂ, ಕಂಪೆನಿಯು ಬಡ್ಡಿಯನ್ನು ಸ್ವೀಕೃತಿ ಆಧಾರದ ಮೇಲೆ ಲೆಕ್ಕಹಾಕಿದ್ದು, 31ನೇ ಮಾರ್ಚಿ 2020ರಲ್ಲಿ ಇರುವಂತೆ ಸೇರಿಕೆಗೆ ಒಳಪಡಿಸಿರುವುದಿಲ್ಲ. ಹಣಕಾಸಿನ ಕೋಷ್ಟಕಗಳ ಮೇಲೆ ಇದರ ಪರಿಣಾಮವನ್ನು ನಾವು ಪ್ರಮಾಣೀಕರಿಸಲಾಗುವುದಿಲ್ಲ.	ನಿಗಮವು ಸ್ವೀಪ್ ಠೇವಣಿಯ ಮೇಲಿನ ಬಡ್ಡಿಯನ್ನು ಅದರ ಮುಕ್ತಾಯದ ಅವಧಿಗೆ ಸತತವಾಗಿ ಲೆಕ್ಕಹಾಕುತ್ತಿದೆ. ಆದಾಗ್ಯೂ ಅದನ್ನು ಚಾಲ್ತಿ ಹಣಕಾಸಿನ ವರ್ಷದಲ್ಲಿ ಪುನರ್ ಪರಿಶೀಲಿಸಲಾಗುತ್ತಿದ್ದು, ಅದನ್ನು ಸೇರಿಕೆ ಆಧಾರದ ಮೇಲೆ ಲೆಕ್ಕ ಹಾಕಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ.

6	ಕಂಪೆನಿಯು ತನ್ನ ಸಹಸಂಸ್ಥೆಯಾಗಿರುವ ಬೆಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತಕ್ಕೆ (ಬಿಐಎಎಲ್) ಸಾಲ ಸೌಲಭ್ಯದ ವಿಸ್ತರಣೆಗಾಗಿ ಈ ಹಿಂದೆ ಒಪ್ಪಿರುವ ಶರತ್ತನ್ನು ನೆರವೇರಿಸುವ ಸಲುವಾಗಿ ಬಿಐಎಎಲ್‌ನಲ್ಲಿ ಹೊಂದಿರುವ 2,80,48,878 ಶೇರುಗಳನ್ನು ಎಸ್‌ಬಿಐ ಕ್ಯಾಪ್ಸ್ ಟ್ರಸ್ಟೀ ಕಂಪೆನಿ ಇವರಿಗೆ ಅಡಮಾನ ಮಾಡಿರುತ್ತದೆ. ಐಎನ್‌ಡಿ ಎಎಸ್–109ರಂತೆ ಶೇರುಗಳ ಅಡಮಾನವು ಹಣಕಾಸಿನ ಖಾತರಿ ಒಪ್ಪಂದವನ್ನು ಉಂಟುಮಾಡುತ್ತಿದ್ದು, ನೀಡಲಾಗಿರುವ ಅಡಮಾನಕ್ಕೆ ಕಂಪೆನಿಯು ಹಣಕಾಸಿನ ಹೊಣೆಗಾರಿಕೆಯನ್ನು ಗುರುತಿಸತಕ್ಕದ್ದು ಹಾಗೂ ನಂತರದಲ್ಲಿ ಐಎನ್‌ಡಿ ಎಎಸ್–115 ರಂತೆ ಆದಾಯವನ್ನು ಗುರುತಿಸಬೇಕಾಗಿರುತ್ತದೆ. ಆದಾಗ್ಯೂ, ಕಂಪೆನಿಯು ಅಡಮಾನಕ್ಕಾಗಿ ಹಣಕಾಸಿನ ಹೊಣೆಗಾರಿಕೆಯನ್ನು ಗುರುತಿಸದೇ ಇರುವುದನ್ನು ಹಾಗೂ ಐಎನ್‌ಡಿ ಎಎಸ್–115ರಂತೆ 31ನೇ ಮಾರ್ಚಿ, 2020ರಲ್ಲಿ ಇರುವಂತೆ ಅದಾಯವನ್ನು ದಾಖಲಿಸದೇ ಇರುವುದನ್ನು ನಾವು ಗಮನಿಸಿರುತ್ತೇವೆ. ಕಂಪೆನಿಯು ಈ ವ್ಯವಹಾರಕ್ಕೆ ನಿಗಧಿತ ಲೆಕ್ಕಪತ್ರ ಮಾನದಂಡವನ್ನು ಅನುಸರಿಸಿರುವುದಿಲ್ಲವಾದ್ದರಿಂದ ಹಣಕಾಸಿನ ಕೋಷ್ಟಕಗಳ ಮೇಲೆ ಇವುಗಳ ಪರಿಣಾಮವನ್ನು ಪ್ರಮಾಣೀಕರಿಸಲು ನಮಗೆ ಅಸಾಧ್ಯವಾಗಿರುತ್ತದೆ.	ಕಂಪೆನಿಯು ಬಿಐಎಎಲ್‌ನಲ್ಲಿ ಹೊಂದಿರುವ 13% ಶೇರುಗಳಲ್ಲಿ 51%ನ್ನು ಎಸ್‌ಬಿಐನಿಂದ ಹಣಕಾಸಿನ ಸೌಲಭ್ಯವನ್ನು ಪಡೆಯುವ ಸಲುವಾಗಿ ಎಸ್‌ಬಿಐ ಕ್ಯಾಪ್ ಟ್ರಸ್ಟೀ ಕಂಪೆನಿ ಲಿಮಿಟೆಡ್ ಇವರ ಪರವಾಗಿ ಅಡಮಾನ ಮಾಡಿರುತ್ತದೆ. ನಿಗಮವು ಈ ರೂ.2804.89 ಲಕ್ಷ ಮೊಬಲಗನ್ನು ಅನಿಶ್ಚಿತ ಹೊಣೆಗಾರಿಕೆಯಲ್ಲಿ ತೋರಿಸಿರುತ್ತದೆ. ಮೇಲ್ಕಂಡ ಅಡಮಾನವನ್ನು ಸೃಷ್ಟಿಸುವ ಸಲುವಾಗಿ ಕಂಪೆನಿಯು ಯಾವುದೇ ಶುಲ್ಕವನ್ನೂ ವಿಧಿಸಿರುವುದಿಲ್ಲ. ಇಂತಹ ಸನ್ನಿವೇಶಗಳಲ್ಲಿ ಶುಲ್ಕಕ್ಕೆ ಉಪಬಂಧವನ್ನು ಕಲ್ಪಿಸುವಿಕೆಯನ್ನು ನಿಗಧಿಪಡಿಸಲು ಸಾರ್ವಜನಿಕ ಕ್ಷೇತ್ರದಲ್ಲಿರುವ ಮಾಹಿತಿಗಳ ಕೊರತೆಯಿಂದಾಗಿ ಕಂಪೆನಿಯು ಅದರ ಮೇಲೆ ಯಾವುದೇ ಆದಾಯವನ್ನೂ ಗುರುತಿಸಿರುವುದಿಲ್ಲ.
7	ಕಂಪೆನಿಯು ವಿವಿಧ ಮೇಲ್ಮನವಿ ಪ್ರಾಧಿಕಾರಗಳ ಮುಂದೆ ಇರುವ ದಾವೆಗಳಲ್ಲಿ ಪ್ರತಿಭಟನೆಯ ಮೂಲಕ ಪಾವತಿಸಿರುವ ತೆರಿಗೆಗೆ ಸಂಬಂಧಿಸಿದಂತೆ ತಾನು ಯಶಸ್ವಿಯಾಗಲಿಕ್ಕಿಲ್ಲವೆಂದು ಒಪ್ಪದೇ ಇದ್ದರೂ ಕೂಡಾ ಊಹಾತ್ಮಕವಾಗಿ ಆದಾಯ–ತೆರಿಗೆ ಕಾಯಿದೆ, 1961ರ (“ಎಂಎಟಿ ಕ್ರೆಡಿಟ್”) ಕಂಡಿಕೆ 115 JBಯಂತೆ ವರ್ಷಾವಧಿಯಲ್ಲಿ ಜಮಾ ಮಾಡುವುದಕ್ಕೆ ಹಕ್ಕು ಸಾಧಿಸಿರುತ್ತಾರೆ. ನಮ್ಮ ಅಭಿಪ್ರಾಯದಂತೆ ಕಂಪೆನಿಯು ಗುರುತಿಸಿರುವ ಭಾರತೀಯ ರೂಪಾಯಿ 700.27 ಲಕ್ಷದ ಎಂಎಟಿ ಜಮಾಕ್ಕೆ ಕಂಪೆನಿಯು ಇದೇ ಆದಾಯ ತೆರಿಗೆಯ ಉಪಬಂಧವನ್ನು ಕಲ್ಪಿಸಬೇಕಾಗಿರುತ್ತದೆ. ಆದಾಗ್ಯೂ, ಕಂಪೆನಿಯು ರೂ. 700.27 ಲಕ್ಷಕ್ಕೆ ಆದಾಯ ತೆರಿಗೆಗೆ ಉಪಬಂಧವನ್ನು ಸೃಷ್ಟಿಸದೇ ಇರುವುದನ್ನು ನಾವು ಗಮನಿಸಿದ್ದು, ಇದರಿಂದಾಗಿ ಲಾಭ ಮತ್ತು ನಷ್ಟ ಖಾತೆಯಲ್ಲಿ ಭಾರತೀಯ ರೂಪಾಯಿ 700.27 ಲಕ್ಷ ಹೆಚ್ಚು ದಾಖಲಿಸಲ್ಪಟ್ಟಿರುತ್ತದೆ.	ಹಿಂದಿನ ಮೌಲ್ಯಮಾಪನ ವರ್ಷಗಳಿಗೆ ಸಂಬಂಧಿಸಿದಂತೆ ಕಾಯಿದೆಯ ಕಂಡಿಕೆ 115 JB ಯಂತೆ ಪುಸ್ತಕದಲ್ಲಿರುವ ಲಾಭಗಳನ್ನು ಲೆಕ್ಕಹಾಕುವ ವಿಚಾರಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಪ್ರಾಧಿಕಾರದ ಹಲವಾರು ನ್ಯಾಯ ನಿರ್ಣಯ ಪ್ರಾಧಿಕಾರದ ಮುಂದೆ ಕಂಪೆನಿಯು ಹೂಡಿರುವ ದಾವೆಗಳು ಬಾಕಿ ನಿಂತಿದ್ದು ಇದರ ಪರಿಣಾಮವಾಗಿ ರೂ.700.27 ಲಕ್ಷಗಳ ಹೆಚ್ಚುವರಿ ಎಂಎಟಿ ವೆಚ್ಚಗಳಿಗೆ ಕಾರಣವಾಗಿರುತ್ತದೆ. ಕಾಯಿದೆಯ ಉಪಬಂಧಗಳ ಅಡಿಯಲ್ಲಿ ಕಂಪೆನಿಯು ಮಾಡಿರುವ ಪಾವತಿಗೆ ಜಮಾವನ್ನು ಪಡೆಯಲು 15 ವರ್ಷಗಳ ಕಾಲಾವಕಾಶ ಇದ್ದು, ಕಾಲಾವಧಿಯು ಇನ್ನೂ ಮುಗಿದಿರುವುದಿಲ್ಲ. ಉಪಯೋಗಿಸದೇ ಇರವ ತೆರಿಗೆ ಜಮಾವನ್ನು ಮುಂದೂಡಲ್ಪಟ್ಟ ತೆರಿಗೆ ಜಮಾ ಎಂದು ಪರಿಗಣಿಸಲು ಐಎನ್‌ಡಿ ಎಎಸ್ 12 ಅನುಮತಿ ನೀಡಿದ್ದು, ಇದನ್ನು ಸರಿಯಾಗಿ ಮಾಡಲಾಗಿದೆ. ಮೇಲ್ಕಂಡ ಕಾರಣಗಳಿಂದ ಲಾಭವನ್ನು ಹೆಚ್ಚಾಗಿ ತೋರಿಸಿರುವುದಿಲ್ಲ.

<table>
<tr><td>8</td><td>ಕಂಪೆನಿಯು ಈ ಕೆಳಗಿನ ಚಟುವಟಿಕೆಗಳಿಂದ ಆದಾಯವನ್ನು ಗಳಿಸುತ್ತಿದೆ:
a. ಹಣಕಾಸಿನ ಚಟುವಟಿಕೆಗಳು
b. ಗುತ್ತಿಗೆ ಚಟುವಟಿಕೆಗಳು
c. ಇತರೆ ಆದಾಯ (ಬೇರೆ ಸಂಸ್ಥೆಗಳಲ್ಲಿ ಮಾಡಿರುವ ಹೂಡಿಕೆಯ ಮೇಲೆ ಗಳಿಸಲಾಗಿರುವ ಲಾಭಾಂಶದ ಆದಾಯ, ನಿಶ್ಚಿತ ಠೇವಣಿಯಿಂದ ಬಂದಿರುವ ಬಡ್ಡಿ)
ಐಎನ್‌ಡಿ ಎಎಸ್–108 ರಂತೆ ತನ್ನ ಹಣಕಾಸಿನ ಕೋಷ್ಟಕಗಳನ್ನು ಉಪಯೋಗಿಸುವವರಿಗೆ ತಾನು ತೊಡಗಿಸಿಕೊಂಡಿರುವ ವ್ಯಾವಹಾರಿಕ ಚಟುವಟಿಕೆಗಳ ಸ್ವಭಾವ ಮತ್ತು ಹಣಕಾಸಿನ ಪರಿಣಾಮಗಳನ್ನು ಮೌಲ್ಯಮಾಪನ ಮಾಡಲು ಅನುವಾಗುವಂತೆ ಪ್ರತೀ ಕಂಪೆನಿಯು ಮಾಹಿತಿಗಳನ್ನು ಘೋಷಿಸುವುದು ಅಗತ್ಯವಾಗಿರುತ್ತದೆ. ಈ ಅಗತ್ಯತೆಯನ್ನು ಪರಿಗಣಿಸಿ, ವಿಭಾಗವಾರು ಆದಾಯಗಳು, ವಿಭಾಗವಾರು ಲಾಭ ಮತ್ತು ನಷ್ಟ, ವಿಭಾಗವಾರು ಆಸ್ತಿ ಮತ್ತು ಹೊಣೆಗಾರಿಕೆಗಳ ಬಗ್ಗೆ ಕಂಪೆನಿಯು ಮೇಲ್ಕಂಡಂತೆ ವಿಭಾಗವಾರು ವರದಿ ನೀಡಬೇಕಾಗಿರುತ್ತದೆ. ಆದರೆ, ಐಎನ್‌ಡಿ ಎಎಸ್–108ರಂತೆ ವಿಭಾಗವಾರು ವರದಿ ಮಾಡುವಿಕೆಯ ಅಗತ್ಯತೆಯನ್ನು ಕಂಪೆನಿಯು ಪೂರೈಸಿರುವುದಿಲ್ಲವೆಂದು ನಾವು ಗಮನಿಸಿರುತ್ತೇವೆ ಮತ್ತು ಹಣಕಾಸಿನ ಕೋಷ್ಟಕಗಳ ಮೇಲೆ ಇದರ ಪರಿಣಾಮಗಳನ್ನು ಪ್ರಮಾಣೀಕರಿಸಲು ನಾವು ಅಸಮರ್ಥರಾಗಿದ್ದೇವೆ.</td><td>ಐಎನ್‌ಡಿ ಎಎಸ್ 108 ವಿಭಾಗವಾರು ವರದಿಮಾಡುವಿಕೆಯು ಘೋಷಿಸಲ್ಪಡುವ ಅಗತ್ಯತೆಯಾಗಿದ್ದು, ಇದನ್ನು ಕಂಡಿಕೆ 5ರ ಪ್ರಾಥಮಿಕ ಷರತ್ತನ್ನು ಪೂರೈಸುವಂತಿದ್ದರೆ, ಉಪಬಂಧ ಕಲ್ಪಿಸಬೇಕಾಗಿದ್ದು, ಕಂಡಿಕೆಯನ್ನು ಈ ಕೆಳಕಂಡಂತೆ ಪುನಃ ದಾಖಲಿಸಿದೆ:
5. ನಿರ್ವಹಣಾ ವಿಭಾಗವು ಸಂಸ್ಥೆಯ ಒಂದು ಘಟಕವಾಗಿರುತ್ತದೆ:
<table><tr><td>(a)</td><td>ಅದು ವರಮಾನವನ್ನು ಗಳಿಸುವ ಮತ್ತು ವೆಚ್ಚಗಳನ್ನು ಮಾಡುವ ವ್ಯವಹಾರದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೆ (ಅದೇ ಸಂಸ್ಥೆಯ ಬೇರೆ ಘಟಕಗಳಿಗೆ ಸಂಬಂಧಿಸಿದ ವ್ಯವಹಾರಗಳ ವರಮಾನ ಮತ್ತು ವೆಚ್ಚಗಳನ್ನೂ ಒಳಗೊಂಡಂತೆ)</td></tr><tr><td>(b)</td><td>ವಿಭಾಗಗಳಿಗೆ ಸಂಪನ್ಮೂಲಗಳನ್ನು ಹಂಚಿಕೆ ಮಾಡಿ ನಿರ್ವಹಣೆಯ ಮೌಲ್ಯಮಾಪನ ಮಾಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಸಂಸ್ಥೆಯ ಮುಖ್ಯ ನಿರ್ವಹಣಾ ತೀರ್ಮಾನ ಕೈಗೊಳ್ಳುವವರು ಘಟಕದ ನಿರ್ವಹಣಾ ಫಲಿತಾಂಶಗಳನ್ನು ಆಗಾಗ ಪುನರ್‌ಪರಿಶೀಲನೆ ಮಾಡುತ್ತಿದ್ದರೆ, ಮತ್ತು</td></tr><tr><td>(c)</td><td>ಅವುಗಳ ಪ್ರತ್ಯೇಕ ಹಣಕಾಸಿನ ಮಾಹಿತಿಗಳು ಲಭ್ಯವಿದ್ದರೆ.</td></tr></table>ಕಂಪೆನಿಯು ಸಂಸ್ಥೆಯ ಕ್ರೋಢೀಕೃತ ಫಲಿತಾಂಶಗಳನ್ನು ನಿಯತವಾಗಿ ಅವಲೋಕನ ನಡೆಸುತ್ತಿದ್ದುದರಿಂದ ವಿಭಾಗವಾರು ವರದಿ ಮಾಡುವಿಕೆ ಅಗತ್ಯವೆಂದು ಭಾವಿಸಲಾಗಿತ್ತು. ಆದಾಗ್ಯೂ ಕಂಪೆನಿಯು ಮುಂಬರುವ ವರ್ಷಗಳಲ್ಲಿ ಸ್ಥಿತಿಯನ್ನು ಅವಲೋಕನ ನಡೆಸಿ ಅದರಂತೆ ತೀರ್ಮಾನಗಳನ್ನು ಕೈಗೊಳ್ಳಲಿದೆ. ಕ್ರೋಢೀಕೃತ ಹಣಕಾಸಿನ ಮೇಲೆ ಯಾವುದೇ ಪರಿಣಾಮಗಳೂ ಇರುವುದಿಲ್ಲ.</td></tr>
<tr><td>a.</td><td>ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್)
ವ್ಯಾಪಾರೀ ಸ್ವೀಕಾರಾರ್ಹವಾದವುಗಳು, ಮುಂಗಡಗಳು, ಗ್ರಾಹಕರಿಂದ ಪಾವತಿಸತಕ್ಕವುಗಳು ಮತ್ತು ಮುಂಗಡಗಳನ್ನು ಎದರು ಪಕ್ಷದವರಿಂದ ಆಸ್ತಿಹೊಣೆ ತಃಖ್ತೆಯ ದಿನಾಂಕದಂದು ಪುನರ್ ಪರಿಶೀಲನೆಯನ್ನಾಗಲೀ, ದೃಢೀಕರಣವನ್ನಾಗಲೀ ಮಾಡಿರುವುದಿಲ್ಲ. ಆಸ್ತಿಹೊಣೆ ತಃಖ್ತೆಯ ದಿನಾಂಕದಂದು ಬೇರೆ ಲೆಕ್ಕಪರಿಶೋಧಕರಿಗೆ (ಗಳಿಗೆ) ಈ ಖಾತೆಯು ಕೊಂಡೊಯ್ಯುವ ಮೊಬಲಗಿನ ಬಗ್ಗೆ ಸಾಕಷ್ಟು ಸೂಕ್ತ ಲೆಕ್ಕಪರಿಶೋಧನಾ ಸಾಕ್ಷ್ಯಗಳನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ ಮತ್ತು ಇದರ ಅನುಪಸ್ಥಿತಿಯಲ್ಲಿ ಈ ಖಾತೆಗಳಿಗೆ ಯಾವುದೇ ಹೊಂದಾಣಿಕೆಗಳ ಅಗತ್ಯವಿದೆಯೇ ಎಂಬ ಬಗ್ಗೆ ನಿರ್ಧರಿಸಲು ಸಾಧ್ಯವಾಗಿರುವುದಿಲ್ಲ. ಈ ರೀತಿ ಪುನರ್ ಪರಿಶೀಲಿಸದೇ ಇರುವ, ದೃಢೀಕರಿಸದೇ ಇರುವ ಖಾತೆಗಳ ಶಿಲ್ಕುಗಳ ಹಣಕಾಸಿನ ಪರಿಣಾಗಳು ಏನಾದರೂ ಇದ್ದಲ್ಲಿ ಗುರುತಿಸಲಾಗುವುದಿಲ್ಲ.</td><td>ಎಂಎಸ್‌ಐಎಲ್ ಉತ್ತರ</td></tr>
</table>

b. ಒಟ್ಟು ಶಿಲ್ಕುಗಳು, ದೃಢೀಕೃತ ಶಿಲ್ಕುಗಳು ಮತ್ತು ದೃಢೀಕರಿಸಿಲ್ಲದ ಶಿಲ್ಕುಗಳ ಶೇಕಡಾವರನ್ನು ಈ ಕೆಳಗೆ ನೀಡಲಾಗಿದೆ:

ವಿವರಗಳು	ಪುಸ್ತಕಗಳಂತೆ ಮೊಬಲಗು (ರೂಪಾಯಿಗಳು ಲಕ್ಷಗಳಲ್ಲಿ)	ದೃಢೀಕರಣವನ್ನು ಸ್ವೀಕರಿಸಿ ಪುನರ್ ಹೊಂದಾಣಿಕೆ ಮಾಡಲಾಗಿರುವ ಮೊಬಲಗು	ಪುನರ್ ಹೊಂದಾಣಿಕೆ ಮಾಡದ/ ದೃಢೀಕರಿಸದ ಲೆಕ್ಕದ ಶಿಲ್ಕಿನ ಶೇಕಡಾವಾರು
